ಸುರುನ ಅರೆಬಾಸೆ ಸಾಹಿತ್ಯ ಸಮ್ಮೇಳನ - ೨೦೧೯



ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಶ್ರೀ ವೆಂಕಟರಮಣ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ) ಸುಳ್ಯ

[ಪ್ರವರ್ತಕರು : ಗೌಡರ ಯುವ ಸೇವಾ ಸಂಘ (ರಿ.) ಸುಳ್ಯ]



ಪ್ರಧಾನ ಕಛೇರಿ : ಸುಳ್ಯ ದ. ಕ.

ರಿ.ನಂ. : 13756

ಸ್ಥಾಪನೆ : 1997 Web site : www.svccs.in Mail ID : svccssullia@yahoo.com ದೂರವಾಣಿ : 232256

"ರಾಜ್ಯದ ಉತ್ತಮ ಸಹಕಾರ ಸಂಸ್ಥೆ ಎಂದು ಪ್ರಶಸ್ತಿ ಪಡೆದಿರುವ ಸಂಸ್ಥೆ"

46 ದಿನಗಳಿಗೆ	ಶೇ. 5%	90 ದಿನಗಳಿಗೆ	ಶೇ. 5.5 %	2 ವರ್ಷಕ್ಕೆ ಮೇಲ್ಪಟ್ಟು ಶೇ. 8.75% ಮತ್ತು ಹಿರಿಯ ನಾಗರಿಕರಿಗೆ ಶೇ. 0.50% ಹೆಚ್ಚುವರಿ ಬಡ್ಡಿ ನೀಡಲಾಗುವುದು.	
180 ದಿನಗಳಿಗೆ	ಶೇ. 6.5%	1 ವರ್ಷಗಳಿಗೆ	ಶೇ. 8.50%		

ಸಾಲ ಸೌಲಭ್ಯಗಳು : ಜಾಮೀನು ಸಾಲ, ವಾಹನ ಸಾಲ, ಆಭರಣ ಸಾಲ, ಜಮೀನು ಅಡವು ಸಾಲ ಹಾಗೂ ಇನ್ನಿತರ ಸಾಲ ಸೌಲಭ್ಯಗಳು

ಶಾಖೆಗಳು

ಸುಳ್ಯ ದೂರವಾಣಿ : 08257 - 232256
ಬೆಳ್ತಂಗಡಿ, ದೂರವಾಣಿ : 08256 - 233848
ಪುತ್ತೂರು, ದೂರವಾಣಿ : 08251 - 232256
ವಿಟ್ಲ, ದೂರವಾಣಿ : 08255 - 238356
ಕಡಬ, ದೂರವಾಣಿ : 08251 - 260256
ಮಂಗಳೂರು, ದೂರವಾಣಿ : 0824 - 2433256
ಬಿ.ಸಿ. ರೋಡ್ ದೂರವಾಣಿ : 08255-232256
ಮಡಿಕೇರಿ ದೂರವಾಣಿ : 08272-225256
ಮೈಸೂರು ದೂರವಾಣಿ : 0821 - 2353256
ಸಕಲೇಶಪುರ ದೂರವಾಣಿ : 08173 - 244256
ಕುಶಾಲನಗರ ದೂರವಾಣಿ : 08276 - 295256

ಬನ್ನಿ.......... ವ್ಯವಹರಿಸಿ.......... ಲಾಭಗಳಿಸಿ............


ಕೆ.ಸಿ. ನಾರಾಯಣ
ಅಧ್ಯಕ್ಷರು


ಗಂಗಾಧರ ಪಿ.ಎಸ್.
ಉಪಾಧ್ಯಕ್ಷರು


ಪಿ. ಸಿ. ಜಯರಾಮ
ಸ್ಥಾಪಕ ಅಧ್ಯಕ್ಷರು


ಸದಾನಂದ ಜಾಕೆ
ನಿರ್ದೇಶಕರು


ನಿತ್ಯಾನಂದ ಮುಂಡೋಡಿ
ನಿರ್ದೇಶಕರು


ಎ.ವಿ. ತೀರ್ಥರಾಮ
ನಿರ್ದೇಶಕರು


ಚಂದ್ರ ಕೋಲ್ಚಾರ್
ನಿರ್ದೇಶಕರು


ಸದಾನಂದ ಕೆ.ಸಿ.
ನಿರ್ದೇಶಕರು


ಲಕ್ಷ್ಮೀನಾರಾಯಣ ನಡ್ಕ
ನಿರ್ದೇಶಕರು


ಮೋಹನ್‌ರಾಂ ಸುಳ್ಳಿ
ನಿರ್ದೇಶಕರು


ಎನ್.ಎಸ್. ದಾಮೋದರ
ನಿರ್ದೇಶಕರು


ದಿನೇಶ್ ಮಡಪ್ಪಾಡಿ
ನಿರ್ದೇಶಕರು


ನಳಿನಿ ಸೂರಯ್ಯ
ನಿರ್ದೇಶಕರು


ಲತಾ ಎಸ್. ಮಾವಜಿ
ನಿರ್ದೇಶಕರು


ಜಯಲಲಿತಾ ಕೆ.ಎಸ್.
ನಿರ್ದೇಶಕರು


ಕೆ.ಟಿ. ವಿಶ್ವನಾಥ
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ನೆಂಪಿನ ಪುಸ್ತಕ
ಅರೆಭಾಷೆ ಸಾಹಿತ್ಯ ಸಮ್ಮೇಳನ ೦೨ ಮಾರ್ಚ್ ೨೦೧೯

Sovenior
Arebhashe Sahithya Sammelana 02 March 2019

ಪ್ರಕಾಶಕರು : ಅರೆಭಾಷೆ ಸಾಹಿತ್ಯ ಸಮ್ಮೇಳನ ಸಮಿತಿ 2019
ಅಂಚೆ : ಸುಳ್ಯ ದ. ಕ. 574239

ಸಂಪಾದಕರು : ಯು.ಸು. ಗೌ. ಗುತ್ತಿಗಾರು

ಹಕ್ಕು : ಆಯಾ ಲೇಖಕರದು

ಪ್ರಥಮ ಮುದ್ರಣ : 2019

ಪುಟಗಳು : 40 + 100

ಬೆಲೆ ರೂ. : 150/-

ಮುಖಪುಟ ವಿನ್ಯಾಸ : ಮೋಹನ ಸೋನ

ಮುದ್ರಣ : ಶ್ರೀ ಗಣೇಶ ಪ್ರಿಂಟರ್ಸ್, ಸುಳ್ಯ
ನಾವೂರು ರಸ್ತೆ
ಗಾಂಧಿನಗರ, ಸುಳ್ಯ ದ. ಕ.
ದೂರವಾಣಿ : 08257-230238
Email : sgpsullia@gmail.com

Publishers : Arebhashe Sahithya Sammelana Swagatha Samithi - 2019
Post : Sullia
D.K.- 574239

Editor : U. Su. Gow. Guthigar

Copy Right : Writers

First Impression : 2019

Pages : 40 + 100

Price : 150/-

Cover page design : Mohana Sona

Printed : Sri Ganesh Printers
Navoor Road
Gandhinagar, Sullia
Ph : 08257-230238
Email : sgpsullia@gmail.com

ಪುಟತೆರೆಕನ

****

ಸಂಪಾದಕರ ಕಡೆಂದ.......



ಯು.ಸು.ಗೌ ಗುತ್ತಿಗಾರು

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಇದರ ಘನಾಧ್ಯಕ್ಷ ಶ್ರೀ ಪಿ. ಸಿ. ಜಯರಾಮನೊಟ್ಟೆ 'ಅರೆಭಾಷೆ ಸಾಹಿತ್ಯ ಸಮ್ಮೇಳನ' ಮಾಡುವ ದೊಡ್ಡ ಕನಸ್ಸಿತ್ತ್, ಅವರ ಕನ್ಸ್‌ನ ಹಿಂದೆ ಭಾಷೆ, ಸಂಸ್ಕೃತಿ, ಅಧ್ಯಯನ, ಸಂಶೋಧನೆ ಸಾಹಿತ್ಯ ಸೃಷ್ಟಿಗಳ 'ಪಸ್‌ಲ್' ತೆಗೆವ ಗುಟ್ಟು ಅವ್ಕೆ ಗೊತ್ತಿತ್ತ್. ಆ ಪ್ರಕಾರ, ಅಕಾಡೆಮಿ ಅರೆಭಾಷೆವ್ರ ಭಾಷೇತರ ಅಭಿಮಾನಿಗಳ 'ಒಂದ್ ಮನ್ಸ್' ಕೈಕೂಡಿ ಬಾತ್, ಸುಳ್ಯಲಿ ಸುರನ ಅರೆಭಾಷೆ ಸಾಹಿತ್ಯ ಸಮ್ಮೇಳನ ಕಾಲದ ಮಿತಿಲಿ ಕೂಡಾ ಬಾರೀ ಲ್ಯಾಕ್‌ಲಿ ನಡೆದೇ ಬುಟ್ಟತ್. ಅದರೊಟ್ಟಿಗೆ, ಸೀಂ–,ಕಂಯಿಗಳ ಸಮರೂಪದ ಸಮುದ್ರಮಥನ ನಡ್ದ್ ಸುವಸ್ತುಗಳ ಪಸ್‌ಲ್ ತೆಗೆವ ಅವ್‌ಕಾಸ ಒದಗಿ ಬಾತ್– ಚರಿತ್ರೆ ಆತ್. ಇದರ ನೆಂಪುಗಳ ಅಕ್ಷರ ರೂಪಲಿ ಇಳ್ಸಿ ಮುಂದೆನೊವ್ಕೆ ಕೊಡುವ ಜವಾಬ್ದಾರಿಕೆ ಸಂಪಾದಕ ಮಂಡಳಿಗೆ ಸಿಕ್ಕಿತ್.

ಹಾಂಗೆ, ಸ್ವಾಗತ ಸಮಿತಿ ವಯಿಸಿದ ಕೆಲ್ಸನ 'ಸಿಂಹ ದೃಷ್ಟಿ ತೋರ್ಸುವ ಒಂದ್ ಸಣ್ಣ ಪ್ರಯತ್ನ ನಿಮ್ಮ ಕೈಲಿರುವ ಪಸ್‌ಲ್ ಪುಸ್ತಕ. ಸಮ್ಮೇಳನದ ದೊಡ್ಡಯಜಮಾನ್ರ್– ಸರ್ವಾಧ್ಯಕ್ಷರ್ ಶ್ರೀ ಕುರುಂಜಿ ರಾಮಯ್ಯ ಗಂಗಾಧರ ಮಾಸ್ತ್ರ ತಳಕಟ್ಟ್ ನ ಭಾಷಣದ ಪೂರ್ಣ ಪಾಠ ಇಲ್ಲಿ ಉಟ್ಟು. ಅರೆಭಾಷೆ ಚಿಂತಕರ್ ನಡೆಸಿಕೊಟ್ಟ ಗೋಷ್ಠಿಗಳ ವಿಚಾರ ನೋಡಕ್, ಭಾಷೆ ಸಂಸ್ಕೃತಿ ಆಚಾರವಿಚಾರಕ್ಕೆ ಸಂಬಂಧಿಸಿ, ಹಿರಿಯವು ಕಿರಿಯವು ಬರ್ದ ಲೇಖನ ಕವನಗಳ ಓದಕ್, ಸಮ್ಮೇಳನ ನೆಂಪಿಸಿಕಂಬ ಭಾವಚಿತ್ರಗಳ ಕಾಣಕ್, ಸನ್ಮಾನಿತ ಸಾಧಕರ ಸಾಧನೆಗಳ ಸ್ಫೂರ್ತಿ ಪಡೆಕ್.

ಹೀಂಗೆ ಪುಟಗಳ ಮಿತಿ ಹೊಂದ್‌ಸಿ ಪಸ್‌ಲ್ ಬಂದುಟು. ಪಸ್‌ಲ್ ಹೊರತೆಗೆಕೆ ಸಹಾಯ ಮಾಡ್ದ ಅಕಾಡೆಮಿ ಅಧ್ಯಕ್ಷರ್/ಸದಸ್ಯರ್, ರಿಜಿಸ್ಟ್ರಾರ್ ಚಂದ್ರಹಾಸ ರೈಗ, ಕಾರ್ಯಾಧ್ಯಕ್ಷ ದಿನೇಶ್ ಮಡಪ್ಪಾಡಿಯವು– ಹಾಂಗೆ ಬೇರೆ ಬೇರೆ ಸಮಿತಿಯವು, ನಮ್ಮ ಕೋರಿಕೆಗೆ ಬೆಲೆಕೊಟ್ಟ್, ಸಹಕಾರ ಕೊಟ್ಟೊಳೊ ಅಲ್ಲದೆ ತೂಕದ ಬರೆಹಗಳ ಕೊಟ್ಟ ಬರೆಹಗಾರ್ರ್, ಜಾಹಿರಾತ್ ಕೊಟ್ಟ್ ಭಾರ ಇಳ್ಸಿದ ಸಂಸ್ಥೆಗ ಸಂಚಿಕೆಗೆ ಮುಖಪುಟದ ಶೋಭೆ ತಂದ ಹೆಸರಾಂತ ಕಲಾವಿದ ಮೋಹನ ಸೋನಾ, ಪೊರ್ಲುಲಿ ಮುದ್ರಿಸಿ ಪುಸ್ತಕ ರೂಪಲಿ ಕೈಗೆ ಕೊಟ್ಟ ಶ್ರೀ ಗಣೇಶ್ ಪ್ರಿಂಟರ್ಸ್ ಮ್ಹಾಲಕ ಶ್ರೀ ಪಿ. ಉಮೇಶ್ ಮತ್ತ್ ಸಿಬ್ಬಂದಿವರ್ಗ ಸಹಕಾರ ನೀಡ್ದ ಸಂಪಾದಕ ಮಂಡಳಿ ಸದಸ್ಯರ್ ನಿಜವಾಗಿ ಕೃತಜ್ಞತೆಗೆ ಹಕ್ಕ್‌ದಾರ್ರ್‌ಂತ ಹೇಳಕ್.

ಅದ್ ಅಲ್ಲದೆ ಗಮನಿಸಕಾದ ವಿಚಾರಂತೇಳ್ರೆ ಅರೆಭಾಷೆಲಿ ಬರ್ದ್– ಓದುದು, ಟೈಪ್ ಮಾಡ್ದು ತಿದ್ದುದು ಅದರೊಟ್ಟಿಗೆ ಪ್ರಾದೇಶಿಕ ಪದಪ್ರಯೋಗ ವ್ಯತ್ಯಾಸ ಮಾತ್ರ ಅಲ್ಲ, ಅರೆಭಾಷೆಲಿ ಇದ್ ಸುರುನ ನೆನ್‌ಪುನ ಪುಸ್ತಕ ಆದಂರ್ದ ಇಲ್ಲಿ ಸವಾಲು ಕೂಡ ಉಟ್ಟು. ಕೆಲ್ಸದ ಮೇಲೆನ ತಪ್ಪುಗಳ ಲೆಕ್ಕ ಹಾಕೊವು ಸಿಕ್ಕುದು ಸುಲಭ, ಕೆಲ್ಸದ ಶ್ರಮ ಸಮಯ ಅರ್ಪಣೆಗೆ ಬೆಲೆ ಕೊಡೊವು ದುರ್ಲಭ, ಏನಿದ್ದರೂ, ಬಂದ ಪಸ್‌ಲ್‌ನ ಭರವಸೆಲಿ ನಾವು ತಕಂಕು ಅಲ್ಲನಾ?

ಯು.ಸು.ಗೌ ಗುತ್ತಿಗಾರು
ಸಂಪಾದಕರ್

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಮಡಿಕೇರಿ
ಮತ್ತೆ
ಸ್ವಾಗತ ಸಮಿತಿ, ಅರೆಭಾಷೆ ಸಾಹಿತ್ಯ ಸಮ್ಮೇಳನ, ಸುಳ್ಯ
ಹಾಗೂ ಗೌಡರ ಯುವ ಸೇವಾ ಸಂಘ (ರಿ) ಸುಳ್ಯ

ಇವರ ಕೂಡುಕಟ್ಟ್‌ಲಿ

ಪ್ರಪ್ರಥಮ

ಅರೆಭಾಷೆ ಸಾಹಿತ್ಯ ಸಮ್ಮೇಳನ – 2019

ದಿನ : 02 ಮಾರ್ಚ್ 2019 ಶನಿವಾರದಂದ್
ಜಾಗೆ : ಗೌಡ ಸಮುದಾಯ ಭವನ ಕೊಡಿಯಾಲಬೈಲ್, ಸುಳ್ಯ
ಡಾ। ಕುರುಂಜಿ ವೆಂಕಟ್ರಮಣ ಗೌಡ ವೇದಿಕೆ – ಕೊಳಂಬೆ ಪುಟ್ಟಣ್ಣ ಗೌಡ ಸಭಾಂಗಣ

ಎಲ್ಲಾ ಅರೆಭಾಷೆ ಅಭಿಮಾನಿಗಳಿಗೆ ಸ್ವಾಗತ

ಮೋಹನ್‌ರಾಂ ಸುಳ್ಳಿ ಅಧ್ಯಕ್ಷರ್	**ದಿನೇಶ್ ಮಡಪ್ಪಾಡಿ** ಅಧ್ಯಕ್ಷರ್	**ಪಿ. ಸಿ. ಜಯರಾಮ** ಅಧ್ಯಕ್ಷರ್
ದೊಡ್ಡಣ್ಣ ಬರೆಮೇಲು ಪ್ರಧಾನ ಕಾರ್ಯದರ್ಶಿ	**ವೀರಪ್ಪ ಗೌಡ ಕಣ್ಕಲ್** ಪ್ರಧಾನ ಕಾರ್ಯದರ್ಶಿ	**ಚಂದ್ರಹಾಸ ರೈ ಬಿ.** ರಿಜಿಸ್ಟ್ರಾರ್
ತೇಜಪ್ರಸಾದ ಅಮಚೂರು ಕೋಶಾಧಿಕಾರಿಗ **ಗೌಡರ ಯುವ ಸೇವಾ ಸಂಘ ಸುಳ್ಯ**	**ಎ. ವಿ. ತೀರ್ಥರಾಮ** ಕೋಶಾಧಿಕಾರಿಗ ಅರೆಭಾಷೆ ಸಾಹಿತ್ಯ ಸಮ್ಮೇಳನ	**ಅರೆಭಾಷೆ ಸಂಸ್ಕೃತಿ** **ಮತ್ತು ಸಾಹಿತ್ಯ ಅಕಾಡೆಮಿ**

ವಿವಿದ ಪದಾಧಿಕಾರಿಗ, ಸದಸ್ಯರ್‌ಗ, ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಸಮ್ಮೇಳನ ಸ್ವಾಗತ ಸಮಿತಿ ಹಾಗೂ ಗೌಡರ ಯುವ ಸೇವಾ ಸಂಘ (ರಿ.) ಸುಳ್ಯ

ಅರೆಭಾಷೆ ಸಾಹಿತ್ಯ ಸಮ್ಮೇಳನ

ಮೆರವಣಿಗೆ ಉದ್ಘಾಟನೆ — **ಬೊಳ್ಪುಗೆ ಗಂಟೆ 9–00ಕ್ಕೆ**

ಜಾಗೆ : ಕೆ.ವಿ.ಜಿ. ಸಮುದಾಯ ಭವನ – ಅಮರಶ್ರೀ ಭಾಗ್, ಸುಳ್ಯ

ಮೆರವಣಿಗೆ ಉದ್ಘಾಟನೆ	:	**ಡಾ। ರೇಣುಕಾಪ್ರಸಾದ್ ಕೆ. ವಿ.** ನಿರ್ದೇಶಕರ್, ರಾಜ್ಯ ಒಕ್ಕಲಿಗರ ಸಂಘ (ರಿ.) ಬೆಂಗಳೂರು
ನಿರ್ವಹಣೆ	:	**ದೊಡ್ಡಣ್ಣ ಬರೆಮೇಲು,** ಸಂಚಾಲಕರು, ಮೆರವಣಿಗೆ ಸಮಿತಿ
ರಾಷ್ಟ್ರ ಧ್ವಜಾರೋಹಣ	:	**ಶ್ರೀಮತಿ ಶೀಲಾವತಿ ಮಾಧವ,** ಅಧ್ಯಕ್ಷರ್ ನಗರ ಪಂಚಾಯತ್ ಸುಳ್ಯ
ಸಮ್ಮೇಳನ ಧ್ವಜಾರೋಹಣ	:	**ಶ್ರೀ ಹರಿಪ್ರಸಾದ್ ಪಾನತ್ತಿಲ,** ಅಧ್ಯಕ್ಷರ್, ಗ್ರಾ. ಪಂ. ಸುಳ್ಯ
ನಿರ್ವಹಣೆ	:	**ಶಿವರಾಮ ಕಜೆಮೂಲೆ** ದೈಹಿಕ ಶಿಕ್ಷಣ ಶಿಕ್ಷಕರ್, ಎಂ.ಜಿ.ಎಂ. ಪ್ರೌಢಶಾಲೆ ಕೊಡಿಯಾಲ್‌ಬೈಲು

ವಸ್ತು ಪ್ರದರ್ಶನ ಉದ್ಘಾಟನೆ — ಬೊಳ್ಪುಗೆ 10-15ಕ್ಕೆ

ಉದ್ಘಾಟಕರ್ : **ಶ್ರೀ ಚನಿಯ ಕಲ್ತಡ್ಕ,** ಅಧ್ಯಕ್ಷರ್, ತಾಲೂಕು ಪಂಚಾಯತ್, ಸುಳ್ಯ
ನಿರ್ವಹಣೆ : **ಪುರುಷೋತ್ತಮ ಅಮೈ** ಸಂಚಾಲಕರ್, ವಸ್ತು ಪ್ರದರ್ಶನ ಸಮಿತಿ

ಪುಸ್ತಕ ಪ್ರದರ್ಶನ ಉದ್ಘಾಟನೆ — ಬೊಳ್ಪುಗೆ 10-20ಕ್ಕೆ

ಉದ್ಘಾಟಕರ್ : **ಶ್ರೀ ಹರೀಶ್ ಕಂಜಿಪಿಲಿ,** ಜಿ. ಪಂ. ಸದಸ್ಯರ್, ಅರಂತೋಡು ಕ್ಷೇತ್ರ
ನಿರ್ವಹಣೆ : **ಮಾಧವ ಗೌಡ ಮಡಪ್ಪಾಡಿ,** ನಿವೃತ್ತ ಮುಖ್ಯೋಪಾಧ್ಯಾಯರು

ಸಮ್ಮೇಳನ ಉದ್ಘಾಟನಾ ಸಮಾರಂಭ — ಏರ್ ಹೊತ್ತು : 10-30ಕ್ಕೆ

ಸಮ್ಮೇಳನಾಧ್ಯಕ್ಷತೆ : **ಸನ್ಮಾನ್ಯ ಶ್ರೀ ಕೆ. ಆರ್. ಗಂಗಾಧರ** ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕರ್
ಸಮ್ಮೇಳನದ ಉದ್ಘಾಟಕರ್ : **ಸನ್ಮಾನ್ಯ ಶ್ರೀ ಡಿ. ವಿ. ಸದಾನಂದ ಗೌಡ**
ರಾಸಾಯನಿಕ ಗೊಬ್ಬರ ಮತ್ತು ಅಂಕಿ-ಅಂಶಗಳ ಸಚಿವರ್, ಭಾರತ ಸರಕಾರ
ಪುಸ್ತಕಗಳ ಬಿಡುಗಡೆ : **ಸನ್ಮಾನ್ಯ ಶ್ರೀ ಯು. ಟಿ. ಖಾದರ್** ಮಾನ್ಯ ನಗರಾಭಿವೃದ್ಧಿ ಮತ್ತ್
ವಸತಿ ಸಚಿವರು, ಕರ್ನಾಟಕ ಸರಕಾರ ಹಾಗೂ ದ. ಕ. ಜಿಲ್ಲಾ ಉಸ್ತುವಾರಿ ಸಚಿವರ್
ಆಶಯ ಮಾತ್ : **ಸನ್ಮಾನ್ಯ ಶ್ರೀ ಪಿ. ಸಿ. ಜಯರಾಮ**
ಅಧ್ಯಕ್ಷರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಸ್ಮರಣ ಸಂಚಿಕೆ ಬಿಡುಗಡೆ : **ಡಾ। ಕೊಳಂಬೆ ಚಿದಾನಂದ ಗೌಡ** ವಿಶ್ರಾಂತ ಉಪಕುಲಪತಿಗ, ಮೈಸೂರು
ಮುಖ್ಯ ನೆಂಟ್ರ್‌ಗ : **ಸನ್ಮಾನ್ಯ ಶ್ರೀ ಎಸ್. ಅಂಗಾರ,** ಮಾನ್ಯ ಶಾಸಕರ್, ಸುಳ್ಯ ವಿಧಾನಸಭಾ ಕ್ಷೇತ್ರ
ಸನ್ಮಾನ್ಯ ಶ್ರೀ ಎ. ಸಿ. ಭಂಡಾರಿ, ಅಧ್ಯಕ್ಷರ್, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಸನ್ಮಾನ್ಯ ಶ್ರೀ ನಿತ್ಯಾನಂದ ಮುಂಡೋಡಿ
ಅಧ್ಯಕ್ಷರ್, ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ
ಗೌರವ ಉಪಸ್ಥಿತಿ **ಸನ್ಮಾನ್ಯ ಶ್ರೀ ಎನ್. ಎಸ್. ದೇವಿಪ್ರಸಾದ್ ಸಂಪಾಜೆ,**
ಪೂರ್ವಾಧ್ಯಕ್ಷರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಸನ್ಮಾನ್ಯ ಶ್ರೀ ಗಿರೀಶ್ ಕೊಲ್ಯ,
ಪೂರ್ವಾಧ್ಯಕ್ಷರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಸನ್ಮಾನ್ಯ ಶ್ರೀಮತಿ ಕೆ. ಟಿ. ದರ್ಶನ
ಸಹಾಯಕ ನಿರ್ದೇಶಕರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೊಡಗು ಜಿಲ್ಲೆ

ನಿರ್ವಹಣೆ : **ಕೆ. ಟಿ. ವಿಶ್ವನಾಥ** ಸ್ವಾಗತ: **ದಿನೇಶ್ ಮಡಪ್ಪಾಡಿ** ಧನ್ಯವಾದ : **ಚಂದ್ರಹಾಸ ರೈ. ಬಿ.**
ಆಶಯ ಹಾಡ್ : **ಕಡ್ಲೇರ ತುಳಸಿ ಮೋಹನ್** ಸ್ಮರಣ ಸಂಚಿಕೆ ಸಂಪಾದಕರ ಮಾತ್: **ಯು. ಸು. ಗೌ. ಗುತ್ತಿಗಾರ್**

ಕಾವ್ಯ ಗಾನ ಕುಂಚ — ಮಧ್ಯಾಹ್ನ ಗಂಟೆ : 12-30ರಿಂದ

ಕಾವ್ಯ ವಾಚನ	ಗಾಯನ	ಕುಂಚ
❋ ದಾಮೋದರ ಕುಯಿಂತೋಡು	❋ ಶಶಿಧರ ಮಾವಿನಕಟ್ಟೆ	❋ ಪ್ರಸನ್ನ ಐವರ್ನಾಡು
❋ ಲೀಲಾ ದಯಾನಂದ	❋ ಗಿರಿಜಾ ಎಂ. ವಿ.	❋ ಶ್ರೀ ಹರಿ ಪೈಂದೋಡಿ
❋ ಯಶವಂತ ಕುಡೆಕಲ್ಲು	❋ ಪೂರ್ಣಿಮ ಮಡಪ್ಪಾಡಿ	❋ ವಸಂತ
❋ ಸಂಗೀತಾ ರವಿರಾಜ್	❋ ಮಮತಾ ಪಡ್ಡಂಬೈಲ್	❋ ಕನ್ನಿಕಾ ಡಿ. ಅಂಬೆಕಲ್ಲು
❋ ಉದಯ ಭಾಸ್ಕರ್	❋ ಕೆ. ಯನ್. ಪುಂಡರೀಕ	❋ ಮನ್ವಿತ್ ಯು. ಎಸ್.

ನಿರ್ವಹಣೆ: **ಲೀಲಾದಾಮೋದರ** ಸ್ವಾಗತ : **ಬಾರಿಯಂಡ ಜೋಯಪ್ಪ** ಧನ್ಯವಾದ : **ರೇಣುಕಾ ಸದಾನಂದ ಜಾಕೆ**

ಅರೆಭಾಷೆ ಸಾಹಿತ್ಯ ವಿಚಾರ ಗೋಷ್ಠಿ ಹೊತ್ತು : ಅಪರಾಹ್ನ ಗಂಟೆ 2-00ರ್‌ಂದ

ಅರೆಭಾಷೆ ಸಬಲೀಕರಣ - ಭಾಷೆಗೆ ಮಾನ್ಯತೆ

ವಿಸಯ : ಸ್ವಾತಂತ್ರ್ಯ ಪೂರ್ವಲಿ - ಅರೆಭಾಷೆನವರ ಸ್ಥಿತಿಗತಿಗ

ವಿಚಾರ ಮಂಡನೆ : ಶ್ರೀ ವಿದ್ಯಾಧರ ಬಡ್ಡಡ್ಕ ವಕೀಲರು ಮತ್ತೆ ಸಂಶೋಧಕರ್

ವಿಸಯ : ಸ್ವಾತಂತ್ರ್ಯ ನಂತರಲಿ - ಅರೆಭಾಷೆನ ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರ್ಸುವ ವಿಚಾರ ಮತ್ತೆ ಭಾಷಾ ಅಲ್ಪಸಂಖ್ಯಾತರ ಮಾನ್ಯತೆ

ವಿಚಾರ ಮಂಡನೆ : ಡಾ। ಕರುಣಾಕರ ನಿಡಿಂಜಿ ಪ್ರಾಧ್ಯಾಪಕರ್ ಮತ್ತೆ ಬರಹಗಾರರ್

ಸಮನ್ವಯಕಾರರ್ : ಎ. ಕೆ. ಹಿಮಕರ ಸದಸ್ಯರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ನಿರ್ವಹಣೆ : ಬೇಕಲ್ ದೇವರಾಜ್ ಸ್ವಾಗತ : ಪಿ. ಯಸ್. ಗಂಗಾಧರ ಧನ್ಯವಾದ : ಸುರೇಶ್ ಎಂ. ಹೆಚ್.

ಅರೆಭಾಷೆ ಪಳಮೆ - ಹಾಸ್ಯ ಲಾಸ್ಯ ಹೊತ್ತು : ಅಪರಾಹ್ನ ಗಂಟೆ 3-00ಕ್ಕೆ

ಪರಿಕಲ್ಪನೆ : ಭವಾನಿಶಂಕರ ಅಡ್ತಲೆ ನಿರ್ದೇಶನ : ಲೋಕೇಶ್ ಊರುಬೈಲು

ಸಮಾರೋಪ ಮತ್ತು ಸನ್ಮಾನ ಸಮಾರಂಭ ಹೊತ್ತು : ಅಪರಾಹ್ನ ಗಂಟೆ 3-30ಕ್ಕೆ

ಅಧ್ಯಕ್ಷತೆ : **ಸನ್ಮಾನ್ಯ ಶ್ರೀ ಪಿ. ಸಿ. ಜಯರಾಮ**
ಅಧ್ಯಕ್ಷರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತ್ ಸಾಹಿತ್ಯ ಅಕಾಡೆಮಿ

ಸಮಾರೋಪ ಮಾತ್ : **ಸನ್ಮಾನ್ಯ ಪ್ರೊ. ಕೆ. ಇ. ರಾಧಾಕೃಷ್ಣ**
ವಿಶ್ರಾಂತ ಪ್ರಾಂಶುಪಾಲರ್, ಖ್ಯಾತ ಸಾಹಿತಿಗ, ಬೆಂಗಳೂರು

ಸನ್ಮಾನಿಸುವೊವು : **ಸನ್ಮಾನ್ಯ ಡಾ। ಕೆ. ವಿ. ಚಿದಾನಂದ**
ಅಧ್ಯಕ್ಷರ್, ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ (ರಿ.) ಸುಳ್ಯ

ಮುಖ್ಯ ನೆಂಟ್ರ : **ಸನ್ಮಾನ್ಯ ಶ್ರೀ ಕೆ. ಜಿ. ಬೋಪಯ್ಯ**
ಮಾಜಿ ವಿಧಾನಸಭಾ ಅಧ್ಯಕ್ಷರ್ ಹಾಗೂ ಶಾಸಕರ್, ವಿರಾಜಪೇಟೆ ಕ್ಷೇತ್ರ

ಸಮ್ಮೇಳನಾಧ್ಯಕ್ಷರ ಮುಕ್ತಾಯ ಮಾತ್ : **ಸನ್ಮಾನ್ಯ ಶ್ರೀ ಕೆ. ಆರ್. ಗಂಗಾಧರ್**, ಸಮ್ಮೇಳನಾಧ್ಯಕ್ಷರ್

ಸನ್ಮಾನಿತರಿಗೆ ಅಭಿನಂದನಾ ಮಾತ್ : **ಸನ್ಮಾನ್ಯ ಶ್ರೀ ಚಂದ್ರಶೇಖರ ಪೇರಾಲ್**
ಮುಖ್ಯಗುರುಗಳು, ಸರಕಾರಿ ಪ್ರೌಢಶಾಲೆ, ಎಲಿಮಲೆ

ಸನ್ಮಾನ ಪುರಸ್ಕೃತರ್

ಸಮಾಜ ಸೇವೆ : ಶ್ರೀ ಪಡ್ಡಂಬೈಲು ವೆಂಕಟ್ರಮಣ ಗೌಡ
ಸಹಕಾರಿ ಸೇವೆ : ಶ್ರೀ ಜಾಕೆ ಮಾಧವ ಗೌಡ
ಆಡಳಿತ ಸೇವೆ : ಶ್ರೀ ಗೋಪಾಲಕೃಷ್ಣ ಕಣ್ಕಲ್ K.A.S.
ಕೃಷಿ : ಶ್ರೀ ಗಂಗಯ್ಯ ಗೌಡ ಪೂಂಬಾಡಿ
ಕ್ರೀಡೆ : ಶ್ರೀ ಬಾಲಕೃಷ್ಣ ಗೌಡ ಕುದ್ವ
ಸಾಹಿತ್ಯ :ಶ್ರೀಮತಿ ದಂಬೆಕೋಡಿ ಸುಶೀಲ ಸುಬ್ರಮಣಿ
ಪತ್ರಿಕೋದ್ಯಮ : ಶ್ರೀ ಡಾ। ಯು. ಪಿ. ಶಿವಾನಂದ
ಉದ್ಯಮ : ಶ್ರೀ ರಾಜೇಶ್ ತೇನನ, ಭಾಗಮಂಡಲ
ಶಿಕ್ಷಣ ಸೇವೆ : ಶ್ರೀ ಗಣೇಶ್ ನಾಯರ್, ಸುಬ್ರಹ್ಮಣ್ಯ
ಸಾಂಸ್ಕೃತಿಕ (ಯಕ್ಷಗಾನ): ಶ್ರೀ ಧನಂಜಯ ಅಮಚೂರ್

ನಿರ್ವಹಣೆ : ಜಯರಾಮ ದೇರಪ್ಪಜ್ಜನಮನೆ ಸ್ವಾಗತ : ಡಾ। ಎನ್. ಎ. ಜ್ಞಾನೇಶ್ ಧನ್ಯವಾದ : ವೀರಪ್ಪ ಗೌಡ ಕಣ್ಕಲ್

ಸಮ್ಮೇಳನದಂದ್ ಬೆಳ್ಕ್‌ಗೆ ಬರ್‍ವ ಪುಸ್ತಕಗ

- ಅರೆಬಾಸೆ (ಗೌಡ ಕನ್ನಡ) ವ್ಯಾಕರಣ – ಪ್ರೊ. ಕೆ. ಕುಶಾಲಪ್ಪ ಗೌಡ
- ಮಿಣ್ಚುಳಿ (ಅರೆಬಾಸೆ ಕತೆಗಳ ಜೊಂಪೆ) – ಡಾ. ಪುನೀತ್ ರಾಘವೇಂದ್ರ. ಕುಂಟುಕಾಡ್
- ತಬ್ಲಿ ಮಂಜ (ಅರೆಬಾಸೆ ಕತೆಗಳ ಜೊಂಪೆ) – ಪಿ. ಜಿ. ಅಂಬೆಕಲ್
- ನೆಗೆಬೇಕು ಕೇವಗ ಗೂನೆಹಾಂಗೆ (ಅರೆಬಾಸೆ ಕವನ ಸಂಕಲನ) – ಡಾ. ಕರುಣಾಕರ ನಿಡಿಂಜಿ
- ಅಪ್ಪ ಹೇಳ್ದ್ ಹತ್ತ್ ಕತೆಗ – ಭವಾನಿಶಂಕರ ಅಡ್ತಲೆ

ನಿರ್ವಹಣೆ : ಎ. ಕೆ. ಹಿಮಕರ

ಸಾಂಸ್ಕೃತಿಕ ಕಾರ್ಯಕ್ರಮ

ಸಂಜೆ ಗಂಟೆ 5–00ಕ್ಕೆ

ಅರೆಭಾಷೆ ಸಾಂಸ್ಕೃತಿಕ ವೈಭವ

ಕಲಾಬಳಗ ಮಡಿಕೇರಿ ಅರ್ಪಿಸುವ, ರೂಪಕ

ವೀರಚರಿತ್ರೆ

ನಿರ್ದೇಶನ : ಕುಡೆಕಲ್ ಸಂತೋಷ್

ನಿರ್ವಹಣೆ : ಶಶಿಧರ ಎಂ. ಜೆ., ಲೋಕೇಶ್ ಊರುಬೈಲು, ಶ್ರೀಮತಿ ಕಡ್ಲೇರ ತುಳಸಿಮೋಹನ್

ವಿಶೇಷ ಸೂಚನೆಗ

- ಸಮ್ಮೇಳನ ಅಧ್ಯಕ್ಷರ ಮೆರವಣಿಗೆಯೊಟ್ಟಿಗೆ ಅರೆಭಾಷೆ ಸಂಸ್ಕೃತಿ ಪ್ರದರ್ಶಿಸುವ ಟ್ಯಾಬ್ಲೋಗ ಹಾಂಗೆ ವಾಹನ ಮೆರವಣಿಗೆಯೂ ನಿಗದಿತ ಸಮಯಕ್ಕೆ ಹೊರ್ಡದೆ. ಗ್ರಾಮಗಳಿಂದ ಬರೊವು ಕೆ.ವಿ.ಜಿ. ಅಮರಶ್ರೀ ಸಮುದಾಯ ಭವನಕ್ಕೆ ಬಂದ್ ಸೇರೊಕು.
- ಸುಳ್ಯ ಎಸ್.ಪಿ.ಎಂ. ಆಸ್ಪತ್ರೆ ಬಳಿಂದ ಕೊಡಿಯಾಲಬೈಲ್‌ನ ಸಮ್ಮೇಳನ ಜಾಗಗೆ ಹೋಗಿ ಬಾಕೆ ವಾಹನ ವ್ಯವಸ್ಥೆ ಇದ್ದದೆ.
- ಸಮ್ಮೇಳನಲಿ ವಸ್ತು ಪ್ರದರ್ಶನದ ವ್ಯವಸ್ಥೆ ಇದ್ದ್ ಪೂರ್ವಕಾಲಲಿ ಉಪಯೋಗಿಸುತ್ತಿದ್ದ ಹಳೆ ವಸ್ತುಗ ಇದ್ದ್ರೆ ತಮ್ಮ ಹೆಸರ್ ಹಾಕಿ ಪ್ರದರ್ಶನಕ್ಕೆ ಕೊಡೊಕು. ತಾವು ಅದನ್ನ ದಾನ ಮಾಡಿಕೆ ಇಚ್ಛಿಸಿದಲ್ಲಿ ಗೌಡ ಸಮುದಾಯ ಭವನದ ವಸ್ತು ಸಂಗ್ರಹಾಲಯಕ್ಕೆ ಹಸ್ತಾಂತರಿಸಿಕೆ ವಿನಂತಿಸುವೆ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಅಧ್ಯಕ್ಷರು : ಪಿ. ಸಿ. ಜಯರಾಮ

ರಿಜಿಸ್ಟ್ರಾರ್ : ಚಂದ್ರಹಾಸ ರೈ. ಬಿ.

ಸದಸ್ಯರುಗಳು

- ಬಾರಿಯಂಡ ಜೋಯಪ್ಪ
- ಕೆ. ಟಿ. ವಿಶ್ವನಾಥ
- ಎ. ಕೆ. ಹಿಮಕರ
- ಸುರೇಶ್ ಎಂ. ಹೆಚ್.
- ಕುಂಭಗೌಡನ ಪ್ರಸನ್ನ
- ದಿನೇಶ್ ಹಾಲೆಮಜಲು
- ಶ್ರೀಮತಿ ಕಡ್ಲೇರ ತುಳಸಿಮೋಹನ್
- ದೇವರಾಜ್ ಬೇಕಲ್
- ಪರಶುರಾಮ ಚಿಲ್ತಡ್ಕ
- ಶ್ರೀಮತಿ ತಿರುಮಲೇಶ್ವರಿ
- ಯತೀಶ್ ಕುಮಾರ್ ಜಾನಪ್ಪ
- ಮಾಧವ ಗೌಡ ಎಂ.
- ಚಿದಾನಂದ ಬೈಲಾಡಿ
- ಕಾನೆಹಿತ್ಲು ಮೊಣ್ಣಪ್ಪ
- ಶ್ರೀಮತಿ ಶ್ವೇತಾ ಮಡಪ್ಪಾಡಿ

ಅರೆಭಾಷೆ ಸಾಹಿತ್ಯ ಸಮ್ಮೇಳನ – 2019

ಸ್ವಾಗತ ಸಮಿತಿ

ಗೌರವಾಧ್ಯಕ್ಷರ್ : ಡಾ। ಕೆ. ವಿ. ಚಿದಾನಂದ

ಪೋಷಕಾಧ್ಯಕರ್ : ಎಸ್. ಅಂಗಾರ ಶಾಸಕರ್, ಸುಳ್ಯ

ಗೌರವ ಮಾರ್ಗದರ್ಶಕರ್ : ಡಾ। ರೇಣುಕಾಪ್ರಸಾದ್ ಕೆ. ವಿ.
ನಿತ್ಯಾನಂದ ಮುಂಡೋಡಿ

ಅಧ್ಯಕ್ಷರ್ : ಪಿ. ಸಿ. ಜಯರಾಮ

ಕಾರ್ಯಾಧ್ಯಕ್ಷರ್: ದಿನೇಶ್ ಮಡಪ್ಪಾಡಿ

ಉಪಾಧ್ಯಕ್ಷರುಗ : ಮೋಹನ್‌ರಾಂ ಸುಳ್ಳಿ
ಶ್ರೀಮತಿ ರೇಣುಕಾ ಸದಾನಂದ ಜಾಕೆ

ಪ್ರಧಾನ ಕಾರ್ಯದರ್ಶಿ : ವೀರಪ್ಪ ಗೌಡ ಕಣ್ಕಲ್

ಕೋಶಾಧಿಕಾರಿ : ಎ. ವಿ. ತೀರ್ಥರಾಮ

ಕಾರ್ಯದರ್ಶಿ : ದೊಡ್ಡಣ್ಣ ಬರೆಮೇಲು

ಸಹ ಕೋಶಾಧಿಕಾರಿ : ತೇಜಪ್ರಸಾದ್ ಅಮಚೂರು

ಸಂಚಲನಾ ಸಮಿತಿ

ಸಂಚಾಲಕರ್ : ❖ ಡಾ। ಎಸ್. ಎ. ಜ್ಞಾನೇಶ್–9448153007 ❖ ಎ. ಕೆ. ಹಿಮಕರ – 9481267121

ಸದಸ್ಯರ್‌ಗ ❖ ಚಂದ್ರ ಕೋಲ್ಚಾರ್ ❖ ಕೆ. ಪಿ. ಸದಾನಂದ ❖ ಬಾಲಚಂದ್ರ ಕಳಗಿ ❖ ಜಾಕೆ ಸದಾನಂದ

ಕಾರ್ಯಕ್ರಮ ಸಂಯೋಜನಾ ಸಮಿತಿ

ಸಂಚಾಲಕರ್ : ❖ ಚಂದ್ರಶೇಖರ ಪೇರಾಲು – 9448889005 ❖ ಕೆ. ಟಿ. ವಿಶ್ವನಾಥ – 9448464593

ಸದಸ್ಯರ್‌ಗ ❖ ಭವಾನಿಶಂಕರ ಅಡ್ತಲೆ ❖ ಚೆನ್ನಪ್ಪಗೌಡ ಪತ್ತುಕುಂಜ ❖ ಸದಾನಂದ ಮಾವಜಿ
❖ ಮೋಹನ ಸೋನ ❖ ರವೀಶ್ ಪಡ್ಡಂಬೈಲು ❖ ಗಂಗಾಧರ ಕುರುಂಜಿ

ಆಮಂತ್ರಣ ಪತ್ರ/ ಪ್ರಚಾರ ಸಮಿತಿ

ಸಂಚಾಲಕರ : ❖ ಜಿ. ಜಿ. ಚಂದ್ರಶೇಖರ – 9448445870 ❖ ದಿನೇಶ್ ಹಾಲೆಮಜಲು – 9448981963
❖ ಕುಂಭಗೌಡನ ಪ್ರಸನ್ನ – 9480022923

ಸದಸ್ಯರ್‌ಗ : ❖ ರಾಕೇಶ್ ಕುಂಟಿಕಾನ ❖ ಸತೀಶ್ ಕೆ. ಜಿ. ❖ ಅನಂತರಾಮ ಮಣಿಯಾನ
❖ ಪಿ. ಕೆ. ಉಮೇಶ ❖ ಅಣ್ಣಾಜಿ ಗೌಡ ಪೈಲೂರು ❖ ವಿಶ್ವನಾಥ ಕುಂಚಡ್ಕ

ವೇದಿಕೆ, ಸಭಾಭವನದ ವ್ಯವಸ್ಥೆ

ಸಂಚಾಲಕರ : ❖ ತೇಜಪ್ರಸಾದ ಅಮೆಚೂರು – 9448428911 ❖ ಕಾನೆಹಿತ್ಲು ಮೊಣ್ಣಪ್ಪ – 9844187261

ಸದಸ್ಯರ್‌ಗ : ❖ ರೋಹಿತ್ ಕ್ಯೊಂಗೋಡಿ ❖ ಪ್ರಭಾಕರ ಅಮ್ಮೆ ❖ ಶ್ರೀಕಾಂತ ಮಾವಿನಕಟ್ಟೆ
❖ ಪದ್ಮಯ್ಯ ಕುಂಬಳಚೇರಿ ❖ ಚಿದಾನಂದ ಕೆ. ❖ ದೇವಿದಾಸ ಕುಕ್ಕುನೇರು

ದ್ವಾರ-ಅಲಂಕಾರ ಸಮಿತಿ

ಸಂಚಾಲಕರ್ : ❖ ಸಂತೋಷ್ ಮಡ್ತಿಲ - 9448156556 ಪರಶುರಾಮ ಚಿಲ್ತಡ್ಕ - 9481959171
ಸದಸ್ಯರ್‌ಗ : ❖ ಯಶ್ವಿತ್ ಕಾಳಮನೆ ❖ ಲೋಕೇಶ್ ಪೆರ್ಲಂಪಾಡಿ ❖ ಅವಿನಾಶ ಕುರುಂಜಿ
❖ ದಾಮೋದರ ನಾರ್ಕೋಡು. ❖ ಶ್ರೀ ವಿಷ್ಣು ಯುವಕ ಮಂಡಲ ಕೊಡಿಯಾಲಬೈಲು
❖ ಶ್ರೀ ವರಲಕ್ಷ್ಮೀ ಯುವತಿ ಮಂಡಲ ಕೊಡಿಯಾಲಬೈಲು

ಸನ್ಮಾನ ಸಮಿತಿ

ಸಂಚಾಲಕರ್ : ❖ ದಿನೇಶ್ ಅಂಬೆಕಲ್ಲು - 9448625269 ❖ ದೇವರಾಜ್ ಬೇಕಲ್ - 9448869861
ಸದಸ್ಯರ್‌ಗ : ❖ ತಿಮ್ಮಯ್ಯ ಪಿಂಡಿಮನೆ ❖ ಉಷಾ ಕಿರಿಭಾಗ ❖ ಜಲಜಾಕ್ಷಿ ಕೆ.
❖ ಪುರುಷೋತ್ತಮ ಕಿರ್ಲಾಯ ❖ ಶ್ರೀಮತಿ ಪುಷ್ಪಾಮೇದಪ್ಪ ❖ ಶ್ರೀಮತಿ ಮಮತಾ ಮಾಧವ ಕುದ್ಪಾಜೆ

ಸ್ಮರಣ ಸಂಚಿಕೆ ಸಮಿತಿ

ಸಂಚಾಲಕರ್ : ❖ ಯು. ಸುಬ್ರಾಯ ಗೌಡ-9481964252 ❖ ಜಾರಿಯಂಡ ಜೋಯಪ್ಪ ಮದೆ - 9481770584
ಸದಸ್ಯರ್‌ಗ : ❖ ಶ್ರೀಮತಿ ಲೀಲಾ ದಾಮೋದರ ❖ ಜಯರಾಮ ದೇರಪ್ಪಜ್ಜನ ಮನೆ ❖ ಲೋಕನಾಥ ಅಮಚೂರು
❖ ತೇಜಕುಮಾರ ಬಡ್ಡಡ್ಕ ❖ ಸಂಜೀವ ಕುದ್ಪಾಜೆ ❖ ಬಾಬು ಗೌಡ ಅಚ್ರಪ್ಪಾಡಿ.

ಊಟೋಪಾಚಾರ ಸಮಿತಿ

ಸಂಚಾಲಕರ್ : ❖ ಪಿ.ಎಸ್. ಗಂಗಾಧರ - 9448625240 ❖ ಸುರೇಶ್ ಯು. ಯಚ್. - 9449387181
ಸದಸ್ಯರ್‌ಗ : ❖ ವಸಂತಕುಮಾರ್ ಕಿರಿಭಾಗ ❖ ವೇದಾವತಿ ಮಾಣಿಬೆಟ್ಟು ❖ ಸತೀಶ ಕ್ಯೊಂಗಾಜೆ
❖ ಪುರುಷೋತ್ತಮ ಕೋಲ್ಚಾರು ❖ ಯತಿರಾಜ ಭೂತಕಲ್ಲು ❖ ಬೆಳ್ಯಪ್ಪ ಗೌಡ ಬಳ್ಳಡ್ಕ
❖ ಜಯರಾಜ್ ಕುಕ್ಕೇಟಿ ❖ ಶಿವರಾಮ ಗೌಡ ಅಮ್ಮೈ ಮಡಪ್ಪಾಡಿ

ಆರ್ಥಿಕ ಸಮಿತಿ

ಸಂಚಾಲಕರ್ : ❖ ಎ. ಪಿ. ತೀರ್ಥರಾಮ - 9448394963 ಮಾಧವ ಗೌಡ ಎಂ. - 9448462163
ಸದಸ್ಯರ್‌ಗ : ❖ ನವೀನ ಜಾಕೆ, ❖ ದಿನೇಶ್ ಮಡ್ತಿಲ ❖ ಡಾ। ಲೀಲಾಧರ್ ಡಿ. ವಿ.
❖ ದಿವಾಕರ ಮುಂಡೋಡಿ ❖ ಕುಕ್ಕೇಟಿ ಕುಶಾಲಪ್ಪ ಗೌಡ ❖ ಸೂರಯ್ಯ ಸೂಂತೋಡು
❖ ರಾಧಾಕೃಷ್ಣ ಮಾವಿನಕಟ್ಟೆ ❖ ಚಂದ್ರಶೇಖರ ಮೇರ್ಕಜೆ

ಸಾಹಿತ್ಯ ಸ್ಪರ್ಧಾ ಸಮಿತಿ

ಸಂಚಾಲಕರ್ : ❖ ಶ್ರೀಮತಿ ಚಂದ್ರಮತಿ ಕೆ - 9481507515 ❖ ಶ್ರೀಮತಿ ಶ್ವೇತಾ ಮಡಪ್ಪಾಡಿ-7019188932
ಸದಸ್ಯರ್‌ಗ : ❖ ಶ್ರೀಧರ ಕೆರೆಮೂಲೆ ❖ ಮೋಹನ್ ❖ ಲಿಂಗಪ್ಪ ಬೆಳ್ಳಾರೆ ❖ ಯಶವಂತ ಕುಡೆಕಲ್ಲು

ಅತಿಥಿ ನಿರ್ವಹಣಾ ಮತ್ತು ಪೂರ್ಣಕುಂಭ ಸಮಿತಿ

ಸಂಚಾಲಕರ್ : ❖ ಶ್ರೀಮತಿ ಲತಾಪ್ರಸಾದ್ ಕುದ್ಪಾಜೆ - 9482744435
❖ ಶ್ರೀಮತಿ ತಿರುಮಲೇಶ್ವರಿ ಜಾಲ್ಸೂರು- 9901430797
ಸದಸ್ಯರ್‌ಗ : ❖ ಮೀನಾಕ್ಷಿ ರಾಮಕಜ ❖ ಗೀತಾ ಕೋಲ್ಚಾರು ❖ ಪಿ. ವಿವೇಕಾನಂದ
❖ ಸೋಮಶೇಖರ ಕೇವಳ ❖ ಚಿತ್ರಲೇಖಾ ಮಡಪ್ಪಾಡಿ ❖ ಚಂಚಲಾಕ್ಷಿ ಕಣ್ತಡ್ಕ

ಮೆರವಣಿಗೆ ಸಮಿತಿ

ಸಂಚಾಲಕರ್ : ❖ ದೊಡ್ಡಣ್ಣ ಬರೆಮೇಲು-9449662384 ❖ ಚಿದಾನಂದ ಜೈಲಾಡಿ-9449662384
ಸದಸ್ಯರ್‌ಗ : ❖ ಶೈಲೇಶ್ ಅಂಬೆಕಲ್ಲು ❖ ತೀರ್ಥರಾಮ ಅಡ್ಕಬಳೆ ❖ ರಜಿತ್ ಅಡ್ಕಾರು
❖ ರಮಾನಂದ ಬಾಳೆಕಜೆ ❖ ಕೆ.ಟಿ. ಭಾಗೀಶ್ ❖ ಪುರುಷೋತ್ತಮ ಬೊಡ್ಡನಕೊಚ್ಚಿ
❖ ಶಿವಪ್ರಕಾಶ್ ಅಡ್ಡನಪಾರೆ ❖ ಗಣೇಶ ಪಾಲಾರುಮೂಲೆ ❖ ವಿನುತ ಪಾತಿಕಲ್ಲು ❖ ಸಂತೋಷ ಜಾಕೆ
❖ ವಾರಿಜ ಕುರುಂಜಿ ❖ ಪಿ. ಜಿ. ಪುಷ್ಪಾ ❖ ವಸಂತಿ ಕೊಡಪಾಲ ❖ ಜಗದೀಶ ಕುಯಿಂತೋಡು

ವಸ್ತು ಪ್ರದರ್ಶನ ಸಮಿತಿ

ಸಂಚಾಲಕರ್ : ❖ ಪುರುಷೋತ್ತಮ ಅಮೈ – 9480762906 ❖ ಯತೀಶ ಕುಮಾರ್ ಗೌಡ – ಜಾನಡ್ಕ. – 9686914166
ಸದಸ್ಯರ್‌ಗ : ❖ ಡಿ. ಟಿ. ದಯಾನಂದ ❖ ಮಾಧವ ಗೌಡ ಸುಳ್ಳಕೋಡಿ ❖ ಎಂ. ಡಿ. ವಿಜಯಕುಮಾರ
❖ ಮೀರಾ ಪ್ರೇಮನಾಥ್ ಸುಳ್ಯ, ❖ ಯಶೋದ ಎಂ. ಬಿ. ಕೋಲ್ಚಾರು

ಸ್ವಯಂ ಸೇವಕ ಸಮಿತಿ

ಸಂಚಾಲಕರ್ : ❖ ಶ್ರೀಮತಿ ಪುಷ್ಪಾವತಿ ಮಾಣಿಬೆಟ್ಟು
ಸದಸ್ಯರ್‌ಗ ❖ ಶ್ರೀಮತಿ ಜಯಲಕ್ಷ್ಮೀ ಜನಾರ್ಧನ ನಾರ್ಕೋಡು. ❖ ಶ್ರೀಮತಿ ಪವಿತ್ರ ಕುರುಂಜಿ
❖ ಶ್ರೀಮತಿ ಮಾಲತಿ ಬೋಜಪ್ಪ ತೊಡಿಕಾನ ❖ ಶ್ರೀಮತಿ ಲತಾ ಸದಾನಂದ
❖ ಶ್ರೀಮತಿ ಶೀಲಾ ಕುರುಂಜಿ ❖ ಶ್ರೀಮತಿ ಜಯಂತಿ ಕೆ. ವಿ. ಅಮೈ

ಆರೋಗ್ಯ ಸಮಿತಿ

ಸಂಚಾಲಕರ್ : ❖ ಡಾ। ಸಾಯಿ ಗೀತಾ ಜ್ಞಾನೇಶ್
ಸದಸ್ಯರ್‌ಗ : ❖ ಡಾ। ಡಿ. ವಿ. ಲೀಲಾಧರ್ ❖ ಡಾ। ಕೇಶವ ಪಿ.ಕೆ.

ಕಛೇರಿ/ನೋಂದಣಿ

ಸಂಚಾಲಕರ್ : ❖ ಯಂ. ಜಿ. ಗುಣಪಾಲ-9449331179
ಸದಸ್ಯರ್‌ಗ : ❖ ಜನಾರ್ಧನ ಕೊಳಂಜರೋಡಿ ❖ ಶಾಂತಪ್ಪ ಗೌಡ ಮೋಂಟಡ್ಕ ❖ ವಿನ್ಯಾಸ್
❖ ಜನಾರ್ಧನ ಮಾಸ್ಟರ್ ದಾಲ್ಚಾಜೆ ❖ ವಾಸುದೇವ ನಡುಬೆಟ್ಟು ❖ ಶ್ರೀ ಎಂ. ಚೆನ್ನಪ್ಪ ಗೌಡ

ಮನರಂಜನಾ ಸಮಿತಿ

ಸಂಚಾಲಕರ್ : ❖ ಶ್ರೀ ಶಶಿಧರ ಎಂ.ಜೆ –9449834826 ❖ ಶ್ರೀ ಲೋಕೇಶ ಊರುಬೈಲು –9611355496
❖ ಶ್ರೀಮತಿ ಕಡ್ಲೇರ ತುಳಸಿ ಮೋಹನ – 9483110940
ಸದಸ್ಯರ್‌ಗ : ❖ ಮಮತಾ ರವೀಶ ❖ ಸುಧೀರ್ ಏನೆಕಲ್ಲು ❖ ಶ್ವೇತ ಮಡಪ್ಪಾಡಿ

ವಾಹನ ನಿಲುಗಡೆ

ಸಂಚಾಲಕರ್ : ❖ ಯದುಕುಮಾರ್ ಅಮೈ, ❖ ಸಂದೇಶ ಸೂಂತೋಡು

ಸ್ಮರಣ ಸಂಚಿಕೆ ಸಮಿತಿ



ಯು. ಸುಬ್ರಾಯ ಗೌಡ
ಸಂಚಾಲಕರ



ಶ್ರೀಮತಿ ಲೀಲಾ ದಾಮೋದರ
ಸದಸ್ಯರ್ಗ



ಲೋಕನಾಥ ಅಮಚೂರು
ಸದಸ್ಯರ್ಗ



ಸಂಜೀವ ಕುದ್ಪಾಜೆ
ಸದಸ್ಯರ್ಗ



ಚಾರಿಯಂಡ ಜೋಯಪ್ಪ ಮದೆ
ಸದಸ್ಯರ್ಗ



ಜಯರಾಮ ದೇರಪ್ಪಜನ ಮನೆ
ಸದಸ್ಯರ್ಗ



ತೇಜಕುಮಾರ ಬಡ್ಡಡ್ಕ
ಸದಸ್ಯರ್ಗ



ಬಾಬು ಗೌಡ ಅಚ್ರಪ್ಪಾಡಿ
ಸದಸ್ಯರ್ಗ

ಸ್ವಾಗತ ಸಮಿತಿ



ಡಾ| ಕೆ. ವಿ. ಚಿದಾನಂದ
ಗೌರವಾಧ್ಯಕ್ಷರ್



ಎಸ್. ಅಂಗಾರ ಶಾಸಕರ್, ಸುಳ್ಯ
ಪೋಷಕಾಧ್ಯಕ್ಷರ್



ಡಾ| ರೇಣುಕಾಪ್ರಸಾದ್ ಕೆ. ವಿ.
ಗೌರವ ಮಾರ್ಗದರ್ಶಕರ್



ನಿತ್ಯಾನಂದ ಮುಂಡೋಡಿ
ಗೌರವ ಮಾರ್ಗದರ್ಶಕರ್



ಪಿ. ಪಿ. ಜಯರಾಮ
ಅಧ್ಯಕ್ಷರ್



ದಿನೇಶ್ ಮಡಪ್ಪಾಡಿ
ಕಾರ್ಯಾಧ್ಯಕ್ಷರ್



ಮೋಹನ್‌ರಾಂ ಸುಳ್ಳಿ
ಉಪಾಧ್ಯಕ್ಷರ್‌ಗ



ಶ್ರೀಮತಿ ರೇಣುಕಾ ಸದಾನಂದ
ಉಪಾಧ್ಯಕ್ಷರ್



[illegible]
ಪ್ರಧಾನ ಕಾರ್ಯದರ್ಶಿ



[illegible] ತೀರ್ಥರಾಮ
ಕೋಶಾಧಿಕಾರಿ



[illegible]
ಕಾರ್ಯದರ್ಶಿ



ತೇಜಪ್ರಸಾದ್ ಅಮ[illegible]
ಸಹ ಕೋಶಾಧಿಕಾರಿ

ಕರ್ನಾಟಕ ಅರೆಭಾಷೆ ಅಕಾಡೆಮಿ ಸದಸ್ಯರ್‌ಗ

(15-12-2017ರಿಂದ)



ಪಿ. ಸಿ. ಜಯರಾಮ
ಅಧ್ಯಕ್ಷರ್



ಚಂದ್ರಹಾಸ ರೈ ಬಿ
ರಿಜಿಸ್ಟ್ರಾರ್

ಸದಸ್ಯರ್



ಶ್ರೀ ನಾರಾಯಣ ಚೋಂಬಪ್ಪ



ಶ್ರೀಮತಿ ಕಸ್ತೂರಿ ಮನಮೋಹನ್



ಶ್ರೀ ಎ. ಕೆ. ಹಿಮಕರ



ಶ್ರೀ ಸುರೇಶ್ ಎಂ. ಹೆಚ್.



ಶ್ರೀ ವಿನೋದ್ ಹಾಲೆಮಜಲು



ಶ್ರೀ ಕೆ. ಟಿ. ವಿಶ್ವನಾಥ್



ಶ್ರೀ ಜನಾನಂದ ಬೈಲಾಡಿ



ಶ್ರೀ ಪೇರಲ್ ದೇವರಾಜ್



ಶ್ರೀ ಕಾನೆಹಿತ್ಲು ಮೊಣ್ಣಪ್ಪ



ಶ್ರೀ ಕುಂಬುಗೌಡನ ಪ್ರಸನ್ನ



ಶ್ರೀಮತಿ ತಿರುಮಲೇಶ್ವರಿ




ಶ್ರೀ ಮಾಧವ ಗೌಡ



ಶ್ರೀ ಯತೀಶ್ ಕುಮಾರ್ ಗೌಡ



ಶ್ರೀ ಪರಶುರಾಮ ಚಿಲ್ತಡ್ಕ



ಶ್ರೀಮತಿ ಸ್ಮಿತಾ ಅಮೃತರಾಜ್

॥ ಜೈ ಶ್ರೀ ಗುರುದೇವ್ ॥



ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾ ಮಠ

ಆದಿಚುಂಚನಗಿರಿ ರಸ್ತೆ, ಗಾಂಧಿನಗರ, ಕಾವೂರು, ಮಂಗಳೂರು
ಫೋನ್ ನಂ: 0824-2484749, 2483300, 2483344,2484748
ವೆಬ್. www.bgsec.net ಇ-ಮೈಲ್ : bgsmlracm@gmail.com

ಪೂಜ್ಯ ಶ್ರೀ ಧರ್ಮಪಾಲನಾಥ ಸ್ವಾಮೀಜಿ

ಅನುಗ್ರಹ ಸಂದೇಶ

ಭಾರತ ದೇಶವು ಅನೇಕ ಮತ, ಧರ್ಮ ಸಂಸ್ಕೃತಿಯ ಸಾರ್ವಭೌಮತ್ವವನ್ನು ಹೊಂದಿರುತ್ತದೆ. ಈ ವಿಶ್ವಕುಟುಂಬದಲ್ಲಿ ತನ್ನದೇ ಆದ ಆಚಾರ, ವಿಚಾರ, ನಡಾವಳಿಗಳು ಅನೂಚಾನವಾಗಿ ನಡೆಯುತ್ತಾ ಬಂದಿವೆ. ಮತ, ಜಾತಿ, ಧರ್ಮೀಯರಿಗನುಗುಣವಾಗಿ ಪ್ರಾಂತೀಯ ಭಾಷೆಗಳು ಉಗಮವಾಗುತ್ತವೆ. ಅವುಗಳನ್ನು ಉಳಿಸಿ ಸಂವರ್ಧನೆಗೊಳಿಸುವುದು ನಮ್ಮ ಕರ್ತವ್ಯವಾಗಿರುತ್ತದೆ.

ಇಂದು ಕರ್ನಾಟಕ ಅರೆಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಆಶ್ರಯದಲ್ಲಿ ಸುಳ್ಯ ತಾಲೂಕಿನಲ್ಲಿ ಪ್ರಥಮ ಭಾರಿಗೆ 'ಅರೆಭಾಷೆ ಸಮ್ಮೇಳನ' ವನ್ನು ಏರ್ಪಡಿಸಿರುವುದು ಶ್ಲಾಘನೀಯ. ಅರೆಭಾಷೆ ತನ್ನದೇ ಆದ ಸಾಂಸ್ಕೃತಿಕ ಗ್ರಾಮೀಣ ಸೊಗಡನ್ನು ಹೊಂದಿದೆ. ಭಾಷೆ ಮತ್ತು ಸಂಸ್ಕೃತಿ ಮಾನವ ಜನಾಂಗದ ಜೀವನಾಡಿ. ಅದು ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಅವು ಉಳಿದರೆ ಧರ್ಮ, ಸಂಸ್ಕೃತಿ, ಧಾರ್ಮಿಕ ಪರಂಪರೆಗಳು ಸ್ಥಿರವಾಗಿ ಉಳಿಯಲು ಸಾಧ್ಯ. ಆ ನಿಟ್ಟಿನಲ್ಲಿ ಕರ್ನಾಟಕ ಅರೆಭಾಷೆ ಅಕಾಡಮಿ ಅಧ್ಯಕ್ಷರಾದ ಪಿ. ಸಿ. ಜಯರಾಮ ಅವರ ಮುಂದಾಳತ್ವದಲ್ಲಿ ಅನೇಕ ಕಾರ್ಯಕ್ರಮಗಳು ಮೂಡಿ ಬರುತ್ತಿರುವುದು ಅತೀವ ಸಂತಸ ತಂದಿದೆ. ಅರೆಭಾಷೆ ಸಮ್ಮೇಳನದ ಸವಿನೆನಪಿಗೆ ಹೊರತರಲು ಹೊರಟಿರುವ 'ಪಸಲ್' ಸಂಚಿಕೆಯೂ ಉತ್ತಮ ಲೇಖನಗಳಿಂದ ಒಳಗೊಂಡು ಮುಂದಿನ ಯುವಕಣ್ಮಣಿಗಳಿಗೆ ಆದರ್ಶ ಕೈಗನ್ನಡಿಯಾಗಿ ಇರಲಿ ಎಂದು ಆಶಿಸುತ್ತಾ, ಕ್ಷೇತ್ರದ ಆರಾಧ್ಯ ದೇವರಾದ ಶ್ರೀ ಕಾಲಭೈರವೇಶ್ವರ ಸ್ವಾಮಿ ಅನುಗ್ರಹಿಸಲಿ ಎಂದು ಆಶಿಸುತ್ತೇವೆ.

ಇಂತಿ ಭಗವತ್ಸೇವೆಯಲ್ಲಿ

ದಿನಾಂಕ 22-02-2019

ಪೂಜ್ಯ ಶ್ರೀ ಧರ್ಮಪಾಲನಾಥ ಸ್ವಾಮೀಜಿ
ಮಂಗಳೂರು ಶಾಖಾಮಠ



ಡಿ. ವಿ. ಸದಾನಂದ ಗೌಡ
ಕೇಂದ್ರ ಸಚಿವರು, ಭಾರತ ಸರಕಾರ
1ನೇ ಮಹಡಿ, ಪೋಡಿಯಂ ಬ್ಲಾಕ್, ವಿ. ವಿ. ಟವರ್
ಡಾ. ಅಂಬೇಡ್ಕರ್ ಬೀದಿ ಬೆಂಗಳೂರು 560001
ದೂರವಾಣಿ 011-23384567

ಸಂದೇಶ

ಮಾರ್ಚ್ 2, 2019ರಂದ್ ಸುಳ್ಯಲಿ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಉಸ್ತುವಾರಿಲಿ ನಡೆವ ಅರೆಭಾಷೆ ಸಾಹಿತ್ಯ ಸಮ್ಮೇಳನ–ಅರೆಭಾಷಿಗರಿಗೆ ಹಾಂಗೆ ಭಾಷಾಭಿಮಾನಿಗಳಿಗೆ ಕುಶಿ ಕೊಡುವ ಸಂಗ್ತಿ. ದೇಶದ ಸಾವಿರಾರ್ ಭಾಷೆಗಳ ಉಳಿವು ಆ ದೇಶದ ಸಾಂಸ್ಕೃತಿಕ ಪರಂಪರೆ ಉಳಿವಿಗೆ ಕಾರಣ ಆದೆ. ಈ ದೃಷ್ಟಿಲಿ ಸಾಹಿತ್ಯ ಸಮ್ಮೇಳನದ ಕೊಡುಗೆ ಗಮಸತಕ್ಕದ್ದೆ.

ಅರೆಭಾಷೆ ಸಮೃದ್ಧ ಶ್ರೀಮಂತ ಭಾಷೆಯಾಗಿ ಭಾರತೀಯ ಪ್ರಮುಖ ಭಾಷಾವರ್ಗಕ್ಕೆ ಸೇರುವ ದಿನ ಬೇಗನೆ ಬರ್ಲಿ. ಹಾಂಗೆ, ಸುಳ್ಯಲಿನಡೆವ ಸುರುನ ಸಾಹಿತ್ಯ ಸಮ್ಮೇಳನ ಒಂದು ವೇಗೋತ್ಕರ್ಷವಾಗಿ ಒದಗಿ ಬರ್ಲಿ; ಈ ಸಂಬಂಧ ಹೊರತರುವ ನೆಂಪಿನ ಸಂಚಿಕೆ ಮುಂದೆನೊವ್ವೆ ಮಾರ್ಗದರ್ಶಕವಾಗಲೆಂತ ಹಾರೈಸಿನೆ.

ತಮ್ಮ ವಿಶ್ವಾಸಿ,

ದಿನಾಂಕ 20-02-2019

(ಡಿ. ವಿ. ಸದಾನಂದ ಗೌಡ)



सत्यमेव जयते

ನಳಿನ್ ಕುಮಾರ್ ಕಟೀಲ್
ಲೋಕಸಭಾ ಸದಸ್ಯರು (ದ.ಕ)
ಜಿಲ್ಲಾಧಿಕಾರಿ ಕಛೇರಿ ಸಂಕೀರ್ಣ
ಎರಡನೆ ಮಹಡಿ ಮಂಗಳೂರು - 1
ದೂರವಾಣಿ 0824-2448888

ಸಂದೇಶ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಆಶ್ರಯದಲ್ಲಿ ಸುಳ್ಯದಲ್ಲಿ ಮಾರ್ಚ್ 2, 2019ರಂದು ನಡೆಯಲಿರುವ ಅರೆಭಾಷೆ ಸಾಹಿತ್ಯ ಸಮ್ಮೇಳನ–ಭಾಷೆ ಮತ್ತು ಸಂಸ್ಕೃತಿಯ ಉಳಿವಿನ ಪ್ರಯತ್ನದಲ್ಲಿ ಒಂದು ಮೈಲಿಗಲ್ಲು. ವಿವಿಧತೆಯಲ್ಲಿ ಏಕತೆಯನ್ನು ಸಾರುವ ನಮ್ಮ ದೇಶದ ಪರಂಪರೆಗೆ ಸದರಿ ಸಾಹಿತ್ಯ ಸಮ್ಮೇಳನದಿಂದ ಗರಿ ಮೂಡುವುದೆಂದು ಭಾವಿಸುತ್ತೇನೆ.

ಈ ಚಾರಿತ್ರಿಕ ದಿನದ ನೆನಪಿನಲ್ಲಿ ತರುವ ಸ್ಮರಣಸಂಚಿಕೆ ಉತ್ತಮ 'ಆಕರ' ಗ್ರಂಥವಾಗಿ ಹೊರಬರಲೆಂದು ಹಾರೈಸುತ್ತಾ ಕಾರ್ಯಕ್ರಮಕ್ಕೆ ಶುಭ ಹಾರೈಸುತ್ತೇನೆ.

ದಿನಾಂಕ 22-02-2019

(ಸಹಿ)

ನಳಿನ್ ಕುಮಾರ್ ಕಟೀಲ್
ಸಂಸದರು, ಮಂಗಳೂರು ಲೋಕಸಭಾ ಕ್ಷೇ



ಶ್ರೀ ಎಚ್. ಡಿ. ಕುಮಾರಸ್ವಾಮಿ
ಮುಖ್ಯ ಮಂತ್ರಿಗಳು
ಕರ್ನಾಟಕ ಸರಕಾರ
ವಿಧಾನಸೌಧ ಬೆಂಗಳೂರು

ಸಂದೇಶ

ಮಾನ್ಯರೇ,

ತಾವು ನಡೆಸುತ್ತಿರುವ ಅರೆಭಾಷೆ ಸಾಹಿತ್ಯ ಸಮ್ಮೇಳನ, ಭಾಷೆ ಸಂಸ್ಕೃತಿಯ ಉಳಿವಿನ ಹಿನ್ನಲೆಯಲ್ಲಿ ಒಂದು ಮಹತ್ವವಾದ ಹೆಜ್ಜೆ. ಕಾರ್ಯಕ್ರಮವನ್ನು ಸಮಗ್ರವಾಗಿ ಬಿಂಬಿಸಲಿರುವ ನೆನಪಿನ ಸಂಚಿಕೆಯಲ್ಲಿ ಪ್ರಬುದ್ಧವಾದ ವಿಚಾರಗಳು ಮೂಡಿಬರಲೆಂದು ಆಶಿಸುತ್ತಾ ಕಾರ್ಯಕ್ರಮಕ್ಕೆ ಶುಭಕೋರುತ್ತೇನೆ.

ವಂದನೆಗಳೊಂದಿಗೆ,

ದಿನಾಂಕ: 28-02-2019

ಶ್ರೀ ಎಚ್. ಡಿ. ಕುಮಾರಸ್ವಾಮಿ
(ಮುಖ್ಯಮಂತ್ರಿಗಳು)



ಶ್ರೀ ಡಿ. ಕೆ. ಶಿವಕುಮಾರ್
ಕನ್ನಡ ಮತ್ತು ಸಂಸ್ಕೃತಿ ಸಚಿವರು
ಕರ್ನಾಟಕ ಸರಕಾರ,
ವಿಧಾನ ಸೌಧ ಬೆಂಗಳೂರು.

ಸಂದೇಶ

ಮಾನ್ಯರೇ,

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಉಸ್ತುವಾರಿಯಲ್ಲಿ ಸುಳ್ಯದಲ್ಲಿ ಪ್ರಥಮ ಬಾರಿಗೆ "ಅರೆಭಾಷಾ ಸಾಹಿತ್ಯ ಸಮ್ಮೇಳನ" ನಡೆಸಿರುವುದು ಶ್ಲಾಘನೀಯ. ಅದರೊಂದಿಗೆ, ಇಂಥ ಪ್ರಯತ್ನಗಳು ನಾಡಿನ ಒಟ್ಟು ಸಾಹಿತ್ಯ ಸಾಂಸ್ಕೃತಿಕ ಬೆಳವಣಿಗೆಯ ದೃಷ್ಟಿಯಿಂದ ಉತ್ತಮ ಫಲ ನೀಡ ಬಲ್ಲವು ಎಂದು ಭಾವಿಸಬಹುದು.

ಕಾರ್ಯಕ್ರಮದ ಯಶಸ್ಸಿಗೆ ಪಾತ್ರರಾದವರಿಗೆ ಅಭಿನಂದನೆಗಳು. ನೆನಪಿನ ಸಂಚಿಕೆಯೂ ಸಂಗ್ರಾಹ್ಯ ಯೋಗ್ಯವಾಗಲೆಂದು ಹಾರೈಸುತ್ತೇನೆ.

ವಂದನೆಗಳೊಂದಿಗೆ,

ದಿನಾಂಕ: 26-02-2019

ಡಿ. ಕೆ. ಶಿವಕುಮಾರ್
ಕನ್ನಡ ಮತ್ತು ಸಂಸ್ಕೃತಿ ಸಚಿವರು



ಯು. ಟಿ. ಖಾದರ್
ಉಸ್ತುವಾರಿ ಸಚಿವರು
ದಕ್ಷಿಣ ಕನ್ನಡ ಜಿಲ್ಲೆ

ಸಂದೇಶ

ಮಾನ್ಯರೇ,

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಆಕಾಡೆಮಿಯ ಆಶ್ರಯದಲ್ಲಿ ಸುಳ್ಯದಲ್ಲಿ ಅರೆಭಾಷೆ ಸಾಹಿತ್ಯ ಸಮ್ಮೇಳನವನ್ನು ಸಂಘಟಿಸುತ್ತಿರುವುದು ಸಂತಸದ ಸಂಗತಿ. ಭಾಷೆಗಳು ಕೇವಲ ಸಂವಹನ ಮಾಧ್ಯಮಕಷ್ಟೆ ಸೀಮಿತವಲ್ಲ, ಇವುಗಳು ವ್ಯಕ್ತಿ–ವ್ಯಕ್ತಿಗಳ ಮಧ್ಯೆ ಸೌಹಾರ್ದ ಸಂಬಂಧವನ್ನು ಬೆರೆಯುವುದರೊಂದಿಗೆ ಮಾನವೀಯ ಮೌಲ್ಯಗಳ ವಿನಿಮಯಕ್ಕೆ ಆಸ್ಪದವಾಗುತ್ತದೆ. ಸಾಹಿತ್ಯ ಓದುಬರೆಹ ಸರ್ವರಿಗೂ 'ಹಿತ'ವನ್ನು ಬಯಸುತ್ತದೆ. ಈ ಸಂಬಂಧವಾಗಿ ಹೊರತರುವ 'ಪಸ್‌ಲ್' ನೆನಪಿನ ಸಂಚಿಕೆ ಉತ್ತಮವಾಗಿ ಮೂಡಿ ಬರಲಿ.

ವಂದನೆಗಳೊಂದಿಗೆ,

ಯು. ಟಿ. ಖಾದರ್.
ಉಸ್ತುವಾರಿ ಸಚಿವರು

ಮಂಗಳೂರು
ದಿನಾಂಕ 25-02-2019



ಶ್ರೀ ಬಿ. ರಮಾನಾಥ ರೈ.
ಮಾಜಿ ಉಸ್ತುವಾರಿ ಸಚಿವರು
ದಕ್ಷಿಣ ಕನ್ನಡ ಜಿಲ್ಲೆ

ಸಂದೇಶ

ಮಾನ್ಯರೇ,

ಸುಳ್ಯದಲ್ಲಿ ಪ್ರಥಮ ಬಾರಿಗೆ ಅರೆಭಾಷಾ ಸಾಹಿತ್ಯ ಸಮ್ಮೇಳನ ನಡೆಸುತ್ತಿರುವ ಚರಿತ್ರಾರ್ಹ ಸಂಗತಿ ತಿಳಿದು ಸಂತೋಷವಾಯಿತು. ಪ್ರಾದೇಶಿಕ ಭಾಷೆಯೋ ಆಂಗ್ಲಭಾಷೆಯೋ ಒಂದು ಹಂತದಲ್ಲಿ ಅಗತ್ಯವಾದರೂ ಅರೆಭಾಷೆಯಂತಹ ಮಾತೃಭಾಷೆಗಳು ನೆಲದ ಆಚಾರ ವಿಚಾರಗಳನ್ನು ಸಾಂಸ್ಕೃತಿಕ ಒಳನೋಟವನ್ನು ಉಳಿಸಿಕೊಳ್ಳುವಲ್ಲಿ ಶಕ್ತವಾಗುತ್ತವೆ. ಈ ದೃಷ್ಟಿಯಿಂದ ನೀವು ನಡೆಸುತ್ತಿರುವ ಸಾಹಿತ್ಯ ಸಮ್ಮೇಳನ ಅರ್ಥಪೂರ್ಣವಾಗಿದೆ.

ಸಮ್ಮೇಳನ ಯಶಸ್ವಿಯಾಗಲಿ; ಹೊರತರುವ 'ಪಸ್‌ಲ್' ಉತ್ತಮ ಪಸಲನ್ನು ನೀಡಲೆಂದು ಹಾರೈಸುತ್ತೇನೆ.

ವಂದನೆಗಳೊಂದಿಗೆ,

ಸ್ಥಳ : ಮಂಗಳೂರು
ದಿನಾಂಕ : 26-02-2019

ವಿಶ್ವಾಸದೊಂದಿಗೆ,
ಬಿ. ರಮಾನಾಥ ರೈ



ಕೆ. ಜಿ. ಬೋಪಯ್ಯ
ಶಾಸಕರು. ಮಾಜಿ ಸಭಾಧ್ಯಕ್ಷರು.
ವಿರಾಜಪೇಟೆ. ಕೊಡಗು

ಸಂದೇಶ

ಮಾನ್ಯರೇ,

ಸುಳ್ಯಲಿ ಅರಬಾಸೆ ಸಾಹಿತ್ಯ ಸಮ್ಮೇಳನ ನಡೆಸುವ ವಿಚಾರ ಚರಿತ್ರೆಗೆ ದಾಖಲಾಗುವ ಸಂಗ್ತಿ. ಭಾಷೆ ಮತ್ತ್ ಸಂಸ್ಕೃತಿಗಾಗಿ ಅಕಾಡೆಮಿಯ ಹುಟ್ಟು ಬೆಳವಣಿಗೆಗೆ – ಇದೊಂದ್ ಭಾರೀ ಮಹತ್ವದ ಸಾಕ್ಷಿ. ಈ ಸಮ್ಮೇಳನಲಿ ಅಳವಡಿಸುವ ಯಾವತ್ತೂ ಕಾರ್ಯಕ್ರಮಗ ಮಾದರಿಯಾಗಿ ಮೂಡಿಬಂದ್ ಮುಂದಿನ ಜನಗಳಿಗೆ ದಾರಿದೀಪ ಆಗಲಿಂತೇಳಿ ಶುಭ ಹಾರೈಸಿನೆ.

ಶುಭಾಶಯಗಳೊಟ್ಟಿಗೆ,

ಕೆ. ಜಿ. ಬೋಪಯ್ಯ
ಶಾಸಕರು ವಿರಾಜಪೇಟೆ, ಕೊಡಗು

ಸ್ಥಳ : ವಿರಾಜಪೇಟೆ
ದಿನಾಂಕ : 26-02-2019



ಎಸ್. ಅಂಗಾರ
ಶಾಸಕರು
ಸುಳ್ಯ ವಿಧಾನ ಸಭಾ ಕ್ಷೇತ್ರ

ಸಂದೇಶ

ಮಾರ್ಚ್ 2, 2019ರಂದು ಕರ್ನಾಟಕ ಅರೆಭಾಷೆ ಸಾಹಿತ್ಯ ಮತ್ತು ಸಂಸ್ಕೃತಿ ಅಕಾಡಮಿಯ ಆಶ್ರಯದಲ್ಲಿ, ಸುಳ್ಯದಲ್ಲಿ 'ಅರೆಭಾಷೆ' ಸಾಹಿತ್ಯ ಸಮ್ಮೇಳನ ಪ್ರಥಮವಾಗಿ ನಡೆಯುತ್ತಿರುವುದು ಶ್ಲಾಘನೀಯ ಸಂಗತಿ. ಒಂದು ನೆಲದ ಸಂಸ್ಕೃತಿಯ ಬೇರುಗಳು ಆ ನೆಲದಲ್ಲಿ ಬದುಕಿ ಬಾಳುತ್ತಿರುವ ವಿವಿಧ ಜನವರ್ಗದ ಆಚಾರ ವಿಚಾರಗಳಲ್ಲಿವೆ. ಭಾರತದಂತಹ ಬಹು ಸಂಸ್ಕೃತಿಯ ನಾಡಿನ ಪರಂಪರೆಯ ಉಳಿವಿನಲ್ಲಿ 'ಅರೆಭಾಷೆ' ಯಂತಹ ಭಾಷೆಗಳ ಕೊಡುಗೆ ಮಹತ್ತರವಾದುದು. ಈ ನಿಟ್ಟಿನಲ್ಲಿ ಸದರಿ ಸಮ್ಮೇಳನ ತನ್ನ ಆಶಯವನ್ನು ಬಿಂಬಿಸುವಲ್ಲಿ ಯಶಸ್ವಿಯಾಗಲೆಂದು ನಾನು ಹಾರೈಸುತ್ತೇನೆ.

ವಂದನೆಗಳೊಂದಿಗೆ,

ಸುಳ್ಯ
25-02-2019

ಇತೀ ತಮ್ಮ ವಿಶ್ವಾಸಿ.

ಎಸ್. ಅಂಗಾರ.
ಶಾಸಕರು.
ಸುಳ್ಯ ವಿಧಾನಸಭಾ ಕ್ಷೇತ್ರ

ಅಕಾಡೆಮಿ ಅಧ್ಯಕ್ಷರ ಮನ್ಸ್‌ನ ಮಾತ್



ಪಿ. ಸಿ. ಜಯರಾಮ

ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿನ ಇತಿಹಾಸಲಿ ಡಿಸೆಂಬರ್ 15, 2011 ಬಾರೀ ಮಹತ್ವದ ಶುಭದಿನಂತೇಳ್ಕ್. ಏಕೆಂತೇಳ್ರೆ ಅಂದ್ ಅಕಾಡೆಮಿ ಆಗಿ ಸರ್ಕಾರಿ ಆದೇಶ ಆದ ಮೂರ್ತದ ದಿನ. 'ಅರೆಭಾಷೆ' ಗೌಡ್ರ ಭಾಷೆಂತೇಳ್ರೂ, ಇದರ ಮಾತಾಡೊವ್ರು ಬೇರೆ ಬೇರೆ ಜನಾಂಗದವ್ರೂ ಒಳೊ. ಸುಳ್ಯ, ಪುತ್ತೂರು, ಕೊಡಗು, ಕೇರಳದ ಕೆಲವು ಭಾಗಗಳ್ಳಿ ಇದೊಂದು ವ್ಯಾವಹಾರಿಕ ಮತ್ತ್ ಸಂಪರ್ಕ-ಸೌಹಾರ್ದ ಭಾಷೆಯಾಗಿ ಕೂಡಾ ಬೆಳ್ದ್ ಬಂದುಟು.

ಭಾಷೆ ಮತ್ತ್ ಸಂಸ್ಕೃತಿ ನಾಣ್ಯದ ಎರಡ್ ಮೋರೆಗಳಾಂಗೆ ಒಂದರ ಬುಟ್ಟು ಮತ್ತೊಂದಿಲ್ಲೆ. ಅರೆಭಾಷೆಂತೇಳುವ ಪ್ರಬಲ ಸಾಂಸ್ಕೃತಿಕ ಹಿನ್ನಲೆಯೂ ಇರುವ – ಭಾಷೆನ ಉಳ್ಸಿಕಾಗಿ ಒಂದು ಅಕಾಡೆಮಿನ ಹುಟ್ಟು ಹಾಕುವ ಸಾಹಸ ನಡ್ತ್. ಹಿಂದೆ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಡಿ. ವಿ. ಸದಾನಂದ ಗೌಡರ ಒತ್ತಾಸೆಂದ ಅರೆಭಾಷೆ ಅಕಾಡೆಮಿ ಹುಟ್ಟಿತ್ತ್. ಸುರುನ ಅಧ್ಯಕ್ಷರಾಗಿ ಸಂಪಾಜೆ ದೇವಿ ಪ್ರಸಾದರ್. ಅವರ ನಂತರ ಕೊಲ್ಯದ ಗಿರೀಶ್‌ರವರ ತಂಡ-ಅಕಾಡೆಮಿ ವತಿಂದ ತುಂಬಾ ಕೆಲ್ಸ ಮಾಡ್ದೊ; ಪರಿಣಾಮ – ಅರೆಭಾಷೆಗೆ ಒಂದು 'ಮಹತ್ವ' ಸಿಕ್ಕುವಾಂಗೆ ಆತ್.

ಇದೀಗ ನನ್ನ ಅಧಿಕಾರಾವಧಿಲಿ, ನನ್ನ ಕ್ರೀಯಾಶೀಲ ಸದಸ್ಯರ ಸಹಕಾರಲಿ ಅಕಾಡೆಮಿನ ಉದ್ದೇಶ ಸಾಧನೆಗಾಗಿ ಕೆಲ್ಸ ಮಾಡ್ದ ಹೆಮ್ಮೆ ನಾವ್ರುಗೆ ಉಟ್ಟು. ಸುಳ್ಯಲಿ ನಡೆಸಿದ ಅರೆಭಾಷೆ ಲಿಪಿ, ವ್ಯಾಕರಣ, ಭಾಷಾ ಸಬಲೀಕರಣ – ಹಾಂಗೆ ಅರೆಭಾಷೆಗೆ ಪ್ರೊ. ಕೋಡಿ ಕುಶಾಲಪ್ಪ ಗೌಡ್ರ ಕೊಡುಗೆ ಬಗ್ಗೆ ಒಂದು ವಿಚಾರಗೋಷ್ಠಿ ಆತ್. ಅರೆಭಾಷೆಲಿ ಪುಸ್ತಕ ಬುಡ್ಗಡೆ ಮಾಡ್ದೊ. ಅರೆಭಾಷೆ ಸಂಸ್ಕೃತಿ ಒಳಗೆ ಬರುವ ಹಬ್ಬ ಹರಿದಿನಗಳ ಆಚರಣೆ ಒಟ್ಟಿಗೆ ವಿದ್ವಾಂಸರ ಕೈಲಿ ಉಪನ್ಯಾಸಗಳ ನಡೆಸಿದೊ. ಶಾಲೆ ಕೋಲೇಜುಗಳ್ಳಿ ಕೂಡಾ ಅರೆಭಾಷೆ ಕಾರ್ಯಕ್ರಮಗಳ ನಡೆಸಿ, ಇಂದ್‌ನ ತಲೆಮಾರ್ನವ್ಕೆ ಇದರ ಅಗತ್ಯದ ಬಗ್ಗೆ ಹೇಳಿಕೊಟ್ಟೊ.

ಇನ್ನೊಂದು ಪ್ರಮುಖ ಸಂಗತಿಂತೇಳ್ರೆ – ಅರೆಭಾಷೆ ಸಂಸ್ಕೃತಿ ಬಗ್ಗೆ ಬೇರೆ ಬೇರೆ ವಿದ್ವಾಂಸರ ಕಡೆಂದ, ಅಧ್ಯಯನ/ ಸಂಶೋಧನೆಗಾಗಿ ಫೆಲೋಸಿಪ್ – ನೀಡುವ ಚಿಂತನೆ ಹುಟ್ಟು ಹಾಕಿದ್ದ್, ಸುಮಾರ್ 10 ಮಂದಿ ಈ ಕುರಿತ್ ಸಂಶೋಧನೆ ಮಾಡ್ತಾ ಒಳೊ, ಅದರೊಟ್ಟಿಗೆ ಸಾಧಕರಿಗೆ, ಅಕಾಡೆಮಿ ಗೌರವ ಸಮ್ಮಾನ – ತ್ರೈಮಾಸಿಕ ಪತ್ರಿಕೆ "ಹಿಂಗಾರ" ಬಿಡುಗಡೆ ನಿರಂತರ ಸಾಗ್ತಾ ಉಟ್ಟು.

ಅರೆಭಾಷೆ ಸಾಹಿತ್ಯ ಸಮ್ಮೇಳನ ನಡೆಸುದು ನಮ್ಮ ಕನಸಾಗಿತ್ತ್. ಅದೀಗ ನನಸಾದ ಸಂಭ್ರಮ. ಈ ಸಮ್ಮೇಳನ ಅರೆಭಾಷೆ-ಸಂಸ್ಕೃತಿ ಅದರ ವ್ಯಾಪ್ತಿ – ಆಶ್ರಯಗಳ ಬಗ್ಗೆ ಒಂದು ಅವಲೋಕನ ಆಕು – ಆ ಮೂಲಕ ಜನ್ರಿಗೆ ಭಾಷಾಭಿಮಾನ ಮೂಡೊಕುಂತ ನಾ ಗ್ರೇಸಿನೆ. ಮನೆ ಮನೆಗಳ್ಳಿ ಪುಕ್ಕ ಅರೆಭಾಷೆ ಮಾತೊಡೊಕು ಕಲಾ ಗ್ರಾಮ ಸ್ಥಾಪನೆ ಆಕು. ಪಠ್ಯಪುಸ್ತಕಲಿ ಹೆಚ್ಚ್ ಹೆಚ್ಚ್ ಸಾಹಿತ್ಯ ಬರೊಕು

ಆಕಾಶವಾಣಿ, ಇನ್ನಿತರ ಮಾಧ್ಯಮಗಳಲ್ಲಿ ಪ್ರಚಾರ ಪಡೇಕು-ಇಂಥ ಉದ್ದೇಶ ಇಸಿಕಂಡ್, ಸಾಹಿತ್ಯ ಸಮ್ಮೇಳನದ ಸಂಘಟನೆ ಮಾಡ್ಯೊಳೊ.

ಈ ಸುರುನ ಸಾಹಿತ್ಯ ಸಮ್ಮೇಳನ - ಚಾರಿತ್ರಿಕ ರೀತಿಂದ ಮುಖ್ಯಂತೇಳಕ್. ಮಾಸ್ಟ್ರ ಆಗಿ ನಾಲ್ಕ ದಶಕಗಳ ಕಾಲ ಸಾರ್ಥಕ ಸೇವೆ-ರಾಜ್ಯ ರಾಷ್ಟ್ರ ಪ್ರಶಸ್ತಿ ಪಡೆದ -ಅರೆಭಾಷೆ ಶಬ್ದಕೋಶ ರಚನೆ ಮಾಡ್ದ ಕುರುಂಜಿ ರಾಮಯ್ಯ - ಗಂಗಾಧರ್ ಮಾಸ್ಟ್ರ ಅಧ್ಯಕ್ಷತೆಲಿ ಈ ಸಮ್ಮೇಳನ ನಡೆತಿರ್ದು ಸಂತೋಷದ ಸಂಗ್ತಿ. ಅವರ ಭಾಷಣ ನಮ್ಮ ಸಂಘಟನೆಗೆ, ಭಾಷೆಗೆ ಅದರ ಸಬಲೀಕರಣಕ್ಕೆ ಹೊಸ ದಿಕ್ಸೂಚಿ ಆಗುವ ವಿಶ್ವಾಸ ನಾವ್ಗೆ ಉಟ್ಟು. ಈ ಸಮ್ಮೇಳನಲಿ ಕಾಂಬ ಮೆರವಣಿಗೆ, ಕವಿಗೋಷ್ಠಿ, ವಿಚಾರಗೋಷ್ಠಿ, ಸಾಧಕರ ಸಮ್ಮಾನ, ಮನರಂಜನೆ, ಆದರಾತಿಥ್ಯ ಎಲ್ಲವೂ ಅಚ್ಚುಕಟ್ಟಾಗಿ ಕಂಡ್ ಬಂದರೆ, ನಮ್ಮ ಶ್ರಮ ಸಾರ್ಥಕ ಅಂತ ಭಾವಿಸಿವೆ.

ಸಮ್ಮೇಳನದ ಪ್ರಮುಖ ಆಶಯಗಳಲಿ - ಠರಾವುಗಳ ಮಂಡನೆ ಮುಖ್ಯವಾದ್ದ್. - ಸುಮಾರ್ 400 ವರ್ಷ ಇತಿಹಾಸ ಇರುವ ಅರೆಭಾಷೆನ ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರ್ಸುದು - ಅರೆಭಾಷಿಗರಿಗೆ ಭಾಷಾ ಅಲ್ಪಸಂಖ್ಯಾತ ಸ್ಥಾನಮಾನ ಸಿಕ್ಕುವಂಥದ್ ಇಲ್ಲಿ ಮಂಡಿಸಿ ಸರ್ಕಾರಕ್ಕೆ ಕಳಿಸಿಕೊಡುವ ವಿಚಾರ ಒಳ್ಳೆ ಬೆಳವಣಿಗೆ. ಆಗ ನಮ್ಮ ಅರೆಭಾಷಿಗರಿಗೆ - ವಿದ್ಯೆ ಉದ್ಯೋಗ ಕ್ಷೇತ್ರಗಳ್ಳಿ ಹೆಚ್ಚಿನ ವಿನಾಯಿತಿ ಪಡೆವ ವಿಷಯಲಿ ಅನುಮಾನ ಇಲ್ಲೆ.

ಈ ಸಮ್ಮೇಳನದ ನೆಂಪುನ ಅಕ್ಷರಲಿ ದಾಖಲು ಮಾಡುವ ಉದ್ದೇಶದ 'ಪಸಲ್' ಸಂಚಿಕೆನ ಯುಸುಗೌ ಗುತ್ತಿಗಾರು ಇವರ ಸಂಪಾದಕತ್ವಲಿ ಹೊರತರ್ತಾ ಒಳೊ.

ಸಮ್ಮೇಳನದ ಸಂಘಟನೆಗೆ ಕಾರಣರಾದವರ ಖಂಡಿತಾ ನಾ ಮರೆದುಲೆ. - ನನ್ನ ಅಕಾಡೆಮಿ ಸದಸ್ಯರ್, ರಿಜಿಸ್ಟ್ರಾರ್ ಚಂದ್ರಹಾಸ ರೈಗ, ಸ್ವಾಗತ ಸಮಿತಿ ಅಧ್ಯಕ್ಷರಾಗಿ ಪಾದರಸದ ಹಾಂಗೆ ಒಡಾಡ್ದವ್ರು ದಿನೇಶ್‌ಣ್ಣ ಮತ್ತವರ ತಂಡ, ಗೌಡರ ಯುವ ಸೇವಾ ಸಂಘ - ಇದರ ಅಧ್ಯಕ್ಷ ಶ್ರೀ ಮೋಹನರಾಂ ಸುಳ್ಳಿ ಮತ್ತವರ ಸದಸ್ಯರ್, ವಿವಿಧ ಪದಾಧಿಕಾರಿಗ, ಇವರೊಟ್ಟಿಗೆ ಸುರಂದಲೇ ನಮ್ಮ ತಯಾರಿ ಸಭೆಗಳ ನಡೆಸಿಕೆ ಅವಕಾಶ ಮಾಡಿಕೊಟ್ಟ್ ಎಲ್ಲಾ ರೀತಿಯ ಸಹಾಯ ಸಹಕಾರ ನೀಡ್‌ದ ಶ್ರೀ ವೆಂಕಟರಮಣ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿನ ಆಡಳಿತ ಮಂಡಳಿ ಮತ್ತ್ ಸಿಬ್ಬಂದಿಗ, ಇವರೆಲ್ಲರ ಮನ ಪೂರ್ವಕ ಕೆಲ್ಸಕ್ಕೆ ನಾ ಗೌರವ ಪೂರ್ವಕ ಧನ್ಯವಾದ ಸಲ್ಲಿಸಿನೆ.

ಅರೆಭಾಷೆ ಎತ್ತರೆತ್ತರಕೆ ಬೆಳೆಲಿ
ಸಂಸ್ಕೃತಿ ಜೊತೆಜೊತೆಯಾಗಿ ಒಳೆಲಿ
ಅದ್ ಮನೆಮನಗಳಲ್ಲಿ ಬೆಳಗಲಿ

ಪಿ. ಸಿ. ಜಯರಾಮ
ಅಧ್ಯಕ್ಷರು ಕರ್ನಾಟಕ. ಅರೆಭಾಷೆ ಸಂಸ್ಕೃತಿ ಮತ್ತು
ಸಾಹಿತ್ಯ ಅಕಾಡೆಮಿ

ಸ್ವಾಗತ ಸಮಿತಿಯ ಅಧ್ಯಕ್ಷರ ಮಾತ್.....



ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತ್ ಸಾಹಿತ್ಯ ಅಕಾಡೆಮಿ ಸುರಾದ ಮೇಲೆ ಅರೆಭಾಷೆಲಿರುವ ಸಾಹಿತ್ಯ ಮತ್ತ್ ಸಾಂಸ್ಕೃತಿಕ ಚಟುವಟಿಕೆಗಳಿಗೆ ತುಂಬ ವೇಗ ಸಿಕ್ಕಿತ್. ಸಾಕಷ್ಟ್ ಮಂದಿ ಯುವ ಲೇಖಕ್‌ಗರ್‌ಗ ಬರೆಕೆ ಮುಂದೆ ಬಂದೊಳೊ. ಅರೆಭಾಷೆ ಹಾಡಿಗೆ ಸಂಬಂದಿಸಿ ಡ್ಯಾನ್ಸ್ ತಂಡಮುಂದೆ ಬಂದೊಳೊಂತೇಳ್ದೇ ಖುಷಿನ ಸಂಗತಿ.

ಅಕಾಡೆಮಿಯ ಹಿಂದಿನ ಅಧ್ಯಕ್ಷರ್ ಶ್ರೀ ಕೊಲ್ಯದ ಗಿರೀಶ್ ರವರ ನೇತೃತ್ವಲಿ 2015ರಲ್ಲಿ ರಾಜ್ಯಮಟ್ಟದ ಅರೆಬಾಷೆ ಸಂಸ್ಕೃತಿ ಸಾಂಸ್ಕೃತಿಕ ಸಮಾವೇಶ ಸುಳ್ಯಲಿ ಮಾಡಿದ್ವೊ. ಈಗ ಅಧ್ಯಕ್ಷರಾದ ಶ್ರೀ ಪಿ. ಸಿ. ಜಯರಾಮ್ ರವರ ಯೋಚನೆಪ್ರಕಾರ ಪ್ರತಿ ತಾಲೂಕ್‌ಗಳಲ್ಲಿ ಸಮ್ಮೇಳನ ಹಮ್ಮಿಕೊಳ್ಳಕ್ ಎಂಬ ನಿರ್ಧಾರಂದ ಸುಳ್ಯಲಿ ಈ ಪ್ರಪ್ರಥಮ ಅರೆಭಾಷೆ ಸಾಹಿತ್ಯ ಸಮ್ಮೇಳನ ಸಂಘಟಿಸುವ ಅವಕಾಶ ಒದಗಿಬಾತ್. ಸುರುನ ಸರ್ತಿಗೆ ಹಮ್ಮಿಕೊಂಡ ಈ ಸಮ್ಮೇಳನ ಸಂಘಟಿಸಿಕೆ ಬಹಳ ಸಂತೋಷ ಆದೆ. ನಮ್ಮ ಮನೆ ಭಾಷೆ. ತಾಯಿಭಾಷೆಯಾದ ಅರೆಭಾಷೆನ ಬೆಳ್ಸಕೊಂತೇಳ್ವ ಪ್ರೀತಿಲಿ ಇವರ ಜವಾಬ್ದಾರಿ ವಹಿಸಿಕೊಂಡ್ ಕೆಲ್ಸಮಾಡ್ತ್ಯೊಳೊ. ನಮ್ಮ ಭಾಷೆ ಬರೇ ಭಾಷೆ ಅಲ್ಲಾ. ಅದರೊಳಗೆ ಒಂದ್ ಸಂಸ್ಕೃತಿ. ಸಂಬಂಧಗಳ ಜೀವಂತಿಕೆ ಉಟ್ಟು. ಇದರ ಬೆಳವಣಿಗೆ ಬಗ್ಗೆ ನಾವೆಲ್ಲವೂ ಸೇರಿ ಇನ್ನಷ್ಟ್ ಕೆಲ್ಸಮಾತ್ರೆ ಭಾಷೆಯೊಟ್ಟಿಗೆ ನಮ್ಮ ಜನಾಂಗ ವಿಶ್ವ ವ್ಯಾಪಿಯಾದೆ. ಎಂಬ ಆಸೆ ನಮ್ಮದ್.

ಅಕಾಡೆಮಿಂದ ಪ್ರಾರಂಭವಾದ ಪ್ರಪ್ರಥಮ ಅರೆಭಾಷೆ ಸಮ್ಮೇಳನದ ಪ್ರಥಮ ಅಧ್ಯಕ್ಷರಾಗಿ ನಮ್ಮ ಹಿರಿಯರಾದ ರಾಷ್ಟ್ರಪ್ರಶಸ್ತಿ ಶಿಕ್ಷಕ ಶ್ರೀ ಕೆ. ಆರ್. ಗಂಗಾಧರ್‌ವು ತಮ್ಮ ಅರ್ಥಪೂರ್ಣ ಭಾಷಣಂದ ಅರೆಬಾಷೆ ಬೆಳ್ಸಿಕೊಂದು ಹೊಸ ದಿಕ್ಕ್‌ನ ತೋರ್‍ಸೊವುಂತೇಳಿ ಇವ್‌ಕೆ ವಿಶೇಷವಾದ ಧನ್ಯವಾದಗಳ ತಿಳ್ಸಿನೆ ಮತ್ತ್ ಸಮ್ಮೇಳನನ ಸಂಘಟಿಸಿಕೆ ಅವಕಾಶ ಮಾಡಿಕೊಟ್ಟ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪಿ. ಸಿ. ಜಯರಾಮನವುಕ್ಕೆ ಮತ್ತ್ ಅವರ ತಂಡಕ್ಕೆ ಧನ್ಯವಾದ ತಿಳಿಸಿನೆ. ಶುರುನ ಸರ್ತಿ ಮಾಡಿಕಾಕನ ಸಮ್ಮೇಳನಲಿ ಏನಾದರೂ ಲೋಪ-ದೋಷ ಆಗಿದ್ದರೂ ಅದರ ಸರಿಪಡಿಸಿ ಮುಂದೆ ನಡೆಸುವ ಸಮ್ಮೇಳನ ಅರ್ಥಪೂರ್ಣ ಆಕು.

ಸುಳ್ಯಲಿ ನಡೆದ ಸಮ್ಮೇಳನ ಸಂಘಟಸಿಕೆ ಎಲ್ಲಾ ನೆರವು ನೀಡ್ವ ಸ್ವಾಗತ ಸಮಿತಿ ಮತ್ತೆ ಸಂಘಟನಾ ಸಮಿತಿಯ ಪದಾಧಿಕಾರಿಗಳಿಗೆ, ಸರ್ವಸದಸ್ಯರಿಗೆ ಹಾಂಗೇ ಪ್ರತಿಯೊಬ್ಬರಿಗೆ ಕೃತಜ್ಞತೆಗಳನ್ನ ಸಲ್ಲಿಸಿನೆ.

ದಿನೇಶ್ ಮಡಪ್ಪಾಡಿ
ನ್ಯಾಯವಾದಿಗ ಸುಳ್ಯ

ಕರ್ನಾಟಕ ರಾಜ್ಯ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಎಕಾಡೆಮಿ



ಮತ್ತೆ

ಸ್ವಾಗತ ಸಮಿತಿ, ಅರೆಭಾಷೆ ಸಾಹಿತ್ಯ ಸಮ್ಮೇಳನ, ಸುಳ್ಯ

ಹಾಗೂ ಗೌಡರ ಯುವಸೇವಾ ಸಂಘ (ರಿ.) ಸುಳ್ಯ

ಇವರ ಕೂಡುಕಟ್ಟ್‌ಲಿ

ಜರಗಿದ ಸುಳ್ಯ ತಾಲೂಕಿನ ಪ್ರಪ್ರಥಮ ಅರೆಭಾಷೆ ಸಾಹಿತ್ಯ ಸಮ್ಮೇಳನ-2019

ಇದರ್‌ಲಿ ಪ್ರಸ್ತುತ ಪಡಿಸಿದ

ಸಮ್ಮೇಳನ ಅಧ್ಯಕ್ಷರ ಭಾಷಣ

ಸನ್ಮಾನ್ಯ ಅರೆಭಾಷಿಕ ಬಂಧುಗಳೇ, ಆತ್ಮೀಯರೇ ಮತ್ತೆ ಆಮಂತ್ರಿಕರೇ,
ನೀವ್‌ಗೆಲ್ಲ ಕೈ ಮುಗ್ದ್ ನನ್ನ ಮಾತ್‌ಗಳ ಆರಂಭಿಸಿನೆ.

ಅರೆಭಾಷೆ ನಮ್ಮ ತಾಲೂಕಿನ ರಾಜಭಾಷೆ. ನಮ್ಮ ಗೌಡ ಜನಾಂಗದ ಮಾತೃಭಾಷೆ. ಒಂದು ಜನಾಂಗಕ್ಕೆಂತ ಒಂದು ಭಾಷೆ ಇದ್ದರೆ ಅದ್ ಅರೆಭಾಷೆಗೆ ಮಾತ್ರ. ಸುಳ್ಯ ತಾಲೂಕ್‌ಲಿ ನಾವು ಅರೆಭಾಷೆ ಮಾತಾಡುವ ಗೌಡ ಜನಾಂಗದವು ಬಹು ಸಂಖ್ಯಾತರಾದ್ದರ್‌ಂದ ನಮ್ಮ ಅರೆಭಾಷೆ ನಮ್ಮ ಜನಾಂಗನ ಮೀರಿ ಸುಳ್ಯಲಿ ಅದ್ ಇಂದ್ ಒಂದು ವ್ಯಾವಹಾರಿಕ ಭಾಷೆ ಆಗಿ ಬೆಳ್ದ್ ನಿಂತುಟು. ಸುಳ್ಯಲಿ ಇಂದ್ ಎಲ್ಲಾ ಜನಾಂಗವು ಭಾರಿ ಪೊರ್ಲುಲಿ ಅರೆಭಾಷೆ ಮಾತಾಡುವೆ.

ಒಂದು ಕಾಲಲಿ ನಮ್ಮಲ್ಲಿ ಅರೆಭಾಷೆ ಮಾತಾಡಿಕೆ ನಾವು ಮುಜುಗರ ಪಡುತ್ತಿದ್ದೋ. ಇಂದ್ ಪರಿಸ್ಥಿತಿ ಬದಲಾಗುಟು. ಇಂದ್ ಭಾರಿ ಅಭಿಮಾನಲಿ ಭಾಷಣರೂಪಲಿ ಕೂಡಾ ಅರೆಭಾಷೆ ಬೆಳ್ದ್ ನಿತ್ತುಟು.

ಕಾರಣ ಮುಖ್ಯವಾಗಿ ಅರೆಭಾಷೆಗೊಂದು ಎಕಾಡೆಮಿ ಆಗಿ ಸರಕಾರ ಅದ್ಕೆ ಅಧಿಕೃತ ಮಾನ್ಯತೆ ನೀಡಿಟು. ಇದಕ್ಕೆ ಮೀರಿ ಅರೆಭಾಷಿಗರ ಪೈಕಿ ತುಂಬಾ ಮೇರು ವ್ಯಕ್ತಿತ್ವದ ಜನಗ ಈ ಸಮಾಜಲಿ ರಾಜ್ಯ, ರಾಷ್ಟ್ರ ಮಟ್ಟಲಿ ಹೆಸರ್ ಮಾಡ್ದೊಳೊ.

'ದೇಶಕ್ಕೊಬ್ಬ ಗಾಂಧೀಜಿ, ಸುಳ್ಯಕ್ಕೊಬ್ಬ ಕೆ.ವಿ.ಜಿ' ಅಂತ ಹೆಸ್ರ್‌ಮಾಡ್ದ ಆಧುನಿಕ ಸುಳ್ಯದ ನಿರ್ಮಾತೃ ಕುರುಂಜಿ ವೆಂಕಟ್ರಮಣ ಗೌಡ್ರ್ ಅರೆಭಾಷೆವು.

ಕರ್ನಾಟಕ ರಾಜ್ಯ ಮುಖ್ಯಮಂತ್ರಿ ಆಗಿ, ಪ್ರಸ್ತುತ ಕೇಂದ್ರ ಸರಕಾರಲಿ ಮಂತ್ರಿ ಆಗಿರುವ ನಮ್ಮೂರ್‌ನ ಮಣ್ಣಿನ ಮಂಙ ಆಗಿರುವ ಡಿ.ವಿ. ಸದಾನಂದ ಗೌಡ ಅರೆಭಾಷೆವು. ಕರ್ನಾಟಕ ರಾಜ್ಯ ವಿಧಾನ ಸಭೆನ ಸ್ಪೀಕರ್ ಆಗಿದ್ದ ಕೊಡಗ್‌ನ ಕೊಂಬಾರ್‌ನ ಭೋಪಯ್ಯನವು ಅರೆಭಾಷೆವು. ಕರ್ನಾಟಕ ರಾಜ್ಯದ ಎಡ್ವೋಕೇಟ್ ಜನರಲ್ ಆಗಿದ್ದ ಮಾವಜಿ ಜನಾರ್ಧನ ಗೌಡ್ರ್ ಅರೆಭಾಷೆವು. ಕೊಡಗ್‌ನ ಮೊತ್ತ ಮೊದಲ ಸಂಸದರಾಗಿದ್ದ ನಿಡ್ಯಮಲೆ ಸೋಮಣ್ಣನವು ಅರೆಭಾಷೆ ಜನಾಂಗದವು. ಆದಿಚುಂಚನಗಿರಿ ಮಠದ ಶ್ರೀ ಶ್ರೀ ಪ್ರಸನ್ನನಾಥ ಸ್ವಾಮೀಜಿಯವು ಪೂರ್ವಾಶ್ರಮಲಿ ಅರೆಭಾಷೆ ಜನಾಂಗದವು.

ಹಿಂದೆ ಬ್ರಿಟಿಷರ ವಿರುದ್ಧ ಹೋರಾಡಿ ಪ್ರಾಣತ್ಯಾಗ ಮಾಡಿ ಹುತಾತ್ಮರಾದ ಗುಡ್ಡೆಮನೆ ಅಪ್ಪಯ್ಯ ಗೌಡ್ರ್, ಕೆದಂಬಾಡಿ ರಾಮ ಗೌಡ್ರಂತಹ ಧೀರ ನೇತಾರರ್ ಅರೆಭಾಷೆ ಜನಾಂಗದವು. ಸುಳ್ಯ ತಾಲೂಕಿನ ಆಟಿಕಪು ಕೊಳಂಬೆ ಪುಟ್ಟಣ್ಣ ಗೌಡ್ರ್. ಅವರ ಮಂಙ ನಿವೃತ್ತ ಉಪಕುಲಪತಿ ಡಾ। ಚಿದಾನಂದ ಕೊಳಂಬೆ. "ಇಂಡಿಯ ಟು ಡೇ' ಉಪ ಸಂಪಾದಕ ರಾಜ್ ಚೆಂಗಪ್ಪ, ಕನ್ನಡ ಭಾಷಾ ತಜ್ಞ ಪ್ರೋ. ಕೋಡಿ ಕುಶಾಲಪ್ಪ ಗೌಡ್ರ್, ಮೂರು ಬಾರಿ ಶಾಸಕರಾದ ಕೂಜುಗೋಡು ವೆಂಕಟ್ರಮಣ ಗೌಡ್ರ್, ಕರ್ನಾಟಕ ರಾಜ್ಯದ ಮಂತ್ರಿ ಆಗಿದ್ದ ದಂಬೆಕೋಡಿ ಚೆನ್ನಪ್ಪನವು. ಲಯನ್ಸ್ ಗವರ್ನರ್ ಆದ ಅಪ್ಪಾಜಿ

ವಾಗ್ಮಿ ಎಂ.ಬಿ. ಸದಾಶಿವನವು. ಕರ್ನಾಟಕ ಸರಕಾರದ ಕಾನೂನು ಕಾರ್ಯದರ್ಶಿ ಆಗಿದ್ದ ಕೆ.ಆರ್. ಚಾಮಯ್ಯನವು. ಶಾಸಕಾಂಗ ಕಾರ್ಯದರ್ಶಿ ಆಗಿದ್ದ ಓಂ ಪ್ರಕಾಶ್ ಪಿಂಡಿಮನೆ. ಡಿಲ್ಲಿಲಿ ಜವಹರಲಾಲ್ ನೆಹರು ವಿಶ್ವವಿದ್ಯಾಲಯಲಿ ಕನ್ನಡ ಪೀಠದ ಮುಖ್ಯಸ್ಥ ಡಾ। ಬಿಳಿಮಲೆ ಪುರುಷೋತ್ತಮನವು. ಅಮೇರಿಕಾದ ಓಹಿಯೋ ವಿಶ್ವವಿದ್ಯಾನಿಲಯಲಿ ಕಂಪ್ಯೂಟರ್ ವಿಜ್ಞಾನಿ ಆಗಿ ಪ್ರೊಫೆಸರ್ ಆಗಿರುವ ಗುಡ್ಡೆಮನೆ ರಾಘವ ಗೌಡ್ರ್. ರಂಗಾಯಣ ನಟಿ ಗೀತಾ ಮೋಂಟಡ್ಕ - ಇನ್ನೂ ನೂರಾರ್ ಮೇರು ವ್ಯಕ್ತಿಗ ಅರೆಭಾಷೆ ಜನಾಂಗಂದ ಹೊರಹೊಮ್ಮಿ ಜನಾಂಗಕ್ಕೆ ಕೀರ್ತಿ ತಂದೊಳೊ ಇವರ್‌ಂದಾಗಿ ನಾವು ಇಂದ್ ಅರೆಭಾಷೆವುಂತ ಹೇಳ್‌ಕಂಬಕೆ ಹೆಮ್ಮೆ ಪಟ್ಟ್‌ಕಂಡೊಳೊ. ಅರೆಭಾಷೆಗೂ ಒಂದು ಘನತೆ ಬಂದುಟು.

ಅರೆಭಾಷೆನ ಒಟ್ಟಿಗೆ ಒಂದು ಸಂಸ್ಕೃತಿ ಕೂಡಾ ಬೆಸೆದುಹೋವುಟು. ಆ ಸಂಸ್ಕೃತಿಂದಾಗಿ ಭಾಷೆ ಬೆಳಿಯೊದು. ನಮ್ಮಲ್ಲಿ ಅರೆಭಾಷೆ ಸಂಸ್ಕೃತಿಂತ ಹೇಳ್ರೆ ಅದ್ ಇಲ್ಲಿನ ಗೌಡ ಗೌಡ ಜನಾಂಗದ ಸಂಸ್ಕೃತಿಂತಾ ಹೆಳ್ರೆ ತಪ್ಪಾಕಿಲೆ. ಇಲ್ಲಿ ಅರೆಭಾಷೆ ಮತ್ತು ಗೌಡ ಜನಾಂಗದ ಸಂಸ್ಕೃತಿ ಒಟ್ಟೊಟ್ಟಿಗೆ ಬೆಳೆಯುತ್ತಾ ಉಟ್ಟು. ಇದರ ಬೇರೆ ಬೇರೆಂತ ಹೇಳಿಕೆ ಸಾಧ್ಯ ಇಲ್ಲೆ. ಆದರ್‌ಂದ ಸರಕಾರ ಕೂಡಾ ಯೋಚನೆ ಮಾಡಿ ನಮ್ಮ ಎಕಾಡೆಮಿಗೆ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಎಕಾಡೆಮಿಂತ ಹೆಸರಿಸಿಟು.

ಅರೆಭಾಷೆ ಎಕಾಡೆಮಿ ಸ್ಥಾಪನೆಗೆ ಕಾರಣಕರ್ತರ್ ಮುಖ್ಯವಾಗಿ ನಮ್ಮ ಅಂದ್‌ನ ಕರ್ನಾಟಕ ರಾಜ್ಯ ಮುಖ್ಯಮಂತ್ರಿಗಳಾದ ನಮ್ಮವೇ ಆದ ಶ್ರೀ ಡಿ.ವಿ ಸದಾನಂದನವು. ಜೊತೆಗೆ ಅಂದ್‌ನ ವಿಧಾನ ಸಭೆ ಸಭಾಪತಿಗಳಾಗಿದ್ದ ಕೊಂಬಾರನ ಬೋಪಯ್ಯನವು ಅಲ್ಲದೆ ಆದೇಶ ಹೊರ್ಡ್‌ಸಿಕೆ ಸಹಕರಿಸಿದ ಅಂದ್‌ನ ಕನ್ನಡ ಮತ್ತೆ ಸಂಸ್ಕೃತಿ ಇಲಾಖೆನ ಮಂತ್ರಿಗಳಾದ ಗೋವಿಂದ ಕಾರಜೋಳ ಮತ್ತ್ ವಿಧಾನ ಸೌಧಲಿ ಹಿಂದೆ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯ ಅಧಿಕಾರಿಗಳಾಗಿದ್ದ ಡಾ। ಕೆ. ಎ. ಅಪ್ಪಯ್ಯನ ಇವರೆಲ್ಲರ್ನ, ನಿಮ್ಮೆಲ್ಲರ ಪರವಾಗಿ ನಾ ಈ ಪ್ರಪ್ರಥಮ ಅರೆಭಾಷೆ ಸಾಹಿತ್ಯ ಸಮ್ಮೇಳನಲಿ ಕೃತಜ್ಞತಾ ಪೂರ್ವಕವಾಗಿ ನೆನ್ನಿಕಣೆ.

ಇದರ ಹಿನ್ನೆಲೆಲಿ ಹಂತ ಹಂತಲಿ ಶ್ರಮಿಸಿದ ನಮ್ಮವೇ ಆದ ಚಂದ್ರಾ ಕೋಲ್ಚಾರ್ ರಾಜೇಶ್ ತೇನನ. ಅಮೈ ಶಿವರಾಯ. ಜ್ಞಾನೇಶ್ ಸಿದ್ಧಮಲೆ. ಪದ್ಮಾ ಕೋಲ್ಚಾರ್. ಕೆ.ವಿ ಹೇಮನಾಥ್. ನಾರಾಯಣ ಕೆ.ಸಿ.. ಕೆ.ಸಿ. ಸದಾನಂದ. ರವೀಂದ್ರನಾಥ ಕೇವಳ. ನಂಗಾರ್ ನಾಣಯ್ಯ. ಅನಂತರಾಜ್ ಪುತ್ತೂರು. ನಂಗಾರ್ ನಿಂಗರಾಜು. ತುಂತಜೆ ಗಣೇಶ್. ಕೆ. ಆರ್. ಗಂಗಾಧರ. ಅಮೈ ಫಾಲಾಕ್ಷರವರ ನಿರಂತರ ಶ್ರಮನ ಕೂಡಾ ನಾ ಇಲ್ಲಿ ನೆನ್ನಿಕಣೆ.

ಆರಂಭಲಿ ಎಕಾಡೆಮಿನ ಮೊತ್ತ ಮೊದಲ ಅಧ್ಯಕ್ಷ ಎನ್.ಎಸ್. ದೇವಿಪ್ರಸಾದ್ ನವ್ಕೆ ಸರಕಾರದ ಬದಲಾವಣೆಂದಾಗಿ ಅಷ್ಟ್ ಅವಕಾಶ ಸಿಗದರ್‌ಂದ ಸೀಮಿತ ಕಾರ್ಯಕ್ರಮಗಳ ಮಾತ್ರ ಮಾಡಿಕೆ ಸಾಧ್ಯ ಆದರೂ ಎಕಾಡೆಮಿಗೆ ಒಂದು ಭದ್ರ ಬುನಾದಿ ಹಾಕಿಕೊಟ್ಟೊಳೊ. ನಂತರ ಎರಡನೇ ಅಧ್ಯಕ್ಷರಾದ ಕೊಲ್ಯದ ಗಿರೀಶ್‌ನವು ಸುಳ್ಯ. ಪುತ್ತೂರು. ಮಡಿಕೇರಿಗಳಲ್ಲಿ ಅಲ್ಲದೆ ಮಂಗ್ಳೂರು. ಮೈಸೂರು. ಬೆಂಗ್ಳೂರು ಹಾಂಗೆ ದೂರದ ರಾಷ್ಟ್ರರಾಜಧಾನಿ ಡಿಲ್ಲಿಲಿ ಕೂಡಾ ಯಶಸ್ವಿ ಕಾರ್ಯಕ್ರಮಗಳ ಸಂಘಟಿಸಿ ಸೈ ಎನಿಕೊಂಡದರ ನಾ ಇಲ್ಲಿ ಅಭಿನಂದನಾ ಪೂರ್ವಕವಾಗಿ ದಾಖಲಿಸಿನೆ.

ಮುಂದೆ ನನ್ನ ಮಾತ್‌ಗಳ **ಅರೆಭಾಷೆ, ಅರೆಭಾಷೆ ಸಾಹಿತ್ಯ, ಸಂಸ್ಕೃತಿ, ವೈಚಾರಿಕತೆ ಮತ್ತೆ ನಮ್ಮ ಒತ್ತಾಸೆಗ** ಹೀಂಗೆ ಐದ್ ಭಾಗ ಮಾಡಿ ಮುಂದುವರ್ಸಿನೆ.

ದಕ್ಷಿಣ ಕನ್ನಡದ ಸುಳ್ಯ. ಮತ್ತೆ ಅದರ ಸುತ್ತಮುತ್ತಲ ಹಾಂಗೂ ಕೊಡಗ್‌ನ ಗೌಡ್ರ್‌ಗ ಮಾತಾಡುವ "ಅರೆಭಾಷೆ" ಗೌಡ ಜನಾಂಗದ ವಿಶಿಷ್ಟ ಭಾಷೆಯಾಗಿ ಉಳ್ಟುಟು. ಈ ಅರೆಭಾಷೆನೇ ಭಾಷಾ ಪರಂಪರೆಲಿ ಉಳ್ದು. ಬೆಳ್ದ್ ಬಂದ ಗೌಡ ಜನಾಂಗದ ಅಮೂಲ್ಯ ಸೊತ್ತು. ಕನ್ನಡ ಭಾಷೆನ ಮೂಲ ವೈಭವ ಮತ್ತ್ ಸಂಪನ್ನತೆನ ಮೈಗೂಡ್ಸಿಕಂಡ್ ಈ ಭಾಷೆ ಬೆಳ್ದುಟು ಎಂಬುದರ ಸೂಕ್ಷ್ಮವಾಗಿ ಗಮನಿಸೊಕಾದೆ. ಈ ಅರೆಭಾಷೆಲಿ ಪ್ರಾದೇಶಿಕ ವೈವಿಧ್ಯತೆನ ಒಟ್ಟಿಗೆ ಅರೆಭಾಷಿಕ ಜನಾಂಗದವರ ಅನುಭವ. ಬುದ್ಧಿ. ವಿಚಾರಗಳ ಅಭಿವ್ಯಕ್ತಿಸುವ ಶಬ್ದ ಸಂಪತ್. ವ್ಯಾಕರಣ. ಗಾದೆ. ಒಗಟು. ನುಡಿಗಟ್ಟ್. ಪಕ್ಕೆ. ಕಥೆಗ ಸಾಕಷ್ಟು ಐಕೊ.

ಜಿ.ಎಂ ಶ್ರೀಯವರ "ಕನ್ನಡ ತಾಯ್ ನೋಟ" ಎಂಬ ಕೃತಿಲಿ 'ಕಲ್ಲು ಹೂಪಿಡಿದರೆಯ ಮೇಲೆ' ಎಂಬ ಶಬ್ದ ಪ್ರಯೋಗ ಬಂದದೆ. ಇಲ್ಲಿ "ಅರೆ" ಎಂದರೆ ಬಂಡೆ ಎಂಬ ಅರ್ಥ ಬಂದದೆ. ಆದರ್‌ಂದ ಅರೆಭಾಷೆಂತ ಕರಿಯಕನ 'ಬಂಡೆಯಾಂಗೆ ಅಚಲ' ಇತರ ಪ್ರಭಾವಿ ಭಾಷೆಗಳ ಸಂಪರ್ಕ ಒತ್ತಡಗಳ ಮಧ್ಯೆ ಬದಲಾಗದೆ ಸ್ಥಿರವಾಗಿ ಒಳ್ಳ ಭಾಷೆ ಎಂಬ ಅರ್ಥ ಬಂದದೆ. ಭಾಷೆಂತ ಹೇಳ್‌ರೆ ಒಂದು ಪರಿಪೂರ್ಣ ವಿಚಾರ ಆದರ್‌ಂದ ಅರೆಭಾಷೆಂತೆಳ್‌ರೆ ಅರ್ಧಭಾಷೆ, ಚಪಡಿ ಭಾಷೆ ಎಂಬ ಅನರ್ಥಕ್ಕೆ ಇಲ್ಲಿ ಆಸ್ಪದನೆ ಇಲ್ಲೆ ಹೀಂಗೆ ಗಟ್ಟಿಯಾಗಿ ಹೇಳ್ದವು ಭಾಷಾ ತಜ್ಞೆ ಶ್ರೀಮತಿ ಸಂಗಾರ್ ಲಲಿತಸವು.

ಅರೆಭಾಷೆನ ಗ್ರಾಮೀಣ ಸೊಗಡ್:- ನಮ್ಮೂರ್‌ನ ಭಾಷೆ ಆದ ಅರೆಭಾಷೆ ನಮ್ಮೂರ್‌ನ ಪರಿಸರಕ್ಕೆ ಭಾರಿ ಸೋಕ್ ಹೊಂದಿಕಂಡದೆ. ನಮ್ಮೂರ್‌ನ ಕಾಡ್ ಪ್ರಾಣಿಗ ಆದ ಹೊಳಿಕೆ, ಅಣ್‌ಕ್, ಉರಿಯೋಳು, ಕುಂಡತ, ಬಿರ್ಕ, ಚಣಿಲ್, ನಮ್ಮ ಹಳ್ಳಲಿರುವ ಬೇರೆ ಬೇರೆ ಜಾತಿನ ಮೀನ್‌ಗ- ಮಡೆಂಜಿ, ಕೂರ್ಲು ಕರಿಮೀನ್, ಕೀಜಣ್,, ಕಾಜೊವು, ಮುಳ್ಳ, ಕಲ್ಲುಮುಳ್ಳ, ಬಾಳೆ, ಮೂಡು, ಅರೆಂಜ ಇತ್ಯಾದಿ., ಬಹುಪಯೋಗಿ ಮರಗ ಆದ ಬೆಳ್‌ಂದಿರಿ, ಹೊನ್ನೆ, ಮೊತ್ತಿ, ಮರ್ವ, ಪುಣಿಲ್; ಕಾಡ್ ಹಣ್ಣ್‌ಗಾದ - ಗೊಟ್ಟೆ, ಮುಳ್ಕರ, ಚೂರಿ, ಸರಳಿ, ಗುಮ್ಮಟೆ, ಇತ್ಯಾದಿ; ಕೃಷಿ ತಾಂತ್ರಿಕ ಕೌಶಲ್ಯಗ- ಮೆಂಟೆ, ನೀರ್‌ಮೆಂಟೆ, ಸಿಡಿ, ಅಡ್ಡಿಲ್; ದೇಸಿ ತಿಂಡಿಗ- ಪುಂಡಿ, ಅಬ್ಲುಕ, ಪತ್ರೋಡೆ, ಚಂಗುಳಿ, ಮುಳ್ಕ ಅಂಬುಲಿ, ಮೂಡೆ ಪಿಟ್ಟ್, ಅಡ್ಡೆ ಕೋಣೆಲಿ ಬಳ್ಸುವ ವಸ್ತುಗಳಾದ- ಸೆಲು, ಚಿಬುಳಿ, ಮರ್ಚಟೆ, ಕುಡ್ತು, ಅಳಗೆ ಚಟ್ಟೆ, ತಡ್ತೆ, ಮರ್ಗಿಲ್; ಕೃಷಿ ಉಪಕರಣಗ- ಚುಡೊಂಕು, ಕಡ್ಸತ್ತಿ, ಮುಳ್ಳು ಕತ್ತಿ, ಕೈ ಕೊಡಲಿ, ದಳೆ, ಗಳೆ ಇತ್ಯಾದಿ ಶಬ್ದಗಳ ಅರಭಾಷೆಲಿ ತುಂಬಾ ಸೂಕ್ತ ಆಗಿ ಬಳಿಕೊಂಡೊಳೊ.

ಹಾಸ್ಯಕ್ಕೆ ಕೂಡಾ ಸಾಕಷ್ಟು ಅರೆಭಾಷೆ ಶಬ್ದಗ ಬಾರಿ ಸೂಕ್ತ ಆಗಿ ನೆಗೆ ಹುಟ್ಟಿಸಿದೆ, ಅಮುರು, ಉಳ್ಳುಕಿಣಿ, ಕಣ್ಣೋಜಿ, ಕೊಟ್ಟಾಯ್ ಕಟ್ಟ್, ಕೊಸರಂಕೊಳ್ಳಿ, ಕೊರ್ಸಂಡಿ, ಚಡಾಯ್ಸ್, ಓಂಗುದು, ಚೊರೆ ಕರ್ಣಕುತ್ತ, ಚೋಕುಳು ಹಾಕುದು, ತಕ್ಕಡ್ಜಿ, ಪತ್ತಂಡೆ ಮುಂತಾದ ಶಬ್ದಗಳ ಅರೆಭಾಷೆಲಿ ಭಾರಿ ಸೋಕು ಬಳ್ಸಿಕಂಬಕಾದೆ.

ಪರಿಯಕಿಲೆ, ಕ್ಯಂಪೆ, ಕ್ಯಂತುಟು, ಅದುರ್ದು ಒಗ್ಗರಣೆಹಾಕ್, ಗಾಳಿಹಾಕ್, ಮುಲ್ಲೆ ಕತ್ರುಸು ಮೊದಲಾದ ಎರಡೆರಡ್ ಅರ್ಥಕೊಡುವ ಶಬ್ದಗ ಕೂಡಾ ಅರೆಭಾಷೆಲಿ ಹೇರಳವಾಗಿ ಉಟ್ಟು, ಪೊಡುಂಬ, ಪೊದುಂಕುಳು, ಅಡಿಮುಂಗ, ಎರುಮ್ಯಂದ, ಚಪ್ಪಾಂಗಿ, ಹೊಗ್ಗುಲಿ, ಮಾರಾಪು, ಪಕೋರ್ಣಿ ಮುಂತಾದ ನಾಮ ವಿಶೇಷಣಗಳ ಕೂಡಾ ಅರೆಭಾಷೆಲಿ ಕಾಣಕ್. ಚುರ್ಕರ, ಪೊಸ್ನಂಬರ, ಪೋಂತುದು, ಮುರ್ಕಪ್ಪ ಓಡಿ, ನಿಮುರ್ದು, ರ್‍ಯೆಸುದು ಮುಂತಾದ ಕ್ರಿಯಾ ವಿಶೇಷಣ ಶಬ್ದಗಳನೂ ನಾವು ಅರೆಭಾಷೆಲಿ ಕಾಣಕ್.

ಕೆಲವು ಅಪಟ ಅರಭಾಷೆ ಶಬ್ದಗ ಒಳೊ-ಹುಗ್ಗೆ, ಆಂಬರ, ಸೊರ್ಗುಳಿ, ಅಂಡಾಟೆ, ಕೊತ್ತೊಳಿಕೆ, ಕೂಂಟೆಗೆ, ಕೂಂಜೋಳು, ಕಿಡಿಂಜೋಳು, ಅಂರ್ಜೆಲ್, ಗಿಡ, ಅರ್ಕಿಲ್ ಮಾಡ್‌ಕೋಳ್, ಪೋಳಿಮಣೆ, ಉರ್ಟ, ಐರ್ದರ, ಗುನ್ನ, ಕೆಬಿಚಂಡೆ, ಅರ್ಭಾಯ್, ಗೌಲಿಕಂಡ್, ಒಡ್ಡಿಲ್ ತೊಂಬರ, ದೋಗಣೆ, ನಂಜಿಕಂಬುದು- ಇವೆಲ್ಲಾ ಅಪಟ ಅರೆಭಾಷೆ ಶಬ್ದಗ ಅರೆಭಾಷೆನ ಅನನ್ಯತೆನ ಉಳಿಕಂಡುಟು.

ಇನ್ನೂ ಅರೆಭಾಷೆಲಿ ಈಗನ ಕಾಲಕ್ಕೆ ಅನ್ವಯ ಆಗುವ ಸಾಕಷ್ಟು ಗಾದೆಗ ಒಳೊ. ಆಕಾಸಕ್ಕಾದ ಈ ಕುರೆ, ಈ ಕುರೆಗಾದ ಆಕಾಸ; ಎಲ್ಲವು ಕಾಯಿ ಹರಿಯಕನ ನಾವು ಚಿಪ್ಪಿನಾರು ಹರಿಯಕಲ್ಲಾ, ತೌಡುತಿಂಬವ ಹೋದರೆ ಉಮಿ ತಿಂಬವ ಬಾತ್; ಹಾಂಗೆ ನುಡಿಗಟ್ಟ್‌ಗ - ಅಂವ ಪೋಲ್‌ಜಿ ಇಲ್ಲದಂವ, ಅರ್ದ ಕುಡ್ದುಟು, ಉಂಡೆ ಇಸುದು, ಎದೆಬೊಗ್ಗದ ಜಾತಿ, ಕುಂಡೆಗೆ ಚವುಳಿ ಕಚ್ಚಿದಾಂಗೆ ಅವನ ಜೋಬು ಯಾಗೋಳು ಒಟ್ಟೆ, ಹರ್ಕಬಾಯಿ, ಬೇಜಾರಾವಷ್ಟು ಒಳ್ಳೆ ಮೊನ್ನ.

ಇಂತಹ ಸಾವಿರಾರ್ ಅಪಟ ಅರೆಭಾಷೆ ಶಬ್ದಗ, ಗಾದೆಗ, ನುಡಿಗಟ್ಟ್‌ಗ ನಮ್ಮ ಭಾಷೆಲಿ ಐದ್, ಇದರ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ನಡಿಯಕಾದೆ. ಇಂತ ಪೊಲ್ಲುನ ಭಾಷೆನ ಬುಟ್ಟು ನಮ್ಮ 'ಅಪ್ಪ, ಅಪ್ಪ'ಂತ ಕರಿವ ಭಾಷೆನ ಬುಟ್ಟು ಮಮ್ಮಿ, ಡ್ಯಾಡಿಂತ ಕರಿವ ಭಾಷೆಗೆ ಮಾರ್ ಹೋಗ್ತಾ ಐರ್‌ದು ಒಂದು ರೀತಿ ದುರಂತನೇ ಸರಿ.- ವ್ಯಾವಹಾರಿಕವಾಗಿ ಹತ್ತಾರ್ ಭಾಷೆನ ಕಲಿಯೋಮೊ. ಆದರೆ ನಮ್ಮ ಅರೆಭಾಷಿಕರ ಮನೆ ಒಳಗೆ ಮತ್ತೆ ಕಾರ್ಯಕ್ರಮಗಳ್‌ಲಿ ಅರೆಭಾಷೆನೇ ಇರ್‌ಲಿಂತ ನನ್ನ ಆಶಯ.

ಅರೆಭಾಷೆ ಸಾಹಿತ್ಯ ಕ್ಷೇತ್ರಕ್ಕೆ ಬಂದರೆ ಸಾಹಿತಿ, ಭಾಷಾತಜ್ಞ, ರಾಜ್ಯೋತ್ಸವ ಪ್ರಶಸ್ತಿ ವಿಜೇತ ಪ್ರೊ। ಕೋಡಿ ಕುಶಾಲಪ್ಪ ಗೌಡ್ರ ಕೊಡುಗೆ ಅಪಾರನೂ ಮಹತ್ವರವಾಗಿಯೂ ಉಟ್ಟು.

1970 ರ್‌ಲೇ ಕೋಡಿಯವು 'ಗೌಡ ಕ್ನಡ'ದ ಬಗ್ಗೆ (ಈಗನ ಅಧಿಕೃತ ಅರೆಭಾಷೆ) ಇಂಗ್ಲಿಷ್‌ಲಿ ಸಂಶೋಧನಾ ಗ್ರಂಥ ರಚಿಸಿ. ಅಣ್ಣಾ ಮಲೈ ವಿಶ್ವವಿದ್ಯಾಲಯಕ್ಕೆ ಮಂಡಿಸಿ ಡಾಕ್ಟರೇಟ್ ಪದವಿ ಪಡ್ಕಂಡವು. ಅರೆಭಾಷೆನ ವಿದೇಶಿ ಭಾಷಾ ತಜ್ಞರಿಗೆ ಕೂಡಾ ಮನದಟ್ಟ್ ಮಾಡಿಕೊಟ್ಟವು.

ಅವು ಬರ್ದ- 'ಉರೊಸಗೆ' 'ಬೆಟ್ಟದಾ ಮೇಲೊಂದು ಮನೆಯ ಮಾಡಿ' 'ಕಮಲ ನಿಮಲನ' ಇವು ಕನ್ನಡಲಿ ಇದ್ದರೂ ನಮ್ಮ ಅರೆಭಾಷೆ ಸಂಸ್ಕೃತಿ, ಜನಜೀವನದ ಸಾಕಷ್ಟು ಚಿತ್ರಣ ಕೊಟ್ಟೊಳೋ.

2014ರ್ಲಿ ಅವು ಬರ್ದ 'ಮಾನಸ ಮಹಾಭಾರತ' ಮಕ್ಕಳಿಗೆ ಕತೆ ಹೇಳುವ ಶೈಲಿಲಿ ಅತ್ಯಂತ ಸರಳವಾಗಿ ಈ ಮಹಾಕಾವ್ಯನ ರಚಿಸಿ ಅರೆಭಾಷೆ ಸಾಹಿತ್ಯಕ್ಕೆ ಒಂದುಗಟ್ಟೆ ಕೊಡುಗೆ ಕೊಟ್ಟೊಳೊ. ಈ ಇಳಿ ವಯಸ್ಸ್‌ಲಿ ಕೂಡಾ ಅರೆಭಾಷೆ ಲಿಪಿ ಮತ್ತೆ ವ್ಯಾಕರಣದ ಬಗ್ಗೆ ಕೆಲ್ಸ ಮಾಡ್ತಾ ಒಳೊ. ನಿಮ್ಮೆಲ್ಲರ ಪರವಾಗಿ ಅವ್ಕೆ ನನ್ನ ಎದೆ ತುಂಬಿದ ಕೃತಜ್ಞತೆ ಸಲ್ಲಿಸಿನೆ.

•ಮುಂದೆ- ಅರೆಭಾಷೆ ಜನಾಂಗದ ಪ್ರಮುಖ ಧಾರ್ಮಿಕ ನಂಬುಗೆ ಮತ್ತೆ ಆರಾಧನೆ ಆದ ಭೂತಾರಾಧನೆ ಬಗ್ಗೆ ಡಾ। ಚಿನ್ನಪ್ಪ ಗೌಡ್ರ ಬರ್ದ ಸಂಶೋಧನಾ ಕೃತಿ "ಭೂತಾರಾಧನೆ ಮತ್ತೆ ಜಾನಪದೀಯ ಅಧ್ಯಯನ'. 'ಜಾಲಾಟ'. 'ಸಂಸ್ಕೃತಿ ಸಿರಿ' ಹಾಂಗೂ ಡಾ। ಪುರುಷೋತ್ತಮ ಬಿಳಿಮಲೆವು ಬರ್ದ 'ಸುಳ್ಯ ಪರಿಸರದ ಗೌಡ ಜನಾಂಗ - ಒಂದು ಸಾಂಸ್ಕೃತಿಕ ಅಧ್ಯಯನ 'ಕರಾವಳಿ ಜಾನಪದ' ಎಂಬ ಸಂಶೋಧನಾ ಕೃತಿ ಅಲ್ಲದೆ ಡಾ। ಪೂವಪ್ಪ ಕಣಿಯೂರು ರಚಿಸಿದ ಸಂಶೋಧನಾ ಕೃತಿ 'ಉಲ್ಲಾಕುಳು–ಐತಿಹಾಸಿಕತೆ. ಪ್ರಾದೇಶಿಕತೆ. ಆರಾಧನಾ ಸ್ವರೂಪ' 'ಪೂಕರೆ ಮತ್ತ್ ಜಾನಪದಿಯ ಲೇಖನಗಳು'. 'ಕುಕ್ಕೆಯಲ್ಲಿ ನಾಗರಮಡಿಕೆ'. 'ಗೌಡ ಜನಾಂಗ–ಮೌಖಿಕ ಸಂಕಥನ': ಎ.ಕೆ. ಹಿಮಕರನವು ಬರ್ದ 'ಜನಮನ ಕಂದ್ರಪ್ಪಾಡಿ' ಮನೋಹರ ದೇವಸ್ಯ ಸಂಪಾದಿಸಿದ- ಗೌಡ ಜನಾಂಗ ಐತಿಹಾಸಿಕ ಅವಲೋಕನ' ಡಿ.ಜಿ. ನಡ್ಕರ್ ಮತ್ತೆ ಪರ್ಲ ಆನಂದ ಗೌಡ್ರ ಬರ್ದ ಅನೇಕ ಜನಪದೀಯ ಮತ್ತೆ ಸಂಶೋಧನಾ ಲೇಖನಗಳ್‌ಲಿ ಅರೆಭಾಷಿಗರ, ಮುಖ್ಯವಾಗಿ ಅರೆಭಾಷೆ ಮಾತಾಡುವ ಗೌಡ ಜನಾಂಗದ ಸಂಸ್ಕೃತಿ, ಆಚಾರ, ವಿಚಾರ, ಆಚರಣೆ, ಸಂಪ್ರದಾಯ, ಆರಾಧನಾ ಪದ್ಧತಿಗಳ ವಿಶ್ಲೇಷಣೆ ಮಾಡ್ಯೊಳೊ.

•ಶ್ರೀಮತಿ ನಂಗಾರ್ ಲಲಿತನವು 80ರ ದಶಕಂದಲೇ ಅರೆಭಾಷೆನ ಬಗ್ಗೆ ಕೆಲವು ಸಂಶೋಧನಾತ್ಮಕ ಲೇಖನಗಳ ಬರ್ದದರ್‌ನ ನಾ ನೆನ್ನು ಮಾಡಿಕಣೆ.

•2003ರ್ಲಿ ಡಾ। ಚಿನ್ನಪ್ಪ ಗೌಡ್ರ ಸಂಪಾದಿಸಿದ 'ಗೌಡ ಜನಾಂಗದ ಇತಿಹಾಸ ಮತ್ತೆ ಸಂಸ್ಕೃತಿ' ಕೃತಿಲಿ ಅರೆಭಾಷೆ ಸಾಹಿತ್ಯ ಮತ್ತೆ ಅರೆಭಾಷೆ ಮಾತಾಡುವ ಗೌಡ ಜನಾಂಗದ ಜನ ಜೀವನದ ಅನನ್ಯತೆನ ಅತ್ಯಂತ ಅಚ್ಚುಕಟ್ಟಾಗಿ, ಕರಾರುವಕ್ಕಾಗಿ (authoritative) ವಿವರಣೆ ನಿಡ್ಯೊಳೊ. ಇಲ್ಲಿ ಅವು ಒಂದು ಮಾತ್ ಹೇಳ್ಯೊಳೊ 'ಸಾಹಿತ್ಯನ ಜಾತಿ ನೆಲೆಲಿ ಮೌಲ್ಯಮಾಪನ ಮಾಡದೆ, ಜನಾಂಗೀಯ ಸಂಸ್ಕೃತಿ ಸಾಹಿತ್ಯನ ರೂಪಿಸುವ ಪ್ರಭಾವಿಸುವ ಪ್ರೇರಕ ಶಕ್ತಿಗಳಾಗಿ ಹೇಂಗೆ ಕೆಲ್ಸ ಮಾಡುವೆ ಎಂಬುದರ ಭಾರಿ ಸ್ಪಷ್ಟವಾಗಿ ನಿರೂಪಿಸೊಳೊ. ಸಂಸ್ಕೃತಿ ಭಾಷೆನ ಹೇಂಗೆ ರೂಪಿಸಿದೆ ಮತ್ತೆ ಬೆಳ್ಸಿದೆ ಎಂಬುದಕ್ಕೆ ಸಾಕಷ್ಟು ನಿದರ್ಶನ ಕೊಟ್ಟೊಳೊ. ಈ ಕೃತಿಲಿ ಬರುವ ಎಲ್ಲಾ ಲೇಖನಗಳ್‌ಗೆ ಸಂಸ್ಕೃತಿ ಮತ್ತೆ ಜನಪದ ಸಂಶೋಧನೆಲಿ ವಿಶಿಷ್ಠ ಸ್ಥಾನ ಉಟ್ಟು.

1985ರ್ಲಿ ಬೆಂಗ್ಳೂರ್‌ನ ದ.ಕ. ಮತ್ತೆ ಕೊಡಗು ಗೌಡ ಸಮಾಜದವು ಹೊರತಂದ, ಡಾ। ಕಾಯರ್‌ಮಾರ್ ವೀರಪ್ಪ ಗೌಡ್ರ ಸಂಪಾದಿಸಿದ ಸ್ಮರಣ ಸಂಚಿಕೆ 'ಗೌಡ ದೂನಿ' 1996 ರ್ಲಿ ಡಾ। ರೇಣುಕಾಪ್ರಸಾದ್‌ನವು ಸಂಪಾದಿಸಿದ ಗೌಡ ಸಮ್ಮೇಳನದ ಸ್ಮರಣ ಸಂಚಿಕೆ 'ಪೀಳ್ಯ'; 2002ರ್ಲಿ ಡಾ। ಪಾಲ್ತಾಡ್ ರಾಮಕೃಷ್ಣ ಆಚಾರ್‌ರವರ ಸಂಪಾದಕತ್ವಲಿ ಸುಳ್ಯದ ಜನಪದ ಕೂಡುಗಟ್ಟ್‌ನವು ಪ್ರಕಟಿಸಿದ 'ಆಟಿ'; 2006ರ್ಲಿ ಅರಾ ಪೂವಯ್ಯನವು ಸಂಪಾದಿಸಿದ 'ಕಾಸ್ತಾಳಿ'; 2010ರ್ಲಿ ಶ್ರೀಮತಿ ಜಾನಕಿ ಬೆಳ್ಯಪ್ಪನವು ಸಂಪಾದಿಸಿದ 'ಪಕಮಣೆ'. ಮತ್ತೆ ಅವೇ ಹೊರತಂದ 'ಜೇರ್‌ಲಿ ಚಿಗ್‌ರ್' 2014ರ್ಲಿ ಪುತ್ತೂರು ತಾಲೂಕು ಗೌಡ ಸಮುದಾಯದವು

ಪ್ರಕಟಿಸಿದ ಸಾಂಸ್ಕೃತಿಕ ಕೈಪಿಡಿ 'ಒಕ್ಕೂರಲು': 2014ರ್ಲಿ ಬರೆಮೇಲು ದೊಡ್ಡಣ್ಣ ನವರ ಸಂಪಾದಕತ್ವಲಿ. ಸುಳ್ಯ ತಾಲೂಕು ಗೌಡರ ಯುವ ಸೇವಾ ಸಂಘದವು ಹೊರತಂದ 'ಗೌಡರ ಸಂಸ್ಕೃತಿ ಸಿರಿ' ಈ ಎಲ್ಲಾ ಕೃತಿಗಳ್‌ಲಿ ಅರೆಭಾಷೆ ಮಾತ್ನಾಡುವ ಗೌಡ ಜನಾಂಗದ ಆಚಾರ, ವಿಚಾರ, ಸಂಸ್ಕಾರ, ಸಂಪ್ರದಾಯ ಮತ್ತ್ ಆಚರಣೆಗಳ ಬಗ್ಗೆ ತುಂಬಾ ತುಂಬಾ ಮಾಹಿತಿ ಕೊಟ್ಟೊಳೊ. ಎಲ್ಲಾ ಆಚರಣೆಗಳ್‌ಲಿ ಒಂದು ರೀತಿನ ಏಕರೂಪತೆ (uniformity) ಬರೊಕು ಎಂಬುದು ಇವರೆಲ್ಲರ ಆಶಯ ಮತ್ತ್ ಉದ್ದೇಶ.

ಕವನ ಸಂಕಲನ: ವಿಭಾಗಲಿ ಸಾಕಷ್ಟ್ ಕೃತಿಗ ಅರೆಭಾಷೆಲಿ ಹೊರಬಂದುಟು 1985 ರ್‌ಲಿ ಬೆಂಗ್ಳೂರ್‌ನ ದ.ಕ. ಮತ್ತ್ ಕೊಡಗು ಗೌಡ ಸಂಘದವು ಹೊರತಂದ 'ಗೌಡ ದೊನಿ' ಸ್ಮರಣ ಸಂಚಿಕೆಲಿ ಅನೇಕ ಅರೆಭಾಷೆ ಕವನಗಳ ಪ್ರಕಟಿಸೊಳೊ. ಹೊದ್ದೆಟ್ಟಿ ಭವಾನಿ ಶಂಕರನವು ಬರ್ದ ಮೊತ್ತ ಮೊದಲ ಅರೆಭಾಷೆ ಕವನ 'ಮೋಟಿ ಗೂಡೆನ ಮೊದುವೆ' ಈ ಸಂಚಿಕೆಲಿ ಮೊದಲಿಗೆ ಪ್ರಕಟಗೊಂಡ್ ಮತ್ತ್ 2003ರ್ಲಿ ಇದೇ ಹೆಸ್‌ರ್‌ಲಿ ಹೊರ ಬಂದ ಸ್ವತಂತ್ರ ಕವನ ಸಂಕಲನ ಬಂದುಟು. ಅಪ್ಪಟ ಅರೆಭಾಷೆ, ಅರೆಭಾಷಿಗರ ಜನಜೀವನ, ಸಂಪ್ರದಾಯ, ಜೀವನ ಶೈಲಿನ ರಸವತ್ತಾಗಿ ಈ ಕವನಗಳ್‌ಲಿ ತೆರ್‌ದಿಟ್ಟೊಳೊ. ಇಡೀ ಅರೆಭಾಷೆ ಸಾಹಿತ್ಯಕ್ಕೆ ಸಂಚಲನ ಮೂಡ್ಸಿದ ಕೃತಿ ಇದ್. ಇದರ್‌ಲಿ ಬರುವ 91 ಕವನಗಳ್‌ಲಿ 36 ಅರೆಭಾಷೆ ಕವನಗ.

2003 ರ್ಲಿ 'ಜೇನೆರಿ' ಕವನ ಸಂಕಲನಲಿ ಕೋಡಿಯವರ ಅರೆಭಾಷೆ ಲಿಪಿನ ಮೊತ್ತ ಮೊದಲ್‌ಗೆ ಬಳ್ಸಿದ ಕವಿ ಯಶವಂತ ಕುಡಕಲ್ಲುನವು. ಅಪ್ಪಟ ಅರೆಭಾಷೆಲಿ ಹೊರತಂದ 'ತೊಂಬರ' ಮತ್ತ್ 2007 ರ್‌ಲಿ 'ಜೇನೆರಿ' ಎಂಬ ಎರಡೂ ಕೃತಿಗ ಯಶಸ್ವಿ ಕೃತಿಗ. ಯಶವಂತನವು ಹಳೆ ತಲೆಮಾರ್‌ನವು ಅಲ್ಲದಿದ್ದರೂ ಅರೆಭಾಷೆನ ಮೂಲ ಶಬ್ದಗಳ ಬಳ್ಸಿಕಂಡ್ ಬಾರೀ ಪೊರ್ಲುಲಿ ಕವನಗಳ ಬರ್ದೊಳೊ... 2003ರ್‌ಲಿ ತುಂಬಾ ಯುವಕರಾಗಿದ್ದ ಯಶವಂತರ್ ಶೃಂಗಾರ ರಸನ ಭಾರಿ ಸೋಕುಲಿ ವ್ಯಕ್ತ ಪಡಿಸೊಳೊ. ಇದರ್ಲಿ ಬರುವ ಕವನಗ ಭಾವನ ಮೊದುವೆಲಿ, ಮೀಸೆ ಬಾಕನ, ಅತ್ತಿಗೆನ ತಂಗೆ, ಹೊಸನೆಂಟ್ರ್, ನನ್ನ ಗೂಡೆಗ ಈ ಎಲ್ಲಾ ಕವನಗಳ ಒದಿರೆ ಅಜ್ಜಂದರ್‌ಗೂ ಯೌವನದ ದಿನ ನೆನಪಾದರ್‌ಲಿ ಸಂಶಯ ಇಲ್ಲೆ.

2014ರ್‌ಲಿ ಡಾ। ಕರುಣಾಕರ ನಿಡಿಂಜಿಯವು ಬರ್ದ ಕವನ ಸಂಕಲನ 'ನೀಲಿದಾರಿ' ಅರೆಭಾಷೆಲಿ ಒಂದು ಸುಂದರ ಹಾಗೂ ಮಹತ್ವದ ಕೃತಿ. ಅರೆಭಾಷೆಲಿ ಕೂಡಾ ಛಂದೋ ಬದ್ಧವಾಗಿ ಬರೆಕೆ ಆದಂತ ಸಾಧಿಸಿ ತೋರಿಸೊಳೊ. ಛಂದೋರಹಿತ ಕವನಗ ಕೂಡಾ ಇರುವ ಇವರ ಈ ಕೃತಿಲಿ ಭಾವುಕತೆ, ವೈಚಾರಿಕತೆ ಮತ್ತ್ ಪ್ರಯೋಗ ಶೀಲತೆನ ಕಾಣಕ್. ಇಲ್ಲಿ ಬರ್ದ ತ್ರಿಪದಿಗಳ್‌ಲಿ ಛಂದಸ್ಸು, ಪ್ರಾಸ, ಲಯಬದ್ಧ ಗೇಯನ ನಾವು ಗುರುತಿಸಕ್. ಅರೆಭಾಷೆಗೆ ಒಂದು ಗಟ್ಟಿ ಕವನ ಸಂಕಲನನ ಇವು ಕೊಟ್ಟೊಳೊ. ಆಯ ಅರ್ತ್ ಹೊಡ್ಡರೆ, ಅಪೂರ್ವ ಮಧುರ ಗಾನ ಅರೆಭಾಷೆಲಿ ಕೂಡಾ ಸಾಧ್ಯಂತ ತೋರ್ಸಿಕೊಟ್ಟೊವು ನಿಡಿಂಜಿಯವು.

2015ರ್‌ಲಿ ಕುಯಿಂತೋಡು ದಾಮೋದರನವು ಬರ್ದ ಕವನ ಸಂಕಲನ "ನಮ್ಮೂರ ಹಾಡ್ ಮತ್ತ್ ಭಕ್ತಿ ಗೀತೆಗ"; 2017ರ್ಲಿ ಪುನಃ ಹೊದ್ದೆಟ್ಟಿ ಭವಾನಿ ಶಂಕರನವು ಬರ್ದ ಕವನ ಸಂಕಲನ 'ಅನುಭವ ಧಾರೆ'; ಮೀನಗದ್ದೆ ಸುಂದರನವು ಪ್ರಕಟಿಸಿದ ಕವನ ಸಂಕಲನ "ಯಾಕೆನೆ, ಯಾಕೆನೆ ಬೇಜಾರೇಕೆ?" ಮತ್ತ್ ಬಾರಿಯಂಡ ಜೋಯಪ್ಪನವು ಬರ್ದ 'ತೋರಣ' ಕೂಡಾ ಅರೆಭಾಷೆ ಸಾಹಿತ್ಯಲಿ ಸ್ಥಾನ ಪಡ್ದ ಕೃತಿಗ.

ಜನಪ್ರಿಯ ಶಿಕ್ಷಕರಾಗಿದ್ದ ಆಡ್ಡಂಗಾಯ ಎಲ್ಯಣ್ಣ ಗೌಡ್ರ್ ಬರ್ದ, ಸಾಕಷ್ಟ್ ಕವನಗ ಪತ್ರಿಕೆ, ಸಂಚಿಕೆಗಳ್‌ಲಿ ಪ್ರಕಟ ಆವುಟು. ಮಂಡೆಕೋಲು, ಅಜ್ಜಾವರ ಗ್ರಾಮಗಳ್‌ಲಿ ಸಿದ್ದವೇಷ ತಂಡಗಳ ರಚಿಸಿ ಪ್ರದರ್ಶನ ಕೊಟ್ಟೊಳೊ. ಇಂದಿಗೂ ಅವು ಸಜ್ಜುಗೊಳ್ಸಿದ ಸಿದ್ದವೇಷ ತಂಡ ಅಜ್ಜಾವರಲಿ ಸಕ್ರಿಯವಾಗಿ ಉಟ್ಟು.

ಕಥಾ ಸಂಕಲನ ಕ್ಷೇತ್ರಕ್ಕೆ ಬಾಕನ - 2003ರ್ಲಿ ಬಾರಿಯಂಡ ಜೋಯಪ್ಪನವು ಬರ್ದ್ ಪ್ರಕಟಿಸಿದ ಕಥಾ ಸಂಕಲನ 'ಛಾಂಪಾ ಮತ್ತು ಸಣ್ಣ ಕಥೆಗ' ಮತ್ತ್ 'ಯಾರ ಬೇಟೆ' ಎಂಬ ಎರಡು ಕೃತಿಗ ಪೊರ್ಲುನ ಕೃತಿಗ. ಚೆನ್ನಾಗಿ ಓದ್ಸಿಕಂಡ್ ಹೋದೆ. ಕೊಡಗ್‌ನ ಪರಿಸರ, ಅಲ್ಲಿನ ಸಂಪ್ರದಾಯ, ಆಚರಣೆ, ಸಮಾರಂಭಗ.

ಬೇಟೆ, ಕೃಷಿಕಾರ್ಯಗ, ಆಹಾರ ಮತ್ತೆ ಪಾನೀಯಗಳ ಒಟ್ಟಿಗೆ ಅಲ್ಲಿನ ಜನರ ಮಾನವೀಯ ಸಂಬಂಧಗಳ ಸುಂದರ ಚಿತ್ರಣನ ಕೊಡಗ್‌ನ ಅರೆಭಾಷೆಲಿ ಬರ್‌ಕೊ.

ಹಳಬರ ಜೋಳಿಗೆಯ ಸಂಪಾದಕಿ ಶ್ರೀಮತಿ ಜಿ.ಬಿ ಚಟ್ಟಮಾಡನವು ತಮ್ಮ 'ಪರಬಾಳ್‌ನ ಪರಿಪಾಳೆಳು' ತುಳು ಕೃತಿನ 'ಹಳೆಬಾಳ್‌ನ ಹರ್ದ ಹಾಳೆಗ' ಎಂಬ ಹೆಸರ್‌ಲಿ ಅದೇ ಅನುವಾದ ಮಾಡಿ ಪ್ರಕಟಿಸೊಳೊ. ಚೆಂಬುನ ಉದಯಕುಮಾರಿಯವು ' ಹೊಸ ಬೊದ್ಕ್' ಎಂಬ 20 ಕಥೆಗಳ ಒಂದು ಒಳ್ಳೆ ಕಥಾ ಸಂಕಲನ ಹೊರ ತಂದೊಳೊ.

ಕಾದಂಬರಿ ಕ್ಷೇತ್ರಕ್ಕೆ ಅರೆಭಾಷೆನ ಕೊಡುಗೆ ತುಂಬಾ ಕಡಿಮೆ. 2014ರ್‌ಲಿ ಡಾ। ಪ್ರಭಾಕರ ಶಿಶಿಲರ್ ಕನ್ನಡಲಿ ಬರ್ದ 'ಇರುವುದೆಲ್ಲವ ಬಿಟ್ಟು' ಕೃತಿನ ಅರೆಭಾಷೆಗೆ 'ಇರುದನೆಲ್ಲ ಬುಟ್ಟು' ಎಂಬ ಹೆಸ್ರ್‌ಲಿ ಭಾಷಾಂತರ ಮಾಡಿ ತುಂಬಾ ಪರಿಣಾಮಕಾರಿ ಆಗಿ ಬರ್ದೊಳೊ ಕುಯಿಂತೋಡು ದಾಮೋದರನವು. ಅರೆಭಾಷೆಲಿ ಬರ್ದ ಇದೇ ಕಾದಂಬರಿ ಅರೆಭಾಷೆನ ಮೊದಲ ಕಾದಂಬರಿಂತ ಹೇಳಕ್. ಈ ಕಾದಂಬರಿಲಿ ಚಾರ್ಲ್ಸ್ ಡಿಕ್ಸನ್‌ನ ಕಾದಂಬರಿ 'ಡೇವಿಡ್ ಕಾಪರ್ ಫೀಲ್ಡ್'ಲಿ 19ನೇ ಶತಮಾನದ ಇಂಗ್ಲೀಷ್ ಸಮಾಜನ ಚಿತ್ರಿಸಿದಾಂಗೆ, 20ನೇ ಶತಮಾನದ ಅರೆಭಾಷಿಗರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಾಂಪ್ರದಾಯಿಕ ಸ್ಥಿತಿಗತಿಗಳ ನೈಜ ಚಿತ್ರಣನ ಈ ಕೃತಿಲಿ ಕಾಣಕ್. ಹಬ್ಬ ಹರಿದಿನ, ಆಚರಣೆಗ, ರಾಜಿ ಸಂಪ್ರದಾಯ, ಮುಂತಾದ ಕಾರ್ಯಗಳ ನಮ್ಮ ಹಿರಿಯರ್ ಎಷ್ಟೊಂದು ಅರ್ಥ ಪೂರ್ಣವಾಗಿ ಆಚರಿಸುತ್ತಿದ್ದೋ ಎಂಬುದರ ಈ ಕೃತಿಲಿ ನಾವು ಕಾಣಕ್. ನಮ್ಮ ಗುರುಗ ಆದ ದಾಮೋದರವರ್‌ಂದ ಸ್ವತಂತ್ರ ಕಾದಂಬರಿ ಹೊರ ಬರ್‌ಲಿಂತ ನಮ್ಮ ನಿರೀಕ್ಷೆ. 2016ಲ್ಲಿ ಕಟ್ಟ್ರತನ ಲಲಿತಾ ಅಯ್ಯಣ್ಣನವು ಪ್ರಕಟಿಸಿದ ಕಾದಂಬರಿ 'ಮತ್ತೆ ಸಿಕ್ಕಿತ್ ಕುಂಕುಮ' ಅರೆಭಾಷೆಲಿ ಹೊರಬಂದ ಇನ್ನೊಂದು ಕಾದಂಬರಿ.

ಅರೆಭಾಷೆ ಸಾಹಿತ್ಯದ ಕಥಾ ಕ್ಷೇತ್ರಕ್ಕೆ ಬಾಕನ - 1992ಲ್ಲಿ ಪ್ರಕಟಗೊಂಡ ವಿದ್ಯಾಧರ ಬಡ್ಡಡ್ಕರವರ ಎಕಾಡೆಮಿ ಪುರಸ್ಕೃತ ಕೃತಿ 'ಮುಜಲು' ಕನ್ನಡಲಿ ಬರ್ದರೂ ಅದರ್ಲಿ ಬರುವ ಅರೆಭಾಷೆ ಸಂಭಾಷಣೆ, ಅಪ್ಪಟ ಅರೆಭಾಷೆ ಶಬ್ದಗಳ ಬಳ್‌ಕಂಡ್, ನಮ್ಮ ಸಮಾಜದ ಸ್ಥಿತಿಗತಿಗ, ಅಂಧಾನುಕರಣೆಗ ಮತ್ತೆ ಈ ಮಣ್ಣ್‌ನ ಸೊಗಡ್‌ನ ಚಿತ್ರಿಸುವಲ್ಲಿ ಯಶಸ್ವಿಯಾಗೊಳೊ. ವಿದ್ಯಾಧರರ ಪೆನ್ನ್‌ಂದ ಇಂತ ಇನ್ನಷ್ಟ್ ಅರೆಭಾಷೆ ಕಥೆಗ ಬರೊಕೂಂತ ನಮ್ಮ ಆಶೆ.

1995 ರ್‌ಲಿ ತೇಜಕುಮಾರ್ ಬಡ್ಡಡ್ಕನವು ಬರ್ದ ಸ್ಪಂದನ ಸಾಹಿತ್ಯ ಪ್ರಶಸ್ತಿ ಕೃತಿ 'ಹಿರಣ್ಯ ಗರ್ಭ' ಮತ್ತೆ 'ಮದಿರೆ ನಿಶ್ಚಲ' 'ಉಗ್ಗಪ್ಪ ಗೌಡರ ವಿಜಯೋತ್ಸವ' ಎ.ಕೆ. ಹಿಮಕರರ 'ಏಳಿ ಎದ್ದೇಳಿ ನಿಮ್ಮ ಹಕ್ಕುಗಳಿಗಾಗಿ ಏಳಿ' ಎಂಬ ಮಕ್ಕಳ ಹಕ್ಕುಗಳ ಬಗ್ಗೆ ಬರೆದ ಅನುವಾದಿತ ಕೃತಿ, 'ಮನೆಗೆ ಬಂದ ನೀಲಿ ಕುದುರೆ ಮತ್ತು 'ಎಸೆದುನೋಡಿ, ಸುಟ್ಟು ನೋಡಿ.' ಕೃಷಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಬರೆದ ಅನೇಕ ಲೇಖನಗ; ಅನುವಾದಿತ ಕೃತಿ 'ನೇತಾಜಿ ಭಾರತ';

- 2000ರ್‌ಲಿ ಡಾ। ಸುಂದರ ಕೇನಾಜೆ ಬರ್ದ 'ನೇಮ'
- ಕುಂಞೇಟಿ ಶಿವರಾಮನವು ಬರ್ದ 'ಜೋನಿ ಬೆಲ್ಲ'
- 1999ರ್‌ಲಿ ವೇದಾವತಿ ಅನಂತನವು ಬರ್ದ 'ಪಯಣ'
- 2013 ರ್‌ಲಿ ಸುಳ್ಯದ ಮೊತ್ತ ಮೊದಲ ಮಹಿಳಾ ಕಾದಂಬರಿಗಾರ್ತಿಯಾದ ಲಲಿತಾಜ ಮಲ್ಲಾರ ಬರ್ದ 'ನಮ್ಮೂರ ಮೊರೆ' ಅವೇ ಅದ್‌ಕಿಂತಲೂ ಹಿಂದೆ ಬರ್ದ 'ದಡ ಸೇರದ ದೋಣಿ'
- ಪರಿಸರ ಕವಿ ಸಂಜೀವ ಕುದ್ಪಾಜೆ ಬರ್ದ 'ಕಾಮನ ಬಿಲ್ಲ್‌ನ ಸೈನಿಕರ್' ಅವರ ಸಂಶೋಧನಾ ಕೃತಿ 'ಕನ್ನಡ ಕಾವ್ಯಗಳ್‌ಲಿ ಹಂದಿ ಬೇಟೆಯ ವರ್ಣನೆ'

ಈ ಎಲ್ಲಾ ಕೃತಿಗ ಕನ್ನಡಲಿ ಬಂದರೂ ಇದರ್ಲಿ ಬರುವ ಸನ್ನಿವೇಶಗಳ್‌ಲಿ ಅರೆಭಾಷೆ ಸಂಸ್ಕೃತಿ, ಸಂಪ್ರದಾಯ, ಆಚಾರ, ವಿಚಾರ, ಪರಿಸರದ ಬಗ್ಗೆ ಸ್ಪಷ್ಟ ಚಿತ್ರಣನ ಕಾಣಕ್.

- ಡಾ। ವಿಶ್ವನಾಥ ಬದಿಕಾನನವು ಮೊದಲ ಬಾರಿಗೆ ಸುಳ್ಯ ಪರಿಸರದ ಅರೆಭಾಷೆಲಿರುವ ಜನಪದ ಕತೆಗಳ ಸಂಗ್ರಹಿಸಿ ಕನ್ನಡ ಜಾನಪದ ಅಧ್ಯಯನಕ್ಕೆ ಒಳ್ಳೆ ಕಾಣಿಕೆ ಕೊಟ್ಟೊಳೊ. ಅವರ ಜನಪದ ಕತೆಗಳ ಕೃತಿ 'ಗೌಡ ಕನ್ನಡ ಜನಪದ ಕತೆಗಳು ಮತ್ತೆ ಆಶಯ ಸೂಚಿ' ಒಂದು ಮಹತ್ವ ಪೂರ್ಣ ಕೃತಿ.

• ಯು. ಸುಬ್ರಾಯ ಗೌಡ, ಎಂ.ಜಿ ಕಾವೇರಮ್ಮ, ಎಸ್.ಆರ್. ಹೂವಯ್ಯ, ಭವಾನಿಶಂಕರ ಅಡ್ತಲೆ– ಇವು ಪತ್ರಿಕೆಗಳ್‌ಲಿ, ಸಂಚಿಕೆಗಳ್‌ಲಿ ತುಂಬಾ ಅಂಕಣಗಳ, ಮತ್ತೆ ಲಲಿತ ಪ್ರಬಂಧಗಳ ಅರೆಭಾಷೆಲಿ ಬರವರ್‌ಲಿ ಪ್ರಮುಖರ್. ಇದರೆಲ್ಲಾ ಪ್ರಕಟಿಸಿದ ಸುದ್ದಿ ಪತ್ರಿಕೆನ ಕೊಡುಗೆನ ನಾ ಮತ್ತೆ ನೆನ್ಪಿಕಣೆ. ಎಂ.ಜಿ ಕಾವೇರಮ್ಮನವರ ಅರೆಭಾಷೆ ಬರವಣಿಗೆಲಿ, ಅದ್ ಅಂಕಣ ಇರ್‌ಲಿ, ಕವನ ಇರ್‌ಲಿ, ಲಲಿತ ಪ್ರಬಂಧ ಇರ್‌ಲಿ – ಇಲ್ಲಿ ಚಿಂತನೆಗ ಭಾವನೆಗ ಅರೆಭಾಷೆಲಿ ತುಂಬಾ ಆಪ್ತವಾಗಿದ್ದ್ ನಾವು 50 ವರ್ಷಗಳ ಹಿಂದೆನ ಆ ಕಾಲಕ್ಕೆ ಹೋದಾಂಗೆ ಆದೆ.

ಅರೆಭಾಷೆ ನಾಟಕ ಕ್ಷೇತ್ರಕ್ಕೆ ಬಂದರೆ–

• 1967 ರ್ಲಿ ಟಿ.ಜಿ ಮುಡೂರು ಬರ್ದ ' ಅತ್ತೆಗೆ ತಾಳಿ' ಅರೆಭಾಷೆನ ಮೊತ್ತ ಮೊದಲ ನಾಟಕ ಕೃತಿಂತ ಅನ್ನಿದೆ. ಮುಂದೆ ಅವು 2016ರಲಿ 'ಬೊಳ್ಳಾಕನ ಮುಕ್ತ್' ಎಂಬ ಅರೆಭಾಷೆ ನಾಟಕ ಕೃತಿನ ನೀಡ್ಯೊಳೊ.

• 1995ರ್ಲಿ ವಿದ್ಯಾಧರ ಬಡ್ಡಡ್ಕನವು 'ಕೆದಂಬಾಡಿ ರಾಮಗೌಡ' ಎಂಬ ಅರೆಭಾಷೆ ನಾಟಕ ಬರ್ದ್ಯೊಳೊ. ಈ ಕೃತಿ ರಂಗ ಪ್ರಯೋಗ ಕೂಡಾ ನಡ್ದ್ ಯಶಸ್ ಕಂಡುಟು.

• 1999ರ್ಲಿ ಎನ್. ಎಸ್. ದೇವಿಪ್ರಸಾದ್ ಸಂಪಾಜೆ ಬರ್ದ 'ಹೇಂಗಿತ್ತ್ ಹೇಂಗಾತ್' ಅರೆಭಾಷೆಲಿ ಬಂದ ಇನ್ನೊಂದು ನಾಟಕ ಕೃತಿ. ನಾವು ಆರಾಧಿಸುವ 'ಶೀರಾಡಿ ಭೂತ' ಎಂಬ ನಾಟಕನ ರಂಗ ಪ್ರಯೋಗ ಮಾಡಿ ಕೆಲವು ಪ್ರದರ್ಶನ ಕಂಡುಟು.

• ಇತ್ತೀಚೆಗೆ ಪೂವಪ್ಪ ಕಣಿಯೂರುನವು ಅನುವಾದಿಸಿದ ಪೂರ್ಣಚಂದ್ರ ತೇಜಸ್ವಿಯವರ 'ಕರ್ವಾಲೊ' ಕೃತಿನ ಅರೆಭಾಷೆ ನಾಟಕ ಆಗಿ ಮೋಹನ ಸೋನಾ ನಿರ್ದೇಶಿಸಿ ರಂಗ ಪ್ರಯೋಗ ಮಾಡಿ ಯಶಸ್ ಕಂಡೊಳೊ. ಜಾನಪದ ಎಕಾಡೆಮಿ ಪ್ರಶಸ್ತಿ ವಿಜೇತ ಮೋಹನ ಸೋನಾ ಒಬ್ಬ ಅತ್ಯುತ್ತಮ ನಾಟಕ ನಿರ್ದೇಶಕರಾಗಿದ್ದ್ ಸೋಣಂಗೇರಿನ ಬಯಲು ಚಿತ್ರಾಲಯ ಆಗಿ ಹಿಂದೊಮ್ಮೆ ರೂಪಿಸಿದ ಕೀರ್ತಿ ಇವರದ್ದ್.

• ಲೋಕೇಶ್ ಊರುಬೈಲ್, ಭವಾನಿಶಂಕರ ಅಡ್ತಲೆವು ನಿರ್ದೇಶಿಸಿ ಪ್ರದರ್ಶಿಸಿದ 'ಮಾಯಕ' ಎಂಬ ಅರೆಭಾಷೆ ನಾಟಕ ಅನೇಕ ಪ್ರದರ್ಶನ ಕಂಡುಟು.

• ನಾಟಕ ಕ್ಷೇತ್ರಲಿ ರಂಗಾಯಣ ನಟಿ ಗೀತಾ ಮೋಂಟಡ್ಕ ರಾಷ್ಟ್ರೀಯ ಹಾಂಗೂ ಅಂತರಾಷ್ಟ್ರೀಯ ಮಟ್ಟಲಿ ಹೆಸ್‌ರ್ ಮಾಡ್ಯೊಳೊ.

• ಅರೆಭಾಷೆಲಿ ಕೂಡಾ ಯಕ್ಷಗಾನ ಪ್ರದರ್ಶನಗ ನಡ್ದುಟು. 2001ರ್‌ಲಿ ನಾರಾಯಣ ಕೊಳ್ತಿಗೆ, ಪ್ರಭಾಕರ ಶಿಶಿಲ, ಉಬರಡ್ಕ ಉಮೇಶ, ರೆಂಜಾಳ ರಾಮಕೃಷ್ಣ, ಸುಧಾಕರ ಕಾಂತಮಂಗಲನವು ಮುಖ್ಯ ಪಾತ್ರಗಳ್‌ಲಿ ಪಾಲ್ಗೊಂಡ್ 'ಕೃಷ್ಣಾರ್ಜುನ ಕಾಳಗ' ಎಂಬ ಪ್ರಸಂಗನ ಅರೆಭಾಷೆಲಿ ಆಡಿತೋರಿಸೊಳೊ. ಅರೆಭಾಷೆಲಿ ಇದ್ ಮೊತ್ತ ಮೊದಲ ಯಕ್ಷಗಾನ ಪ್ರಯೋಗ ಇರೊಕು.

• ಚಂದ್ರಶೇಖರ ಪೇರಾಜೆನವು ಕೂಡಾ ಅರೆಭಾಷೆಲಿ ಯಕ್ಷಗಾನ ಪ್ರಸಂಗನ ನಿರ್ದೇಶಿಸಿ ಪ್ರದರ್ಶಿಸೊಳೊ.

• ಸುಭಾಷ್ ಪಂಜ ನಂತಹ ಯುವ ಕಲಾವಿದರ್ ಅರೆಭಾಷೆಲಿ ನಾಟಕ, ರೂಪಕ, ನೃತ್ಯರೂಪಕ, ಕೋಲಾಟ, ಜನಪದ ನೃತ್ಯಗಳ ನಿರ್ದೇಶಿಸಿ ಯಶಸ್ವಿಯಾಗೊಳೊ. ರಮೇಶ್ ಮೆಟ್ಟಿನಡ್ಕನವು ಅರೆಭಾಷೆ ಹಾಡ್‌ಗಳ 'ರಸಮಂಜರಿ' ಕಾರ್ಯಕ್ರಮ ನೀಡ್ಯೊಳೊ. ಅಮ್ಮಾಜೀರ ಪೊನ್ನಪ್ಪನವು ಅರೆಭಾಷೆ ಸಾಂಸ್ಕೃತಿಕ ಕ್ಷೇತ್ರಲಿ ತುಂಬಾ ಕೆಲ್ಸ ಮಾಡ್ಯೊಳೊ.

• ಅರೆಭಾಷೆಲಿ ಕೆಲವೊಂದು ಕಿರುಚಿತ್ರಗ ಹೊರಬಂದರೂ, ಅದ್ ಅಷ್ಟ್ ಜನಪ್ರಿಯತೆ ಗಳ್ಸ್ತ್ಲೆ. ವಿಷ್ಣು ಕ್ರಿಯೇಷನ್ಸ್‌ರವರ ಅರೆಭಾಷೆ ಕಿರುಚಿತ್ರ 'ಸೆಂಟಿಶಿ ಗೂಡೆ' ಒಂದಷ್ಟ್ ಹೆಸ್‌ರ್ ಮಾಡ್ತ್. ಆದರೆ ನೈಜತೆನ ಕೊರತೆ, ಅರೆಭಾಷೆ ಮಾತಾಡುವ ಶೈಲಿನ ಕೊರತೆಂದಾಗಿ ಈ ಚಿತ್ರಗ ಯಶಸ್ವಿ ಆತ್‌ಲೆ.

• ದೊಡ್ಡ ಬ್ಯಾನರ್ ಅಡಿಲಿ, ಒಳ್ಳೆ ನಟರ ಹಾಕಿಕಂಡ್, ಅಷ್ಟೇ ಅರೆಭಾಷೆ ಸಂಭಾಷಣೆನ ಜೋಡಿ ಕಂಡ್, ನೈಜ, ಅಭಿನಯ ಕೊಟ್ರೆ ಅರೆಭಾಷೆಲಿ ಕೂಡಾ ಚಿತ್ರ ತಯಾರ್ ಮಾಡಕ್. ತುಳು, ಕೊಡವ, ಕೊಂಕಣಿ ಭಾಷೆಲಿ ಇದರ ಮಾಡಿ ತೋರಿಸೊಳೊ.

• **ಪತ್ರಿಕಾ ರಂಗಕ್ಕೆ**- ಬಂದರೆ ಡಾ। ಶಿವಾನಂದರ ಸುದ್ದಿ ಪತ್ರಿಕೆ ಮತ್ತೆ ಸುದ್ದಿ ವಿಶೇಷಾಂಕಗ ಅರೆಭಾಷೆಗೆ ಬೆಂಬಲವಾಗಿ ನಿಂತದರ ನಾವು ನೆನಿಕಣ್ಣೇಬೇಕು. ಕವನಗ ಅಂಕಣಗ ಲಲಿತ ಪ್ರಬಂಧಗ, ಕಥೆಗಳ ಪ್ರಕಟಿಸಿ ಅರೆಭಾಷೆನ ಬೆಳ್ಸಿಕೆ ಅವಕಾಶ ಮಾಡಿಕೊಟ್ಟೊಳೊ. 'ಅಮರ ಸುಳ್ಯ ಸುದ್ದಿ' ಪತ್ರಿಕೆಲಿ ಕೂಡಾ ಅರೆಭಾಷೆ ಕಥೆ ಕವನಗಳ ಪ್ರಕಟಿಸಿಕೆ ಅವಕಾಶ ಕೊಟ್ಟೊಳೊ. ಸ್ವತಃ ಅರೆಭಾಷೆಲಿ ಬರೆವ ಜಯಪ್ರಕಾಶ್ ಕುಕ್ಕೇಟಿ ಅವರ್‌ಂದ ಅರೆಭಾಷೆ ಸಾಹಿತ್ಯ ಇನ್ನಷ್ಟು ನಿರೀಕ್ಷಿಸುತ್ತಾ ಉಟ್ಟು. ನೆರೆಯ ಕೊಡಗ್‌ಲಿ ಪಟ್ಟಡ ಪ್ರಭಾಕರನವು ಹೊರತಾತಿದ್ದ 'ಕೊಡಗು ಸಂಗಾತಿ' ಮಾಸಿಕ ಈಗ ನಿತ್ತ್ ಹೋದರೂ ಅರೆಭಾಷೆ ಸಾಹಿತ್ಯಕ್ಕೆ ಮತ್ತೆ ಅದರ ಬೆಳವಣಿಗೆಗೆ ಸಾಕಷ್ಟ್ ಕೊಡುಗೆ ಕೊಟ್ಟೊಳೊ. ಎಂ.ಜಿ ಸದಾಶಿವರ 'ಚೇತನ' ಪತ್ರಿಕೆನ ಮುನ್ನಡ್ಸಿದ ಸೂದನ ಈರಪ್ಪನವು ಅರೆಭಾಷೆಗೆ ತಮ್ಮ ಪತ್ರಿಕೆಲಿ ಒಂದಷ್ಟ್ ಅವಕಾಶ ಕೊಟ್ಟಿದ್ದೊ. ಈಗ ವಿನೋದ್ ಮೂಡಗದ್ದೆವು 'ಮುಡ್ಪು' ಎಂಬ ಸಂಚಿಕೆನ ಹೊರತಂದ್ ಅರೆಭಾಷೆ ಸಾಹಿತ್ಯಕ್ಕೆ ಕೊಡುಗೆ ಕೊಡ್ತಾ ಒಳೊ. ನಮ್ಮೂರ್‌ಲಿ ಹೊರತಂದ ಸ್ಮರಣ ಸಂಚಿಕೆಗಳ್‌ಲಿ ಕೂಡಾ ಅರೆಭಾಷೆ ಲೇಖನ, ಕವನ, ಕಥೆಗ ಪ್ರಕಟಣೆ ಕಂಡೊಳೊ.

• ಅರೆಭಾಷೆ ಸಾಹಿತ್ಯನ ಶ್ರೀಮಂತಗೊಳ್ಸಿಕೆ ನಮ್ಮಲ್ಲಿ ಮನ್ಸ್ ಮಾಡ್ರೆ ದೊಡ್ಡ ತಂಡನೇ ಉಟ್ಟು. ಶೇಷಗಿರಿ ಮೂಕಮಲೆ. ಯತಿರಾಜ ಭೂತಕಲ್ಲು. ನೂಜಾಲು ಪದ್ಮನಾಭ ಗೌಡ್ರ್. ಪಿ.ಎಂ. ಆನಂದ ಗೌಡ್ರ್. ಜಯರಾಜ ಕುಕ್ಕೇಟಿ. ಕುಸುಮಾವತಿ ಕುಕ್ಕೇಟಿ. ಲೋಹಿತಾಶ್ವ ಆನೆಕಲ್ಲು. ಪ್ರಸನ್ನ ಬಡ್ಡಡ್ಕ. ಮೋಹನ್ ಪಾರೆಪ್ಪಾಡಿ. ಯು.ಎಸ್. ಚಿದಾನಂದ. ಸೀತಾರಾಮ ಮಜಿಕೋಡಿ. ಯು.ಬಿ. ಕುಸುಮಾವತಿ. ಲೋಕೇಶ್ ಊರುಬೈಲು. ಮಾಧವ ಮೂಕಮಲೆ. ಚಂದ್ರಶೇಖರ ಪೇರಾಲು. ಸೀತಾರಾಮ ಕೇವಳ. ಶರತ್ ಮದ್ತಿಲ. ಸತ್ಯಪ್ರಕಾಶ್ ದೇರಪ್ಪಜ್ಜನಮನೆ. ಜಯರಾಮ ದೇರಪ್ಪಜ್ಜನಮನೆ. ಶಶಿಧರ ಪಳಂಗಾಯ. ಮಹಾಬಲ ಕುಳ. ಸೋಮಶೇಖರ ನೇರಳ. ಉಂಜಾನ ಮಂಜುನಾಥ. ಬಾಬುಗೌಡ ಅಚ್ರಪ್ಪಾಡಿ. ಜಯರಾಮ ಹಾಡಿಕಲ್ಲು. ಎಂ.ಡಿ. ವಿಜಯಕುಮಾರ್. ತುಕಾರಾಂ ಏನೇಕಲ್. ರತ್ನಾವತಿ ನರಿಯೂರು. ಎಂ.ಜಿ ಕಜೆ. ಶ್ರೀಧರ ಪಾನತ್ತಿಲ. ಲೋಕೇಶ್ ಪೆರ್ಲಂಪಾಡಿ. ಪದ್ಮಕಾರ್ಕಳ. ಶ್ರೀದೇವಿ ಅಂಬೆಕಲ್ಲು. ಷಣ್ಮುಖ ಕುತ್ಯಾಳ. ವೆಂಕಪ್ಪ ಗೌಡ ಕೇನಾಜೆ. ರವಿರಾಜ ಒಳಲಂಬೆ. ದಿನೇಶ್ ಹಾಲೆಮಜಲು. ಜ್ಞಾನೇಶ್ ನಿಡ್ಯಮಲೆ. ಮಾಧವ ಪರ್ಲಡ್ಕ. ಪದ್ಮಯ್ಯ ಸಿ.ಹೆಚ್.. ಶರ್ಮಿಳಾ ಊರುಬೈಲು. ನಾರಾಯಣ ಶೇಡಿಕಜೆ. ವೀಣಾ ಮಡಪ್ಪಾಡಿ. ಚರಣ್ ಐವರ್ನಾಡು. ಎಂ.ಎಸ್. ಗೀತಾ. ಶ್ವೇತಾ ಮಡಪ್ಪಾಡಿ. ಹೇಮಾ ವೆಂಕಟ್. ದಯಾನಂದ ಕೊರತ್ತೋಡಿ. ಹೇಮಲತಾ ಮೀನಗದ್ದೆ, ಅನುರಾಧ ಬಾಲಕೃಷ್ಣ ಕಡ್ಯ. ನಿವೇದಿತಾ ಕುದ್ಪಾಜೆ. ಪೂರ್ಣಿಮಾ ಮಡಪ್ಪಾಡಿ. ಹರಿಣಾಕ್ಷಿ ಕೇವಳ. ಹವ್ಯಶ್ರೀ ಪುರ. ಲತಾಶ್ರೀ ಮೋಂಟಡ್ಕ. ಲೋಕೇಶ್ ಕುಂಚಡ್ಕ. ವಿನೋದ್ ಮುಡುಪು, ಕೋರನ ಸರಸ್ವತಿ, ಸುಶೀಲ ಸುಬ್ರಮಣಿ–ಪ್ರತಿಭಾವಂತರಾದ ಇವೆಲ್ಲಾ ಗಂಭೀರವಾಗಿ ತೊಡಗಿಸ್‌ಕಂಡರೆ ಅರೆಭಾಷೆ ಸಾಹಿತ್ಯ ಇನ್ನಷ್ಟ್ ಶ್ರೀಮಂತ ಆದರ್ಲಿ ಸಂಶಯನೇ ಇಲ್ಲೆ.

• ಇದರೊಟ್ಟಿಗೆ, ಈಗಾಗಲೇ ಕನ್ನಡ ಸಾಹಿತ್ಯದಲ್ಲಿ ತೊಡಗಿಸಿಕಂಡ ಸ್ಮಿತಾ ಅಮೃತರಾಜ್. ಸಂಗೀತಾ ರವಿರಾಜ್, ಎಂ.ಟಿ. ಲೀಲಾಕುಮಾರಿ, ಗುಲಾಬಿ ಬಿಳಿಮಲೆ, ಅನುರಾಧ ಕುರುಂಜಿ, ಗೋಪಾಲ್ ಪೆರಾಜೆ, ಜಯಪ್ರಕಾಶ್ ಕುಕ್ಕೇಟಿ, ಯು. ಸುಬ್ರಾಯ ಗೌಡ, ಎ.ಕೆ. ಹಿಮಕರ, ಸಂಜೀವ ಕುದ್ಪಾಜೆ, ಎಸ್.ಆರ್. ಹೂವಯ್ಯ, ಎಂ.ಜಿ ಕಾವೇರಮ್ಮ, ವೇದಾವತಿ ಅನಂತ, ವಿಮಲಾರುಣ ಪಡ್ಡಂಬೈಲು, ಉಮೇಶ್ ಬಿಳಿಮಲೆ, ಭವಾನಿಶಂಕರ ಅಡ್ತಲೆ, ಲೀಲಾದಾಮೋದರ, ಶಿವಾನಂದ ರಂಗತ್‌ಮಲೆ, ಕುಂಞೇಟಿ ಶಿವರಾಮ, ಹೊಸೊಳಿಕೆ ಯೋಗಿಶ್, ಡಾ। ಪುನೀತ್ ರಾಘವೇಂದ್ರ ಕುಂಟುಕಾಡು, ಸಹನಾ ಗಿರೀಶ್, ಪ್ರಶಾಂತಿ ಬಡ್ಡಡ್ಕ, ಹೇಮಲತಾ ಮೀನಗದ್ದೆ, ನಿವೇದಿತಾ ಕುದ್ಪಾಜೆ– ಇದರ್‌ಂದಲೂ ಅರೆಭಾಷೆ ಸಾಹಿತ್ಯ ಕ್ಷೇತ್ರಲಿಇನ್ನಷ್ಟ್ ನಿರೀಕ್ಷಿಸಕ್.

ಅರೆಭಾಷೆ ಸಂಸ್ಕೃತಿ ಬೆಳ್ಸುವ ಜವಾಬ್ದಾರಿ - ಅರೆಭಾಷೆನೊಟ್ಟಿಗೆ ನಮ್ಮ ಸಂಸ್ಕೃತಿನೂ ಬೆಸೆದ್ ಹೋವುಟು. ಅರೆಭಾಷೆನ ಹಿಂದೆ ಒಂದು ಸಂಸ್ಕೃತಿ ಉಟ್ಟು. ಈ ಸಂಸ್ಕೃತಿಂದಾಗಿ ಭಾಷೆ ಬೆಳ್ದುಟು. ಹಾಂಗಾಗಿ ಅರೆಭಾಷೆನ ಹಿಂದೆ ಅರೆಭಾಷೆ ಸಂಸ್ಕೃತಿನ ನಾವು ಕಾಣಕ್. ಇಲ್ಲಿ ಅರೆಭಾಷೆ ಸಂಸ್ಕೃತಿಂತ ಹೇಳ್ರೆ ಅದರ ಮಾತೃಭಾಷೆ ಆಗಿ ಮಾತಾಡುವ ಗೌಡ ಜನಾಂಗದ ಸಂಸ್ಕೃತಿಂತ ಹೇಳ್ರೆ ಖಂಡಿತಾ ತಪ್ಪಾಕಿಲೆ.

ನೆಪೋಲಿಯನ್ ಒಂದು ಕಡೆ ಹೇಳಿಟು. ಒಂದು ಸಂಸ್ಕೃತಿನ ನಾಶ ಮಾಡೊಕುಂತಾದರೆ ಅಲ್ಲಿನ ಭಾಷೆನ ನಾಶ ಮಾಡ್‌ರೆ ಆತ್‌ಂತ ಆದರ್‌ಂದ ನಮ್ಮ ಸಂಸ್ಕೃತಿ ಬೆಳಿಯೊಕುಂತಾದರೆ ನಮ್ಮ ಭಾಷೆ ಬೆಳಿಯೊಕು. ನಮ್ಮ ಭಾಷೆಗೆ ಚ್ಯುತಿ ಬಂದರೆ, ಸಂಸ್ಕೃತಿಗೂ ಚ್ಯುತಿ ಬಂದದೆ.

ನಮ್ಮ ಸಂಸ್ಕೃತಿ ಮತ್ತೆ ಭಾಷೆ ಬೆಳಿಯೊಕುಂತಾದರೆ ಇದರ ಮಾತೃಭಾಷೆ ಆಗಿ ಮಾತಾಡುವ ನಾವೇ ಆಸಕ್ತಿವಹಿಸೊಕು. ವ್ಯಾವಹಾರಿಕವಾಗಿ ಮಾತಾಡೊವು ಈ ಬಗ್ಗೆ ಆಸಕ್ತಿ ವಹಿಸುವ ಸಾಧ್ಯತೆ ಇಲ್ಲೆ. ಏಕೆಂತೇಳ್ರೆ ಅವರ ಮಾತೃ ಭಾಷೆ ಬೇರೆ ಆಗಿದ್ದದೆ. ಆದರ್‌ಂದ ಅರೆಭಾಷೆನ ಬೆಳ್ಸುವ ಜವಾಬ್ದಾರಿ ನಮ್ಮ ಗೌಡ ಜನಾಂಗಕ್ಕೆ ಉಟ್ಟು ಎಂಬುದರ್ಲಿ ಎರಡು ಮಾತಿಲ್ಲೆ. ನಾವು ಮಾತಾಡೊಕು, ನಮ್ಮ ಕಾರ್ಯಕ್ರಮಗಳ್‌ಲಿ ಮಾತಾಡೊಕು, ನಮ್ಮ ಸಮಾಜಲಿ ಮಾತಾಡೊಕು, ನಮ್ಮ ಕಾರ್ಯಕ್ರಮಗಳ್‌ಲಿ ಮಾತಾಡೊಕು, ನಮ್ಮ ಮಕ್ಕಳಿಗೆ ಕಲ್ಸೊಕು, ಅವು ಕೂಡಾ ಮಾತಾಡುವಾಂಗೆ ಆಕು. ಮಲೆಯಾಳಿಗ, ತಮಿಳರ್ ಹಿಂದಿಯವು, ನಮ್ಮೊಟ್ಟಿಗೆ ಅವರ ಭಾಷೆಲಿಯೇ ಮಾತನಾಡುವೆ. ಇದ್ ನಾವ್‌ಗೆ ಮಾದರಿ ಆಕು.

ಅರೆಭಾಷೆ ಒಂದು ಜನಾಂಗದ ಭಾಷೆ ಆದರ್‌ಂದ ಮೊದಲ್‌ನೇ ಹಂತಲಿ ನಮ್ಮ ಜನಾಂಗದವರ ಮನೆ ಮನೆಯ ಭಾಷೆ ಆಕು. ಎರಡನೇ ಹಂತಲಿ ನಮ್ಮ ಜನಾಂಗನ ಮೀರಿ ಬೆಳಿಯೊಕು ಮೂರನೇ ಹಂತಲಿ ನಮ್ಮ ಪ್ರದೇಶನ ಮೀರಿ ಬೆಳಿಯೋಕು.

ಉದಾ: ತುಳು. ಮೊದಲಿಗೆ ತುಳು ಒಂದು ಜನಾಂಗದ ಭಾಷೆ ಆಗಿತ್ತ್. ಜೈನ ಅರಸರ ಭಾಷೆ ಆಗಿತ್ತ್ ಎರಡ್ನೇ ಹಂತಲಿ– ಆ ಮೇಲೆ ಅದ್ ಜನಾಂಗನ ಮೀರಿ ಬೆಳ್ತ್. ಬಂಟ್ರ್‌ಗ, ಪೂಜಾರಿಗ, ಕುಲಾಲ್‌ಗ, ಮೊಗವೀರರ್‌ಗ ಎಲ್ಲವೂ ಮಾತಾಡಿಕೆ ಸುರುಮಾಡ್ದೊ.

ಮೂರ್ನೆ ಹಂತಲಿ – ಅದ್ ಪ್ರದೇಶನ ಮೀರಿ ಬೆಳ್ತ್. ದಕ್ಷಿಣ ಕನ್ನಡಂದ ಈಗ ಬೆಂಗ್ಳೂರ್ ಮುಂಬಾಯಿಗೆ ಎತ್ತಿಟು. ಅರೆಭಾಷೆ ಹೀಂಗೆನೆ ಆಕು. ಪ್ರಸ್ತುತ ಅರೆಭಾಷೆ ಮೊದಲ ಹಂತಲಿ ಹಾಂಗೂ ಅಲ್ಪ ಸ್ವಲ್ಪ ಎರಡನೇ ಹಂತ ಹಾಂಗೂ ಒಂದಷ್ಟು ಮೂರ್ನೆ ಹಂತಕ್ಕೆ ತಲ್ಪಿಟು. ಇದ್ ಗಟ್ಟಿ ಆಕು.

ಜಾತಿ ಜಾತಿಗಳೊಟ್ಟಿಗೆ, ಧರ್ಮ ಧರ್ಮಗಳೊಟ್ಟಿಗೆ ಬಾಂಧವ್ಯ, ಸಾಮರಸ್ಯ ಬೆಳ್ಸುವಲ್ಲಿ ಭಾಷೆ ತುಂಬಾ ಪ್ರಮುಖ ಪಾತ್ರವಹಿಸಿದೆ. ಸುಳ್ಯ ತಾಲೂಕ್‌ಲಿ ಕನ್ನಡ, ಅರೆಭಾಷೆ, ತುಳು, ಮಲಯಾಳ, ಹವ್ಯಕ, ತಮಿಳು ಹೀಂಗೇ 5–6 ಭಾಷೆಗಳ ಮಾತಾಡ್ತ ನಮ್ಮ ಬಾಂಧವ್ಯ, ಸಾಮರಸ್ಯನ ಬೆಳ್ಸಿಕಂಡ್ ಇದ್ದು ನಾವು ಕಾಣ್‌ವ ಸ್ವಾಗತಾರ್ಹ ಬೆಳವಣಿಗೆ.

ಅರೆಭಾಷೆಗ ಮೂರು ಅಪಾಯ ಉಟ್ಟು. ಒಂದ್ ಇಂಗ್ಲೀಷ್‌ದ್. ಇಂಗ್ಲೀಷ್ ಕಲಿಯೊಕು ನಿಜ, ವ್ಯಾವಹಾರಿಕ ಭಾಷೆ ಆಗಿ ಇಂದ್ ಇಂಗ್ಲೀಷ್ ಬೇಕೇ ಬೇಕು. ಆದರೆ ನಮ್ಮ ದೈನಂದಿನ ಜೀವನಲಿ ಇದರ ಅಗತ್ಯ ಇಲ್ಲೆ. ಅದ್ ನಮ್ಮ ಭಾಷೆನ ಹಾಳ್ ಮಾಡ್ದೆ, ನಮ್ಮ ಭಾಷೆಲಿರುವ ಆತ್ಮೀಯತೆನ ಕಸಿದ್ ಕಂಡದೆ.

ಉದಾ: 1. ನಾ ರೀಸೆಂಟ್ ಆಗಿ ಬೆಂಗ್ಳೂರ್‌ಗೆ ಹೋಗಿದ್ದೆ, ಅಲ್ಲಿ ನಾವು ಆನಂದರಾವ್ ಸರ್ಕಲ್‌ನ ಒಂದು ಲಾಡ್ಜ್‌ಲಿ ಸ್ಟೇ ಮಾಡ್ದೊ. ಬೆಂಗ್ಳೂರು ಈಗ ವಂಡರ್‌ಫುಲ್ ಆಗಿ ಡೆವೆಲಪ್ ಆವ್ಟು.

2. ಎರಡ್ ಕಾಲೇಜ್ ಮಕ್ಕ ಮಾತಾಡ್ದು – ನಮ್ಮ ಹಾಸ್ಟೆಲ್ ತುಂಬಾ ಎಕ್ಸ್‌ಲೆಂಟ್. ಸೂಪರ್ ಆಗಿ ಉಟ್ಟು, ಮೆಸ್ ಬಿಲ್ ತ್ರೀ ಹಂಡ್ರೆಡ್ ಆದೆ. ಎಸ್ಟಾಬ್ಲಿಷ್‌ಮೆಂಟ್, ರೂಮ್‌ರೆಂಟ್ ಎಲ್ಲಾ ಸಪರೇಟ್ ವಾರ್ಡನ್ ತುಂಬಾ ಸ್ಟ್ರಿಕ್ಟ್.

3. ಸಿಟ್ಟ್‌ಲಿ ನನ್ನ ರಕ್ತ ಕೊದ್ದದೆ– ನನ್ನ ಬ್ಲಡ್ ಬೊಯಿಲ್ ಆಗ್ತಾ ಉಟ್ಟು.

ಈ ರೀತಿಲಿ ನಮ್ಮ ಭಾಷೆನ ಮೇಲೆ ಇಂಗ್ಲೀಷ್ ಸವಾರಿ ಮಾಡ್ತಾ ಉಟ್ಟು.

- ಎರಡ್ನೇ ಅಪಾಯ ಮೊಬೈಲ್‌ದ್. ಅದ್ ಇದ್ದರೆ ಬೇರೆ ಏನೂ ಬೇಡ ಮೊಬೈಲ್ ಭಾಷೆ ಅಂತೂ ವಿಚಿತ್ರ. ಅದರ ಒತ್ತಿಕಂಡ್ ಕುದ್ದರೆ ಮೈಲಿ ಬೂಧಿನೆ ಉದ್ರುತೆ.
- ಮೂರ್ನೇದ್ ನಾವ್ ಮಕ್ಕಳಿಗೆ ಅರೆಭಾಷೆ ಕಲ್ಸದೆ, ಶಿಷ್ಟ ಕನ್ನಡಲಿ ಮಾತಾಡ್ದು. ಹೀಂಗೆ ಆದರೆ ಇನ್ನೊಂದೆರಡ್ ತಲೆಮಾರ್ ಕಳಿಯಕನ ಅರೆಭಾಷೆ ಕಣ್ಮರೆ ಆವ ಅಪಾಯ ಉಟ್ಟು.

ನನ್ನ ದೋಸ್ತಿ ಒಬ್ಬ ಉಟ್ಟು. ಅವರ ಮನೆಲಿ ಅಂವ ಅಂವನ ಹೆಣ್ಣ್. ಎರಡ್ ಮಕ್ಕ ನಾಲ್ಕ್ ಜನಕೂ ಅರೆಭಾಷೆ ಬಂದದೆ. ಆದರೆ ಅವರ ಮನೆಲಿ ಅವು ಮಾತಾಡಿಕಂಬದು ಕನ್ನಡಲಿ.

ನನ್ನ ದೋಸ್ತಿ ಡಾ। ಕೇನಾಜೆ ಒಂದು ಕಥೆ ಹೇಳ್ದೊ. ಇಸ್ರೇಲ್‌ಲಿ ಬೆನ್‌ಯೆಹೂದಿ ಎಂಬ ಒಬ್ಬ ಜನನಾಯಕ ಇತ್ತ್. ಅಲ್ಲಿ ಹೀಬ್ರುಭಾಷೆಗೆ ಎಂತಾ ಗತಿ ಬಾತ್‌ಂತೇಳ್ರೆ. ಬೆನ್‌ಯೆಹೂದಿ, ಅವನ ಹೆಣ್ಣ್ ಇಬ್ಬರೇ ಹೀಬ್ರು ಭಾಷೆ ಮಾತಾಡುವು ಬಿಳ್ದೊಗಡ. ಹೀಂಗೆ ಆದರೆ ಹೀಬ್ರೂ ಭಾಷೆ ಸಂಪೂರ್ಣ ನಶೀಸಿ ಹೋದೆಂತ ಗ್ರೇಸಿ ಇಂವ ತನ್ನ ಹೆಣ್ಣ್ ಮಕ್ಕಳ ಒಂದಷ್ಟ್ ವರ್ಷ ಜನರ್‌ಂದ ದೂರ ಇಸಿ ಅವ್ಕೆ ಹೀಬ್ರು ಭಾಷೆನ ಮಾತ್ರ ಕಲ್ಸಿತ್. ಅದರ್‌ಲಿ ಪ್ರಭುತ್ವ ಸಾಧಿಸಿದ ಮೇಲೆ ಅವರ ಕಲ್ಸಿಕಂಡು ಜನರೊಟ್ಟಿಗೆ ಹೀಬ್ರು ಭಾಷೆ ಮಾತ್ರ ಮಾತಾಡೊಕುಂತ ತಾಕೀತ್ ಮಾಡ್ತ್. ಅವು ಹೀಬ್ರು ಭಾಷೆ ಮಾತಾಡಿ ಮಾತಾಡಿ ಜನ ಕೂಡಾ ಹೀಬ್ರು ಭಾಷೆ ಮಾತಾಡಿಕೆ ಸುರುಮಾಡ್ದೊ. ಹೀಂಗೆ ಭಾಷೆನ ಬೆಳ್ಸಿ ಬೆಳ್ಸಿ ಇಂದ್ ಹೀಬ್ರು ಭಾಷೆ ಉಳ್ಕಂಡುಟ್ಟು. ಇಂದ್ ಅದ್ ಇಸ್ರೇಲ್‌ನ ರಾಷ್ಟ್ರ ಭಾಷೆ ಹಾಂಗೂ ಜನಪ್ರಿಯ ಭಾಷೆ. ಅಲ್ಲದೇ ಇಡೀ ಇಸ್ರೇಲಿ ಜನಾಂಗದ ಭಾಷೆ 'ಹೀಬ್ರು' ಆಗಿ ಬೆಳ್ದ್ ನಿತ್ತುಟು.

ಭಾಷೆಗೆ ಮಡಿವಂತಿಕೆ ಇರಿಕೆ ಬೊತ್ತು. ಅದ್ ಎಲ್ಲಾ ಭಾಷೆಗಳ ಶಬ್ದಗಳ ಸ್ವೀಕರಿಸೊಕು. ಓಕ್ಸ್‌ಫರ್ಡ್‌ಡಿಕ್ಷನರಿಗೆ ಪ್ರತೀ ವರ್ಷ 25 ರ್‌ಂದ 30 ಶಬ್ದ ಸೇರ್‌ತ್ತಾ ಉಟ್ಟು. ಪರಿಣಾಮ ಇಂಗ್ಲೀಷ್ ಬೆಳೆಯುತ್ತಾ ಉಟ್ಟು. ಉದಾ: 'ಶರ್ಬತ್' ಎಂಬ ಶಬ್ದ ಈಗ ಕೊರ್ಸಂಡಿ. ರೈಸುದು. ಸ್ಪೀಡ್. ಬುಡೆಲ್ ಎಂಬ ಶಬ್ದಗೆ ಅರೆಭಾಷೆಗೆ ಸೇರಿಹೋವುಟು. ಪೆನ್. ಪೆನ್ಸಿಲ್. ಡಾಕ್ಟ್ರ. ಪೇಸ್ಟ್. ಬೆಂಚ್. ಪೋಲಿಸ್ ಕೋರ್ಟ್. ಕೇಸ್. ಕರಂಟ್. ಬಲ್ಬ್ ಪೇಪರ್ ನಮ್ಮ ಭಾಷೆ ಶಬ್ದಗ ಆಗಿ ಹೋಗೊಳೊ.

• ನಮ್ಮ ಜನಾಂಗಲಿ ತುಳು ಮತ್ತೆ ಅರೆಭಾಷೆ ಮಾತಾಡುವ ಎರಡ್ ಪ್ರಭೇಧ ಇದ್ದರೂ ಸಂಸ್ಕೃತಿ ಕಟ್ಟುವಲ್ಲಿ ಈ ಎರಡೂ ಭಾಷೆನ ಜನ ಒಂದಾಗೊಳೊ ಎಂಬ ಅಂಶನ ನಾವು ಗಮನಿಸೊಕು. ವಿಟ್ಲ. ಬಂಟ್ವಾಳ. ಪುತ್ತೂರು. ಬೆಳ್ತಂಗಡಿಲಿ ಇರುವ ನಮ್ಮ 18 ಬೊಳಿನ ಗೌಡ ಜನಾಂಗವು ಅಂದ್‌ನ ಅಲ್ಲಿನ ಪರಿಸ್ಥಿತಿ ಹಿನ್ನೆಲೆಲಿ ತುಳು ಮಾತಾಡಿರೂ. ಸಂಸ್ಕೃತಿ ಆಚರಣೆ ಸಂಪ್ರದಾಯಕ್ಕೆ ಬಾಕನ ನಾವುಗ ಅಷ್ಟ್ ಭಿನ್ನವಾಗಿ ಇಲ್ಲೆ. ಒಂದೇ ರೀತಿನ ಸಂಸ್ಕೃತಿ ಕಾಣುತ್ತಾ ಉಟ್ಟು. ಅದರ ಕಟ್ಟುವಲ್ಲಿ ಎರಡೂ ಭಾಷೆನ ನಮ್ಮ ಜನಾಂಗ ಒಂದಾಗಿ ಮುನ್ನಡ್ದಳೊ.

• ಪರಿಸ್ಥಿತಿಗೆ ಅನುಗುಣವಾಗಿ ನಾವು ಭಾಷೆನ ಹೇಂಗೆ ಕಲ್ತವಂತ ಹೇಳುದಕ್ಕೆ ಒಂದು ಒಳ್ಳೆ ಉದಾಹರಣೆ ಕೊಡ್ವಾದರೆ ನಮ್ಮ ಬೈಲ್‌ನ ಮಾನ್ಯ ದಿವಾಕರ ರೈ ಕುಟುಂಬದವು ಅಲ್ಲಿನ ಜಮೀನ್ದಾರರ್. ಅವರ ಮಾತೃಭಾಷೆ. ಆಡುಭಾಷೆ. ತುಳು ಆದರ್‌ಂದಾಗಿ ಅವರೊಟ್ಟಿಗೆ ಮಾತಾಡಿಕೆ ಬೇಕಾಗಿ ಒಕ್ಲುಗ ಎಲ್ಲಾ ತುಳು ಕಲ್ತೊ ಇಂದ್ ಒಕ್ಲುಗಳ ಜನ ಸಂಖ್ಯೆ ಜಾಸ್ತಿ ಆತ್ ಅವರ ಆಡುಭಾಷೆ ಅರೆಭಾಷೆ ಆದ್ದರ್‌ಂದ ಅವರೊಟ್ಟಿಗೆ ಮಾತಾಡಿಕೆ ಬೇಕಾಗಿ ದಿವಾಕರ ರೈ ಕುಟುಂಬದವು ಅರೆಭಾಷೆ ಕಲ್ತ್ ಇಂದ್ ನಮ್ಮಂದೊಳೂ ಸೋಕು ಅರೆಭಾಷೆ ಮಾತಾಡುವೆ.

• ಅರೆಭಾಷೆಲಿ ಬರೆಯುವರ್ಲಿ ನನ್ನದೊಂದು ಬೇಡಿಕೆ. ನಾವ್ ಏನಾರ್ ಬರಿಯೊಕುಂತ ಬರಿಯಕಾಗದ್. ನಮ್ಮ ಸ್ವಾರ್ಥ. ನಮ್ಮ ಪ್ರಚಾರಕ್ಕಾಗಿ ಬರಿಯಕಾಗದ್. ಎಕಾಡೆಮಿ ಧರ್ಮಕ್ಕೆ ಪ್ರಕಟಿಸಿದೆಂತ ಬರಿಯಕಾಗದ್. ಆಳವಾದ ಅಧ್ಯಯನ ಮಾಡಿ. ಜೀವನಾನುಭವದ ಹಿನ್ನೆಲೆಲಿ ಭಾಷೆ ಸಂಸ್ಕೃತಿಗೆ ಪ್ರಯೋಜನ ಆಗುವಾಂಗೆ ಬರಿಯೊಕು. ಅದರ್ಲಿ ಒಂದು ಸಾರ್ಥಕತೆನ ಪಡಿಯೊಕು. ನಾ ಅಷ್ಟ್ ಪುಸ್ತಕ ಬರ್ದೆ. ಇಷ್ಟ್ ಪುಸ್ತಕ ಬರ್ದೆಂತ ಹೇಳ್ದು ಮುಖ್ಯ ಅಲ್ಲ. ಆ ಪುಸ್ತಕದ ಗುಣಮಟ್ಟ ಹೇಂಗುಟ್ಟು ಎಂಬುದು ಮುಖ್ಯ ಆದೆ.

• ನಾವು ಅರೆಭಾಷೆ ಜನಾಂಗದವು ಮೂಲತಃ ಒಕ್ಕಲ್‌ಗ. ಆಮೇಲೆ ಹೆಚ್ಚಿನವು ಸ್ವಂತ ಬೇಸಾಯನ ಅವಲಂಬಿಸಿದೊ. ಈಗ ಈ ಬತ್ತದ ಬೇಸಾಯಂದ ವಿಮುಖರಾಗೊಳೊ. ಬತ್ತ. ತರಕಾರಿಂತ ಆಹಾರ ಬೆಳೆ ಬೆಳ್ಸುವ ಬದ್‌ಲ್ ಈಗ ಅಡಿಕೆ. ತೆಂಗು. ರಬ್ಬರ್. ಕೋಕೋ. ಗೇರುನಂತ ವಾಣಿಜ್ಯ ಬೆಳೆಗಳಿಗೆ ಮಾರು ಹೋಗೊಳೊ. ಈ ಕೃಷಿ ಪಲ್ಲಟಂದಾಗಿ ನಮ್ಮ ಸಂಸ್ಕೃತಿ ಮೇಲೆ ಅಪಾರ ಹೊಡೆತ ಬಿದ್ದುಟು. ಕೊರಳು ತುಂಬು ಸುದು ಹೊಸ್ತು. ಗದ್ದೆಗೋರಿ. ಬಿಸುಕಣಿ. ಬಲೀಂದ್ರಪೂಜೆ. ಪಟ್ಟಾಸ ಎಂಬ ಆಚರಣೆಗ:

ಆರಾಧನೆ ನಡ್ಸ್ ಕೋಳಿ. ಹಂದಿನ ಬಲಿಕೊಟ್ಟುವೆ.ಇಂತಹ ಆರಾಧನಾ ಪ್ರಕ್ರಿಯೆಗೆ ಬ್ರಹ್ಮಕಲಶೋತ್ಸವ ತಂತ್ರಿಗ ಏಕೆ ಎಂಬ ಒಂದು ಚಿಂತನೆ ಮಾಡುವ ಬಗ್ಗೆ ನೀವ್‌ಗೆ ಒಂದು ಸಣ್ಣ ಸಲಹೆ ತೀರ್ಮಾನ - ನೀವ್‌ಗೆ ಬುಟ್ಟುದ್ ಇದ್ ಒಂದು ರೀತಿನ ಸ್ಥಿತ್ಯಂತರ - ಇತಿಹಾಸಲಿ. ಪರಂಪರೆಲಿ ಇದ್ ಇಲ್ಲೆ. ಹಾಂಗಿರ್‌ತನ ಇಂದ್ ನಾವು ಭಾರಿ ಅದ್ದೂರಿಲಿ. ಸಾವಿರಾರ್ ಜನ ಸೇರ್ಸಿ. ಭರ್ಜರಿ ಊಟ ಕೊಟ್ಟು ಏನೊ ಅಲಂಕಾರ ಮಾಡಿ. ಶಾಮಿಯಾನ ಎಲ್ಲಾ ಹಾಕಿ. ಲಕ್ಷಗಟ್ಲೆ ಖರ್ಚ್ ಮಾಡಿ ಈ ಈ ಆರಾಧನಾ ಪ್ರಕ್ರಿಯೆನ ನಡ್ಸುವ ಅಗತ್ಯ ಉಟ್ಟಾ? ನಮ್ಮ ದೌರ್ಬಲ್ಯಗಳ ಉಳ್ಳವು ದುರುಪಯೋಗ ಪಡ್ಸದಾಂಗೆ ನಾವು ಜಾಗ್ರತೆ ವಹಿಸೊಕು. ಬದಲ್ ತುಂಬಾ ಸರಳವಾಗಿ. ಮಿತವ್ಯಯಲಿ. ಹಿತವಾಗಿ ಅರ್ಥಪೂರ್ಣವಾಗಿ ನಡ್ಸಿರೆ ಒಳ್ಳೆದಲ್ಲಾ ಎಂಬ ವಿಚಾರನ ನಿಮ್ಮ ಚಿಂತನೆಗೆ ಬುಡುತ್ತಾ ಒಳೆ. ನನ್ನದ್ ಅಧಿಕ ಪ್ರಸಂಗ ಆದರೆ ಕ್ಷಮಿಸಿ.

- ಅದೇ ರೀತಿ ಭಜನಾ ಮಂದಿರಗಳ್‌ಲಿ ಕೂಡಾ ನಡಿತಾ ಉಟ್ಟು. ಸ್ವಾತಂತ್ರ ಪೂರ್ವಲಿ ಸ್ವಾತಂತ್ರ್ಯ ಹೋರಾಟಕ್ಕೆ ಪೂರಕವಾಗಿ. ದೇವರ ಒಂದು ಫೋಟೊ ಇಸಿ ಊರ್‌ನ ಭಜಕರ್ ಆರಂಭ ಮಾಡ್‌ದ ಭಜನಾ ಕಾರ್ಯಕ್ರಮ ಅಂದ್ ಊರ್‌ನ ಭಜಕರಲ್ಲಿ ಒಬ್ಬ ಆರತಿ ಎತ್ತಿ ಮಂಗಲ ಹಾಡಿಕಂಡ್ ಭಜನೆ ಮಾಡುತ್ತಿದ್ದೊ. ಇಂದ್ ಅದ್ಕು ಕೂಡಾ ಬ್ರಾಹ್ಮಣ ಪೌರೋಹಿತ್ಯ ಬ್ರಹ್ಮಕಲಶ. ಪ್ರತಿಷ್ಠೆ ಎಲ್ಲಾ ಲಕ್ಷಗಟ್ಲೆ ಖರ್ಚ್‌ಮಾಡಿಕಂಡ್ ನಡ್ಸುವ ಅಗತ್ಯತೆನ ಬಗ್ಗೆ ಕೂಡಾ ಚಿಂತನೆ ಮಾಡ್ದು ಒಳ್ಳೆದ್‌ಂತ ನನ್ನ ಒಂದ್ ವಿನಮ್ರ ಸಲಹೆ.
- ಹೀಂಗೆ ನಮ್ಮ ಸಂಪ್ರದಾಯ ಆಚರಣೆಗಳ್‌ಲಿ ಇರುವ ಒಂದಷ್ಟು ಅಂಧಾನುಕರಣಗಳ ಬದಿಗೊತ್ತಿ. ಮೂಲ ಆಚರಣೆಗಳಿಗೆ ಧಕ್ಕೆ ಭಾರದಾಂಗೆ ಬದಲಾವಣೆಗಳ ಮಾಡುವ ಬಗ್ಗೆ ಅನುಭವಿ ಹಿರಿಯರೊಟ್ಟಿಗೆ ಚರ್ಚಿಸಿ ಒಂದು ಸರಳವಾದ ಏಕರೂಪದ ಆಚರಣಾ ಪದ್ಧತಿ ತಂದರೆ ಒಳ್ಳೆದ್‌ಂತ ನನ್ನ ನಮ್ರ ಸಲಹೆ.
- ಇನ್ನೊಂದು ವಿಚಾರ - ಹಿಂದೆ ನಮ್ಮ ಸಂಸ್ಕೃತಿಲಿ ಪಂಚಾತಿಕೆ ಮೂಲಕ. ಸಮಸ್ಯೆಗಳ ವ್ಯಾಜ್ಯಗಳ. ಪೆಟ್ಟು ಗುಟ್ಟುಗಳ ಪರಿಹರಿಸಿಕಂಬ ವ್ಯವಸ್ಥೆ ಇತ್ತ್. ಒಂದು ರೀತಿಲಿ ಇದ್ ಇಂದ್‌ನ ಗ್ರಾಮ ಸ್ವರಾಜ್ಯದ ಪರಿಕಲ್ಪನೆ. ಪರಿಣಾಮ ಜಗಳ. ಘರ್ಷಣೆ. ವೈಮನಸ್ಸೆಲ್ಲಾ ಪರಿಹಾರ ಆಗಿ ಬಾಂಧವ್ಯ ಹಾಂಗೆ ಉಳಿಯುತಿತ್ತ್. ಪೋಲೀಸ್ ಸ್ಟೇಷನ್. ಕೋರ್ಟ್ ಮತ್ತೆ ಆಸ್ಪತ್ರೆಗಳ್‌ಲಿ ನಾವು ಜನಜಂಗುಳಿ ಕಂಡವೆ. ಎಲ್ಲಿ ಜನ ಇರಿಕಾಗದೊ ಅಲ್ಲಿ ಜನ ತುಂಬುತ್ತಾ ಒಳೊ. ಇದರ್‌ಂದಾಗಿ ಜನರಲ್ಲಿ ಮಾನಸಿಕ ಒತ್ತಡ. ಖಿನ್ನತೆ. ಮುಂಗೋಪ ಜಾಸ್ತಿ ಆಗುತ್ತಾ ಇರುದರ ನಾವು ಸೂಕ್ಷ್ಮವಾಗಿ ಗಮನಿಸಕ್. ಆದ್ದರ್‌ಂದ ನಾ ಹೇಳ್ದು ಹಿಂದೆ ಇದ್ದ ಪಂಚಾತಿಕೆ ವ್ಯವಸ್ಥೆ ಸಾಧ್ಯ ಆದರೆ ಒಳ್ಳೆದ್.
- ನಮ್ಮ ಅರೆಭಾಷೆ ಜನಾಂಗದ ಶೈಕ್ಷಣಿಕ ಪ್ರಗತಿ ಬಗ್ಗೆ ಮಾತಾಡ್ರೆ ಅದ್ ತುಂಬಾ ತೃಪ್ತಿಕರವಾಗುಟ್ಟು. ನಮ್ಮ ಮಕ್ಕಳ ಶೈಕ್ಷಣಿಕ ಬೆಳವಣಿಗೆ ತುಂಬಾ ಸ್ಪೀಡಾಗಿ ಉಟ್ಟು. ಎರಡ್ ತಲೆ ಮಾರ್‌ಗಳ ಹಿಂದೆ ನಮ್ಮ ಹಿರಿಯರ್ ಹೆಬ್ಬೆಟ್ಟು ಹಾಕ್ತಿದ್ದೊ. ನಮ್ಮ ಅಪ್ಪಂದರ ಕಾಲಕ್ಕೆ ಬಾಕಿನ ಅವು ಎಂಟನೆನೂ. ಹತ್ತ್‌ನೆನೋ ಕಲ್ತಿದ್ದೊ. ಇಂದ್ ನಮ್ಮ ಮಕ್ಕ ಪದವಿ. ಸ್ನಾತಕೋತ್ತರ ಪದವಿ. ಮೆಡಿಕಲ್. ಇಂಜಿನಿಯರಿಂಗ್ ಮುಂತಾದ ಪದವಿಗಳಿಸುತ್ತಾ ಒಳೊ. ಮುಂದುವರ್ದ ಜನಾಂಗಕ್ಕೆ ಸರಿ ಸಮಾನಗಿ ನಿತ್ತ್ ಡಿಸ್ಟಿಂಕ್ಷನ್ ರ್‍ಯಾಂಕ್ ಪಡಿತಾ ಇರ್ದು ಸ್ವಾಗತಾರ್ಹ ಬೆಳವಣಿಗೆ.
- ಐ.ಎ.ಎಸ್, ಐ.ಪಿ.ಎಸ್. ಮಾಡಿಕಾಗದಿದ್ದರೂ ಅಧಿಕಾರಿಗಳಾಗಿ, ಉಪನ್ಯಾಸಕರಾಗಿ. ಬ್ಯಾಂಕ್ ಮ್ಯಾನೇಜರ್‌ಗಳಾಗಿ. ಮಾಸ್ಟ್ರಗಳಾಗಿ. ಇಂಜಿನಿಯರ್‌ಗಳಾಗಿ. ಚಾರ್ಟೆಡ್ ಎಕೌಂಟೆಂಟ್‌ಗಳಾಗಿ. ಡಾಕ್ಟರ್‌ಗಳಾಗಿ ನೆಲೆ ಕಂಡುಕೊಂಡೊಳೊ. ನಮ್ಮ ಜನಾಂಗದ ಹೆಣ್ಮಕ್ಕ ಕೂಡಾ ಒಳ್ಳೆ ಉದ್ಯೋಗಲಿ ಒಳೊ. ಅರೆಭಾಷೆ ಮಾತಾಡುವ ಎಂ.ಎಸ್. ಓಂ ಪ್ರಕಾಶ್ ನಂತವು ಅಮೇರಿಕಾದ ಕಾರ್ನೆಲ್ ವಿಶ್ವವಿದ್ಯಾನಿಲಯದ ಎಂ.ಎಸ್ ಪದವಿ ಪಡ್ಕೊಂಡೊಳೊ. ಗುಡ್ಡೆಮನೆ ರಾಘವನವು ವಿಜ್ಞಾನಿ ಆಗೊಳೊ. ಕೆ.ಎಸ್. ಅನಂದನವು ಸ್ವಂತ ಸಾಫ್ಟ್‌ವೇರ್ ಉದ್ಯಮ ಸ್ಥಾಪಿಸೊಳೊ, ಏಳೆಂಟು ಸಾಫ್ಟ್‌ವೇರ್ ಕಂಪನಿಗಳಿಗೆ ಮಾರ್ಗದರ್ಶಕರಾಗಿ ಒಳೊ.

ವೈದ್ಯಕೀಯ ಕ್ಷೇತ್ರ ತಕಂಡ್ರೆ. ಅಲೋಪತಿಕ್ ವಿಭಾಗಲಿ ಡಾ। ಕೆ.ವಿ. ಚಿದಾನಂದ. ಡಾ। ಓಿಮಕರ. ಡಾ। ಕರುಣಾಕರ ಕ್ಯೊಂಗಾಜೆ. ಡಾ। ಸಾಯಿಗೀತ. ಡಾ। ಕೆ. ಸಿ. ಐಶ್ವರ್ಯ. ಡಾ। ಶ್ರೀಧರ ಮುರುಳ್ಯ. ಡಾ। ರಕ್ಷಿತ್ ಕೆದಂಬಾಡಿ. ಡಾ।ಪವನ್ ಮಾಣಿಬೆಟ್ಟು. ಡಾ। ಕಾರ್ತಿಕ್ ಕತ್ತಲ್ಕ. ಡಾ। ಸ್ವಸ್ತಿಕ್ ಕತ್ತಲ್ಕ. ಡಾ। ನವೀನ್ ನೆರಿಯನ. ಡಾ। ನವೀನ್ ದಂಬೆಕೋಡಿ. ಡಾ। ಚಿತ್ರಾ ನವೀನ್. ಡಾ। ಅಕ್ಷಯ್ ಕುದ್ಪಾಜೆ. ಡಾ। ಕಲ್ಪನಾ ಶ್ರೀಧರ. ಡಾ। ಕಲ್ಪನಾ. ಡಾ। ತಾರಾನಂದನ್. ಡಾ। ಕೃಪಾಲಿನಿ. ಡಾ। ಯು. ಬಿ. ಶರತ್. ಡಾ। ಸಿಂಧೂ. ಡಾ। ಪೂನಂ. ಡಾ। ರಜನಿ. ಡಾ। ಕೆ. ಎಂ. ನವೀತಾ. ಡಾ। ಪುನೀತ್ ಬಿ. ಓ.. ಡಾ। ಅನಿಲ್ ಬಿಳಿಮಲೆ. ಡಾ। ಸುಬ್ರಹ್ಮಣ್ಯ. ಡಾ। ರಂಜಿತ್. ಡಾ। ದಿನೇಶ್. ಡಾ। ನಮ್ರತಾ. ಡಾ। ರಮ್ಯ. ಡಾ। ಸಜ್ಜನ್ ಮಡಪ್ಪಾಡಿ. ಡಾ। ವಿಂದ್ಯಾ; ಆಯುರ್ವೇದಿಕ್ ವೈದ್ಯಕೀಯ ಕ್ಷೇತ್ರಲಿ ಡಾ। ಲೀಲಾಧರ. ಡಾ। ಪುರುಷೋತ್ತಮ. ಡಾ। ಬಿ.ಎಂ. ಕವಿತಾ. ಡಾ। ಹರ್ಷವರ್ಧನ್. ಡಾ। ಲಕ್ಷ್ಮೀಶ. ಡಾ। ಪುನೀತ್ ರಾಘವೇಂದ್ರ; ದಂತ ವೈದ್ಯಕೀಯ ಕ್ಷೇತ್ರಲಿ ಡಾ। ಕಿರಣ್. ಡಾ। ಜಯದೀಪ್. ಡಾ। ಪ್ರಸನ್ನ. ಡಾ। ರೇವಂತ್ ಸೂಂತೋಡು- ಇವೆಲ್ಲಾ ನಮ್ಮ ಅರೆಭಾಷಿಕದಲ್ಲಿ ತಜ್ಞ ಡಾಕ್ಟರ್‌ಗಳಾಗಿ ವೈದ್ಯಕೀಯ ಕ್ಷೇತ್ರಲಿ ಮಿಂಚುತ್ತಾ ಇರ್ದು ನಾವ್‌ಗೆಲ್ಲಾ ಹೆಮ್ಮೆಯ ಸಂಗತಿ.

- ಪೂಜ್ಯ ಕುರುಂಜಿ ವೆಂಕಟ್ರಮಣ ಗೌಡ್ರಂದ ಸ್ಥಾಪನೆಗೊಂಡ ಪ್ರಸ್ತುತ ಡಾ। ಕೆ.ವಿ ಚಿದಾನಂದ ಮತ್ತೆ ಡಾ। ಕೆ.ವಿ. ರೇಣುಕಾಪ್ರಸಾದರ ನೇತೃತ್ವಲಿ ನಡೆವ ಶಿಕ್ಷಣ ಸಂಸ್ಥೆಗ ಸುಳ್ಯಕ್ಕ ರಾಷ್ಟ್ರಮಟ್ಟಲಿ ಮಾತ್ರ ಅಲ್ಲ ಅಂತರಾಷ್ಟ್ರೀಯ ಮಟ್ಟಲಿ ಕೂಡಾ ಕೀರ್ತಿ ತಂದ್ ಕೊಟ್ಟುಟು. ಎಂ.ಪಿ. ಉಮೇಶರ ನೇತೃತ್ವಲಿ ನಡೆವ ಕೇಂದ್ರಿಯ ಸಿಲೆಬಸ್‌ನ ಜ್ಞಾನಗಂಗಾ ಪಬ್ಲಿಕ್ ಸ್ಕೂಲ್; ದ.ಕ. ಗೌಡ ವಿದ್ಯಾ ಸಂಘದ ಆಶ್ರಯಲಿ ಕೆ.ವಿ.ಜಿಯವರ್‌ಂದ ಸ್ಥಾಪನೆಗೊಂಡ್ ಪ್ರಸ್ತುತ ಧನಂಜಯ ಅಡ್ಪಂಗಾಯರ ಅಧ್ಯಕ್ಷತೆಲಿ ನಡೆವ ಶ್ರೀ ಶಾರದಾ ಹೆಣ್ಮಕ್ಕಳ ಶಿಕ್ಷಣ ಸಂಸ್ಥೆಗ ಕೂಡಾ ಅರೆಭಾಷಿಗರ ಸಾಧನೆಗೆ ಗರಿ ಮೂಡಿಸಿಟು.

ನಮ್ಮ ಬೇಡಿಕೆಗ:

- **ಭಾಷಾ ಅಲ್ಪ ಸಂಖ್ಯಾತರ ಸ್ಥಾನಮಾನ** - ತುಳು. ಕೊಂಕಣಿ ಮಾತಾಡ್‌ವ್‌ಕೆ ಭಾಷಾ ಅಲ್ಪ ಸಂಖ್ಯಾತರ ಸ್ಥಾನಮಾನ ಕೊಟ್ಟೊಳೊ. ಅದ್ದರ್‌ಂದ ಸುಮಾರು 5 ಲಕ್ಷ ಜನ ಮಾತಾಡುವ ನಮ್ಮ ಅರೆಭಾಷೆಗೆ ಕೂಡಾ ಭಾಷಾ ಅಲ್ಪ ಸಂಖ್ಯಾತರ ಸ್ಥಾನಮಾನನ ಕೊಡೊಕೂಂತ ನಾ ಸರಕಾರನ ಈ ವೇದಿಕೆ ಮುಖಾಂತರ ಭಿನ್ನವಿಸಿಕಣೆ. ಈ ಬಗ್ಗೆ ನಾವು ಒಂದಿಷ್ಟ್ ಪ್ರಯತ್ನನೂ ಮಾಡೊಕಾದೆ. ಅದ್ ನಾವ್‌ಗೆ ಮಂಜೂರಾದರೆ ನಾವು ಅರೆಭಾಷಿಕ ಅರ್ಧಂದ ಹೆಚ್ಚು ಮಕ್ಕ ಇರುವ ಎಲ್ಲಾ ಅನುದಾನಿತ ಹಾಂಗೂ ಅನುದಾನ ರಹಿತ ಶಾಲೆಗಳಿಗೆ ಇದರ್‌ಂದ ಖಂಡಿತಾ ಪ್ರಯೋಜನ ಅದು. ಜೊತೆಗೆ ಸಿ.ಇ.ಟಿ. ಲಿಕೂಡ ಒಂದಿಷ್ಟ್ ಮೀಸಲಾತಿ ನಮ್ಮ ಮಕ್ಕಳಿಗೆ ಸಿಗುವ ಅವಕಾಶ ಉಟ್ಟು. ನಮ್ಮ ಮಕ್ಕಳ ಶಾಲೆಗೆ ಸೇರ್‌ಕನ . ಅರ್ಜಿಲಿ ಮಾತೃಭಾಷೆಂತ ಒಂದು ಕಲಮ್ ಉಟ್ಟು. ಅಲ್ಲಿ ನಾವು ಅರೆಭಾಷೆಂತೇಳಿಯೇ ನಮೂದಿಸೊಕು. ಈ ಬಗ್ಗೆ ನಮ್ಮ ಪ್ರಯತ್ನ ಸಾಗಲೀಂತ ನನ್ನ ಆಶಯ.
- **ಮಂಗಳೂರು ವಿಶ್ವವಿದ್ಯಾಲಯಲಿ ಅರೆಭಾಷೆ ಅಧ್ಯಯನ ಪೀಠ ಸ್ಥಾಪನೆ**- ಈಗಲೇ ನಮ್ಮ ಅರೆಭಾಷೆ ಸಾಹಿತ್ಯ ಮತ್ತು ಸಂಸ್ಕೃತಿಗಳ ಬಗ್ಗೆ ಸಾಕಷ್ಟ್ ಸಂಶೋಧನಾ ಕೃತಿಗ. ಲೇಖನಗ. ಪದಕೋಶ. ಸಾಹಿತ್ಯಗ ಅರೆಭಾಷೆಲಿ ಬಂದುಟು. ಕೋಡಿಯವರ್‌ಂದ ಹಿಡ್ದ್. ಚಿನ್ನಪ್ಪ ಗೌಡ್ರ್. ಬಿಳಿಮಲೆ. ಕಣಿಯೂರು ನಂತವು ನಮ್ಮ ಸಂಸ್ಕೃತಿ ಮೇಲೆ ಸಂಶೋಧನೆ ಮಾಡ್ಯೊಳೊ. ಈ ಹಿನ್ನೆಲೆಲಿ ನಮ್ಮ ಭಾಷೆನ ಹಿತದೃಷ್ಟಿಲಿ. ಸ್ವಾತಂತ್ರ್ಯ ಸಂಗ್ರಾಮಲಿ ಕೂಡಾ ಪಾಲ್ಗೊಂಡ ಈ ಭಾಷೆ ಮಾತ್ನಾಡುವ ಜನಾಂಗದ ಹಿತ ದೃಷ್ಟಿಲಿ ನಮ್ಮ ಮಂಗಳೂರು ವಿಶ್ವ ವಿದ್ಯಾನಿಲಯಲಿ ಒಂದು ಅಧ್ಯಯನ ಪೀಠ ಆಕು. ನಾವು ಈ ಬಗ್ಗೆ ಪ್ರಯತ್ನ ಮಾಡ್ದು ಒಳ್ಳೆದ್. ಈಗಾಗ್ಲೆ ತುಳು, ಕೊಂಕಣಿ. ಬ್ಯಾರಿ ಭಾಷೆಗೆ ಅಧ್ಯಯನ ಪೀಠ ಉಟ್ಟು. ಅದ್ದರಿಂದ ನಾವು ಪ್ರಯುತ್ನ ಪಟ್ಟರೆ ಇದ್ ಸಾಧ್ಯತೆ ಉಟ್ಟು.
- **ಸಂವಿಧಾನದ 8ನೇ ಪರಿಚ್ಛೇದಕ್ಕೆ ಅರೆಭಾಷೆ** - ಒಂದು ಪ್ರಾದೇಶಿಕ ಭಾಷೆ ಆಗಿ ಒಂದು ಜನಾಂಗದ ಭಾಷೆಗೂ ಮಹತ್ವ ನೀಡಿ ನಮ್ಮ ಸಂವಿಧಾನದ 8ನೇ ಪರಿಚ್ಛೇದಲಿ ಸೇರ್ಸಿಕೆ ನಾವು ಪ್ರಯತ್ನ ಪಟ್ಟರೆ ನಮ್ಮ

ಭಾಷೆಗೆ ಒಂದು ಗೌರವದ ಸ್ಥಾನಮಾನ ಬಂದದೆ. 25-30 ವರ್ಷಗಳ ಹಿಂದೆ ನಮ್ಮ ಅರೆಭಾಷೆಗೆ ಒಂದು ಎಕಾಡೆಮಿ ಬೇಕೂಂತ ಹೇಳ್ತಿದ್ದರೆ ಜನ ನಗಾಡ್ತಿದ್ದೋನೊ ಏನೊ? ಸುಳ್ಯದ ಒಬ್ಬ ಹೈದ ನಮ್ಮ ಮುಖ್ಯಮಂತ್ರಿ ಆದುಂತ ಯಾರ್ ಗ್ರೇಸಿಕ್ಕೊ? ಈಗ ಆತ್‌ಲೆನಾ? ನಮ್ಮದೇ ಒಬ್ಬ ಮುಖ್ಯಮಂತ್ರಿ ಆಗಿ ಎಕಾಡೆಮಿ ಸಿಕ್ಕಿದಾಂಗೆ ಕೇಂದ್ರಲಿ ನಮ್ಮವೇ ಒಬ್ಬ ಪ್ರಧಾನ ಮಂತ್ರಿ ಆಗಿ ನಮ್ಮ ಅರೆಭಾಷೆಗೆ ನಮ್ಮ ಸಂವಿಧಾನಲಿ ಏಕೆ ಸ್ಥಾನ ಸಿಕ್ಕಿಕಾಗದ್? 'ಕಷ್ಟ ಆದರೆ ಸಾಧ್ಯ' ಎಂಬ ನೆಲೆಲಿ ಆಶಾವಾದಿಗಳಾಗಿ ನಮ್ಮ ಪ್ರಯತ್ನ ಸಾಗೊಕು ಅಷ್ಟೆ.

- ಈಗಲೇ ಪದವಿ ಮಟ್ಟದ ಕನ್ನಡ ಪತ್ರ ಪುಸ್ತಕಲಿ ಅರೆಭಾಷೆ ಕವನಗ ಬಂದುಟು. ಟಿ.ಜಿ. ಮೂಡೂರು. ಕಿರಣ. ಡಾ। ನಿಡಿಂಜಿಯವರ ಕವನಗಳಿಗೆ ಆದ್ಯತೆ ಸಿಕ್ಕಿಟು. ಇದು ಸ್ವಾಗತಾರ್ಹ ಬೆಳವಣಿಗೆ. ತುಳುನ 3ನೇ ಭಾಷೆ ಆಗಿ ಕಲಿಯಕೆ ಅವಕಾಶ ಉಟ್ಟು. ಈ ಎಲ್ಲಾ ಹಿನ್ನೆನೆಲಿ ಅರೆಭಾಷೆಲಿ ಕೂಡಾ ಒಂದು ಸರ್ಟಿಫೀಕೇಟ್ ಕೋರ್ಸ್ ಅಥವಾ ಡಿಪ್ಲೊಮೋ ಕೋರ್ಸ್ ಮಾಡುವ ಬಗ್ಗೆನೂ ನಮ್ಮ ಪ್ರಯತ್ನ ನಡಿಯಕ್.
- ಅರೆಭಾಷೆ ಜನಾಂಗಕ್ಕೆ ಪ್ರತ್ಯೇಕ ಮೀಸಲಾತಿ ನೀಡುವ ಬಗ್ಗೆನೂ ನಾವು ಪ್ರಯತ್ನ ಮಾಡ್ಬು ಒಳ್ಳೆದ್. ಈಗ '3ಎ' ಲಿ ಸಿಕ್ಕುವ ಅವಕಾಶಗ ತುಂಬಾ ಕಡಿಮೆ. ಹಿಂದೆ ಎಂ.ಆರ್. ಬಾಲಕೃಷ್ಣ ಗೌಡ್ರ ಮುತುವರ್ಜಿಲಿ ಪ್ರಯತ್ನ ಪಟ್ಟಿದ್ದೋ. ಆದರೆ ಒಂದಷ್ಟ್ ಏಕಮನಸ್ಸ್‌ನ ಕೊರತೆಂದಾಗಿ ಇದ್ ಬಿದ್ದ್‌ಹೋತ್. ಈ ದಿಸೆಲಿ ನಮ್ಮ ಪ್ರಯತ್ನ ಮುಂದುವರಿಯಕ್. ಈಗನ 8 ಲಕ್ಷದ ಆದಾಯ ಮಿತಿ ಒಳಗಿನವ್ಕೆ ಸಿಗುವ ಮೀಸಲಾತಿ ಕೂಡಾ ನಾವ್‌ಗೆ ಏನೂ ಪ್ರಯೋಜನ ಆದುಲೇಂತ ನನ್ನ ಅನಿಸಿಕೆ. ಏಕಂತೇಳ್ರೆ ಬೇರೆ ಯಾವ ಮೀಸಲಾತಿ ಇಇದವ್ಕೆ ಮಾತ್ರ ಇದ್ ಅನ್ವಯ ಆದೆ. ಎಂಬ ಒಂದು ಟಿಪ್ಪಣಿ ಇರುದರ್‌ಂದ, ನಾವ್‌ಗೆ 3ಎ ಲಿ ಒಂದು ಮೀಸಲಾತಿ ಈಗಾಗಲೇ ಇರುದರ್‌ಂದ ಇದ್ ನಾವ್‌ಗೆ ಪ್ರಯೋಜನ ಬಾದುಲೆ.
- ಎಕಾಡೆಮಿ ಜನಮುಖಿ ಆಕು. ಸಾಮಾನ್ಯ ಜನಕ್ಕೆ ಬೇಕಾವ ಕಾರ್ಯಕ್ರಮಗ ಬರೊಕು. ಜನರ ಆಶೋತ್ತರಗಳಿಗೆ ಸ್ಪಂದಿಸೊಕು. ನಮ್ಮ ಭಾಷೆ, ಸಂಸ್ಕೃತಿನ ಆಳವಾದ ಅಧ್ಯಯನ, ಸಂಶೋಧನೆ ಮಾಡಿ ಅದ್ ಹೊರ ಬರುವಾಂಗೆ ಮಾಡೊಕು. ನಮ್ಮ ಸಿದ್ಧವೇಷ. ಕೋಲಾಟ ನೃತ್ಯ ಪ್ರಾಕಾರಗಳ ದಾಖಲೀಕರಣ ಆಕು. ಎಲ್ಲಣ್ಣ ಗೌಡ್ರ ಮಾಡ್ಡಾಂಗೆ ಸಾಂಸ್ಕೃತಿಕ ತಂಡಗಳ ನಿರ್ಮಾಣ ಆಕು.
- ಮಡಿಕೇರಿ ಆಕಾಶವಾಣಿನ ಅಲ್ಲಿನ ಅರೆಭಾಷಿಗರು ಬಳ್ಸಿಕಂಡಾಂಗೆ ಮಂಗಳೂರು ಆಕಾಶವಾಣಿಲಿ ಕೂಡಾ ಅರೆಭಾಷೆಲಿ ವೈವಿಧ್ಯಮಯ ಕಾರ್ಯಕ್ರಮಗಳ ಕೊಡಿಕೆ ನಮ್ಮ ಎಕಾಡೆಮಿಂದ ಪ್ರಯತ್ನ ನಡ್ದರೆ ಒಳ್ಳೆದ್‌ಂತ ನನ್ನ ಬೇಡಿಕೆ.
- ಎಕಾಡೆಮಿ ಈಗಾಗಲೇ 10 ವಿದ್ವಾಂಸರಿಗೆ ಫೆಲೊಶಿಫ್ ಕೊಟ್ಟುಟು. ಅರೆಭಾಷೆ ವ್ಯಾಕರಣ ಪುಸ್ತಕ ಇಂದ್ ಬಿಡುಗಡೆ ಆವುಟು. ಎಕಾಡೆಮಿ ಮುಂದೆ ಇರುವ 'ಅರೆಭಾಷೆ ಸಂಸ್ಕೃತಿ ಗ್ರಾಮ ಒಂದು ಪೂರ್ಲನ ಪರಿಕಲ್ಪನೆ. ಅದರೊಂದು ನಮ್ಮ ಸಂಸ್ಕೃತಿನ ಪ್ರತಿ ಬಿಂಬಿಸುವ ವಸ್ತು ಸಂಗ್ರಹಾಲಯ ಇರೊಕು. ಅದರೊಳಗೆ ನಮ್ಮ ಸಂಸ್ಕೃತಿನ ಮೆಲುಕು ಹಾಕುವಾಂಗೆ ಇರೊಕು. ಆಡಂಭರಗಳಿಗೆ ಆದ್ಯತೆ ಕೊಡದೆ ಪರಿಣಾಮಕಾರಿಯಾಗಿ ಅರ್ಥ ಪೂರ್ಣವಾದ ಕಾರ್ಯಕ್ರಮಗ ನಡ್ದ್ ಅರೆಭಾಷೆ ಬೆಳಿಯೊಕು. ನಮ್ಮ ಸಂಸ್ಕೃತಿ ಬೆಳಿಯೊಕು.

ಎಲ್ಲದಕ್ಕೂ ಮೇಲಾಗ್ ನಾವು ನಮ್ಮ ದೊಡ್ಡಸ್ತಿಕೆ, ಮುಜುಗರನ ಬುಟ್ಟು ಅರೆಭಾಷೆ ಮಾತಾಡೊಕು. ಅರೆಭಾಷೆಲಿ ಮಾತಾಡ್ದೋಕು. ಪೂಜ್ಯ ಕೆ.ವಿ.ಜಿ. ಡಾ। ಚಿದಣ್ಣ, ಡಾ। ಪ್ರಸಾದಣ್ಣ, ಪಡ್ಡಂಬೈಲು ವೆಂಕಟ್ರಮಣ ಗೌಡ್ರ್, ಎಂ.ಆರ್. ಬಾಲಕೃಷ್ಣ ಗೌಡ್ರ್, ನಿತ್ಯಾನಂದ ಮುಂಡೋಡಿ. ಡಾ। ಬಿಳಿಮಲೆಯವರಾಂಗೆ ಅಪಟ ಅರೆಭಾಷೆಲಿ ಮಾತ್‌ನಾಡುವ ಮೂಲಕ ನಮ್ಮ ಹಿರಿಯರ ಏನಮ್ಮ ಸಂಸ್ಕೃತಿನ ಬಳ್ಸಿ, ಬೆಳ್ಸಿಕಂಡ್ ಬರೊಕು.

ಕೊನೇ ಮಾತ್ : ಪರಂಪರೆಯ ಜೀವಂತಿಕೆಯಿಂದ ಕೂಡಿ ಪರಂಪರೆಲಿ ಆಳವಾಗಿ ಬೇರ್ ಬುಟ್ಟ ನಮ್ಮ ಅರೆಭಾಷೆ ಜನಾಂಗ ವೃಕ್ಷ ಒಂದು ಹೆಮ್ಮರವೇಸರಿ. ಇಂತಹ ಜನಾಂಗ ವೃಕ್ಷದ ಬೇರ್‌ಗಳೆಲ್ಲಾ ಹಸ್ತಾದರೂ.

ಇಂದ್‌ನ ಜನಾಂಗದ ಹೊಸ ಚಿಗ್‌ರಾದ ನವಚೇತನಗ ಈ ವೃಕ್ಷದ ಸೊಬಗ್‌ನ ಕೆಡಿಸಿಕಾಗದ್. ನಮ್ಮ ಜನಾಂಗದ ಜೀವಾಳನ ಅರಿತ್‌ಕಂಡ್, ಉಳ್ಸಿ, ಬೆಳ್ಸುವ ಸೊಗಸುಗಾರರಾಕು. ಆಗಲೇ ಈ ನಮ್ಮ ಭಾಷೆ ಮತ್ತು ಜನಾಂಗದ ಬೃಹತ್‌ನ ಸುರಕ್ಷೆ ಸಾಧ್ಯ. ವಿಚಾರವಿಹೀನ ಅಂಧಾನುಕರಣೆ ನಮ್ಮ ಜನಾಂಗಂದ ದೂರ ಆಕು ಆಗಲೇ ನಮ್ಮ ಅಭ್ಯುದಯ ಸಾಧ್ಯ.

ಯು.ಸುಬ್ರಾಯ ಗೌಡ್ರ್, 'ವೀಳ್ಯ' ಸಂಚಿಕೆಲಿ ಬರ್ದ ಕವನ 'ವೀಳ್ಯ'ನ ಓದುಗರೊಂದಿಗೆ ನನ್ನ ಭಾಷಣನ ಮುಕ್ತಾಯ ಮಾಡ್ತೆ.

ವೀಳ್ಯ

ಬೊಳ್ಪಾಗಿ ಎಷ್ಟ್ ಹೊತ್ತಾತ್
ಎದ್ರ್ - ಚಳಿ ಬುಟ್ಟತಿಲೆನಾ?
ಹಕ್ಕಲೆನ ಜನ ಎದ್ದ್
'ದಡದಡ' ಸದ್ದ್ ಮಾಡ್ತಾ ಒಳೊ
ನಿಂಗೆ ಕೇಳ್ತುದಲೆನಾ? ಜಡ ನಿದ್ದೆ ಬುಟ್ಟತಿಲೆನಾ?
ಅವೆಲ್ಲ ಅಲ್ಲಿಗೆ, ಇವೆಲ್ಲ ದಿಲ್ಲಿಗೆ
ಉಳ್ದವು ಇನ್ನೆಲ್ಲಿಗೊ ಹೋಗಿ ಆತ್
ನೀಮಾತ್ರ ಯಾಕೆ ಇದ್ದಲ್ಲೆ ಸುಮ್ಮನೆ ಒಳ?
ಆ ಪುಣ್ಯಾತ್ಮರ್ ನಿಂಗೆಂತೇಳಿಯೆ ಕಟ್ಟಸೊಳೊ
ದೇವಸ್ಥಾನದ ಹಾಂಗೆ ಶಾಲೆಗಳ
ಅದರ್‍ಲಿ ನಿಂಗೆ ನಂಬಿಕೆ ಇಲ್ಲೆನಾ?
ನೀ ಬೇರೆಂತ ತಿಳ್ಕಂಡಳನಾ?
ನಿನ್ನ ಸಮುದ್ರಲೇ ನೀ 'ದ್ವೀಪ' ಆದರೆ ಹೇಂಗೆ?!
ನಿನ್ನ ದೀಪದ ಗುಣ ಕೆಟ್ಟತಾ?
ಸಮುದ್ರದ ನೀರೇ ಆರ್‍ತಾ ಹೇಂಗೆ?
ಒಮ್ಮೆ ತಲೆಎತ್ತಿ ನೋಡ್ ಸುತ್ತಮುತ್ತ
ನೆರೆಕರೆವೆಲ್ಲ ಎಷ್ಟ್ ದೂರ ಹೋಗೊಳೊ–
ನಿನ್ನ ಬಾಳ್‌ನ 'ಪೇಚಾಟ'ಲಿ ನಿಂಗೆ
'ತಿರ್‍ಗಿ' ಒದ್ದವು ಯಾರ್‌ಂತ ಗೊತ್ತುಟಾ?
ಉದಾಸೀನ, ದಡ್ಡತನ, ಕೆಡ್‌ಕ್‌ತನಗಳ
ದೂರ ಒದ್ದೋಡ್ಸಿ ನೆಲಕ್ಕೆ ಹೊಡಿ.
ಇದ್ಕೆ ನಿಂಗೆ ಅವ್‌ಕಾಸ ಬಂದುಟು–
ಹ್ಞೂಂ – ರಣ ಕಹಳೆ ಊದು
ಸ್ವರ ಏರ್ಸಿ - ರಣವೀಳ್ಯ ಕೊಡು
ನಿನ್ನ ಬೆಗ್‌ರನ ಫಲ ವುಂಡ್
ಮತ್ತೆ ಮಲ್ಗ್ - ಈಗ ಎದ್ರ್.

ಎಲ್ಲವ್ಕ ನಮಸ್ಕಾರ,
ನಿಮ್ಮವನೇ ಆದ
ಕೆ.ಆರ್. ಗಂಗಾಧರ, ಕುರುಂಜಿ ಅರಂತೋಡು

ಅರೆಭಾಷೆ ಸಬಲೀಕರಣ ಸೂತ್ರಗಳು



ಡಾ. ಪುರುಷೋತ್ತಮ ಬಿಳಿಮಲೆ

ಭಾಷೆಗೆ ಸಂಬಂಧಿಸಿದಂತೆ ೧೯೭೧ ರಿಂದಲೂ ಕೇಂದ್ರ ಸರಕಾರ ಒಂದು ಧೋರಣೆಯನ್ನು ಸ್ಪಷ್ಟವಾಗಿ ಅನುಸರಿಸುತ್ತಲೇ ಬಂದಿದೆ. ಅದೆಂದರೆ ೧೦ ಸಾವಿರ ಮತ್ತು ಅದಕ್ಕಿಂತ ಹೆಚ್ಚು ಜನರು ಮಾತಾಡುವ ಭಾಷೆಗಳನ್ನು ಮಾತ್ರ ಅದು ವಿಶ್ಲೇಷಣೆಗೆ ಬಳಸಿಕೊಳ್ಳುತ್ತದೆ. ಈ ನಿಲುವಿನಿಂದಾಗಿ ನಮ್ಮ ದೇಶದ ಅನೇಕ ಸ್ವತಂತ್ರ ಭಾಷೆಗಳ ಹೆಸರುಗಳು (ಉದಾ: ಕೊರಗ ಭಾಷೆ) ಇಲ್ಲಿ ಲಭ್ಯವಾಗುವುದೇ ಇಲ್ಲ. ಅರೆಭಾಷೆ, ಹವ್ಯಕ ಭಾಷೆ, ಕುಂದಾಪುರ ಕನ್ನಡದಂಥ ಮುಖ್ಯ ಭಾಷೆಗಳ ಕತೆಯಾದರೂ ಅಷ್ಟೆ. ಈ ಮಿತಿಯೊಳಗೆ ೨೦೧೧ರ ಜನಗಣತಿಯು ಒಟ್ಟು ೧೯೫೬೯ ಭಾಷೆಗಳನ್ನು ಮಾತೃಭಾಷೆಗಳೆಂದು ಮನ್ನಿಸುತ್ತದೆ. ಇದರಲ್ಲಿ ಸ್ವತಂತ್ರ ಭಾಷೆಗಳು ಸಂಖ್ಯೆ ಒಟ್ಟು ೧೨೧. ಸಂವಿಧಾನದ ೮ನೇ ಪರಿಚ್ಛೇದಕ್ಕೆ ಸೇರಿದ ಭಾಷೆಗಳ ಸಂಖ್ಯೆ ೨೨. ಈಗ ಸಂವಿಧಾನದ ಮನ್ನಣೆ ಪಡೆಯಲು ಕಾದು ಕುಳಿತಿರುವ ಸ್ವತಂತ್ರ ಭಾಷೆಗಳ ಸಂಖ್ಯೆ ಒಟ್ಟು ೯೯.

೮ನೇ ಪರಿಚ್ಛೇದಕ್ಕೆ ಸೇರಿರುವ ಭಾಷೆಗಳಲ್ಲಿ ಹಿಂದಿಯು ೫೨.೮೩.೪೭.೧೯೩ ಕೋಟಿ ಜನರನ್ನು ಹೊಂದಿದ್ದು (ಶೇಕಡಾ ೪೩.೬೩) ಪ್ರಥಮ ಸ್ಥಾನದಲ್ಲಿದೆ. ೪.೩೭೦೬೫೧೨ ಜನರನ್ನು ಹೊಂದಿರುವ (ಶೇಕಡಾ ೩.೬೧) ಕನ್ನಡವು ಈ ಪಟ್ಟಿಯಲ್ಲಿ ಒಂಬತ್ತನೇ ಸ್ಥಾನದಲ್ಲಿದೆ. ಬಂಗಾಲಿ (ಶೇಕಡಾ ೮.೦೩), ಮರಾಠಿ (ಶೇಕಡಾ ೬.೮೬), ತೆಲುಗು (ಶೇಕಡಾ ೬.೭೦), ತಮಿಳು (ಶೇಕಡಾ ೫.೭೦), ಗುಜರಾತೀ (ಶೇಕಡಾ ೪.೫೮) ಮತ್ತು ಉರ್ದು (ಶೇಕಡಾ ೪.೧೯) ಭಾಷೆಗಳು ಸಂಖ್ಯಾ ದೃಷ್ಟಿಯಿಂದ ಕನ್ನಡಕ್ಕಿಂತ ಮೇಲಿವೆ. ಸಂಸ್ಕೃತವನ್ನು ಮಾತೃಭಾಷೆಯೆಂದು ದಾಖಲಿಸಿದವರ ಸಂಖ್ಯೆ ಒಟ್ಟು ೨೪೮೨೧ ಮಾತ್ರ. ಕರ್ನಾಟಕದ ಒಟ್ಟು ಜನಸಂಖ್ಯೆ ೬.೧೦.೯೫.೨೯೭ ಆಗಿದ್ದು ಇವರಲ್ಲಿ ಶೇಕಡಾ ೬೬.೪೬ರಷ್ಟು ಜನರು (೪೩೭೦೬೫೧೨) ತಮ್ಮ ಮಾತೃಭಾಷೆಯನ್ನು ಕನ್ನಡವೆಂದು ಅಂಗೀಕರಿಸಿಕೊಂಡಿದ್ದಾರೆ. ಉಳಿದ ೨೧೫೪೮೮೫೪ (ಶೇಕಡಾ ೩.೫೨) ಜನರು ಕರ್ನಾಟಕದಲ್ಲಿರುವ ಬೇರೆ ಭಾಷೆಯವರಾಗಿದ್ದಾರೆ. ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಒಂದು ನಿರ್ದಿಷ್ಟ ಭಾಷೆಯನ್ನು ಆಡುವವರ ಸಂಖ್ಯೆಯಲ್ಲಿ ಕಂಡುಬರುವ ಏರಿಳಿತಗಳು. ೧೯೭೧ ರಿಂದ ೨೦೧೧ರ ಅಂಕಿ ಅಂಶಗಳನ್ನು ಗಮನಿಸಿದರೆ, ಕನ್ನಡ ಮಾತಾಡುವವರ ಸಂಖ್ಯೆಯಲ್ಲಿ ಅತ್ಯಂತ ಕಡಿಮೆ ಎಂದರೆ ಸರಾಸರಿ ಶೇಕಡಾ ೩.೭೫ ಮಾತ್ರ ಏರಿಕೆ ಆಗಿದೆ. ಇದು ಹಿಂದಿಯಲ್ಲಿ ಸರಾಸರಿ ಶೇಕಡಾ ೪೨ ಆಗಿದ್ದರೆ ತಮಿಳಿನಲ್ಲಿ ಶೇಕಡಾ ೬ ಆಗಿದೆ. ಈ ವಿಷಯದಲ್ಲಿ ತುಳುವರು ಕನ್ನಡಕ್ಕಿಂತ ಮುಂದಿದ್ದು ಶೇಕಡಾ ೯ ಏರಿಕೆ ತೋರಿಸಿದ್ದಾರೆ. ಜನಗಣತಿಯ ಪ್ರಕಾರ ಒಟ್ಟು ತುಳುವರ ಸಂಖ್ಯೆ ೧೮.೪೬.೪೨೭ ಮಾತ್ರ. ಅರೆಭಾಷೆಯನ್ನು ಆಡುವವರ ಒಟ್ಟು ಸಂಖ್ಯೆ ಎಷ್ಟು? ಕಳೆದ ೨೦-೩೦ ವರ್ಷಗಳಲ್ಲಿ ಈ ಭಾಷೆಯನ್ನಾಡುವವರ ಸಂಖ್ಯೆಯಲ್ಲಿ ಎಷ್ಟು ಏರಿಕೆ ಆಗಿದೆ? ಇದು ಸರಕಾರದ ಜನಗಣತಿಯಲ್ಲಿ ಸಿಗುತ್ತಿಲ್ಲ. ನಾವೇ ಮಾಡಿಕೊಳ್ಳಬೇಕಾದ ಕೆಲಸ. ಅಂಕಿ ಅಂಶಗಳು ಸಿಗದಿದ್ದರೆ ಭಾಷೆಯ ಅಭಿವೃದ್ಧಿಯ ಬಗೆಗೆ ಯೋಜನೆಗಳನ್ನು ರೂಪಿಸುವುದು ಕಷ್ಟ.

ಅರೆಭಾಷೆಯ ಸ್ಥೂಲ ಮತ್ತು ಅನನ್ಯತೆ:

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ವಿಟ್ಲ ಮತ್ತು ಬೆಳ್ತಂಗಡಿ ಪರಿಸರದಲ್ಲಿ ಹಾಗೂ ಕೊಡಗಿನ ಭಾಗಮಂಡಲ ಪರಿಸರದಲ್ಲಿ ಪ್ರಚಲಿತದಲ್ಲಿರುವ ಅರೆಭಾಷೆಯು ಕನ್ನಡದ ಒಂದು ಸಾಮಾಜಿಕ ಉಪಭಾಷೆಯೆಂದು ಇದುವರೆಗೆ ಹೇಳುತ್ತಾ ಬರಲಾಗಿದೆ (ಕುಶಾಲಪ್ಪ ಗೌಡ ೧೯೭೦). ಒಂದು ನಿರ್ದಿಷ್ಟ ಪ್ರದೇಶಕ್ಕೆ ಈ ಭಾಷೆಯು ಒಳಪಟ್ಟುದರಿಂದ ಇದನ್ನು ಪ್ರಾದೇಶಿಕ ಉಪಭಾಷೆ ಎಂದರೂ ನಡೆಯುತ್ತದೆ. ಈ ಭಾಷೆಯಲ್ಲಿ ಇಂದಿಗೂ ಕಾಣಸಿಗುವ ಕೆಲವು ವಿಶಿಷ್ಟ ಪದಗಳು ಮತ್ತು ಉಚ್ಚಾರಣೆಯು ಸುಮಾರು ೧೫೦೦ ವರ್ಷಗಳಿಗಿಂತ ಹೆಚ್ಚು ಪ್ರಾಚೀನವಾದವು. ಕೆಲವು ಸ್ವರಗಳು ಮತ್ತು ವ್ಯಂಜನಗಳು ಪುನಾರಚಿತ ದ್ರಾವಿಡ ಭಾಷೆಯಲ್ಲಿದ್ದಂತೆಯೇ ಭಾಸವಾಗುತ್ತದೆ.

ಹೀಗೆ ಪ್ರಾಚೀನ ಭಾಷೆಯ ಗುಣಗಳನ್ನು ಹೊಂದಿರುವ ಅರೆಭಾಷೆಯು ಈಗ ನಾವು ಮಾತಾಡುವ ರೂಪದಲ್ಲಿ ಕಾಣಿಸಿಕೊಂಡು ಹಚ್ಚೆಂದರೆ ಐದು ಶತಮಾನಗಳು ಕಳೆದಿರಬೇಕು ಅಷ್ಟೆ. ಏಕೆಂದರೆ ಅರೆಭಾಷೆಯನ್ನು ಪ್ರಧಾನವಾಗಿ ಮಾತಾಡುವ ಗೌಡ ಸಮುದಾಯದ ಜನರು ಸುಳ್ಯ, ಬೆಳ್ತಂಗಡಿ, ಪುತ್ತೂರು, ಬೆಳ್ತಂಗಡಿ ಪರಿಸರದ ಮೂಲ ನಿವಾಸಿಗಳೇನೂ ಅಲ್ಲ. ಅವರು ಈಗಿನ ಹಾಸನ ಪರಿಸರದಲ್ಲಿರುವ ಕೆಂಚಮ್ಮನ ಹೊಸಕೋಟೆ ಮತ್ತು ಐಗೂರು ಪರಿಸರದಿಂದ ಕರಾವಳಿಯ ಕಡೆಗೆ ವಲಸೆ ಬಂದಿದ್ದಾರೆ. ಹಾಸನ ಜಿಲ್ಲೆಯ ಸಕಲೇಶಪುರ, ಮಂಜರಾಬಾದ್, ಹಾನುಬಾಳು, ಗೊರೂರು, ಹೊಸಕೋಟೆ, ಕುಮಾರಹಳ್ಳಿ, ದೇವರಬೆಟ್ಟ, ಎಡಕುಮೇರಿ, ಹೆತ್ತೂರು, ಹಾಳ್ಯ, ಆಲೂರು, ಕುಂದೂರು, ಎಸಳೂರು ಮೊದಲಾದ ಪ್ರದೇಶಗಳೇ ಸುಳ್ಯ ಪರಿಸರದ ಗೌಡರಿಗೆ ಮೂಲಸ್ಥಾನ. ಅಲ್ಲಿಂದ ವಲಸೆ ಬಂದಾಗ ಇವರೆಲ್ಲ ಅಲ್ಲಿನ ದೈವಗಳಾದ ಐಗೂರು ಮುನಿ ಸ್ವಾಮಿ, ಕಾಲಭೈರವ, ಸಬ್ಬಮ್ಮ, ಕೆಂಚಮ್ಮ ಮೊದಲಾದ ದೈವಗಳನ್ನು ತಮ್ಮೊಂದಿಗೇ ಕರೆತಂದಿದ್ದಾರೆ. ಆ ಪ್ರದೇಶದಿಂದ ಸುಳ್ಯ ಕಡೆಗೆ ಯಾಕೆ ಗೌಡರು ವಲಸೆ ಬಂದರು ಎಂಬುದರ ವಿವರ ಈ ಲೇಖನದ ಉದ್ದೇಶಕ್ಕೆ ಹೊರತಾದುದು. ಈ ವಲಸೆಯ ಕಾಲಘಟ್ಟವನ್ನು ನಿರ್ದಿಷ್ಟವಾಗಿ ಹೇಳುವುದೂ ಕಷ್ಟ. ಆದರೂ ಈ ವಲಸೆಯ ಕಾಲಘಟ್ಟವನ್ನು ಪರಿಶೀಲಿಸುವುದು ಅರೆಭಾಷೆಯ ಚರಿತ್ರೆಯನ್ನು ಬರೆಯಲು ಅನುಕೂಲವಾಗುತ್ತದೆ.

ಸುಳ್ಯ ಪರಿಸರದಲ್ಲಿದ್ದ ಗೌಡರ ಬಗ್ಗೆ ಅತ್ಯಂತ ಪ್ರಾಚೀನ ಉಲ್ಲೇಖ ನೀಡುವ ಲಿಖಿತ ಆಧಾರವೆಂದರೆ ಕ್ರಿ.ಶ. ೧೬೮೫ರ ಸುಬ್ರಹ್ಮಣ್ಯದ ಶಾಸನ. ಈ ಶಾಸನದಲ್ಲಿ ಬರುವ 'ಗಾವುಂಡು' ಪದ ಸ್ಥಾನ ಸೂಚಕವಾಗಿರದೆ ಸ್ಪಷ್ಟವಾಗಿ ಜಾತಿ ಸೂಚಕವಾಗಿದ್ದು, ಕೂಜುಗೋಡು ಕಟ್ಟೆಮನೆಯವರನ್ನು ಕುರಿತಾಗಿದೆ. ಕ್ರಿ.ಶ ೧೬೬೯ರ ಸುಬ್ರಹ್ಮಣ್ಯದ ಶಾಸನದ ಪ್ರಕಾರ ಐಗೂರು ಸೀಮೆಯ ಪ್ರಮುಖ ಸ್ಥಳಗಳು ಕುಕ್ಕೆ ದೇವಳಕ್ಕೆ ಉಂಬಳಿಯಾಗಿ ದೊರಕಿದ್ದುವು. ಈ ಕಾರಣದಿಂದ ಐಗೂರು ಪ್ರಾಂತ್ಯದ ಜನರು ಬಿಸಿಲೆ ಘಟ್ಟವನ್ನಿಳಿದು ಸುಬ್ರಹ್ಮಣ್ಯಕ್ಕೆ ಬಂದು ಹರಿಕೆ ಒಪ್ಪಿಸಲೇ ಬೇಕಾಗಿತ್ತು. ಈ ಧಾರ್ಮಿಕ ಪ್ರೇರಣೆ ಕೂಡಾ ವಲಸೆಗೆ ಕಾರಣವಾಗಿದ್ದಿರಬಹುದು. ಶಿರಾಡಿ ಭೂತದ ಪಾಡ್ದನದ ಪ್ರಕಾರ ಆ ಭೂತವು ಘಟ್ಟದಿಂದ ಇಳಿದು ಬಂಗಾಡಿ ಸೀಮೆಗೆ ಬಂದಿದೆ. ಅಲ್ಲಿ ಕಾರ್ಣಿಕ ತೋರಿಸಿ, ಗುಡಿಕಟ್ಟಿಸಿಕೊಂಡು, ದೈವ ಅಂತ ಹೇಳಿಸಿಕೊಂಡು, ಕಡಬ ಮಾರ್ಗವಾಗಿ ಪಂಜ ಸಾವಿರ ಸೀಮೆಗೆ ಬಂದಿದೆ. ಪಂಜ ಸೀಮೆಯಿಂದ ಮತ್ತೆ ಸುಳ್ಯಕ್ಕೆ ದಾಟಿದೆ. ಭೂತ-ಚಲಿಸಿದ ಈ ದಾರಿಯು ಗೌಡರು ಪಸರಿಸಿದ್ದಕ್ಕೆ ದಿಕ್ಸೂಚಿಯಂತಿದೆ. ಐಗೂರು ಸೀಮೆಯಿಂದ ಬಂಗಾಡಿ ಸೀಮೆಗೆ ಬಂದ ಗೌಡರು ನಿಧಾನವಾಗಿ ಕಡಬ ಪರಿಸರಕ್ಕೆ ಒತ್ತರಿಸಿಕೊಂಡಿರಬಹುದು. ಆದರೆ ಏನೆಕಲ್ಲಿನಲ್ಲಿ ವಿಶೇಷ ಆರಾಧನೆಗೆ ಒಳಪಡುವ ಬಚ್ಚನಾಯ್ಕನ ಪಾಡ್ದನದಲ್ಲಿರುವ ಪ್ರಕಾರ, ಆ ಭೂತವು ಕಾಗನೂರಿನಿಂದ ಬಿಸಿಲೆ ಘಟ್ಟ ಇಳಿದು ಸುಬ್ರಹ್ಮಣ್ಯಕ್ಕೆ ಬಂದಿದೆ. ಐಗೂರು ಸೀಮೆಯ 'ಒಣಗೂರು' ಎಂಬ ಚಿಕ್ಕ ಊರಿನಲ್ಲಿರುವ 'ಸಬ್ಬಮ್ಮ' ದೇವರಿಗೆ ಸುಳ್ಯ ಪರಿಸರದಿಂದ ಹರಿಕೆ ಸಂದಾಯವಾಗುತ್ತದೆ. ಗೌಡರು ತಮ್ಮ ಮದುವೆಯಲ್ಲಿ ಒಣಗೂರು ಸಬ್ಬಮ್ಮನಿಗೆಂದು ನಾಲ್ಕಾಣೆ ದುಡ್ಡು ಕಟ್ಟುತ್ತಾರೆ. ಕಟ್ಟೆಮನೆಯವರು ಈ ಹಣವನ್ನು ಸಂಗ್ರಹಿಸಿ ಒಣಗೂರಿಗೆ ಕಳುಹಿಸುತ್ತಾರೆ. ಮದುವೆಯಲ್ಲಿ ಈ ಹರಿಕೆ ಹಣವನ್ನು ಕಟ್ಟುವಾಗ ಹೇಳುವ ಹಾಡು ಇಲ್ಲಿ ಗಮನಾರ್ಹ. ಆ ಹಾಡಿನಲ್ಲಿ ಘಟ್ಟದಲ್ಲಿ ಹುಟ್ಟಿ ಬೆಳೆದ ಹೆಣ್ಣುಬಳು ತುಳುನಾಡಿಗೆ ಬಂದದ್ದರ ಬಗ್ಗೆ ಮಾಹಿತಿಯಿದೆ. ಸುಳ್ಯ ಪರಿಸರದ ಸೋಣಂಗೇರಿ, ನಿಡುಬೆ ಮತ್ತು ಕೂತ್ಕುಂಜಗಳಲ್ಲಿ ಸಣ್ಣ ಪ್ರಮಾಣದಲ್ಲಿ ಸಬ್ಬಮ್ಮ ದೇವರಿಗೆ ಪೂಜೆ ನಡೆಯುತ್ತದೆ. ಶೃಂಗೇರಿಗೆ ಸುಳ್ಯ ಕಡೆಯಿಂದ ಗೌಡರು ಬರೆದಿರುವ ಕಡತಗಳಲ್ಲಿ ಕಾಣಸಿಗುವ ಹೆಸರುಗಳಾದ ತಿಮ್ಮೇ ಗೌಡ, ಪುಟ್ಟೇಗೌಡ, ಅಮ್ಮತಾಯಿ, ಕುಂಞಕ್ಕ, ಕುಂಬೆತ್ತಿ, ಚಿನ್ನೇಗೌಡ, ದೇವಪ್ಪ, ಸುಬ್ಬೇಗೌಡ, ಕಾಳಮ್ಮ, ಸುಬ್ಬಮ್ಮ, ಅಂಮಣ ಗೌಡ, ಈರೇ ಗೌಡ, ಬಿದ್ದಣ ಗೌಡ ಮೊದಲಾದವು ಐಗೂರು ಸೀಮೆಯ ಹೆಸರುಗಳು ಕೂಡಾ ಹೌದು.

ಇವುಗಳೆಲ್ಲವನ್ನು ಗಮನಿಸಿದರೆ ನಾವು ಈ ಕೆಳಗಿನ ತೀರ್ಮಾನಗಳಿಗೆ ಬರಬಹುದು–

೧. ಕ್ರಿ.ಶ. ೧೩೫೦ಕ್ಕೂ ಹಿಂದೆ ಐಗೂರು ಸೀಮೆಯಿಂದ ಸುಳ್ಯ ಪರಿಸರಕ್ಕೆ ಗೌಡರು ವಲಸೆ ಬಂದಿರಬಹುದು. ಹೊಸಕೋಟೆ ಕೆಂಚಮ್ಮನ ಆರಾಧನೆ ಇದಕ್ಕೆ ಬಲವಾದ ಸಾಕ್ಷಿ.
೨. ಕ್ರಿ.ಶ. ೧೬೬೦ರ ರಿಂದ ಐಗೂರು ಸೀಮೆಯು ಸುಬ್ರಹ್ಮಣ್ಯ ದೇವಸ್ಥಾನದ ಧಾರ್ಮಿಕ ಹಿಡಿತಕ್ಕೆ ಸಿಕ್ಕಿತು. ಅದೇ ಸಮಯದಲ್ಲಿ ಐಗೂರಿನಲ್ಲಿ ಒಕ್ಕಲಿಗರಿಗೆ ಉಪಟಳ ನೀಡಲಾಗುತ್ತಿತ್ತು. ಜೊತೆಗೆ ಸುಳ್ಯ ಪರಿಸರ ಮತ್ತು

ಐಗೂರು ಪರಿಸರಗಳು ವಿಜಯನಗರದ ಆಳ್ವಿಕೆಯ ಅಂಕಿತಕ್ಕೆ ಒಳಪಟ್ಟಿದ್ದವು. ಇದು ವಲಸೆಯನ್ನು ಹೆಚ್ಚು ಮಾಡಿರಬೇಕು.

೩. ಕ್ರಿ.ಶ. ೧೬೮೦ಕ್ಕಾಗುವಾಗ ಸುಬ್ರಹ್ಮಣ್ಯ ಪರಿಸರದಲ್ಲಿ ಸಾಕಷ್ಟು ಸಂಖ್ಯೆಯ ಗೌಡರಿದ್ದರು. ಇದಕ್ಕೆ ಸುಬ್ರಹ್ಮಣ್ಯ ಶಾಸನವೇ ಸಾಕ್ಷಿ.

೪. ಅನೇಕ ಭೂತಗಳ ಪಾಡ್ದನಗಳ ಪ್ರಕಾರ ಅವೆಲ್ಲ ಘಟ್ಟ ಇಳಿದು ಸುಳ್ಯ ಪರಿಸರಕ್ಕೆ ಬಂದಿವೆ. ಬಚ್ಚನಾಯ್ಕ ಮತ್ತು ಶಿರಾಡಿ ಭೂತದ ಪಾಡ್ದನಗಳು ಸ್ಪಷ್ಟ ಉದಾಹರಣೆಗಳಾಗಿವೆ.

ಈ ಕಾರಣಗಳಿಂದ ಕ್ರಿ.ಶ. ಸು. ೧೪೫೦ ಮತ್ತು ೧೬೦೦ರ ನಡುವಿನ ಅವಧಿಯಲ್ಲಿ ಈ ವಲಸೆ ಕಾರ್ಯಕ್ರಮ ನಡೆದಿದೆಯೆಂದು ಹೇಳಬಹುದು. ೧೬ನೇ ಶತಮಾನದ್ದೆನ್ನಲಾದ 'ಕೋಟಿ ಚೆನ್ನಯ' ಪಾಡ್ದನದ ಕಥೆಯು ಪಂಜ ಪರಿಸರದಲ್ಲಿ ನಡೆದಿದ್ದರೂ ಅದರಲ್ಲಿ ಯಾವುದೇ ಗೌಡರ ಉಲ್ಲೇಖವಿಲ್ಲ. ಆ ಕಾಲದಲ್ಲಿ ಗೌಡರು ಇನ್ನೂ ಪ್ರಭಾವಶಾಲಿಗಳಾಗಿ ಬೆಳೆಯದಿದ್ದುದೇ ಇದಕ್ಕೆ ಕಾರಣವಿರಬಹುದು. ಇದು ಹೌದಾದರೆ ಅರೆಭಾಷೆಯ ಚರಿತ್ರೆಯನ್ನು ಏನು ಮಾಡಿದರೂ ಕ್ರಿ.ಶ ೧೫೦೦ಕ್ಕಿಂತ ಹಿಂದೆ ಕೊಂಡೊಯ್ಯಲು ಸಾಧ್ಯವಾಗುವುದಿಲ್ಲ.

ಅರೆಭಾಷೆಯ ಸ್ಥೂಲ ಪರಿಚಯ:

ಪ್ರಸ್ತುತ ಲೇಖನದ ಆರಂಭದಲ್ಲಿ ಹೇಳಿದಂತೆ, ಅರೆಭಾಷೆಯಲ್ಲಿ ಅತೀ ಪ್ರಾಚೀನ ಪದಗಳಿವೆ. ಅದರ ಧ್ವನಿಮಾ ವಿನ್ಯಾಸ ಕನ್ನಡಕ್ಕಿಂತ ಭಿನ್ನವಾಗಿದೆ. ಇದರ ಆಖ್ಯಾತ ವಿಭಕ್ತಿಗಳ ಪ್ರಸರಣವನ್ನು ಗಮನಿಸಿಕೊಂಡು, ಅರೆಭಾಷೆಯು ಉತ್ತರ ದ್ರಾವಿಡ ಭಾಷಾ ಗುಂಪಿಗೆ ಸೇರಿದ, ಸುಮಾರು ೨೨ ಲಕ್ಷ ಮಾತಾಡುತ್ತಿರುವ, ಬಲೂಚಿಸ್ಥಾನದ ಬ್ರಾಹೂಯಿಯ ಅನಂತರದ ಸ್ಥಾನವನ್ನು ಪಡೆಯುತ್ತದೆಂದು ಖ್ಯಾತ ವಿದ್ವಾಂಸ ಎಸ್. ವಿ. ಷಣ್ಮುಗಂ ಅವರು ಅಭಿಪ್ರಾಯಪಟ್ಟಿದ್ದಾರೆ.

ಅದೇನೇ ಇದ್ದರೂ ಈ ಭಾಷೆಯು ಧ್ವನಿ, ವ್ಯಾಕರಣ, ಪದಕೋಶ ಮುಂತಾದ ನೆಲೆಗಳಲ್ಲಿ ತನ್ನದೇ ಆದ ಕೆಲವು ವೈಶಿಷ್ಟ್ಯಗಳನ್ನು ತೋರಿಸುತ್ತಿರುವುದು ಮಹತ್ವದ ವಿಚಾರವಾಗಿದೆ. ಈ ನಿಟ್ಟಿನಲ್ಲಿ ಪ್ರೊ. ಕುಶಾಲಪ್ಪ ಗೌಡರು (೧೯೭೦) ಮಾಡಿದ ಕೆಲಸವು ಅಸಾಮಾನ್ಯವಾದುದು. ೧೪ ಸ್ವರಗಳು ಮತ್ತು ೨೨ ವ್ಯಂಜನಗಳನ್ನು ಧ್ವನಿಮಾಗಳೆಂದು ನಿರ್ಧರಿಸಿರುವ ಅವರು ಶಿಷ್ಟ ಕನ್ನಡದಲ್ಲಿಲ್ಲದ ಆದರೆ ಅರೆಭಾಷೆಯಲ್ಲಿ ಮಾತ್ರ ಕಾಣಸಿಗುವ–

೧. ಮಧ್ಯೋನ್ನತ (ಉದಾ: ಅಡ್‌ಕೆ, ಅಗ್‌ಟೆ, ಚಗ್‌ಟೆ, ಅವ್‌ಕೆ ಇತ್ಯಾದಿ)

೨. ಮಧ್ಯ ಮಧ್ಯ (ಉದಾ: ಕ್‌ಯಿ, ನ್‌ಡಿ, ಗ್‌ಂಡ್ಕ್‌ಮ್ಮು ಇತ್ಯಾದಿ)

೩. ಪೂರ್ವ ನಿಮ್ನ (ಉದಾ: ಎಮ್ಮೆ, ತಂಗೆ, ಬಾವೆ, ಹೆಬಲ ಇತ್ಯಾದಿ)

೪. ಪಶ್ಚ ನಿಮ್ನ (ಉದಾ: ಒಳೊ, ಕೋಟೆ, ನೋಡೊಮೊ ಇತ್ಯಾದಿ)

ಸ್ವರಗಳನ್ನು ಗುರುತಿಸಿದ್ದಾರೆ. ಮಧ್ಯೋನ್ನತ, ಮಧ್ಯ ಮಧ್ಯ, ಪೂರ್ವ ನಿಮ್ನ, ಪಶ್ಚ ನಿಮ್ನಗಳಿಗೆ ಅರೆಭಾಷೆಯಲ್ಲಿ ದೀರ್ಘ ರೂಪಗಳಿಲ್ಲ.

ವ್ಯಂಜನಗಳಲ್ಲಿ ಙ ಮತ್ತು ಞಗಳು ಅರೆಭಾಷೆಯಲ್ಲಿ ಧ್ವನಿಮಾಗಳಾಗಿಯೇ ಉಳಿದಿರುವುದೊಂದು ವಿಶೇಷವೇ ಸರಿ. ಮಙ, ಕುಞ, ಇತ್ಯಾದಿ. ಇದಕ್ಕೂ ಮಿಗಿಲಾಗಿ ಇವಕ್ಕೆ ದ್ವಿತ್ವ ರೂಪವೂ ಇದೆ. ಉದಾ: ಮಙ್ಙಣೆ, ಹಞ್ಞ ಇತ್ಯಾದಿ. ವ್ಯಂಜನಗಳಲ್ಲಿ ಇವತ್ತಿಗೂ ಅನುನಾಸಿಕಗಳು ಉಳಿದುಕೊಂಡಿವೆ. ಉದಾ: ತಾಙ್ಗ್, ಬೇಙ್ಕ, ನೂಞ್ಞ, ಮೂಞ್ಞ ಇತ್ಯಾದಿ.

ವ್ಯಾಕರಣ ರಚನೆಯನ್ನು ಗಮನಿಸಿದರೆ, ಪ್ರಥಮ ಪುರುಷ ಸರ್ವನಾಮದಲ್ಲಿ ಪುಲ್ಲಿಂಗ ಮತ್ತು ನಪುಂಸಕ ಲಿಂಗ, ಎಂಬ ಎರಡು ವ್ಯತ್ಯಾಸ ಮಾತ್ರ ಕಂಡುಬರುತ್ತದೆ. ಸ್ತ್ರೀ ಲಿಂಗಕ್ಕೆ ಪ್ರತ್ಯೇಕ ರೂಪ ಇಲ್ಲ. ಬಹುವಚನದಲ್ಲಿ ಪುಲ್ಲಿಂಗ ಮತ್ತು ನಪುಂಸಕ ಲಿಂಗಕ್ಕೆ ವ್ಯತ್ಯಾಸ ಇಲ್ಲ.

ಕ್ರಿಯಾಪದಗಳಲ್ಲಿ ವಿಶೇಷವಾಗಿ ಅರೆಭಾಷೆಯು ಮೂರು ಕಾಲಕ್ಕೂ ಪ್ರತ್ಯೇಕ ರೂಪಗಳನ್ನು ಹೊಂದಿರುವುದು ನಿಜಕ್ಕೂ ಅಚ್ಚರಿಯ ವಿಷಯವಾಗಿದೆ. (ಏಕೆಂದರೆ ಹಳೆಗನ್ನಡದಲ್ಲಿ ಎರಡೇ ಕಾಲವನ್ನು ಸೂಚಿಸುವ

ಕ್ರಿಯಾಪದಗಳಿವೆ). ಪೂರ್ಣ ಕ್ರಿಯಾಪದಗಳಲ್ಲಿ ವರ್ತಮಾನದ ರೂಪವೇ ಭವಿಷ್ಯತ್ತಿನ ಅರ್ಥದಲ್ಲಿ ಬಳಕೆಯಾಗುತ್ತದೆ.

ಉತ್ತಮ ಪುರುಷ:

ಏಕವಚನ ಬಹುವಚನ		
ಭೂತಕಾಲ	ಬಂದೆ	ಬಂದೊ
ವರ್ತಮಾನಕಾಲ	ಬನ್ನೆ	ಬಂದವೆ
ಭವಿಷ್ಯತ್‌ಕಾಲ	ಬಾವೆ	ಬಾವೊ

ಮಧ್ಯಮ ಪುರುಷ:

ಏಕವಚನ	**ಬಹುವಚನ**
ಭೂತಕಾಲ	ಬಂದೆ, ಬಂದ, ಬಂದರಿ
ವರ್ತಮಾನಕಾಲ	ಬಂದ, ಬಂದಿಯ, ಬಂದರೆ
ಭವಿಷ್ಯತ್‌ಕಾಲ	ಬಾವ, ಬಾವೆರಿ

ಪ್ರಥಮ ಪುರುಷ:

ಏಕವಚನ	**ಬಹುವಚನ**
ಭೂತಕಾಲ	ಬಾತ್ ಬಂದೋ
ವರ್ತಮಾನಕಾಲ	ಬಂದದೆ ಬಂದವೆ
ಭವಿಷ್ಯತ್‌ಕಾಲ	ಬಾದು ಬಾವೊ

ಅರೆಭಾಷೆ ಈ ಅಪೂರ್ವ ಗುಣಗಳ ಬಗ್ಗೆ ಇನ್ನಷ್ಟು ಅಧ್ಯಯನ ನಡೆಯಬೇಕಾಗಿದೆ.

ಅರೆಭಾಷೆಯ ಸಬಲೀಕರಣದತ್ತ:

ಇತ್ತೀಚಿನ ದಿನಗಳಲ್ಲಿ ಅರೆಭಾಷೆಯ ಕುರಿತು ಒಂದು ಬಗೆಯ ಎಚ್ಚರ ಮೂಡುತ್ತಿದೆ. ಕರ್ನಾಟಕದ ಅನೇಕ ಭಾಷೆಗಳಿಗೆ ದೊರಕದ ಅಕಾಡೆಮಿಯು ಅರೆಭಾಷೆಗೆ ದೊರಕಿದೆ. ಇದರ ಪೂರ್ಣ ಪ್ರಯೋಜನ ಅರೆಭಾಷೆಗೆ ಆಗಬೇಕು. ಈ ಹಿನ್ನೆಲೆಯಲ್ಲಿ ಮುಂದಿನ ಕೆಲವು ಸಲಹೆಗಳನ್ನು ನೀಡಲಾಗಿದೆ.

೧. ಬಹಳ ವರ್ಷಗಳ ಕಾಲ ಅಣ್ಣಾಮಲೈಯಲ್ಲಿ ಇದ್ದು, ಮದ್ರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆಸಲ್ಲಿಸಿ ನಿವೃತ್ತರಾದ ಪ್ರೊ. ಕೋಡಿ ಕುಶಾಲಪ್ಪ ಗೌಡರು ಇಂಗ್ಲೀಷಿನಲ್ಲಿ ಬರೆದ 'ಗೌಡ ಕನ್ನಡ' ಕೃತಿಯು ಅರೆಭಾಷೆಗೋ ಕನ್ನಡಕ್ಕೋ ಅನುವಾದವಾಗಬೇಕು. ಅದು ಅರೆಭಾಷೆಯ ಬಗೆಗಿನ ನಮ್ಮ ಅರಿವಿನ ವಲಯಗಳನ್ನು ಗಮನಾರ್ಹವಾಗಿ ವಿಸ್ತರಿಸುತ್ತದೆ.

೨. ಅರೆಭಾಷೆಯ ಜನಗಣತಿಯನ್ನು ಪ್ರತಿ ಐದು ವರ್ಷಗಳಿಗೊಮ್ಮೆ ನಡೆಸಬೇಕು. ಪ್ರೊ. ಕುಶಾಲಪ್ಪ ಗೌಡರು ೧೯೭೦ ರಲ್ಲಿ ಅರೆಭಾಷಿಕರ ಸಂಖ್ಯೆಯು ಸುಮಾರು ೬೦ ಸಾವಿರದಷ್ಟಿದೆ ಎಂದು ಹೇಳಿದ್ದಾರೆ. ಈಗ ಅವರ ಸಂಖ್ಯೆ ಎಷ್ಟು? ಭಾಷೆಯ ಬಳಕೆದಾರರ ಶೇಕಡಾವಾರು ತಿಳುವಳಿಕೆಯು ಭಾಷೆಯೊಂದರ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸುವಲ್ಲಿ ಬಹಳ ಸಹಕಾರಿಯಾಗುತ್ತದೆ.

೩. ಭಾಷೆಯೊಂದನ್ನು ಜಾತಿಗೆ ಸೀಮಿತವಾಗಿರಿಸುವುದರಿಂದ ಹೆಚ್ಚು ಪ್ರಯೋಜನ ಆಗದು. ೧೯೭೧ರ ಜನಗಣತಿಯಲ್ಲಿ ೩೭.೮೬.೮೯೯ ಜನ ಸಂತಾಲೀ ಭಾಷೆಯನ್ನಾಡುತ್ತಿದ್ದರು. ೨೦೦೧ಕ್ಕೆ ಈ ಸಂಖ್ಯೆಯು ೬೪.೬೯.೬೦೦ಕ್ಕೆ ಏರಿ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸ್ಥಾನ ಪಡಕೊಂಡಿತು. ೨೦೧೧ರ ಜನಗಣತಿಯ ಪ್ರಕಾರ ಸಂತಾಲೀ ಭಾಷೆಯನ್ನಾಡುವವರ ಸಂಖ್ಯೆಯು ೭೩.೬೮.೧೯೨ಕ್ಕೆ ಏರಿದೆ. ಇದು ಭಾಷೆಯ ಬೆಳವಣಿಗೆಯಲ್ಲಿ ಶೇಕಡಾ ೧೦೦ರ ಪ್ರಗತಿಯನ್ನು ತೋರಿಸುತ್ತದೆ. ಈ ಅವಧಿಯಲ್ಲಿ ಸಂತಾಲೀ ಬುಡಕಟ್ಟಿನ ಜನರ ಸಂಖ್ಯೆಯಲ್ಲಿ ಕೇವಲ ಶೇಕಡಾ ಒಂದರ ಬೆಳವಣಿಗೆ ಆಗಿದೆ. ಇದರ ಅರ್ಥ ಏನೆಂದರೆ, ಸಂತಾಲೀ ಬುಡಕಟ್ಟಿನ ಭಾಷೆಯು ತನ್ನ ಸಮುದಾಯಕ್ಕೆ ಸೀಮಿತವಾಗದೆ, ವಿಸ್ತಾರವಾಗಿ ಬೆಳೆದಿರುವುದು. ಅರೆಭಾಷೆಯು ಕೂಡಾ ತನ್ನ ಜಾತಿಯ ಗಡಿ ರೇಖೆಗಳನ್ನು ಮೀರಿ ಬೆಳೆದಾಗ ಮಾತ್ರ ಅದು ವೇಗವಾಗಿ ಬೆಳೆಯುತ್ತದೆ.

೨. ಹವ್ಯಕ ಭಾಷೆಯ ಕುರಿತು ಪ್ರೊ. ಎಂ. ಮರಿಯಪ್ಪ ಭಟ್. ಪ್ರೊ. ಡಿ. ಎನ್. ಶಂಕರ್ ಭಟ್. ಪ್ರೊ. ಚಂದ್ರಶೇಖರ ಭಟ್. ಹೆಲನ್-ಇ-ಉಲ್ರಿಚ್ ಮತ್ತು ಜೋಹಾನ್-ವಾನ್-ಡರ್ ಮೊದಲಾದವರು ಮಹತ್ವದ ವಿಚಾರಗಳನ್ನು ಈಗಾಗಲೇ ಮಂಡಿಸಿದ್ದಾರೆ. ಇದೇ ರೀತಿಯಲ್ಲಿ ಅರೆಭಾಷೆಯಲ್ಲಿ ಸಂಶೋಧನೆ ಮಾಡಬಯಸುವ ಸಂಶೋಧಕರಿಗೆ ಒಳ್ಳೆಯ ಶಿಷ್ಯವೇತನ ದೊರಕುವಂತಾಗಬೇಕು. ಅರೆಭಾಷೆಯ ಬಗ್ಗೆ ಅನ್ಯಭಾಷಿಕರು ಮಾಡುವ ಅಧ್ಯಯನಗಳಿಗೆ ವಿಶೇಷ ಮಹತ್ವ ಇರುತ್ತದೆ.

೩. ಅರೆಭಾಷೆಯ ಕೆಲವು ಅತ್ಯುತ್ತಮ ಪದಗಳು ಸುಳ್ಯ ಪರಿಸರದ ಸ್ಥಳನಾಮಗಳಲ್ಲಿ ಇನ್ನೂ ಉಳಿದುಕೊಂಡು ಬಂದಿರುವಂತಿವೆ. ಅಜ್ಜಾವರ. ಜಾಳಿಲ. ಜಾಕಿಲ. ಪನ್ನೆ. ಕಳ್ತಾರ್. ಬಳ್ಪ. ಕನ್ನರಪಾಡಿ. ಕಮಿಲ. ಗುತ್ತಿಗಾರು. ಆಲೆಟ್ಟಿ. ಪೂನಡ್ಕ. ಗೂನಡ್ಕ. ಚೆಂಬು. ಪೆರಾಜೆ. ಬೆಳ್ಳಾರೆ. ಜಾಲಿಲ. ಬಳ್ಳಕ್ಕ. ಐನೇಕಿದು. ಕಳಂಜ. ಪಂಜ. ಕೂತ್ಕುಂಜ. ಕೇನ್ಯ. ಕಕ್ಯಾನ. ಸಂಪಾಜೆ. ಮೊಗ್ರ. ಸಂಪ್ಯ. ಏನೆಕಲ್ಲು. ಮೊದಲಾದ ಪದಗಳು ಗಹನವಾದ ಅರ್ಥವನ್ನು ಹೊಂದಿವೆ. ಪ್ರಾಚೀನ ದ್ರಾವಿಡ ರೂಪಗಳನ್ನೂ ಅವು ಕಾಪಾಡಿಕೊಂಡು ಬಂದಿವೆ. ಈ ಹಿನ್ನೆಲೆಯಲ್ಲಿ ಸುಳ್ಯ ಪರಿಸರದ ಸ್ಥಳನಾಮಗಳ ವಿವರಣಾತ್ಮಕ ಸಾಂಸ್ಕೃತಿಕ ಪದಕೋಶವೊಂದು ತಯಾರಾಗಬೇಕು.

೪. ಅರೆಭಾಷೆಯಲ್ಲಿ ಹೆಚ್ಚು ಹೆಚ್ಚು ಸೃಜನಶೀಲ ಕೃತಿಗಳು ಬರಬೇಕು. ಪ್ರೊ. ಕುಶಾಲಪ್ಪ ಗೌಡರು ಬರೆದ ಅರೆಭಾಷೆಯ ಮಹಾಭಾರತವು ಈ ನಿಟ್ಟಿನಲ್ಲಿ ಮಾಡಿದ ಮಹಾಪ್ರಯತ್ನವಾಗಿದೆ. ತರುಣ ಗೆಳೆಯ ಲೋಕೇಶ್ ಊರುಬೈಲು ಅವರು ಸಾಮಾನ್ಯ ಜನರಲ್ಲಿ ಬಳಕೆಯಲ್ಲಿರುವ ಅರೆಭಾಷೆಯನ್ನು ಬಳಸಿ 'ಗುಬ್ಬಿ ಗೂಡು' ಕಾದಂಬರಿ ಬರೆದಿದ್ದಾರೆ. ಕರುಣಾಕರ ನಿಡಿಂಜಿಯವರು ಬರೆದ ನೀಲಿದಾರಿ ಕವನ ಸಂಕಲನದ ಹೀಗೊಂದುಟ್ಟು ಸತ್ಯ ಕವನವು ಮಂಗಳೂರು ವಿಶ್ವವಿದ್ಯಾಲಯದ ಪಠ್ಯ ಪುಸ್ತಕದಲ್ಲಿ ಸ್ಥಾನ ಪಡಕೊಂಡಿದೆ. ಇಂಥ ಮಹತ್ವದ ಕೆಲಸಗಳ ಜೊತೆಗೆ ಅರೆಭಾಷೆಗೆ ಬೇರೆ ಭಾಷೆಯ ಸೃಜನಶೀಲ ಕೃತಿಗಳು ಅನುವಾದಗೊಳ್ಳಬೇಕು. ಸುಳ್ಯದ ನೆಲದ ಕತೆಗಳಾದ ಬೆಟ್ಟದ ಜೀವ. ಸ್ವಾಮಿ ಅಪರಂಪರ. ಕಲ್ಯಾಣ ಸ್ವಾಮಿ ಮೊದಲಾದ ಕೃತಿಗಳು ಅರೆಭಾಷೆಗೆ ಸುಲಭವಾಗಿ ಸಲ್ಲುವ ಕೃತಿಗಳು. ಇಂಥ ಅನುವಾದಗಳು ಅರೆಭಾಷೆಯ ಸಂವೇದನೆಗಳನ್ನು ಇನ್ನಷ್ಟು ಸೂಕ್ಷ್ಮಗೊಳಿಸುತ್ತವೆ.

೫. ಅರೆಭಾಷೆಯನ್ನು ಇವತ್ತು ಸಾಂಸ್ಕೃತಿಕವಾಗಿ ಉಳಿಸಿಕೊಂಡು ಬರುತ್ತಿರುವ ಎರಡು ನಿರೂಪಣೆಗಳೆಂದರೆ ಕತೆಗಳು ಮತ್ತು ಸ್ಥಳನಾಮಗಳು. ಡಾ. ವಿಶ್ವನಾಥ ಬದಿಕಾನ ಅವರು ಅರೆಭಾಷೆಯ ಸುಮಾರು ೧೨೦ ಜನಪದ ಕತೆಗಳನ್ನು ಈಗಾಗಲೇ ಸಂಗ್ರಹಿಸಿದ್ದಾರೆ. ಅವುಗಳಲ್ಲಿ ೧೦೦ ಕತೆಗಳಿಗೆ ವರ್ಗ ಮತ್ತು ಆಶಯ ಕತೆಗಳಿಗೆ ೩೨೦ ಆಶಯಗಳನ್ನು ಗುರುತಿಸಿ 'ಗೌಡ ಕನ್ನಡದ ಜನಪದ ಕಥೆಗಳು – ವರ್ಗ ಮತ್ತು ಆಶಯ ಸೂಚಿ' ಎಂಬ ಸಂಶೋಧನ ಕೃತಿಯನ್ನು ಸಿದ್ಧಪಡಿಸಿ ಅವರು ಏಳು ಹೊಸ ಉಪವರ್ಗಗಳನ್ನು ಗುರುತಿಸಿ ಅರೆಭಾಷೆಯ ಕತೆಗಳಲ್ಲಿ ಜಾಣ ನರಿಯು ಜಾಣತನ ಮಾಡಲು ಹೋಗಿ ಕೊನೆಗೆ ತಾನೇ ಸತ್ತುಹೋಗುವ ರೀತಿಯು ಅರೆಭಾಷೆಯ ಅಜ್ಜಿಕತೆಗಳ ಅನನ್ಯತೆಯನ್ನು ಸಾರುತ್ತವೆ ಎಂದು ವಾದಿಸಿದ್ದಾರೆ.

ಅರೆಭಾಷೆಯ ಅಜ್ಜಿ ಕತೆಗಳಲ್ಲಿ ಎದ್ದು ಕಾಣುವ ವಿಶೇಷ ಗುಣಗಳೆಂದರೆ ಕತೆಗಳ ಒಡಲಲ್ಲಿರುವ ಕ್ರಿಯಾಶೀಲತೆ ಮತ್ತು ನಾಟಕೀಯತೆ. ಇವು ಕತೆಯ ಕೇಳುಗಾರನ್ನು ಸುಮ್ಮನೆ ನಿಷ್ಕ್ರಿಯವಾಗಿ ಕತೆ ಕೇಳಲು ಬಿಡವು. ಸಕ್ರಿಯರಾಗಿರಲು ಒತ್ತಾಯಿಸುತ್ತವೆ. ಉದಾಹರಣೆಗೆ ಈ ಕತೆಯ ನಿರೂಪಣೆ ಗಮನಿಸಿ–

'ಒಂದು ಮೊಲಕ್ಕೆ ಹುಟ್ ಕಾಡಾಲಿ ಮೇಲ್ ಮೇದ್ ಅದ್ಕೆ ಅಲ್ಲಿ ಎಲ್ಲಾ ಮುಗ್ತ್. ತಿಂಡಿ ತಿನಸ್. ಹುಲ್ಲು ಎಲ್ಲಾ. ಅಟೆಕರೆಗೆ ಹೊಕ್ಕು ಹೇಂಗೆ ಹೋದು? ಮೊಲಂಗೆ ಎಲ್ಲಾ ಹಾಟಕೆ ಆದೆಯೊ'?

ಕೊನೆಯ ಪ್ರಶ್ನೆಗಳು ಕೇಳುಗರನ್ನು ಉತ್ತರಿಸಲು ಪ್ರೇರೇಪಿಸುತ್ತವೆ. ಇದು ಒಂದು ಬಗೆಯಾದರೆ, ಇನ್ನೊಂದು ಬಗೆಯ ನಿರೂಪಣೆಯಲ್ಲಿ ಕಥನ ಕ್ರಿಯೆಯಲ್ಲಿಯೇ ನಾಟಕೀಯತೆಯಿದೆ.

ಉದಾಹರಣೆಗೆ– 'ಒಬ್ಬನೇ ಹಾಡ್ತನ ಹೇಳಿಕೊಣ್ಕೊಕ್. ಡೋಲ್ ಬೊಟ್ಟಿಕನಕ. ಗಗ್ಗರ ಆಡಿಸಿಕೊಣ್ಕೊಕ್.

ನಿನ್ನ ಗಾನದೆತ್ತ್ ಸತ್ತರೆ ಡೋಲ್ ಗಗ್ಗರ ಕೇಳ್ವಂತ ಹೇಳ್ತ್. ಇಂವ ಡೋಲ್ ಗಗ್ಗರ ಎಲ್ಲ ಕೊಟ್ಟತ್. ಕುಂಡತ್ ತಕನ್ತ್ ಬಾತ್. ಜೇಲಿಕರಲಿ ನಿಂತ್‌ಕಂಡ್ - ನಾಕತ್ತಿಲಿ ಗೆದ್ದ್ ಫೈ ಫಕ್ಕ ಫೈಂತ ಹೇಳಿ ಕುಣೀದು. ಎತ್ತ್‌ಲಿ ಗೆದ್ದ್ ಫೈ ಫಕ ಫೈ, ಗಾನದೆತ್ತಿಲಿ ಗೆದ್ದ್ ಫೈ ಫಕ ಫೈ. ಡೋಲ್ ಗಗ್ಗರಲಿ ಗೆದ್ದ್ ಫೈ ಫಕ ಫೈಂತ ಹೇಳಿ ಕುಣ್ದತ್ ಅತ್.' ಈ ಕ್ರಿಯಾತ್ಮಕತೆಯೇ ಅರೆಭಾಷೆ ಅಜ್ಜಿಕತೆಗಳ ಜೀವ ಎನ್ನಬಹುದು. ಕನ್ನಡದ ಕತೆಗಳಲ್ಲಿ ಈ ಗುಣ ಇರುವುದು ಹೌದಾದರೂ ಅರೆಭಾಷೆಯಲ್ಲಿ ಅದು ಹೆಚ್ಚಿಗೆ ಇದೆ.

ಕತೆಗಳ ಮುಕ್ತಾಯವೂ ವಿಶಿಷ್ಟವಾಗಿರುತ್ತದೆ. ಇದು ಕೇಳುಗನನ್ನು ಸಕ್ರಿಯವಾಗಿ ಒಳಗೊಳ್ಳುವ ತಂತ್ರಗಾರಿಕೆಯನ್ನು ಹೊಂದಿದೆ. ಉದಾಹರಣೆಗೆ- 'ಕುರೆ ಹೀಂಗೆ ಮಾಡ್ತ್. ಹಂಞ ಗುಂಡಿ ತೆಗೆಕನ ಒಂದು ಹೂಂಸ್ ಹೋತ್. ಮತ್ತ ಹಂಞ ಗುಂಡಿ ತೆಗೆಕನ ಮತ್ತೊಂದು ಹೂಂಸ್ ಹೋತ್. ಮತ್ತೆ ಅದರಲ್ಲಿ ಕುದುರ್‌ಕನ ಮೂರನೆ ಹೂಂಸ್ ಹೋಗಿ ಸತ್ತ್ ಹೋತ್. ಅದಕ್ಕೆ ಮಣ್ಣು ಮುಚ್ಚಿ ನಾವು ಬರೋಮಾ?'

'ನಾಯಿಗ ಹೊನ್ನ್ಕಿ ಹಾರಿ ಬಿದ್ದ್ ಓಡ್ರೆ ಇವರ ಕಿಬಿ ಎಲ್ಲ ಹರ್ದ್‌ ಹೋತ್. ಇವ್ ಕತ್ತಿ ಬಡಿನ ಹಗ್‌ಲಿಗೆ ಹಾಕಿದೊ ಕಿಬಿಗೆ ಕೈ ಹಿಡ್ಕೊಂಡೊ. ಮನೆಗೆ ಹೋದೊ. ಇವರ ಹೋಗಿ ನೀವ್ ನೋಡಿಕಂಡ್ ಬರಕಡ'. ಈಗುಣಗಳು ತುಳು ಜನಪದ ಕತೆಗಳಲ್ಲಿ ಕೂಡಾ ಹೆಚ್ಚು ಕಾಣಿಸುತ್ತದೆ.

ಗದ್ಯ ಪದ್ಯ ಸಂಮಿಶ್ರಗೊಂಡರೆ ಅದನ್ನು ಚಂಪೂ ಎಂದು ನಾವು ಕರೆಯುತ್ತೇವೆ. ಕನ್ನಡಕ್ಕೆ ಚಂಪೂ ಕಾವ್ಯಗಳ ಅತಿ ದೊಡ್ಡ ಪರಂಪರೆಯೇ ಇದೆ. ಅರೆಭಾಷೆಯಲ್ಲಿ ಚಂಪೂ ಶೈಲಿಯನ್ನು ಹೋಲುವ ಅನೇಕ ಜನಪದ ಕತೆಗಳಿವೆ. ಕೆಳಗಿನ ಭಾಗವನ್ನು ಗಮನಿಸಿ-

'ಕೊಡ್‌ಂತ ಹೇಳ್ತ್‌ಗಡ
ಬಾಳೆಪಾಪಕ್
ನೂಲ ಕೈ ತಾಂಗಾಕ್
ಅಳೆತ್ತರ ಕೆಂಡಕೂಡ್ ಅಲ್ಲಿ ಬಂದ್
ಸತ್ಯ ಹೇಳ್ನೆಂತ ಹೇಳ್ತ್‌ಗಡ
ಅಲ್ಲಿಂದ ಸೀದ ಕುದ್ಕಣ್ಣನ ಮನೆಗೆ ಹೋತ್‌ಗಡ. ಅಲ್ಲಿ ಹೋಕನ
ಹಬ್ಬಾಂತ ಬಾರ
ಹೊಸ್ತೂಂತ ಬಾರ
ಇಂದೇಕೆ ಬಂದೆ ಚೋರೆಕ್ಕಾ

ನೀರ್ ಜಾಪೆ ತನ್ನಿರೋಮಕ್ಕಳರಾಂತ ಹೇಳ್ತ್‌ಗಡ ನಿನ್ನ ನೀರ್‌ಜಾಪೆ ತೆಗ್ದ್ ಬೆಂಕಿಗೆ ಇಟ್ಟ್ ನನ್ನ ಮಕ್ಕಳ ತಿಂದ್‌ದರ ವಿಚಾರ್ಸಿಕೊಡ್‌ಂತ ಹೇಳ್ತ್‌ಗಡ.

ಪದ್ಯ ಗದ್ಯ ಮಿಶ್ರಣದ ಇಂತ ಕತೆಗಳು ಅರೆಭಾಷೆಯ ಸತ್ವ ಶಕ್ತಿಯನ್ನು ಮನಗಾಣಿಸಬಲ್ಲುವು ಮಾತ್ರವಲ್ಲ, ಚಂಪೂಕಾವ್ಯಗಳ ಅಧ್ಯಯನಗಳಿಗೆ ಬೇಕಾದ ಕೆಲವು ಹೊಸ ಒಳನೋಟಗಳನ್ನೂ ಕೊಡಬಲ್ಲುವು.

ಹೀಗೆ ಭಾಷೆಯು ಬಹುಮುಖಿಯಾಗಿ ಬೆಳೆಯುತ್ತಾ ಸಬಲವಾಗಬೇಕು. ಶಿಕ್ಷಣ, ವ್ಯಾಪಾರ, ಸಾಮಾಜಿಕ ಜಾಲತಾಣ, ಅಭಿವೃದ್ಧಿ ಚಟುವಟಿಕೆಗಳು, ಧಾರ್ಮಿಕ ಚಟುವಟಿಕೆಗಳು ಮತ್ತು ಮಾಧ್ಯಮಗಳಲ್ಲಿ ನಿಸ್ಸಂಕೋಚವಾಗಿ ಅದು ಬಳಕೆಯಾಗಬೇಕು. ಅರೆಭಾಷೆಯಲ್ಲಿ ಪತ್ರ ಪುಸ್ತಕಗಳು ರಚನೆಯಾಗಬೇಕು. ಬೇರೆ ಜಾತಿಯ ಜನರು ಈ ಭಾಷೆಯನ್ನು ಆಡಿದರೆ ಸೂಕ್ತ ಮನ್ನಣೆಯೋ ಗೌರವವೋ ದೊರೆಯಬೇಕು. ಅರೆಭಾಷಾ ಅಕಾಡೆಮಿಯು ಅನ್ಯಜಾತಿಯವರನ್ನು ಒಳಗೊಳ್ಳುವಷ್ಟು ಉದಾರವಾಗಬೇಕು. ಮದುವೆ ಮೊದಲಾದ ಸಾಮಾಜಿಕ ಆಚರಣೆಗಳಲ್ಲಿ ಕನ್ನಡ ಅಥವಾ ಸಂಸ್ಕೃತ ಪ್ರವೇಶ ನಿಲ್ಲಬೇಕು. ಸುದ್ದಿ ವಾಹಿನಿಗಳಲ್ಲಿ ಅರೆಭಾಷೆ ಅವಕಾಶ ಇರಬೇಕು. 24000 ಜನರಿರುವ ಸಂಸ್ಕೃತದಲ್ಲಿ ವಾರ್ತಾ ಪ್ರಸಾರ ಆಗಬಹುದಾದರೆ, ಲಕ್ಷಾಂತರ ಜನ ಮಾತಾಡುವ ಅರೆಭಾಷೆಯಲ್ಲಿ ಸುದ್ದಿ ಪ್ರಸಾರ ಯಾಕೆ ಆಗಬಾರದು? ನೈಜೀರಿಯಾದ ಭಾಷಾ ಶಾಸ್ತ್ರಜ್ಞನಾದ ಉವಾಲಾಯು ಹೇಳಿದಂತೆ ಮೊದಲು ಸಣ್ಣ ಭಾಷೆಗಳಲ್ಲಿ ಬೌದ್ಧಿಕ ಚಟುವಟಿಕೆಗಳು ಹೆಚ್ಚು ಹೆಚ್ಚು ನಡೆಯಬೇಕು.

ಅಂಥ ಕೆಲಸಗಳು ಅರೆಭಾಷೆಯಲ್ಲಿ ಆಗಲಿ ಎಂದು ನಾನು ಆಶಿಸುತ್ತೇನೆ.

ಅಮರ ಸುಳ್ಯ ಕ್ರಾಂತಿಲಿ ಅರೆಬಾಸೆಯೊವು



ಮೂಲ :
ಡಾ. ಪ್ರಭಾಕರ ಶಿಶಿಲ

ಅರೆಭಾಷೆಗೆ ಅನುವಾದ :
ಉದಯ ಭಾಸ್ಕರ ಸುಳ್ಯ



೧೮೩೭ರ ಮಾರ್ಚ್ ೩೦ರ್‌ಂದ ಏಪ್ರಿಲ್ ೫ರ ಮುಟ್ಟ ನಡ್ದ 'ಕೊಡ್‌ಗ್ ಮತ್ತೆ ಕೆನರಾ ರೈತ ಬಂಡಾಯ'ನ 'ಅಮರ ಸುಳ್ಯ ಕ್ರಾಂತಿ'ತೇಳಿ ಕರ್ದವೆ. ನಮ್ಮ ಆಡ್ ಮಾತ್‌ಲಿ ಇದರ 'ಕಲ್ಯಾಣಪ್ಪನ ಕಾಟ್‌ಕಾಯಿ' ಎಂತ ಕರ್ದವೆ. ಅಲೇಟಿ ರಾಮಣ್ಣ ಶಗ್ರಿತ್ತಾಯರ್ ಇದೇ ಇಸಯದ ಮೇಲೆ 'ಕಲ್ಯಾಣಪ್ಪನ ಕಾಟ್‌ಕಾಯಿ' ತೇಳ್ವ ಯಕ್ಷಗಾನ ಪರ್ಸಂಗನ ಬರ್ದೊರ್ಳೊ. ಹೆಸ್ರ್ ಮಾಡ್ದ ಸಂಸೋದಕ ತಿ.ತಾ. ಶರ್ಮಾರ್ಂತೇಳೊವು ' ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ ೧೮೦೦ ರಿಂದ ೧೮೫೭ರ ವರೆಗೆ' ತೇಳ್‌ವ ಪುಸ್ತಕ ಬರ್ದೊರ್ಳೊ. ಸುಳ್ಯ ತಾಲೂಕ್‌ನ ದೊಡ್ಡ ಸಾಹಿತಿ ಕುಳಕುಂದ ನಿರಂಜನಂತೇಳೊವ್ 'ಕಲ್ಯಾಣಸ್ವಾಮಿ' ಕಾದಂಬರಿನ ಬರ್ದೊರ್ಳೊ. ರಂಗತಜ್ಞ ಸಂಪಾಜೆ ದೇವಿಪ್ರಸಾದ್ ಅವು 'ಅಮರಸುಳ್ಯದ ಸ್ವಾತಂತ್ರ್ಯ ಸಮರ' ತೇಳ್‌ವ ಸಂಶೋಧನಾತ್ಮಕ ಲೇಖನ ಮಾಲಿಕೆನ ಹೊರಗೆ ತಂದೊಳೊ. ಡಾ. ಪ್ರಭಾಕರ ಶಿಶಿಲರ್ ಬರ್ದ 'ಮೂಡಣದ ಕೆಂಪು ಕಿರಣ' ಕಾದಂಬರಿ ಇದೇ ಇಸಯನ ಹೊಂದಿಕಂಡ್ ಉಟ್ಟು. ಡಾ. ಪ್ರತಿಮಾ ಜಯರಾಂ ಅವು 'ವಸಾಹತುಶಾಹಿ ಮತ್ತು ದೇಶೀಯ ಆರ್ಥಿಕತೆಗಳ ಮುಖಾಮುಖಿ ಕೊಡಗು ಕೆನರಾ ಆರ್ಥಿಕ ಬಂಡಾಯ' – ತೇಳುವ ನಿಬಂಧನ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕೊಟ್ಟುದ್ ಪಿ.ಎಚ್.ಡಿ ಪಡ್ಕಂಡೊಳೊ.

ಸುಮಾರ್ ಒಂದ್ ವಾರ ಮುಟ್ಟ ನಡ್ದ ಈ ಕ್ರಾಂತಿಗೆ ಮೂರ್ ಮುಖ್ಯ ಕಾರಣ ಉಟ್ಟು.

೧. ೧೮೩೪ರ್ಲಿ ಕೊಡಗ್‌ನ ದೊರೆ ಚಿಕ್ಕವೀರ ರಾಜೇಂದ್ರನ ಅಧಿಕಾರಂದ ಕೆಳಗಿಳ್ಸಿದ್

೨. ಪುತ್ತೂರು ಮತ್ತೆ ಸುಳ್ಯದ ೧೧೦ ಗ್ರಾಮಗಳ ೧೮೩೪ರ್ಲಿ ಕೊಡಗ್‌ಂದ ಬೇರೆ ಮಾಡಿ ಕೆನರಾ ಜಿಲ್ಲೆಗೆ ಸೇರ್ಸಿದ್.

೩. ಉಪ್ಪು ತಯಾರ್ಕೆ ಮಾಡ್ದು ಮತ್ತೆ ಹೊಸೇಪು ಬೆಳ್ಸುದರ ಸರ್ಕಾರದ ಯಜಮಾನ್ಕೆಗೆ ಒಪ್ಪುಸಿ ಅದರ ಮೇಲೆ ಹೊಸ ತೆರ್ಗೆ ಹಾಕಿದ್.

ಕೊಡ್‌ಗ್‌ನ ದೊರೆ ಚಿಕ್ಕವೀರ ರಾಜೇಂದ್ರನ ಅಧಿಕಾರಂದ ಕೆಳಗಿಳ್ಸಿದಾಂಗೆ ಇದ್ಕೆ ಇರೋದ ಮಾಡ್ದವ್ ಹುಲಿಕಡ್ದ ನಂಜಯ್ಯ ಮತ್ತೆ ಅಪರಂಪಾರಂತೇಳ್ವ ಲಿಂಗಾಯ್ತರ್. ಅಪರಂಪಾರತೇಳೊವನ ಕೊಡ್‌ಗ್‌ನ ಚಿಕ್ಕವೀರ ರಾಜೇಂದ್ರನ ದೊಡ್ಡಪ್ಪ ಅಪ್ಪಾಜಿರಾಜನ ದೊಡ್ಡ ಮಂಜಂತೇಳಿ ನೊಂಬಿಸಿದ ಅವು ಬ್ರಿಟಿಸರ ಇರುದ್ಧ ರೈತ ಜನಂಗಳ ಒಟ್ಟ್ ಮಾಡ್ವಿಕೆ ಸುರು ಮಾಡ್ದೊ. ಅವರೊಟ್ಟಿಗೆ ಚಿಕ್ಕವೀರ ರಾಜೇಂದ್ರನ ಸುಭೇದಾರ ಕಲ್ಯಾಣಸ್ವಾಮಿ ಮತ್ತೆ ಸೋಮವಾರಪೇಟೆನ ರೈತ ಪುಟ್ಟಬಸವ ಕೂಡ ಸೇರಿಕಂಡೊ. ಇವು ಕೂಡಾ ಲಿಂಗಾಯ್ತರ್. ಇವ್ ಇಬ್ಬರ್ಲಿ ಅಪರಂಪಾರ ಮತ್ತೆ ಕಲ್ಯಾಣಸ್ವಾಮಿ ಹೋರಾಟ ಮಾಡ್ಕನ ಬೇರೆ ಬೇರೆ ಸಮಯಲಿ ಬ್ರಿಟಿಸರ ಕೈಗೆ ಸಿಕ್ಕಿ ಬಿದ್ದವೆ. ಅವು ಇವರ ಇಚಾರಣೆ ಮಾಡ್ದ ರೀತಿ ನಾಟಕ ಮಾಡಿ ಜೈಲ್‌ಗೆ ತಳ್ಳುವೆ. ಹುಲಿಕಡ್ದ ನಂಜಯ್ಯ ಮತ್ತೆ ಪುಟ್ಟಬಸವ ಕೆದಂಬಾಡಿ ರಾಮಗೌಡ್ರ್‌ಲ್ಲಿಗೆ ಬಂದ್ ಹೋರಾಟದ ಕೆಣಿ ಹುಡ್ಕುವೆ. ಕೆದಂಬಾಡಿ ರಾಮಗೌಡ ಬ್ರಿಟಿಸರ ಇರುದ್ಧ ೧೨೦೦ ರೈತರ ದಂಡ್‌ನ ಸಿದ್ಧಪಡ್ಸಿದ್. ಸಾಮಾನ್ಯ ಜನಂಗಳ ಮತ್ತೆ ರೈತರ ಅವರ ಕಡೆಗೆ ಒಲ್ಸಿಕಂಬಕೆ ಪುಟ್ಟಬಸವಂಗೆ ಕಲ್ಯಾಣಸ್ವಾಮಿಂತೇಳ್ವ ಹೆಸ್ರ್ ಇಸಿ ಅಂವ ಚಿಕ್ಕವೀರರಾಜೇಂದ್ರನ ತಮ್ಮಂತೇಳಿ ನೊಂಬಿಸಿ ಅಂವನೇ ಮುಂದೆಗೆ ಕೊಡ್‌ಗ್‌ನ ರಾಜ ಆಗಂವಂತೇಳಿ ಸುದ್ದಿ ಹಬ್ಸ್ ಸಿದೊ. ಜನಂಗ ಈ ಸುದ್ದಿನ ನೊಂಬಿದಾ

ರೈತರ ದಂಡ್‌ನ ಸೇರ್ದೊ. ಮಾರ್ಚ್ ೩೦ಕ್ಕೆ ಬೆಳ್ಳಾರೆ ಕೋಟೆನ ವಸಪಡ್ಸಿ ಖಜಾನೆನ ದೋಚಿದೊ. ಆದಾದಮೇಲೆ ರೈತರ ದಂಡ್ ಪುತ್ತೂರು, ಸಂಪಾಜೆ, ಅರ್ಕುಳಕ್ಕಾಗಿ ಏಪ್ರಿಲ್ ೫ಕ್ಕೆ ಮಂಗ್ಳೂರ್‌ನ ವಸಪಡ್ಸಿಕಣ್ತ್. ಅಲ್ಲಿದ್ದ ಬ್ರಿಟಿಸರೆಲ್ಲಾ ಹಡಗ್‌ಲಿ ಕುದ್ದ್ ತಲಚೇರಿಗೆ ಪ್ರಯಾಣ ಮಾಡ್ದೊ. ಎರ್ಡ್‌ವಾರ ಮುಟ್ಟ ಕೆನರಾ ಜಿಲ್ಲೆ ದಂಡ್‌ಕೋರರ ವಸಲಿ ಇತ್ತ್. ಆದಾದಮೇಲೆ ತಲಚೇರಿ ಮತ್ತೆ ಬೊಂಬಾಯ್‌ಂದ ಬಂದ ಬ್ರಿಟಿಸ್ ಪಡೆಗ ರೈತರ ದಂಡ್‌ನ ಸೋಲ್ಸಿದೊ. ಬ್ರಿಟಿಸರ ಕೈಗೆ ಸಿಕ್ಕಿದವರ ಪೈಕಿ ಲಕ್ಷ್ಮಪ್ಪ ಬಂಗರಸ, ಪುಟ್ಟ ಬಸವ, ಗುಡ್ಡೆಮನೆ ಅಪ್ಪಯ್ಯ, ವೀರಣ್ಣ ಬಂಟ ಮತ್ತೆ ಉಪ್ಪಿನಂಗಡಿ ಮಂಜಂತೇಳೊವ್ರೊರ ಎಲ್ಲರ ಎದ್‌ರೇ ಉರ್ಳ್‌ಗ ಹಾಕಿ ಕೊಂದೊ. ಉಳ್ದವ್ಕೆ ಅವರ ತೊಪ್ಪುನ ಪ್ರಮಾಣ ನೋಡಿಕಂಡ್ ಸಿಕ್ಸೆ ಕೊಟ್ಟೊ. ಅಲ್ಲಿಗೆ ಕೊಡ್ಗ್ – ಕೆನರಾ ರೈತ ಬಂಡಾಯಂತೇಳ್ವ ಇತಿಹಾಸದ ದೊಡ್ಡ ಬೊಳ್ಪುಂದು ಕೆಟ್ಟೇ ಹೋತ್.

ಈ ಹೋರಾಟಲಿ ಎಲ್ಲಾ ಜಾತಿ ಜನಾಂಗದವರ ಪಾಲ್ ಇದ್ದರೂನು ಅರೆಬಾಸೆ ಮಾತಾಡ್‌ವ ಗೌಡ ಜನಾಂಗದವ್ ಹೆಚ್ಚಿಗೆ ಇದ್ದೊ. ರಿಕ್ತರ್ ಗಜೆಟಿಯರ್‌ಲಿ ಈ ಹೋರಾಟನ 'ಗೌಡರ ಮೇಲ್ಚಳುವಿಕೆತೇಳ್ದ್' ಬಣ್ಣನೆ ಮಾಡ್ದೊಳೊ. ಅರೆಬಾಸೆ ಗೌಡ್ರ ಪೈಕಿ ಸುಭೇದಾರ ಗುಡ್ಡೆಮನೆ ಅಪ್ಪಯ್ಯತೇಳೊವರ ಬ್ರಿಟಿಸರ್ ಮಡಿಕೇರಿಲಿ ಗಲ್ಲಿಗೇರ್ಸಿದೊ. ಕೊಡ್ಗ್‌ನ ಸಿದ್ದಾಪುರದ ಹಕ್ಕಲೆ ಇದ್ದ ಕುಕ್ಕನೂರು ಚೆನ್ನಯ್ಯಂಗೆ ಆಜೀವ ಸಿಕ್ಸೆ ಕೊಟ್ಟೊ. ಕೆದಂಬಾಡಿ ರಾಮಯ್ಯ, ಕೂಜುಗೋಡು ಅಪ್ಪಯ್ಯ, ಕೂಜುಗೋಡು ಮಲ್ಲಪ್ಪ, ಗುಡ್ಡೆಮನೆ ತಮ್ಮಯ್ಯ, ಶಿರಕಜೆ ಮಲ್ಲಯ್ಯ, ಮಣಿಯನ ರಂಗಪ್ಪ, ಕುಂಚಡ್ಕ ತಿಮ್ಮ, ಕುಡೆಕಲ್ ಪುಟ್ಟ, ದೇರಾಜೆ ಬಚ್ಚ, ಗುಡ್ಡದ ಸುಬ್ಬಪ್ಪಂತೇಳೊವ್ರೊರ ಕೂಡಾ ಬ್ರಿಟಿಸರ್ ಸಿಕ್ಸೆಗೆ ಗುರಿಪಡ್ಸಿದೊ. ಸಿಕ್ಸೆ ಪಡ್ದ ಉಳ್ದ ಜಾತಿಗ ಯಾವ್ದೂತ ಸರಿಯಾಗಿ ಕಂಡ್ ಹಿಡಿಯಕೆ ಈಗ ಸಾದ್ಯ ಇಲ್ಲೆ. ಇವರ್ಲಿ ಕೆಲವ್ ಮುಕ್ಯಸ್ತರ ವಿವರಗಳ ಮಾತ್ರ ಇಲ್ಲಿ ಕೊಟ್ಟೊಳೆ.

ಕೆದಂಬಾಡಿ ರಾಮಗೌಡ:

ಇಂವನ ಮೂಲ ಸುಳ್ಯ ತಾಲೂಕ್‌ನ ಪೂಮಲೆ ಬುಡಲಿರ್‌ವ ಕೆದಂಬಾಡಿ. ಇಂವನ ಕಾಲಲಿ ಅಟ್ಲೂರ್ ರಾಮಪ್ಪಯ್ಯ ಅಮಲ್ದಾರ ಆಗಿದ್ದೊ. ಕಂದಾಯ ಕಟ್ಟಕೆ ಆಗದ ಸುಮಾರ್ ರೈತರ ಕೃಸಿ ಬೂಮಿ ಅಟ್ಲೂರು ರಾಮಪ್ಪಯ್ಯನ ಪಾಲಾಗಿತ್ತ್. ಅಂತ ರೈತ ಜನಂಗ ಎಲ್ಲಾ ಸೇರಿಕಂಡ್ ಕೆದಂಬಾಡಿ ರಾಮಗೌಡ್ರ ಹಕ್ಕಲೆ ದೂರ್ ಕೊಟ್ಟೊ. ಒಮ್ಮೆ ಕೆದಂಬಾಡಿ ರಾಮಗೌಡ ಅಟ್ಲೂರು ರಾಮಪ್ಪಯ್ಯನ ಇಚಾರ್ಸಿಕೆ ಹೋಕನ ರಾಮಗೌಡ್ರಿಗೆ ಕೆಲ್ಸದವರ ಕೈಂದ ಹೊಡ್ಸಿದ ರಾಮಪ್ಪಯ್ಯ, ರಾಮಗೌಡ್ರ ಮೊರ್ಯಾದಿ ಕೂಡ ತೆಗ್ದಿತ್ತ್. ರೈತರ ಹೋರಾಟಕ್ಕೆ ೧೨೦೦ ಜನಂಗಳ ಒಟ್ಟ್ ಸೇರ್ಸಿದಂವ ಕೂಡಾ ಇದೇ ರಾಮಗೌಡ. ಆಕೇರಿಗೆ ಇಂವ ಬ್ರಿಟಿಸರ ಕೈಗೆ ಸಿಕ್ಕಿಬಿದ್ದ್ ಸಿಕ್ಸೆಗೆ ಕೂಡಾ ಗುರಿಯಾತ್. ಇಂವ ಕೊಡ್ಗ್‌ನ ರಾಜರ ವಂಸದ ನಂಟಂತೇಳ್‌ವ ಇತಿಹಾಸ ಕೂಡಾ ಉಟ್ಟು. ಇಂವನೇ ಅಮರಸುಳ್ಯದ ರೈತದಂಗೆನ ನಿಜವಾದ ಯಜಮಾನಂತೇಳಿ ಇತಿಹಾಸ ತಜ್ಞರ್ ಪರಿಗಣೆಸ್ದೊಳೊ. ಈಗೊಳೂ ಇಂವನ ಪೂಮಲೆ ಕೆದಂಬಾಡಿಲಿ ಒಳೊ.

ಗುಡ್ಡೆಮನೆ ಅಪ್ಪಯ್ಯ ಮತ್ತೆ ತಮ್ಮಯ್ಯ:

ಇಂವ ಕೊಡ್ಗ್‌ಲಿ ಬ್ರಿಟಿಸರ ಇರುದ್ದ ಜನಂಗಳ ಒಟ್ಟ್ ಸೇರ್ಸಿದಂವ. ಇಂವ ಇಂವನ ತಮ್ಮ ಗುಡ್ಡೆಮನೆ ತಮ್ಮಯ್ಯನೊಟ್ಟಿಗೆ ಸೇರಿಕಂಡ್ ಸೊತಂತ್ರ ಹೋರಾಟಲಿ ಬಾಗವಹಿಸಿತ್ತ್. ಇತಿಹಾಸಲಿ ಕಂಡ್ ಬರ್‌ವ ಪ್ರಕಾರ ಅಪ್ಪಯ್ಯಂದೊಳೂ ಹೆಚ್ಚಿನ ಹೋರಾಟ ಮಾಡ್ದಂವ ಇಂವನೇ. ಈ ಅಣ್ಣತಮ್ಮಂದರ್ ಮೇಲೆ ಕೊಡ್ಗ್‌ಲಿ ಜನಂಗಳ ಒಟ್ಟ್ ಸೇರ್ಸುವ ಕೆಲ್ಸಲಿ ಗೆದ್ದ್‌ಬುಟ್ಟವೆ. ದಂಗೆ ನಡಿವ ಕಾಲಲಿ ಅಮರ ಸುಳ್ಯಲಿದ್ದ ಅಪ್ಪಯ್ಯನ ಕೆದಂಬಾಡಿ ರಾಮಗೌಡ ಸುಭೇದಾರ ಆಗಿ ನೇಮಕ ಮಾಡ್ತ್. ಕೊಡ್ಗ್‌ನ ಗೌಡ್ರ ಮತ್ತೆ ಕೊಡವರ ನೊಡುಲಿ ಕೋಮು ಗಲಭೆ ಮಾಡ್ಸಿಕೆ ಲೀ ಹಾರ್ಡ್ ಪ್ರಯತ್ನ ಮಾಡ್ಕನ ಅದ್ ನುಡಿಯದಾಂಗೆ ಮಾಡ್ದ ಇದೇ ಗುಡ್ಡೆಮನೆ ಅಪ್ಪಯ್ಯ. ಅಂವ ಕೊಡವ ಸುಭೇದಾರ ಮಾದಯ್ಯನ ರೈತಪಡೆಗೆ ಸೇರ್ಸಿ ಲೀ ಹಾರ್ಡ್‌ಗೆ ಅವಮಾನ ಆಗುವಾಂಗೆ ಮಾಡ್ತ್. ಕೆದಂಬಾಡಿ ರಾಮಗೌಡನ ದಂಡ್ ಮಂಗ್ಳೂರಿಗೆ ಪ್ರಯಾಣ ಮಾಡ್ಕನ, ಅಪ್ಪಯ್ಯ ಕೂಜುಗೋಡು ಅಣ್ಣತಮ್ಮಂದರ

ಕರ್ಕಂಡ್ ಜಿಸಿಲ್ ಮಾರ್ಗಲಿ ಮಡಿಕೇರಿ ಮೇಲೆ ಮುತ್ತಿಗೆ ಹಾಕಿಕೆ ಹೊರ್ಟದೆ. ಆಗ ಬ್ರಿಟಿಸರ ಕಡೆಯವರ ಪಡೆಗ
ಎದ್‌ರ್ ಬಂದ್ ಅಪ್ಪಯ್ಯನ ಪಡೆನ ಸೋಲ್ಸಿದೆ. ಸೋತ್ ಓಡಿಹೋದ ಅಪ್ಪಯ್ಯನ ಹಿಡ್ದ್ ಮಡಿಕೇರ್ಲಿ ಎಲ್ಲರ
ಎದ್‌ರೇ ನೇಣಿಗೆ ಹಾಕಿ ಜನಂಙಳಿಗೆ ಹೆದ್ರಿಕೆ ಹುಟ್ಸುವೆ. ಆದೊರೂ ೧೮೩೭ರ ಬಂಡ್‌ಕೋರರ ಪೈಕಿ ಇಂವನೇ
ಹಙ ಅದೃಷ್ಟವಂತ. ಯಾಕಂತೇಳ್‌ರೆ ಇಂವನ ಒಂದು ಮೂರ್ತಿನ ಮಡಿಕೇರ್ಲಿ ಸ್ಥಾಪನೆ ಮಾಡ್ಯೊಳೊ. ಒಂದ್
ಮಾರ್ಗಕ್ಕೆ ಇಂವನ ಹೆಸ್ರ್ ಕೂಡಾ ಇಸ್ಯೊಳೊ.

ಕೂಜುಗೋಡು ಅಪ್ಪಯ್ಯ ಮತ್ತೆ ಮಲ್ಲಪ್ಪ:

ಕೂಜುಗೋಡು ಕಟ್ಟೆಮನೆ ಅಮರ ಮತ್ತೆ ಸುಳ್ಯ ಸೀಮೆಗಳ ಗೌಡ್ರ ನ್ಯಾಯಾಲಯ ಆಗಿ ಒಂದ್ ಕಾಲಲಿ
ಬಾರೀ ಹೆಸ್ರ್ ಮಾಡಿತ್ತ್. ಈ ಮನೆತನದವ್ ಸುಬ್ರಹ್ಮಣ್ಯ ದೇವಸ್ಥಾನದ ಮೋಕ್ತೇಸರರಾಗಿ ಯಜಮಾನ್ಕೆ ಒಯ್ಸಿಕಂಡಿದ್ದೊ
ಇದೇ ಮನೆತನಕ್ಕೆ ಸೇರ್ದ ಕುಂಬ ಗೌಡತೇಳೊಂವ ಚಿಕ್ಕವೀರರಾಜೇಂದ್ರ ಅಪ್ಪ ಲಿಂಗರಾಜು ಮತ್ತೆ ದೊಡ್ಡಪ್ಪ
ದೊಡ್ಡವೀರರಾಜೇಂದ್ರನ ವಿಸ್ವಾಸ ಪಡ್ಕಂಡ್ ಹಾಲೇರಿ ವಂಸದ ರಕ್ಸಕಂತೇಳುವ ಹೆಸ್ರ್ ಪಡ್ಕಂಡಿತ್.

ಅಪ್ಪಯ್ಯ ಮತ್ತೆ ಮಲ್ಲಯ್ಯ ಇಬ್ರೊರ ಕೊಡ್ಗ್‌ಲಿ ಕ್ರಾಂತಿ ಎಬ್ಬುಸಿದ ಅಪರಂಪಾರ ಮತ್ತೆ ಹುಲಿಕಡ್ದ ನಂಜಯ್ಯನವ್
ಅವರ ಮನೆಗಳ್ಲಿ ಉಳ್ಕಂಬಕೆ ಏರ್ಪಾಡ್ ಮಾಡಿಕೊಡ್ತಿದ್ದೊ. ಕೆದಂಬಾಡಿ ರಾಮಗೌಡ್ರ ರೈತದಂಡ್ ಬೆಳ್ಳಾರೆಗ
ಮುತ್ತಿಗೆ ಹಾಕ್‌ಕನ ಈ ಎರ್ಡ್ ಜನನೂ ಆ ದಂಡ್‌ಲಿ ಇದ್ದೊ. ಮತ್ತೆ ಗುಡ್ಡೆಮನೆ ಅಪ್ಪಯ್ಯನ ದಂಡ್‌ಲಿ
ಮಡಿಕೇರಿಗೆ ಮುತ್ತಿಗೆ ಹಾಕಿಕೆ ಹೊರ್ಟೊ. ಲೀ ಹಾರ್ಡಿನ ಪಡೆಗಳ ಎದ್‌ರ ಸೋತು ಅವರ ಕೈಗೆ ಸಿಕ್ಕಿಬಿದ್
ಇಬ್ಬೊರೂ ಸಿಕ್ಸೆಗೆ ಒಳಗಾದವೆ.

ಕುಡೆಕಲ್ಲ್ ಪುಟ್ಟ ಮತ್ತೆ ಕುಂಚಡ್ಕ ತಿಮ್ಮ.

ಇವ್ ಇಬ್ರೊರೂ ಈಗನ ಆಲೆಟ್ಟಿ ಗ್ರಾಮದವ್. ಇವ್ ಕೆದಂಬಾಡಿ ರಾಮಗೌಡರ ದಂಡ್‌ಲಿದ್ದ್‌ದ್ ಪಿಟ್ಲ ಮುಟ್ಟ
ಹೋಗಿ ಅಲ್ಲಿಂದ ದಂಡ್‌ನ ಒಂದು ಬಾಗನ ಬೇಕಲ, ಕುಂಬ್ಳೆ ಕಡೆಗೆ ಕರ್ಕಂಡ್ ಹೋಗಿ ಯಜಮಾನ್ಕೆ ಒಯ್ಸಿದ
ಸಾಹಸಿಗ. ಇವ್ಕೆ ಎಲ್ಲಿ ಕೂಡ ಅಡತಡೆ ಬಾತ್ಲೆ. ಕುಂಬ್ಳೆ ಸುಬ್ರಾಯ ಹೆಗ್ಡೆ ಇವರೊಟ್ಟಿಗೆ ಸೇರಿಕಂಡ್ ಕಲ್ಯಾಣಸ್ವಾಮಿನ
ಕಾಂಬಕೆ ಮಂಗ್ಳೂರಿಗೆ ಬಾಕನ ನೇತ್ರಾವತಿ ಹಳ್ಳದ ಕರೆಲಿ ಆ ಕಡೆಂದ ಬ್ರಿಟಿಸರ ಫಿರಂಗಿ ದಾಳಿನ ಎದ್‌ರುಸುವಂತ
ಪರಿಸ್ಥಿತಿ ಬಂದದೆ. ಹೆಗ್ಡೆ ಪರಿವಾರದವ್ ಈ ದಾಳಿಲಿ ಸತ್ತು ಹೋದೊ. ಕುಡೆಕಲ್ಲ್ ಪುಟ್ಟ ಮತ್ತೆ ಕುಂಚಡ್ಕ ತಿಮ್ಮ
ಈ ದಾಳಿಂದ ಹೇಂಗೋ ತೊಪ್ಪಿಸಿಕಂಡ್ ಮಂಗ್ಳೂರಿಗೆ ಬಂದ್ ರೈತದಂಡ್‌ನವರ ಸೇರಿಕಂಡವೆ. ಇವ್ ಇಬ್ರೊರು
ಕೂಡ ಬ್ರಟಿಸರ ಕೈಗೆ ಸಿಕ್ಕಿ ಹಾಕಂಡ್ ಸಿಕ್ಸೆ ಅನುಭವಿಸ್‌ವೆ.

ಅಮ್ಮೈ ಮಲ್ಲಪ್ಪ

ಇಂವನ ಬಗ್ಗೆ ಪರಿಚಯ ಮಾಡ್ಸಿದವ್ ಸಂಶೋಧಕರ ಡಿ. ಜಿ. ನಡ್ಕಂತೇಳೊವ್. ಅಮ್ಮೈ ಮಲ್ಲಪ್ಪ ಕೂಜುಗೋಡು
ಅಣ್ಣತಮ್ಮಂದರೊಟ್ಟಿಗೆ ಸೇರಿಕಂಡ್ ಬ್ರಿಟಿಸರ ಇರುದ್ಧ ಹೋರಾಟ ಮಾಡ್ದಂವ. ನಡ್ಕ ಅವ್ರು ಹೇಳ್‌ವ ಪ್ರಕಾರ
ಕೂಜುಗೋಡು ಅಪ್ಪಯ್ಯನವ್ಕೆ ಮಲ್ಲಪ್ಪಂತೇಳ್ವ ಸೋದರ ಇತ್ಲೆ. ಅಮ್ಮೈ ಮಲ್ಲಪ್ಪಂತೇಳೊವನ್ನೇ ಕೂಜುಗೋಡು
ಮಲ್ಲಪ್ಪಂತೇಳಿ ದಾಕಲೆ ಮಾಡ್ಯೊಳೊ. ಇಂವ ಬ್ರಿಟಿಸರ ಇರುದ್ಧ ಹೋರಾಟಲಿ ಸೋತ್ ಅವರ ಕೈಗೆ ಸಿಕ್ಕಿದಂವ
ಇಂವನ ಕೂಡಾ ಅಕೇರಿಗೆ ಉರ್ಳ್‌ಗೆ ಹಾಕಿದೊಂತ ಇತಿಹಾಸಲಿ ಕಂಡ್ ಬಂದದೆ. ಅವರ ವಂಸದ ವೀರಪ್ಪ
ಗೌಡ ಮತ್ತೆ ಸಂಶೋಧಕ ಡಾ. ಪೂವಪ್ಪ ಕಣಿಯೂರು ಅವು ಈ ಇತಿಹಾಸನ ಸತ್ಯತೇಳಿ ತೋರ್ಸಿಕೊಟ್ಟೊಳೊ

ಹೆಸರಿಲ್ಲದೆ ಹೋರಾಟ ಮಾಡ್ದವ್:

ಪೂಮಲೆ ಕೆದಂಬಾಡಿಂದ ರೈತರ ದಂಡ್ ಹೊರಡ್ಕನ ಅದರ್ಲಿ ೧೨೦೦ ಜನ ರೈತಂಗ ಇದ್ದೊ. ಇವ
ಎಲ್ಲವ್ರೂ ಹೋರಾಟ ಮಾಡ್ದವ್ರೇ. ಆದರೆ ಈ ದಂಗೆನ ಅಡ್‌ಂಗ್‌ಸಿದ ಬ್ರಿಟಿಸರ್. ದಂಗೆ ಮಾಡ್ದವರ ಮನೆವ ಎಷ್ಟ
ಹೆದ್‌ರ್ಸಿದೊಂತೇಳ್‌ರೆ ಅವರ ವಂಸದವ್ ಈ ಹೋರಾಟಲಿ ಭಾಗವಹಿಸ್ಯೊಳೊಂತೇಳುವರ ನೆನ್ಸಿಕಂಬಕೆ ಕೂಡಾ
ಹೆದ್‌ರ್ತಿದ್ದೊ. ಅದರ್‌ಂದಾಗಿ ಅವರ ತಲೆಮಾರ್‌ನವ್ಕೆ ಅವರ ಹಿರಿಯವ್ ಸೊತಂತ್ರ ಹೋರಾಟಲಿ
ಭಾಗವಹಿಸ್ಯೊಳೊಂತೇಳ್ವ ಇಸಯ ಗೊತ್ತೇ ಆಗದಂಗೆ ಆತ್.

ಈ ಹೋರಾಟಗಾರರ ನೆಂಪುಲಿ ೧೯೮೭ರಲ್ಲಿ ಸುಳ್ಯದ ಸೊತಂತ್ರ ಪ್ರೇಮಿಗ ಸಂಪಾಜೆ ದೇವಿಪ್ರಸಾದಂತೇಳ್ವೊರ ಯಜಮಾನ್ಕೆಲಿ ಅಮರಕ್ರಾಂತಿ ಉತ್ಸವ ಸಮಿತಿನ ರಚಿಸಿಕಂಡ್ ಸುಳ್ಯಂದ ಮಂಗ್ಳೂರಿಗೆ ಪದಯಾತ್ರ ನಡ್ಸಿದೊ. ೧೮೩೭ರಲ್ಲಿ ನಡ್ದ ಸೊತಂತ್ರ ಹೋರಾಟಲಿ ಹೋರಾಟ ಮಾಡ್ದವರ ನೆಂಪುಗಾಗಿ ಸ್ಮಾರಕ ಮ್ಯೂಸಿಯಂ ಮಾಡೊಕುತ ಸರ್ಕಾರಕ್ಕೆ ಹಕ್ಕೊತ್ತಾಯ ಸಲ್ಸಿದೊ. ಸುಳ್ಯದ ಮಾರ್ಗಗಳಿಗೆ ಹೋರಾಟ ಮಾಡ್ದವರ ಹೆಸ್ರ್ ಇಸೊಕುಂತೇಳುವ ಸಮಿತಿಯವರ ಬೇಡಿಕೆ ಕೂಡಾ ಬೆಲೆ ಸಿಕ್ಕಿತ್ಲೆ. ನಮ್ಮ ಸೊತಂತ್ರ ಹೋರಾಟಗಾರರ ಪೈಕಿ ಹೆಚ್ಚಿನವ್ ಯಾರಿಗೂ ಗೊತ್ತಾಗದಂಗೆ ಹೆಸ್ರಿಲ್ಲದೆ ಉಳ್ದ್‌ಬುಟ್ಟೊ.

ಈ ಪ್ರಬಂಧಲಿ ನನ್ನ ಗಮನಕ್ಕೆ ಬಂದ ಹೆಸ್ರ್‌ಗಳ ಮಾತ್ರ ಬರ್ದವ್ ಒಂದ್ ಮಿತಿಂತೇಳಿ ನಾ ಒಪ್ಪಿಕಣೆ. ಇದರ ಮುಂದರ್ಸಿ ೧೮೩೭ರ ಹೋರಾಟಗಾರರ ಹೆಸ್ರ್ ಮತ್ತೆ ಸಾಹಸದ ಇಸಯಗಳ ಮೇಲೆ ಸಂಶೋಧನೆ ನಡ್ಸಿಕೆ ಯುವಪೀಳಿಗೆಯವ್ಕೆ ಸಾಧ್ಯ ಆಗಲಿಂತೇಳಿ ಹಾರೈಸಿನೆ.

ಈ ಲೇಖನಕ್ಕೆ ಮಾಹಿತಿ ಒದ್ಗಿಸಿದ ಪುಸ್ತಕಂಗ:

೧. ಸಂಪಾಜೆ ದೇವಿಪ್ರಸಾದ್ : ಅಮರಸುಳ್ಯದ ಸ್ವಾತಂತ್ರ್ಯ ಸಮರ: ೯೪೪೮೪೨೨೩೪೪

೨. ಡಾ. ಪ್ರಭಾಕರ ಶಿಶಿಲ : ಮೂಡಣದ ಕೆಂಪು ಕಿರಣ: ೯೪೪೮೨೨೫೦೧೮

೩. ಡಾ. ಪೂವಪ್ಪ ಕಾಣಿಯೂರು : ಕುಕ್ಕೆಯಲ್ಲಿ ನಾಗರ ಮಡಿಕೆ : ೨೦೧೯೩೩೬೧೬೫

೪. ಡಿ. ಜಿ. ನಡ್ಕರೊಟ್ಟಿಗೆ ಮಾತ್‌ಕತೆ

ಕನ್ನಡ ಮೂಲ: ಡಾ. ಪ್ರಭಾಕರ ಸಿಶಿಲ

ಅರೆಬಾಸೆಗೆ ತರ್ಜಿಮೆ: ಉದಯಭಾಸ್ಕರ


ಹನಿಕತೆ :

ಒಂದೆರಡು ಸಾಲಿನ ಕತೆಗ

ಕುಮಾರ ಸಿ. ಟಿ. ತೊಡಿಕಾನ
ಮೊ. 9483412381.
ರೂ.ನಂ.28, ಗ್ರಂಥಾಲಯ ಶಾಖೆ,
ನೆಲ ಮಹಡಿ, ವಿಧಾನಸೌಧ., ಬೆಂಗಳೂರು–560233

1. ಕೆಲಸದವ ಕೆಲಸ ಮಾತ್ರ ಮಾಡ್ತಿತ್ಲೆ. ತೋಟಂದ ಅಡಿಕೆ ಕೂಡ ಕದಿತಿತ್.
2. ರಾತ್ರಿ ಮನೇಗೆ ನಾ ಲವ್ ಮಾಡ್ದ ಗೂಡೆ ಬಂದಿತ್ ಹಂಗೆ ನಾ. ನನ್ನ ಮನೆವುಕೆ ಊಟಕ್ಕೆ ಎರಡ್ ನಿದ್ದೆ ಮಾತ್ರ ಹಾಕಿ ಕೊಟ್ಟೆ. ಆ ಮಾತ್ರೆಗೆ ಪವರೇ ಇಲ್ಲೆ. ಮನೆವು ರಾತ್ರಿಡೀ ಎಚ್ಚರ ಇದ್ದೊ.
3. ಪ್ರಾಯ ಹೋದ ಕಾಲಕ್ಕೆ ನೋಡಿಕೊಳ್ಳೊವು ಇಲ್ಲದಿದ್ದರೆ ತೊಂದರೆ ಇಲ್ಲೆ. ಆದ್ರೆ ಮಾತಾಡಿಕೆ ಮೊಮ್ಮಕ್ಕ ಮಾತ್ರ ಬೇಕ್.
4. ಅಂದ್ ಶಿವರಾತ್ರಿಯಾದ ಕಾರಣ ನನ್ನ ಫ್ರೆಂಡ್‌ಗ ಎಲ್ಲಾ ಸೇರಿ ನನ್ನ ಜಾಳೆ ಮರ ಹತ್ತಿಸಿದೊ. ಕೆಳಗೆ ಬಿದ್ದ ಜೊಂಡ ಕುಡ್ದ್ ಮನೇಗೆ ಹೋದೊ ನಾ ಮಾತ್ರ ಮರಲೇ ಬಾಕಿ.
5. ನಂಗೆ ಸರಾಯ ಕುಡಿದು ಅಂದ್ರೆ ತುಂಬಾ ಇಷ್ಟ. ಒಂದಿನ ಕುಡ್ದ್ ಮುಸ್ಲಿಮರ ಹೋಟೆಲ್‌ಗೆ ಹೋಗಿ ರಾಮ ಮಂದಿರ ಕಟ್ಟಿಕೆ ಹೇಳಿದ್ದೆ. ಅವು ಅತ್ ಕಟ್ಟೊಮೊ ಅಂದ ನೆನಪು.
6. ಈ ಸಲ ಮಳೆ ಬಂದ್ ತೋಟ ಎಲ್ಲಾ ಬೊಳ್ಳಲಿ ಹೋಗುಟ್ಟು. ಮನೆ ದೇವ್ರುಗಳ ಹರ್ಕೆ ಮಾಡಿಕೆ ಈ ಸಲ ತುಂಬಾ ಕಷ್ಟ ಆಗುಟ್ಟು. ನೋಡೊಕು ದೇವ್ರ ಕೊಟ್ರೆ ಮಾಡ್ತು.
7. ಕೈಕಾಲ್ ನೆಟ್ಟಗೆ ಇರಿಕಾನ ಎಲ್ಲವುಕೆ ಒಳ್ಳೆದ್ ಮಾಡೊಕು. ಇಲ್ಲಾಂದ್ರೆ ಪ್ರಾಯ ಆಕನ ನಮ್ಮ ಮಾತಾಡ್ಸೊವು ಯಾರು ಇರ್ದುಲೆ. ಒಬ್ಬಂಟಿ ಬದ್ಕಿಕೆ ತುಂಬಾ ಕಷ್ಟ.
8. ದೇಶ ಭಾಷೆ ಕಟ್ಟಿಕೆ ಹೋಕಾಕನ ನಾವು ಜಾತಿ–ಧರ್ಮ ಬಿಟ್ಟ್ ಎಲ್ಲವುನ ವಿಶ್ವಾಸಕ್ಕೆ ತಗೋನೊಕು. ಅಂಥ ನನ್ನ ಅಪ್ಪ ಹೇಳ್ದ ಮಾತ್ ಈಗ ನೆಂಪಾತ್. ನಾ ಈಗ ಹಂಗೆ ನಡಿತೊಳೆ.

ಇತಿಹಾಸದ (ಚರಿತ್ರೆನ) ಕಣ್ಣ್‌ಲಿ ಅರೆಭಾಷಿಗರ್



ಡಾ. ಪೂವಪ್ಪ ಕಣಿಯೂರು

ಪ್ರಸ್ತಾವನೆ

ಅರೆಭಾಷಿಕ ಸಮುದಾಯಾಂತ ನಾವು ಹೇಳ್‌ಕನ ನಾವ್ಗೆ ಗೌಡ ಸಮುದಾಯನೇ ಕಣ್ಣಿಗೆ ಕಟ್ಟಿ ನಿತ್ತದೆ ಕಾರಣ ಏನ್? ಅಂದರೆ ಅರೆಭಾಷೆ ತುಳುನಾಡ್‌ದಲ್ಲ ಹಾಂಗೆ ಇದರ ಮಾತಾಡ್ವ ಜನನೂ ತುಳುನಾಡ್‌ನೊವಲ್ಲ ಈ ಭಾಷೆನ ಚರಿತ್ರೆನು ಭಾರಿ ಪ್ರಾಚೀನ ಅಲ್ಲ. ಇದ್ ಹೊರಗೆಂದ ಬಂದ ಗೌಡ್ರ್‌ಗಳ್ ತಂದದ್ ಎಂಬ ವಿಷಯಲಿ ಚರ್ಚೆ ಇಲ್ಲೆ. ಅರೆಭಾಷಿಕ ಮೂಲದ ಜನ ಇದಕ್ಕೆ ಅಭಿಮಾನ ಪಡೊಕು. ಇಂದ್ ಅರೆಭಾಷೆನ ಮೂಲದ ಗೌಡ್ರ್‌ಗ ಮಾತ್ರ ಮಾತಾಡ್ದು ಅಲ್ಲ. ಅರೆಭಾಷಿಕರ್ ನೆಲೆ ನಿಂತ ಜಾಗೆಲಿ ಎಲ್ಲಾ ಜಾತಿ ಸಮುದಾಯದೊವ್ರನೂ ಮಾತಾಡುವೆ ಇಂದ್ ಅರೆಭಾಷೆ ವಿಸ್ತರಿಸಿಕೊಂಡುಟು. ಒಂದು ಭೌಗೋಳಿಕತನ ಸಾಮಾಜಿಕ ಭಾಷೆ ಆಗಿ ಬೆಳ್ದುಟು. ಇದು ಗೌಡ್ರುಗಳ ಕೊಡುಗೆ ಎನ್ನುವ ಕಾರಣಕೆ ಅವ್ ಸಂತೋಷ ಪಡೊಕು.

ವಲಸೆ ಪೂರ್ವಲಿ ಇಂದ್‌ನ ದಕ್ಷಿಣ ಕನ್ನಡದ ಅರೆಭಾಷಿಕರ್

ಇಂದ್ ಸು. 5 ಲಕ್ಷದಷ್ಟ್ ಇರುವ ಈ ಅರೆಭಾಷಿಕರ್ ಮೂಲತಃ ಯಾರ್? ಒಟ್ಟಾರೆ ತುಳುನಾಡ್‌ಲಿ ಕಾಂಬ ಬಹು ಸಂಖ್ಯಾತ ಗೌಡ್ರ್ ಮೂಲತಃ 'ಗಂಗಡಿ(ಟಿ)ಕಾರ' ಸಮುದಾಯಕ್ಕೆ ಸೇರ್ದವು ಆಗೊಳೊ. ಗಂಗಡಿ(ಟಿ)ಕಾರರ ಕುರ್ತು ಚರ್ಚಿಸುವ ಎಲ್ಲಾ ವಿದ್ವಾಂಸರ್ಗ ಇವು ಗಂಗರ ಮೂಲ ಪರಿವಾರದೊವ್ರಂತ ತೀರ್ಮಾನಿಸ್ಕೊಳೊ. ಗಂಗರು ಶತಮಾನಗಳ್ಲಿ ಕರ್ನಾಟಕನ ಆಳ್ದ ಪ್ರಖ್ಯಾತ ರಾಜವಂಶ ಹಾಂಗೆ ಕಾಲಾನುಗತ ರಾಜ್ಯ ಕಳಕಂಡ್ ಅವು ಹಳೆ ಮೈಸೂರ್ ಪ್ರಾಂತ್ಯಲಿ ವಿಸ್ತಿರಿಸಿಕಂಡೊ. ಹಾಂಗೆ ಕರ್ನಾಟಕದ ಗಡಿ ಭಾಗ ಆದ ತಮಿಳ್‌ನಾಡ್ನ ಕೊಯಂಮುತ್ತೂರು ಧರ್ಮಪುರಿ ಪ್ರದೇಶಗಳ್ಲಿ, ಆಂಧ್ರದ ಪ್ರದೇಶಗಳ್ಲಿ ವಿಸ್ತರಿಸಿಕಂಡ್ ಗೌವುಂಡರ್, ರೆಡ್ಡಿಗ ಕರ್ನಾಟಕದ ಮಲೆನಾಡ್‌ಲಿ ನಾಯಕ, ಹೆಗ್ಡೆ ಅಂತ ಕರ್ಸ್ಕೊಂಡು, ರೈತಾಪಿಗ ಆಗಿ ತಾವು ಗಂಗ ಕುಲ ಮೂಲದವೆಂದು ಕರ್ಸ್ಕೊಂಡೊ.

'ಗೌಡ ಪದ ಜಾತಿ ಸೂಚಕ ಅಲ್ಲ. ಅಧಿಕಾರ ಸ್ಥಾನಿ ಪರಿಕಲ್ಪನೆ ಆಗುಟು. ಗ್ರಾಮದ ಮುಖಂಡ ಎಂಬರ್ಥಲಿ ಈ ಪದ ರೂಪಗ ಶಾಸನಗಳ್ಲಿನೂ ಪ್ರಯೋಗ ಆವುಟು. ಗಂಗರ ರಾಜ್ಯ ಸ್ಥಾಪಿಸಿದಂವನಾದ 'ದಡಿ'ಯಂನಿಗೆ ಕೊಂಗುಣಿವರ್ಮ ಎಂಬ ಹೆಸ್ರ್ ಇದ್ದ ಹಾಂಗೆ ಇಂವ ಕ್ರಿ.ಶ 1014 ರ ಶಾಸನವೊಂದರ್ಲಿ ಕೊಂಗುಣಿ ಗಾವುಂಡಂತ ದಾಖಲಾಗುಟು. ಸುಳ್ಯ ಬಳ್ಪದ ಶಾಸನಲಿನೂ 'ಕೆಳದಿಯ ಚಉಡ ಗಉಡರ' ಮಕ್ಕ ಸದಾಶಿವ ನಾಯಕರ್ ಎಂದ್ ದಾಖಲಾಗುಟು. ಮೂಲಲಿ ಯಜಮಾನ ಎಂಬರ್ಥಲಿ ಬಳಕೆ ಇದ್ದ 'ಗೌಡ' ಮುಂದೆ ಜಾತಿ ಸೂಚಕ ಆಗಿ ಬಳಕೆಗೆ ಬಂದುಟು. ತುಳುನಾಡ್‌ಲಿ ವೃತ್ತಿ ಸೂಚಕ 'ಒಕ್ಕಲಿಗ' ಪದನ ಕಳ್ಚಿಕಂಡ್ ಸ್ಥಾನ ನಿರ್ದೇಶನ 'ಗೌಡ' ಪದನ ಮಾತ್ರ ಉಳ್ಸಿಕಂಡುಟು. ಆದರೂ ಸರ್ಕಾರ ನೀಡ್ವ ಜಾತಿ ಪ್ರಮಾಣ ಪತ್ರಲಿ ಇಂದ್ ಸ 'ಒಕ್ಕಲಿಗ ಗೌಡ' ಅಂತನೇ ಇದ್ದದೆ. ತುಳ್‌ನ 'ಬಾರಗ' ಪದ ಭತ್ತ ಬೆಳೆವ ಜಮೀನ್ದಾರ ವರ್ಗನ ಸಾಂಕೇತಿಸಿದೆ. ನಾಡವ, ನಾಡ ಗೌಡ, ಒಕ್ಕಲ್ದೆ ಪರಿಕಲ್ಪನೆಗ ಬಂಟರನ್ನ ಉಲ್ಲೇಖಿಸಿದೆ.

ಗೌಡ್ರ್ ಗೌಡ ದೇಶ ಬಂಗಾಳಂದ ಬಂದೊನಾ?

ಪ್ರಾಚೀನ ಆಗಿ ಇಂದಿನ ಬಂಗಾಳನ 'ಗೌಡ', 'ಗೌಡಿ' ದೇಶ ಅಂತ ಕರೆಯುತ್ತಿದ್ದೊ. ಈ ದೇಶನ ಹಿಂದೆ ಚಕ್ರವರ್ತಿ ಹರ್ಷವರ್ಧನನ ಅಣ್ಣ ರಾಜವರ್ಧನ ಅಳ್‌ತಿತ್ ಗಡ. ಅವನ ಸಾವಿಗೆ ಕಾರಣ ಆದ ಶಶಾಂಕನ ಮೂಲದವೇ ಗೌಡರೆಂದು ಕಲ್ಪಿಸಲಾಗುಟು. ಅಣ್ಣನ ಕೊಲೆಗೆ ಕಾರಣ ಆದ ವಿದ್ರೋಹಿ ಶಶಾಂಕನ ಪರಿವಾರ 'ಗೌಡಿಗ' ಹರ್ಷವರ್ಧನನ ಕೋಪಕ್ಕೆ ತುತ್ತಾಗಿ ದಕ್ಷಿಣ ಭಾರತಕ್ಕೆ ವಲಸೆ ಆದೊ ಅಂತ ಪ್ರತೀತಿ. ಆದರೆ ಇತಿಹಾಸಕಾರ 'ಬಿ. ಶೇಕ್ ಅಲಿ'ಯವು ಮಾಡುವ ತಾರ್ಕಿಕ ಚರ್ಚೆಲಿ ಈ ಕಲ್ಪಿತಗ ಬಿದ್ದ್ ಹೋದವ. ಹಳೆ ಮೈಸೂರು ಭಾಗಲಿ ಗಂಗಡಿಕಾರ, ಆನೆಯವ, ಮುಳ್ಳು ಜನ ಎಂದ್ ಕರಕೊಂಡಿದ್ದ ಒಕ್ಕಲಿಗರ್ ಕನ್ನಡ ನಾಡ್ನವೇ ಆದ ಒಕ್ಕಲಿ ಮೂಲದ ಗಂಗರ ಪರಿವಾರದೊವ್ರಂತೇಳ್ವದ್ರಲ್ಲಿ ಅನುಮಾನ ಇಲ್ಲೆ.

ಗೌಡ್ರ್ ಕನ್ನಡ ಮಣ್ಣ್‌ನ ಕೃಷಿ ಮೂಲದೊವು ಆಗಿ ರಾಜ್ಯ ಕಟ್ಟಿದೊ ಅದರ್ಲಿ ವಿಫಲರಾದ ನಂತರ ಪೂರ್ವ ಪರಂಪರೆ ಹಿನ್ನೆಲೆ ಹಿರಿಮೆಲಿ ಸಾಮಂತ ಚಕ್ರವರ್ತಿ ಅರಸರ್ಲಿ ಅಧಿಕಾರ ಸ್ಥಾನ ಪಡ್ಡಿದ್ದೊ. ಇದ್ ಶಾಸನಲಿ ಸಾ ದಾಖಲಾಗುಟು. ವಿಜಯನಗರ ಕಾಲದ ಶಾಸನಗಳ್ಲಿ ಗ್ರಾಮದ ಯಜಮಾನನ ಎಂಬರ್ಥಲಿ ಗಉಡ ಪ್ರಭುಗ ಎಂದ್ ದಾಖಲಿಸ್ಯೊಳೊ. ಹಳ್ಳಿನ ಆಡಳಿತ ಗಾವುಂಡರ ಅಧಿನಲಿ ಇತ್. ಇದ್ ಮಲೆನಾಡ್ನ ಅರಸು ಮನೆತನಗಳ ಆಡಳ್ತ ಪದ್ಧತಿಂದ ತಿಳ್ದ್ ಬಂದದೆ. ತುಳುನಾಡ್ನ ಬಂಟರಂಗೆ <u>ಗೌಡ್ರ್‌ಗ ಸ ಮೂಲಃ ಮೀರ ರುದ್ರನ ಪೂಜಕರಾಗಿದ್ದೊ.</u> ಕೆಳದಿ ನಾಯಕರ್, ಬೇಲೂರು ನಾಯಕ, ಯಲಹಂಕ ನಾಡ ಪ್ರಭುಗ ಈ ದೃಷ್ಟಿಲಿ ಲಾಯ್ಕನ ಉದಾಹರಣೆಗ ಆಗ್ವೆ

ತುಳುನಾಡ್ಗೆ ಅರೆಭಾಷಿಗರ ಪ್ರಸರಣ :

ಸು. 14 ನೇ ಶತಮಾನಂದ ಈ ವಲಸೆ ಪ್ರಕ್ರಿಯೆ ನಡ್ಡುಟು. ಅರೆಭಾಷಿಕ ಗೌಡ್ರು ಶತಮಾನಗಳ ಹಿಂದೆಂದಲೇ ಹಾಸನ ಜಿಲ್ಲೆನ ಸಕಲೇಶಪುರ, ಮಂಜರಬಾದ್, ಮಾರ್‍ನಹಳ್ಳಿ, ಗೊರೂರು, ಹೊಸಕೋಟೆ, ಕುಮಾರಿ ಹಳ್ಳಿ, ದೇವರಬೆಟ್ಟ, ಎಡೆಕುಮೇರಿ, ಹೆತ್ತೂರು, ಆಲೂರು, ಕುಂಡೂರು, ಎಸಳೂರು ಪರಿಸರಲಿ ಗಂಗಡಿಕಾರ್ ಅಂತ ಕರ್‍ಕಂಡ್ ಬಹು ಸಂಖ್ಯೆಲಿ ವಾಸ ಇದ್ದೊ. ಈ ಸ್ಥಳಗ ಎಲ್ಲ ಮಲೆನಾಡ್‌ನ ಬೆಟ್ಟ ಸಾಲ್‌ಲಿದ್ದ್ ತುಳುನಾಡ್/ದ.ಕ ಜಿಲ್ಲೆಗೆ ಇಳ್ದ್ ಬಾಕ ಸುಲಭದ ರಹದಾರಿಗ ಆಗಿರ್‍ವ ಬಿಸಿಲೆ, ಶಿರಾಡಿ, ಬಂಗಾಡಿನ ಕಡ್ತಿಕಲ್ಲ್ ಇತ್ಯಾದಿ ಅಯಕಟ್ಟ್‌ನ ಸ್ಥಳಗಳಿಗೆ ಹೊಂದಿಕೊಂಡೊಳೊ. ಇದ್ ತುಳುನಾಡ್ನ ಆಳುಪರ ಆಳಿಕೆನ ಕಾಲಂದಲೇ ಘಟ್ಟದ ಮೇಲ್ನ ವ್ಯಾಪಾರ ವ್ಯವಹಾರಕ್ಕೆ ಇದ್ದ ದಾರಿಗ ಆಗಿದ್ದೊ. ದೈವಗಳ ಕಥೆಗ ಆಗಿರ್‍ವ ಪಾಡ್ದನಗಳ್ಲಿ ಸ ದೈವಗ 'ಸಮೊ ಗಟ್ಟ ಜತ್ತ್ ಬತ್ತೊಂಡೊ' ಅಂತ ದಾಖಲ್ಲಿಕೊಂಡವೆ. ಅದರ್ಲ್ ಶಿರಾಡಿ, ಪುರುಷ, ಅರಸು ದೈವಗ, ಮಾಡ್ತ ನುಡಿಕಟ್ಟ್‌ಗ ಅರೆಭಾಷಿಕರ್ ಇಳ್ದುಬಂದ ದಾರಿನನೇ ನಿರ್ದೇಶಿಸಿಕೊಂಡವೆ. ಅರೆಭಾಷಿಕರ ಪ್ರಸರಣ ದಾರಿಗ ಬಿಸಿಲೆ, ಶಿರಾಡಿ, ಬಂಗಾಡಿಗಳ್ಲಿಯೇ ಆಗುಟು. ಬಂಗಾಡಿಲಿ ಇಳ್ದ ಅರೆಭಾಷಿಗರ್ ಅಚ್ಚ ತುಳುನವೇ ಆಗ್ಯೊಳೊ. ಕಾರಣಂತೇಳ್ರೆ ಬೆಳ್ತಂಗಡಿ, ಪುತ್ತೂರ್‍ನ ಕೆಲಭಾಗಲಿ ಆಕಾಲಲಿ ತುಳುನವು ಹೆಚ್ಚ್ ಸಂಖ್ಯೆಲಿ ವಾಸ ಇದ್ದದ್ದೆ ಕಾರಣ ಆಗಿ ತುಳು ಪ್ರಭಾವ ಆಗುಟು. ಬಿಸಿಲೆ, ಶಿರಾಡಿ ಇಳ್ದ ಅರೆಭಾಷಿಕರ್ ಅರೆಭಾಷೆನ ಉಳ್ಸಿಕೊಂಬಕ್ಕೆ ಕಾರಣ ಉಟ್ಟು. ಸುಳ್ಯ ಪ್ರದೇಶನ ಆಯಕಟ್ಟ್‌ನ ಸ್ಥಳಲಿ ಅರೆಭಾಷಿಕರ್ ನೆಲೆ ಆಕನ, ಇಲ್ಲಿ ಜೈನ ಬಲ್ಲಾಳ್‌ರ್ ಬೀಡುಮನೆಗಳ್ಲಿ ಅಧಿಕಾರ ಸ್ಥಾನಲಿದ್ದೊ. ಬೈರರ್, ಕೊರಗರ್, ಮುಗೇರರ್, ಆದಿ ದ್ರಾವಿಡ ಮನ್ಸರ್, ಮಾಯಿಲರ್, ಮಲೆಕುಡಿಯರ್ ಮೂಲವಾಸಿಗ ಆಗಿ ಕುಮೇರು ಬೆಳಿತಿದ್ದೊ. ಗುಂಪು ಗುಂಪಾಗಿ ಇಳ್ದ ಬಂದ ಅರೆಭಾಷಿಕರ್ ಅಲ್ಲಲ್ಲಿ ಬಲ್ಲಾಳರ ಬೀಡ್‌ಗಳ್ಲಿ ಕರ್ಮಿ ವರ್ಗ ಆಗಿ ನೆಲೆ ನಿಂತಾಗ ಅವರ ಭಾಷೆ ಉಳಿಯಕೆ ಕಷ್ಟ ಆತ್ತೆ.

ಅರೆಭಾಷಿಗ ಗೌಡರ ಪ್ರಸರಣಕ್ಕೆ ಕಾರಣ:

ಹಲ ಕಾರಣನ ಜನ ಪ್ರತೀತಿಯಾಗಿ ಹೇಳ್ತಾ ಒಳೊ. ಇವು ಬರ್‍ದು ದಾಖಲಾದ ಸಂಗತಿಗ ಅಲ್ಲ; ಆ ಪ್ರಕಾರ ಐಗೂರು ಸೀಮೆಲಿ ಕಂಡದ ಮಳೆ ಬಂದ್ ಹೇಮಾವತಿ ನದಿ ಬತ್ತಿ ಹೋದ್, ಬೇಲೂರಿನ ಪಾಳೆಗಾರ ಹಾಂಗೆ ಐಗೂರು ಸೀಮೆನ ಆಳಿಕೊಂಡಿದ್ದ ಕೃಷ್ಣಪ್ಪ ಮತ್ತು ರಂಗಪ್ಪ ನಾಯಕರ ಕ್ರೂರ ಆಡಳ್ತ ಅಂತ ಹೇಳ್ವೆ. ಇದರೊಟ್ಟಿಗೆ ಕೆಳದಿಯ ಅರಸರ ಜಾತಿ ಪ್ರೇಮವೂ ಕಾರಣ ಆಗುಟುಂತನೂ ಹೇಳ್ತೊ ಒಳೊ. ಕೆಳದಿ ಅರಸಗ ಲಿಂಗಾಯತರಾದರೂ ಜಾತಿಲಿ ಗೌವುಡ ಮೂಲದವೇ ಆಗಿದ್ದೊ.

ವಿಜಯನಗರದರಸ ಆಗಿದ್ದ ಸದಾಶಿವರಾಯ (ಕ್ರಿ.ಶ. 1550) ಸಾಮಂತರಸ. ಕೆಳದಿಯ ಸದಾಶಿವ ನಾಯಕಂಗೆ ತುಳುನಾಡ್‌ನ 'ಅಮರ ಮಾಗಣೆ' ಅಂತ ಬಿಟ್ಟು ಕೊಟ್ಟಿತ್. ಆ ಕಾಲಲಿ ತುಳುನಾಡ್‌ನ ಅಧಿಕಾರ ನೋಡಿಕಂಬಕ್ಕೆ ದಂಡನಾಯಕರ ಕಳುಹಿಸಿಕೊಡುತ್ತಿದ್ದೊ. ಹಾಗೆ ಬಂದ ದಂಡ ನಾಯಕರ್ ಇಲ್ಲಿ ಪಾಳೆಗಾರರಾಗಿ ನೆಲೆ ನಿತ್ತೊ. ಅವರೊಟ್ಟಿಗೆ ಪರಿವಾರವಾಗಿ ಬಂದ ಅರೆಭಾಷಿಕರ್ ಇಲ್ಲಿ ನೆಲೆಯಾದೊ. ಲಿಂಗಾಯತ ಕುಟುಂಬದವ್ರ ಗೌಡರ್ ಆದ ಕುರ್‍ತು ಹಲ ಐತಿಹ್ಯಗ ನಮ್ಮಲ್ಲಿಟ್ಟು. 'ಮೂಡು ಕಟ್ಟೆಮನೆ' ಕೂಜುಕೊಡ್‌ನ ಕುರಿತ ಐತಿಹ್ಯನೇ ಉದಾಹರಣೆ ಆದೆ. ಬಳ್ಳಡ್ಕ ಮನೆತನ ಈ ದೃಷ್ಟಿಲಿ ಪ್ರಸಿದ್ಧವಾಗಿಟ್ಟು.

ಮತ ಮೂಲ ಕಾರಣ ಆಗಿಯೂ ಅರೆಭಾಷಿಕರ ವಲಸೆ ಆಗುಟು. ಸುಳ್ಯ ಸೀಮೆಲಿ ಬಲ್ಲಾಳರ ತರುವಾಯ ಅಧಿಕಾರ ನಡ್ಸಿದ ಕೇರಳ ಮೂಲನ 'ಚಾತುನಾಯರ್' ಶೃಂಗೇರಿ ಮಠ ಪತಿಗಳ ಅನುಮತಿ ಮೇರೆಗೆ ಶಿರಾಡಿ,

ಬಿಸಿಲೆ, ಸುಬ್ರಹ್ಮಣ್ಯ ದಾರಿಲಿ ತಂಡ, ತಂಡ ಅರೆಭಾಷಿಕರ ಕರೆತಂದ್ ಗ್ರಾಮಗಳ್ಲಿ, ಮುನ್ನೂರು, ಮೂವತ್ತ್, ಹತ್ತು
ಒಕ್ಲುಗ ಅಂತ ನೆಲೆಗೊಳಿಸಿಟು. ಅವು ಇಂದ್ ಸಹ ಹಾಂಗೆ ಕರೆದುಕೊಂಡವೆ.

ಐಗೂರು ಸೀಮೆಂದ ಅರೆಭಾಷಿಕ ಗೌಡರ್ ಹೀಗೆ ತುಳುನಾಡಿಗೆ, ಮುಖ್ಯ ಆಗಿ ಗುಂಡ್ಯ, ಸುಬ್ರಹ್ಮಣ್ಯ, ಗುತ್ತಿಗಾರ್,
ಮರ್ಕಂಜ, ಅರಂತೋಡು, ತೊಡಿಕಾನ, ಕರಿಕೆಲಿ ಆರಂಭಲಿ ನೆಲೆಯಾಗಿ ನಿಂತೊ. ಈ ವಲಸೆ ಪ್ರಕ್ರಿಯೆ ಒಂದೇ
ಸಲ ಆತ್ಲೆ. ಸು 14ನೇ ಶತಮಾನಂದ 17ನೇ ಶತಮಾನದವರೆಗೆ ನಡ್ದುಟು.

ಕೊಡಗ್‌ಲಿ ಅರೆಭಾಷಿಕ ಗೌಡರು:

ಕೊಡಗಿಗೆ ಅರೆಭಾಷಿಕರು 17ನೇ ಶತಮಾನದ ಕೊನೆಲಿ ವಲಸೆ ಆದೊ. ಕೊಡಗ್‌ಲಿ ಈಗ ವಾಸ ಇರುವ
ಕುಟುಂಬಗ ಸುಳ್ಯ ಪ್ರದೇಶಲಿರುವ ಪ್ರಧಾನ ಮನೆಗನೊಟ್ಟಿಗೆ ಗುರುತಿಸಿಕೊಂಡವೆ. ಕೆದಂಬಾಡಿ, ಉಳುವಾರು,
ಕುಡೆಕಲ್ಲು, ದಂಬೆಕೋಡಿ, ನಂಗಾರು, ಕುದ್ಪಾಜೆ, ದೇರಾಜೆ ಹಿಂಗೆ............... ಕೊಡಗಿಗೆ ಅರೆಭಾಷಿಗ ಗೌಡರು
ವಲಸೆ ಆಕ್ಕ ಕೆಂಡದ ಮಳೆಯ ಕಾರಣ, ಕುಲನಾಶ ಇತ್ಯಾದಿ ಕಾರಣನ ಹೇಳ್ವೆ.

ಒಂದು ಶತಮಾನದಷ್ಟು ದೀರ್ಘ ಕಾಲಲಿ ಕೊಡಗಿಗೆ ಅರೆಭಾಷಿಕರು ಘಟ್ಟ ಮೂಲಕ ವಲಸೆ ಆಗಿ ಭಾಗಮಂಡಲ
ಮುಂತಾದ ಪ್ರದೇಶಗಳ್ಲಿ ನೆಲೆನಿಂತೊ. ಕೊಡಗಲಿ ನೆಲೆನಿಂತ ಅರೆಭಾಷಿಕರಿಗೆ ಭೂಮಿ ಹಕ್ಕ್‌ನ ಕ್ರಿ.ಶ. 1805 ರಲಿ
'ದೊಡ್ಡವೀರರಾಜ' ನೀಡ್ದ ನಿರೂಪ -ಸನದು ಒಂದು ಹೀಗುಟ್ಟು. "ಶ್ರೀಮತು ಅರಮನೆ ಸೀಮೆವಳಿತವಾದ
ಮುತ್ತಾರು ಮುಡಿ ಗ್ರಾಮದಲ್ಲಿ ಇರುವ ಸುಳ್ಯ ಸೀಮೆ ಅರಂತೋಡು ಮಾಗಣೆ ಪಾರೆಮಜಲು ತುಳುವರ
ತಿಂಮಪುಗೆ ಅಪ್ಪಣೆ ದಯಪಾಲಿಸಿದ ಸನದು ಬುದಿ ನಿರೂಪ - ಅದಾಗಿ ಈಗ ನಿನಗೆ ಹೊಸ್ತಾಗಿ ಜಂಮಕ್ಕೆ ಇದೇ
ಗ್ರಾಮದಲ್ಲಿ ಕುಳ ನಷ್ಟವಾಗಿರುವ ಕೊನ ಕುಂಡರ ಭೂಮಿ 250 ಭಟ್ಟಿ ಬೆಳಂಚಟ್ಟು ಭೂಮಿ 250 ಭಟ್ಟಿ. ಈ
ಭೂಮಿಯನ್ನು ನಿನ್ನ ಪೌತ್ರ ಪಾರಂಪರ್ಯವಾಗಿ ಜಂಮವಾಗಿ ಅನುಭವಿಸಿಕೊಂಡು ಸ್ವಾಮಿಕಾರ್ಯ ಮುಖ್ಯವಾಗಿ
ನಡಕೊಳ್ಳುವುದು ಅಪ್ಪಣೆ" ಇದ್ ಅರೆಭಾಷಿಕರು ತುಳು ಪ್ರದೇಶ ಸುಳ್ಯಂದ ಕೊಡ್ಗ್‌ಗೆ ಹೋಗಿ ನೆಲೆನಿಂತ ಕುರ್ತ್
ಆಧಾರ ಆದೆ.

ಅರೆಭಾಷಿಕರ ಐನ್‌ಮನೆಗ ಮತ್ತು ಕಟ್ಟೆಮನೆಗ

ಒಕ್ಕಲಿಗ ಮೂಲ ಅರೆಭಾಷಿಕರ್ ಹಾಸನದ ಐಗೂರು ಸೀಮೆಂದ ತುಳುನಾಡ್‌ಗೆ ವಲಸೆ ಆದ ಕಾಲ ಘಟ್ಟಲಿ
ಅವರ ಜೀವನ ಹೇಗಿರ್ದು? ಯೋಚನೆ ಮಾಡಿಕೆ ಆದುಲೆ; ಕಲ್ಪನೆಗೆ ನಿಲುಕುದುಲೆ. ಬಹುಷ: ಆಗ ಅವು ಇಂದು
ಹೊರಗ್‌ಂದ ನಮ್ಮಲ್ಲಿಗೆ ಕೆಲ್ಸ ಹುಡುಕಿಕಂಡ್ ಬರುವ ಜನಗಳಂಗೆ ಇದ್ದಿರ್‍ದೊ. ಇಂದ್ ಅರೆಭಾಷಿಕರ್ ಹೊಂದಿರುವ
'ಯಜಮಾನಿಕೆ'ನ ಅಂದ್ ಪಡ್ದಿರ್ದ ಸಾಧ್ಯತೆ ಇಲ್ಲೆ. ಆಗ ಅವು ಅಧಿಕಾರ ಸ್ಥಾನಿ ಬೀಡು ಬಲ್ಲಾಳ ಬೀಡ್‌ಗಳ್ಲಿ
ಕೆಲಸದವರಾಗಿ, ಉಳುಮೆಗಾರನಾಗಿ ಸೇರಿಕೊಂಡೊ. ಬಂಗಾಡಿ, ಶಿರಾಡಿಲಿ ಅಚ್ಚ ತುಳುನಾಡಿಗೆ ಇಳ್ದ ಅರೆಭಾಷಿಗರ್
ತಮ್ಮ ಭಾಷೆನ ಸ ಉಳಿಸಿಕೊಂಬಕ್ಕೆ ಆತ್‌ಲೆ. ಇನ್ನ್ ಯಜಮಾನಿಕೆನ ಮಾತ್ ಎಲ್ಲಿಂದ ಬರೋಕು? ಅಲ್ಲಿನ
ಅರೆಭಾಷಿಕರ್, ತುಳುವರಾಗಿ ಶಿಕ್ಷಣ- ಭೂಮಿ ಹಕ್ಕ್ ಪಡ್ಯೋಕಾದರೆ 20ನೇ ಶತಮಾನದ 70ರ ದಶಕಲಿ ಬಂದ
ಭೂ ಸುಧಾರಣೆ ಕಾಯ್ದೆಯವರೆಗೆ ಕಾಯೋಕಾತ್.

ಒಂದ್ ಕಾಲಲಿ ಗ್ರಾಮಾಧಿಕಾರದ ನೆಲೆಲಿ 'ಗಾವುಂಡ'ರಂದ್ ಕರ್‍ಯೊಂಡ್ ಇದ್ದ ಇವು ಗೇಣಿ ಒಕ್ಕಲ್ಗ ಆಗಿ
ದುಡಿಯೊಕಾಗಿತ್ತ್. 'ಗಾವುಂಡ' ಸ್ಥಾನಲಿ ಅವು ಗುರುತ್ಸಿಕೊಣಕಾದರೆ ಕಾಲದ ಗತಿಲಿ ಹೆಜ್ಜೆ ಹಾಕೊಕಾತ್; ಇಲ್ಲೆ
ಸಂಘರ್ಷದ ನೆಲೆಲಿ ಸಂಪಾದಿಸೋಕಾತ್.

ವಲಸಿಗ ಅರೆಭಾಷಿಕ ಗೌಡ್ರಗ ಪ್ರಬಲ ಶಕ್ತಿಗ ಆಗಿದ್ದ ಬೀಡು ಬಲ್ಲಾಳ ಮೂಲಲಿ ಗುರುತಿಸಿಕಂಡ ಕಾಲದ
ಗತಿ-ಸ್ಥಿತ್ಯಂತರಗ ಹೇಂಗಿತ್ತ್ ಅನ್ನುದರ ಕೆಲ ಗೌಡರ ಮನೆತನ ಮೂಲಂದ ತಿಳಿಯಕ್ಕೆ ಹಲ ಐತಿಹ್ಯಗಳಿಂದ
ಸಾಧ್ಯವುಟ್ಟು.

ಉದಾ : 1 ಹಾಸನದ ಐಗೂರು ಸೀಮೆಂದ ಶಿರಾಡಿ ಘಟ್ಟ ಮೂಲಕ ತುಳುನಾಡಿಗೆ ಬಂದ ನಾಲ್ಕು ಜನ ಗೌಡರಲ್ಲಿ
ಒಬ್ಬ ಅರಂತೋಡು ಎಂಬಲ್ಲಿಗೆ ಬಾತ್. ಅರಸು ಮಜಲ್ಲ ಅಳಿಕೆ ಬೀಡು ಬಲ್ಲಾಳರಲ್ಲಿ ಅಂವ ಕೆಲ್ಸಕ್ಕೆ ಸೇರಿ
ಕಂಡತ್. ಆಗ ತೊಡಿಕಾನ ಪ್ರದೇಶನ ಈ ಬಲ್ಲಾಳಗ ಆಳುತ್ತಿದ್ದೊ. ಹೀಗೆ ಸೇರ್‍ಕಂಡ ಗೌಡ, ಅತೋಟ್ಟ್‌ನ
ಬಲ್ಲಾಳರ ಭೂಮಿನ ಉಳುಮೆ ಪಡ್‌ಕಂಡಿತ್. ಬಲ್ಲಾಳ ಸಂತತಿಲಿ ಕೊನೆಯ ವ್ಯಕ್ತಿ ಬಲ್ಲಾಳ್ತಿಗೆ ಮಕ್ಕಳಾತಿಲೆ.

ಈ ಕಾಲಲಿ ಗೌಡ ಸಂತತಿನ 'ತಿಮ್ಮ' ಈ ಬಲ್ಲಾಳ್ತಿನ ವ್ಯವಹಾರಿಯಾಗಿ ಸೇರಿಕಂಡತ್. ಮುಂದೆ ಸಂತತಿ ಹೀನೆಯಾಗಿ ಬಲ್ಲಾಳ್ತಿ ಸತ್ತು ಹೋಕನ ಇಂವನೇ ಬಲ್ಲಾಳ್ತಿನ ಆಸ್ತಿಗೆ ಹಕ್ಕ್ ಬಾಧ್ಯನಾತ್. ಹೀಗೆ ಉಳುಮೆಗಾಗಿ ಸೇರ್‍ಕಂಡ ತಿಮ್ಮನ ಸಂತತಿ ಮುಂದೆ ಉಳುವಾರ್ ಮನೆತನ ಆತ್. ಮುಂದೆ ವಾಸ ಮಾಡುವ ಮನೆ ಐನ್‌ಮನೆ ಆತ್. ಈ ಐನ್‌ಮನೆ ಬೇರೆ ಮನೆಗಳ್‌ಂದ ಭಿನ್ನವಾಗಿಟ್ಟು.

ದೈವ- ದೇವ್ರುಗ, ಜೀವನಾವರ್ತನದ, ವಾರ್ಷಿಕಾವರ್ತನದ ಸಮಸ್ತ ಸಾಂಸ್ಕೃತಿಕ ಆಚರಣೆಗ ಕುಟುಂಬದ ಸಮಸ್ತರ ಒಗ್ಗೂಡುವಿಕೆಂದ ಈ ಮನೆಲಿ ನಡ್ದದೆ. ಇವ್ ಐತಿಹಾಸಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ, ಆಡಳಿತಾತ್ಮಕ ಮಹತ್ವ ಪಡ್ದಿದ್ದದೆ.

ತುಳುನಾಡ್ನ ಪಡ್ಡಿರೆ ಮನೆ, ಬಯಲ್ ಸೀಮೆನ ತೊಟ್ಟಿ ಮನೆಗಳ ರಚನೆಗೆ ಅರೆಭಾಷೆ ಗೌಡ್ರುಗಳ ನಾಲ್ಕಂಕದ ಮನೆ ರಚನೆನ ತೌಲನಿಕವಾಗಿ ನೋಡ್ರೆ, ಅವೆರಡಕ್ಕೂ ಪರಸ್ಪರ ಹೊಂದಾಣಿಕೆ ಇರ್‍ದು ಕಂಡದೆ. ಇವು ಬಯಲ್ ಸೀಮೆಂದ ಬಂದವಾದ್ದರ್‌ಂದ ತೊಟ್ಟಿಮನೆ ರಚನೆನ ಸಂಕಲ್ಪಿಸಿರ್ದರ್‌ಲ್ಲಿ ಆಶ್ಚರ್ಯ ಇಲ್ಲೆ. ಸಾಮಾನ್ಯ ವಾಸದ ಮನೆಗ ಭೌಗೋಳಿಕ ಪರಿಸರನ ಅನುಲಕ್ಷಿಸಿ ನಿರ್ಮಾಣ ಆದವೆ. ಈ ನೆಲೆಲಿ ತುಳುನಾಡ್‌ಗೆ ಬಂದ್ ನೆಲೆಸಿದ ಗೌಡ್ರುಗ ಇಲ್ಲಿನ ಗುತ್ತು ಬೂಡುನ 'ಸುತ್ತು ಪಡ್ಡಿರೆ ಮನೆ'ಗೆ ಸಮಾನಾಂತರ ಆಗಿ ಐನ್‌ಮನೆ/ ನಾಲ್ಕಂಕಣದ ಮನೆ ಕಟ್ಟಿರುವ ಸಾಧ್ಯತೆ ಉಟ್ಟು. ಅಧಿಕಾರ ಸ್ಥಾನದ ಪ್ರತಿನಿಧಿಗ ಆಗಿ ಊರು-ಗ್ರಾಮ ಅಧಿಕಾರನ ನಡ್ಸಿಕೊಂಡು ಬರ್‍ದ ಹಿನ್ನೆಲೆಲಿ ಸಾಮಾಜಿಕ, ಧಾರ್ಮಿಕ ವ್ಯವಸ್ಥೆನ ಮೇಲೂ ಹಿಡಿತ ಮಾಡ್ದು ಸಾಮಾನ್ಯ. ಇದ್ಕೆಗೆ ಪೂರಕ ಆಗಿ 'ಸುತ್ತುಪಡ್ಡಿರೆ' ಮನೆಗ ಇತರ ಸಾಮಾನ್ಯ ಮನೆಗಿಂತ ಬೇರೆ ಆಗಿರ್ದು ಸಹಜ. ಇದರ ರಚನೆನೂ ಸ ಶ್ರೇಣೀಕೃತ ಸಮಾಜ ವ್ಯವಸ್ಥೆನ ಪ್ರತಿನಿಧಿಸುವಂತಿರಕಾದ್ ಅನಿವಾರ್ಯ. ಹಂಗಾಗಿ ಸುತ್ತುಂಕಣದ ಸುತ್ತು ಪಡ್ಡಿರೆನ ವಿಶಾಲವಾದ ಚಾವಡಿ, ಕೆತ್ತನೆ ಕಂಬಗ ಉಯ್ಯಾಲೆಲಿರ್ದ ದೈವಭಂಢಾರ ಇವೆಲ್ಲ ಮನೆಗೆ ಭವ್ಯತೆನ ತಂದ್ ಕೊಟ್ಟದೆ. ಇಂತಹ ಮನೆ ಚಾವಡಿಲಿ ಮನೆಯ ಯಜಮಾನ ದೈವ ಪ್ರತಿನಿಧಿ ಎನ್ನುವ ನೆಲೆಲಿ ಪಂಚಾತಿಗೆ ಮೂಲಕ ನ್ಯಾಯ ತೀರ್ಮಾನ ಕೊಟ್ಟ್ ಕುಟುಂಬದ ಸಮಸ್ಯೆನ ಬಗೆಹರ್‍ಸಿಕಂಡವೆ. ಇದೇ ರೀತಿಲಿ ಗೌಡ್ರ ಐನ್‌ಮನೆನ ಚಾವಡಿನೂ ಮಹತ್ವ ಪಡ್ದದೆ.

ಗೌಡ ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ ಸಂರಚನೆಗ ಕಟ್ಟೆಮನೆಗಳ್‌ಂದ ನಿಯಂತ್ರಿತ ಆದವೆ.

ಬಯಲ್ ಸೀಮೆಲಿ ಗೌಡ್ರುಗ ಗಂಗಡಿಕಾರರ್ ಎಂದ್ ಕರ್‍ಕಂಡ. ಅದೇ ಮೂಲಂದ ಬಂದಿರ್ದ ಗೌಡ್ರಗಳಿಗೆ ಬಳಿ/ಗೋತ್ರವೆನ್ನುವ ಪದ್ಧತಿ ನಂತರ ಸೇರಿಗೆ ಆವುಟು. ಮೂಲಲಿ ಅದ್ ಇತ್ತ್ಲೆ. ಗೌಡ್ರಿಗಿಂತ ಪೂರ್ವಲಿ ವಲಸಿಗರಾಗಿದ್ದ ಬಂಟ, ಬಿಲ್ಲವ ಇವ್ಕೆನೂ 'ಬಳಿ' ಪದ್ಧತಿ ಉಟ್ಟು. ಗೌಡ್ರುಗ ಗುರ್‍ತಿಸಿಕೊಂಡಿರ್ದ 18 ಬಳಿಗಳ್ಲಿ ಮೂಲ ಬಳಿಗ ಬಂಗರ, ನಂದರ, ಮೂಲರ ಇವೆಲ್ಲ ತುಳುನಾಡ್ನ ಆಳ್ದ ಜೈನ ಬಲ್ಲಾಳ ವಂಶದ ಹೆಸರನ ಹಾಂಗೆ ಗೋಚರಿಸ್ತದೆ. ತುಳುನಾಡ್ನ ಮೂಲ ನಿವಾಸಿಗ ಆಗಿರುಂವ ಮಲೆಕುಡಿಯ, ಮುಗೇರ ಇವ್ಕೆ ಬಳಿ ಉಟ್ಟು. ಬಹುಷಃ ಅಧಿಕಾರ ಸ್ಥಾನಿ ಬಲ್ಲಾಳರ್ ಈ ಮೂಲನಿವಾಸಿಗಳಿಗೂ ಇದರ ನೀಡಿರೊಕು. ಹಾಂಗೆ ಕಲಾಂತರಲಿ ಗುಂಪು ಗುಂಪಾಗಿ ಬಂದ ಗೌಡ್ರ ಗುಂಪುಗಳಿಗೂ ಪ್ರತ್ಯೇಕ ಗುರುತಾಗಿ ಈ ಬಳಿನ ಇವೇ ನೀಡಿರೊಕು. 'ಬಳಿ'ನು ಗೋತ್ರನು ಒಂದೇ ಆಗಿರ್‍ಕೆ ಸಾಧ್ಯ ಇಲ್ಲೆ. ಗೋತ್ರ ಗೋಷ್ಠಿಂದ ಬಂದದ್. ವಿಶ್ವಾಮಿತ್ರ, ವಶಿಷ್ಠ ಇದೆಲ್ಲಾ ವೈದಿಕರ ಗುರು ಪರಂಪರೆಂದ ನಿಷ್ಪನ್ನವಾದ ಗೋತ್ರಗ. ವರ್ತಮಾನಲಿ 'ಬಳಿ' ಗೌಡ್ರಗಳ್ಲಿ ಮೂಲ ಮತ್ತು ಪ್ರಬಲ ಘಟಕವಾಗಿ ಕಾರ್ಯ ನಿರ್ವಹಿಸಿಕಂಡ್ ಉಟ್ಟ್. ಕುಟುಂಬದೊಳಗೆ ಮದುವೆ ಆದರ ನಿಯಂತ್ರಿಸಿಕೆ ಸಹಾಯ ಆಗುಟು/ ಇಷ್ಟ - ಅನಿಷ್ಟ ದೃಷ್ಟಿಲಿ ಕೆಲ ಮುಖ್ಯ ಆಗಿ ಗುಂಡೆರ ಬಳಿಯೊಪ್ಪ ಇದ್ ಋಣಾತ್ಮಕ ಆಗಿ ಪರಿಣಮಿಸಿಟು.

ಅರೆಭಾಷೆ ಗೌಡ್ರುಗ ಬಲ್ಲಾಳರಲ್ಲಿ ನೆಲೆ ನಿಂತ್ ಬಲ್ಲಾಳರ್ ನಿಸ್ಸಂತತಿ ಆದ ಮೇಲೆ ಅವರ ಭೂ ಆಸ್ತಿ ಪಾಸ್ತಿಗೆ ಹಕ್ಕುದಾರರಾದ ಮೌಖಿಕ ಸಂಕಥನಗ ಸುಳ್ಯಲಿ ಬಹು ಸಂಖ್ಯೆಲಿ ಸಿಕ್ಕುವೆ. ಸುಳ್ಯ ಕೇಂದ್ರಲಿ ಪನ್ನೆ ಬೀಡು ಇತ್ತ್. ಈ ಪನ್ನೆ ಬೀಡು ವರ್ಮ ಬಲ್ಲಾಳನ ಆಸ್ತಿ. ಆ ಮೂಲದ ಕೃಷ್ಣ ಬಲ್ಲಾಳಂಗೆ ನಾಯರ್ ಸ್ತ್ರೀಲಿ ಹುಟ್ಟಿದ 'ಜಾತ ನಾಯರ್'ಗೆ ಈ ಆಸ್ತಿ ಹೋದೆ. ನಾಯರ್ ಬಳಿಕ ಪನ್ನೆ ಬೀಡ್ನ ಕವಲಾಗಿದ್ದ ಸುಮಾರು [illegible] ಉಪ ವಿಭಾಗಗಗಳ ಆಸ್ತಿ ಜೊತೆಗೆ ಈ ಆಸ್ತಿಲಿದ್ದ ದೈವ ದೇವ್ರುಗ ಎಲ್ಲಾ ಗೌಡ ಸಂತತಿಗೆ ವರ್ಗಾವಣೆ ಆದೆ. ಆ ಸಂಬಂಧಿ ಐತಿಹ್ಯಗಳ ಹಿನ್ನೆಲೆಲಿ

1. ಅಕ್ಕು ಬಲ್ಲಾಳ್ತಿ – ಸುಳ್ಯ ಪನ್ಸೆ ಬೀಡು–ಕಾನತ್ತಿಲ ದೈವಗ - ಕುರುಂಜಿ ಗೌಡ್ರಿಗೆ
2. ಚೋಮು ಬಲ್ಲಾಳ್ತಿ - ಇಡ್ಯಡ್ಕ ಬೀಡು– ಪರಿವಾರಕಾನ ಗೌಡ್ರುಗ (ಊರ್ಜಿತಲಿ ಇಲ್ಲೆ.)
3. ಚೆನ್ನು ಬಲ್ಲಾಳ್ತಿ– ಸುಳ್ಯ ಕೋಡಿ, ಕೊಟ್ಟಾರ– ಮಿತ್ತೂರು ದೈವ– ಸುಳ್ಯ ಕೋಡಿ ಗೌಡ್ರುಗ
4. ಮಾಣಿಕ್ಯ ಬಲ್ಲಾಳ್ತಿ – ಬಲ್ನಾಡು, ಮರ್ಕಂಜ, ಮರ್ಕಂಜ ದೈವಗ– ಗೌಡ,ಜೈನ, ಬಂಟ್ರಗ.
5. ದೈಯಕ್ಕು ಬಲ್ಲಾಳ್ತಿ– ಅಳಿಕೆ ಮಜಲ್ ದೈವಗ– ಉಳುವಾರು ಗೌಡ್ರುಗ
6. ಸೋಮು ಬಲ್ಲಾಳ್ತಿ – ಸೋಮ ಕೊಟ್ಟಾರ–ಪೆರಾಜೆ ದೈವಗ– ಮೂಲೆ ಮಜಲು ಗೌಡ್ರುಗ
7. ಪಾಚಿ ಬಲ್ಲಾಳ್ತಿ– ಕುಕ್ಕಂದೂರು ಬಿಡು, ಕುಕ್ಕಂದೂರು ದೈವಗ– ಕುದುರೆಕುಂಜಿ ಮೂಲ ಗೌಡ್ರುಗ
8. ಚಿರ್ದಾಯಿ ಬಲ್ಲಾಳ್ತಿ ಅರಸು ಮಜಲ್ ಬೀಡು–ಬಜಪಿಲ ದೈವಗ– ಊರು ಗೌಡ್ರುಗ ಪೇರಾಲ್

ಇವೆಲ್ಲವ್ಕೂ ಪ್ರತ್ಯೇಕ ಐತಿಹ್ಯಗ ಒಳೊ. ಇವು ಬಲ್ಲಾಳರ ಬೀಡು, ಆಸ್ತಿ, ದೈವಗ ಹಸ್ತಾಂತರ ಆದ ಬಗ್ಗೆ ಕಥಿಸುವ."ಸುವರ್ಣ ಪುತ್ಥಲಿ" ಕೊಲ್‌ಂದ ಕೊಟ್ಟಾರದವು ಉಂಬಳಿ ಭೂಮಿನ ಅಳ್ದ್ ಕೊಟ್ಟೆಂತೇಳ್ದು ಈ ಕಥನಗ ಹೇಳುವ ಪ್ರದಾನ ಸಂಗತಿಗ. ಆದರೆ ಇಲ್ಲೊಂದು ಸಂಘರ್ಷ ನಡ್ದಿರ್ದ ಬಗ್ಗೆ ದೈವಕಲಾವಿದರ್ ಹೇಳ್ದ ನುಡಿಗಟ್ಟಲಿ ಗೋಚರ್ಸಿದೆ. ಬಲ್ಲಾಳ ಕಾಲದ ಪೂರ್ವ ಕಟ್ಟಲೆ ಅನ್ಯಾಯ ಮಾಡ್ದ ಬಲ್ಲಾಳ ಸಂತತಿನ ನಾಶ ಮಾಡಿ ನಿಮ್ಮ ಜೆನ್ನ ಹಿಡ್ಪೋ ಎಂದ್ ಅವು ಹೇಳುವಲ್ಲಿ ಇದ್ ಕಂಡದೆ. ಕೆಲ ನುಡಿಕಟ್ಟ್‌ಗ ನಿರ್ದಿಷ್ಟ ಮನೆತನನ ಉದ್ದೇಶಿಸಿದ್ದುವೆ. ಉದಾ: ಏರ್ದ್ ಗುತ್ತು ನೂರಾಳ್ ಸೀಮೆಲಿ ಉಳುವಾರ್‌ನವು ಬುದ್ಧಿವಂತರ್, ಬಲ್ಲಾಳ್ ಪ್ರತಿ ಬಲ್ಲಾಳ್ ಆಗಿ ನಿಮ್ಮವರ ಕೈ ಸೋರ್ದೊ. ಈ ಮಣ್ಣ್‌ಲಿ ನೆಲೆ ಊರ್ದ ನಿಮ್ಮ ಬೆನ್ನ್ ಬಿಡೆವು' ಎಂದವೆ. ಈ ಮಾತ್‌ನ ಒಳ ಮರ್ಮಲಿ ಬಲ್ಲಾಳ ಕಾಲದ ಪೂರ್ವ ಪರಂಪರೆನ ಪ್ರಬಲ ಸಮುದಾಯ ಮುಂದುವರಿಸುವಲ್ಲಿ ಘಟಿಸಿರುವಂತ ಒಂದು ಸಂಘರ್ಷ ಸ್ಥಿತ್ಯಂತರದ ಚಾರಿತ್ರಿಕತೆನ ತಿಳಿಯಕೆ ಅವಕಾಶ ಉಟ್ಟು.

ತುಳುನಾಡ್‌ಲಿ ಸಾಮಾನ್ಯವಾಗಿ ಜೈನ ಬಂಟರಿಗೆ ಆಸ್ತಿಯ ಹಸ್ತಾಂತರಂದಾಗಿ ಬೇರೆವ್ಕೂ ಸುತ್ತು ಪಡ್ದಿರೆಂತೇಳ್ದ ಮನೆಗ ಒಳೊ. ಸುಳ್ಯಲಿ ಯಜಮಾನ ಸ್ಥಾನದ ಗೌಡ್ರುಗಳಿಗೂ ಸ ರಚನೆ ದೃಷ್ಟಿಲಿ ತೀರ ಭಿನ್ನ ಆಗಿರ್ದ **'ಐನ್‌ಮನೆ'ಗ** ಒಳೊ. ಈ ಮನೆಗ ಸ ಗುತ್ತು ಮನೆ, ಸೀಮೆಕಳ ಮನೆಗಂತೇಳಿ ಗೌರವಲಿ ಗುರ್ತಿಸಿಕೊಂಡವೆ. ಈ ಮನೆಗ ರಚನೆ ಹಾಂಗೆ ಸಾಂಸ್ಕೃತಿಕ ವೈಶಿಷ್ಟ್ಯಗಳ್‌ಂದ ಸಂಕೀರ್ಣ ಆಗಿದ್ದವೆ. ಐನ್ ಮನೆ ಅಂದರೆ ಕುಲದೈವ, ಮನೆ ದೈವ, ಧರ್ಮದೈವ, ಸತ್ತು ಕುಲೆಗ ಆದ ಹಿರಿಯರ ಸ್ಥಾನಗಳ್‌ಂದ ಕೂಡಿ ಕುಟುಂಬದ ಕರ್ತನ ನಿರ್ದೇಶನಲಿ ಕುಟುಂಬದೊವು ವಾಸಿಸುವ ಮನೆ ಐನ್‌ಮನೆ. ಹೀಂಗೆ ಇರುವ ಮನೆ ಗೌಡರ ಸಾಮಾಜಿಕ ಕಟ್ಟಳೆಗ ಅರಮನೆ–ಗುರುಮನೆಗಳಂದ ನಿರ್ದೇಶಿಸಲ್ಪಟ್ಟದೆ. ಕುಟುಂಬ ಗೌಡ ಸಮುದಾಯದ ಪ್ರಾಥಮಿಕ ಘಟಕ. ಪಿತೃಪ್ರದಾನ ವ್ಯವಸ್ಥೆನ ಗೌಡ್ರ ಕುಟುಂಬಲಿ ನಡಿವ ಹುಟ್ಟು – ಮದುವೆ– ಸಾವು ಹಿಂಗೆ ಎಲ್ಲವೂ ಊರು ಗೌಡ/ಒತ್ತು ಗೌಡರ್‌ಗಳ್‌ಂದ ನಡಿಯೊಕು. ಆರು ಊರು ಗೌಡ್ರ ಮೇಲ್ವಿಚಾರಣೆಗೆ ಒಬ್ಬ ಮಾಗಣೆ ಗೌಡ, ಒಂಬತ್ತ್ ಮಾಗಣೆ ಗೌಡ್ರ್ ಕೂಡಿ ಒಂದು ಕಟ್ಟೆಮನೆ. ತುಳುನಾಡ್‌ನ ಒಟ್ಟಾರೆ ಗೌಡ್ರ್‌ಗ ಪಡು ಬಲ್ನಾಡ್ ಮೂಡು, ಕೂಜುಗೋಡು– ಕಟ್ಟೆಮನೆಗ. ಗೌಡ ಸಮುದಾಯದ ವಾದ–ವಿವಾದ ಕೋರ್ಟ್‌ಗೆ ಹೋಗುವ ಕ್ರಮ ಇತ್ತೆ. ಕಟ್ಟೆಮನೆಗಳೇ ತೀರ್ಮಾನ ಕೊಡ್ದು. ಅಲ್ಲಿನೂ ಆಗದಿದ್ದರೆ ಗುರುಮನೆಗೆ ಹೋಕು. ಗುರುಮನೆಲಿನೂ ಇತ್ಯರ್ಥ ಆಗದೇ ಹೋದರೆ ಕೋರ್ಟ್‌ಗೆ ಹೋಕು. ಕೋರ್ಟ್ ಸ ಕಟ್ಟೆಮನೆಯವರ ಕರ್ಸಿ ಅವರ ಎದ್ರ್‌ಲಿ ತೀರ್ಮಾನ ಆತಿತ್ತ್ ಗಡ. ಬಲ್ನಾಡ್ ಕಟ್ಟೆಮನೆಯ ಅಂಬೋಡಿ ಯಾನೆ ಮೂವಣಿ ಗೌಡ್ರ್ ಇದಕ್ಕೆ ಸಾಕ್ಷಿಯಾಗಿದ್ದೊಂತ ಅವರ ಮನೆವು ಇಂದ್ ಸ ಹೇಳಿಕಂಡವೆ.

ನಾಮ್ಗೆ ಗುರುಮನೆ–ಶೃಂಗೇರಿನೋ ಅಲ್ಲ ಆದಿಚುಂಚನಗಿರಿನೋ ಅಂತ ಚರ್ಚೆ ಉಟ್ಟು. ನನ್ನ ಪ್ರಕಾರ ಆದಿಚುಂಚನಗಿರಿನೇ ಆಕು. ಯಾಕೇಂತೇಳ್ರೆ ನಾವು ಮೂಲತಃ ಶೈವ ಮೂಲದೊವು ಆದರ್‌ಂದ ಭೈರವಾರಾಧಕರ್. ಕೆಳದಿ ಅರಸರ್ ಹಾಂಗೆ ಕುಕ್ಕೆನ ಚಂದ್ರಮೌಳೇಶ್ವರ ಸ್ಥಾನ ಮೂಲವಾಗಿ ಶೃಂಗೇರಿ ಮಠದ ಶಿಷ್ಯವರ್ಗ ಆಕೆ ಕಾರಣ ಆಗುಟು.

ಅರೆಭಾಷಿಕರ ವೀರ ಪರಂಪರೆ ;

ವೀರ ಪರಂಪರೆನ ದೃಷ್ಟಿಲಿ ಯೇನೆಕಲ್ಲ್‌ನ ಬಚ್ಚನಾಯ್ಕ ಹಾಂಗೆ ಕಂದ್ರಪ್ಪಾಡಿನ ಮರುಷರ್ ಇದರ ಪ್ರತಿನಿಧಿಕರ್ಣಗ ಆಗೊಳೊ. ಬಚ್ಚನಾಯಕ ಗೌಡ್ರ ಎರಡನೇ ಹಂತದ ಪ್ರಸರಣದ ಸಂಕೇತ. ಆದರೆ ಮರುಷ ಆ

ಪೂರ್ವದ ಪ್ರತೀಕ. ಇವು ಸಮುದಾಯಿನ ಪ್ರತಿಷ್ಠಾಪಿಸುವಲ್ಲಿ ಪ್ರಾಣಾರ್ಪಣೆ ಮಾಡಿ ಸತ್ತ ಬಳಿಕ ಅರೆಭಾಷಿಕರ್‌ಂದ ಆರಾಧನೆಗೆ ಬಂದ್ ದೈವನ ನೆಲೆಗೇರ್ದ ವೀರ ಪುರುಷರ್.

ಅರೆಭಾಷಿಕ ಗೌಡ್ರಿಗೆ ರಾಜಕೀಯ ಹಾಂಗೆ ಸಾಂಸ್ಕೃತಿಕ ನೆಲೆಲಿನೂ ಸ್ಥಾನಮಾನಗ ಇದ್ದೊ. ಇವ್ಕೆ ಊರು-ಗ್ರಾಮಗಳ ಅಧಿಕಾರ ಇತ್ತ್. ದೈವ ದೇವ್ರ ಸ್ಥಾನಗಳ ಮೊಕ್ತೇಸರಿಕೆನೂ ಇತ್ತ್. ಗೌಡ್ರ ನಾಲ್ಕಂಕದ ಐನ್ ಮನೆಗಳ ಹಿನ್ನೆಲೆ ಇಲ್ಲಿಗೆ ಪೂರಕವಾಗಿಟ್ಟು. ಇವು ಅರಮನೆ- ಗುರುಮನೆನ ರಾಜಕೀಯ ಹಂಗೆ ಮತ ಸಂಬಂಧಿ ಆಡಳಿತದ ಸಂಗತಿಗ ಸ ಸ್ಥಳೀಯ ಮೂಲಕ್ಕೆ ತಾಕ ಸಹಾಯ ಆಗಿದ್ದೊ. ಐನ್/ತರವಾಡ್/ಕಟ್ಟೆಮನೆಗ ಈ ದೃಷ್ಟಿಲಿ ಸಹಾಯಕ ಕಾರ್ಯ ನಿರ್ವಹಿಸುತ್ತಿದ್ದೊ. ಅರಸೊತ್ತಿಗೆ ನಾಶ ಆಗಿ ಬ್ರಿಟೀಷ್ ಪಾಳೆಗಾರಿಕೆ ಜರ್ಕಾಕನ ಸ ಈ ಗುತ್ತು ಮಟ್ಟದ ಐನ್ ಮನೆಗ ಮುನ್ನಿ ಊರ ಪಟೇಲತ್ತಿಗೆ ಮಾಡ್ತಿದ್ದೊ. ಪಂಚ್ಯಾತ್ ವ್ಯವಸ್ಥೆ ಬಂದ 1960ರ ನಂತರ ಇವರ ಈ ಪಟೇಲ್‌ತನ ಕಳಚಿಕೊಂಡಿತ್ತ್. ಆದರ್ ಇಂದ್‌ನು ಈ ಸರ್‌ನೇಮ್‌ನ ಬಳ್ಕೊಂಡ್ ನೆನ್ಪಾಗಿ ಉಳ್ಕೊಂಡೋಳೋ. 1837 ಬ್ರಿಟೀಷರ ವಿರುದ್ಧದ ಸ್ವಾತಂತ್ರ್ಯ ಹೋರಾಟನ ವ್ಯವಸ್ಥೆ ಮಾಡುವಲ್ಲಿ ಐನ್‌ಮನೆನವ್ರು ನಿರ್ವಹಿಸಿದ ಪಾತ್ರ ಮಹತ್ತ ಆದ್. ಅರೆಭಾಷಿಕ ಸಮುದಾಯ ಅಭಿಮಾನಂದ ತಲೆ ಎತ್ತಿ ನಡೆವಂಗೆ ಮಾಡಿದ ಚಾರಿತ್ರಿಕ ಸಂಗತಿ: 1837ರ ಮಾರ್ಚ್ 30ರಂದ್ ಸುರು ಆದ ಅಮರ ಸುಳ್ಯದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣರಾದವರಲ್ಲಿ ಕೆದಂಬಾಡಿ ರಾಮಯ್ಯ ಗೌಡ್ರು ಪ್ರಧಾನರ್. ಇವು ಕೆದಂಬಾಡಿ ಐನ್‌ಮನೆಯ ಪ್ರಭಾವಿ ನಾಯಕ ಆಗಿದ್ದೊ. ಅಪರಂಪರ ಹಾಂಗೆ ಕಲ್ಯಾಣ ಸ್ವಾಮಿಯ ಹೆಸರ್ಲಿ ನಡ್ದ ಎರ್ಡ್ ವಿಫಲ ಯತ್ನಗ ಸ್ವಾತಂತ್ರ್ಯ ಹೋರಾಟನ ಜೀವಂತವಾಗಿಸಿ ಮೇಲ್ ಕೊಡ್ಗ್, ಕೆಳ ಕೊಡ್ಗ್, ಸುಳ್ಯಲಿ ಹೋರಾಟ ನಡ್ಸುವಲ್ಲಿ ಉಬರಡ್ಕದ ಕೆದಂಬಾಡಿನ ರಾಮಯ್ಯ ಗೌಡ ಪ್ರಧಾನ ಪಾತ್ರ ವಹಿಸಿದ್ದೊ. ಮೊದಲ ಪ್ರಯತ್ನಲಿ ಅಪರಂಪರನೆಂಬ ಜಂಗಮನಾಗಿ ಕಾಣ್ಸಿಕೊಂಡ ವೀರಪ್ಪ ಬ್ರಿಟಿಷರ ವಿರುದ್ಧದ ಜನ ಬೆಂಬಲಕ್ಕಾಗಿ ಕೂಜುಗೋಡಿನ ಅಪ್ಪಯ್ಯ ಗೌಡ್ನ ಭೇಟಿ ಮಾಡ್ದೆ. ಈ ಪ್ರಯತ್ನಲಿ ಅಪರಂಪರ ಬ್ರಿಟಿಷರ ಸೆರೆಯಾದೆ. ಎರಡನೇ ಪ್ರಯತ್ನಲಿ ಕಲ್ಯಾಣ ಸ್ವಾಮಿನೂ ಪೈತೂರಿನಲ್ಲಿ ಸೆರೆಯಾದೆ. ಆದರೂ ಪ್ರಯತ್ನ ಬಿಡದೆ ಕೊಡ್ಗ್‌ಲಿ ಹುಲಿಕಡ್ದ ನಂಜಯ್ಯ ಮತ್ತೆ ಸುಳ್ಯಲಿ ರಾಮಯ್ಯ ಗೌಡ್ರು ಬಂಡಾಯನ ಜೀವಂತವಾಗಿ ಇರ್ಸುವೆ

ಈ ಹೋರಾಟ ಸಂಘಟಿಸುವಲ್ಲಿ ಜಾತಿ, ರಾಜಕೀಯ, ಅಧಿಕಾರ ಹಾಂಗೆ ಕೌಟುಂಬಿಕ ಬಾಂಧವ್ಯಗ ಕಾರಣ ಆಗಿದ್ದೊ. ಕೂಜುಗೋಡಿನ ಕುಂಭಗೌಡ ಕೊಡ್ಗ್‌ಲಿ ನೆಲೆ ಆಗಿ ಕೊಡಗರಸರೊಟ್ಟಿಗೆ. ರಾಜಕೀಯ ನೆಲೆಲಿ ಸಂಬಂಧ ಇತ್ತ್. ಮತಮೂಲವಾಗಿನೂ ಕೊಡಗರಸರ್ ಶೈವ ಮೂಲದವರಾಗಿದ್ದ್. ಕೂಜುಗೋಡು ಮತ್ತು ಕೆದಂಬಾಡಿ ಮನೆಯವ್ರು ಮೂಲಲಿ ಲಿಂಗಾಯಿತರಾಗಿದ್ದೊ. ಈ ಹಿನ್ನೆಲೆ ಅಲ್ಲದೆ ಅಪರಂಪರ ಕೂಜುಗೋಡಿಲಿ ಕಂಡ್ ಬಾಕೆ ಇನ್ನೊಂದು ಕಾರಣಂತೇಳ್ರೆ ಕೂಜುಗೋಡಿನ ಕಟ್ಟೆಮನೆ ಇಡೀ ಅರೆಭಾಷಿಕ ಮಾಗಣೆ. ಊರು ಗೌಡರ ನಿಯಂತ್ರಕ ಶಕ್ತಿಯಾಗಿದ್ದದ್ ಆಗಿತ್ತ್. ಈ ಕಾಲಲಿ ಕುಕ್ಕೆ ಸುಬ್ರಾಯ ದೇಗುಲದ ಮೊಕ್ತೇಸರಿಕೆ ಈ ಗೌಡ್ರಿಗೆ ಇತ್ತ್. ಜೊತೆಗೆ ಹತ್ತು ಕುಟುಂಬದ ಗೌಡರ ಒಂದೆಡೆ ಸೇರ್ಸುವ ಶಕ್ತಿ ಕೂಜುಗೋಡಿನವಿಕೆ ಇತ್ತ್. ಗೌಡ ಸಮುದಾಯನ ಆಚಾರ ವಿಚಾರಗ ನಡ್ಸುವ ಸನದು ಗುರುಮನೆಂದ ಇವ್ಕೆ ಇತ್ತ್. ಊರ ಪಟೇಲತನನೂ ಇತ್ತ್. ಗುರುಮನೆಂದ ಕೊಡ ಮಾಡ್ದ ಅಧಿಕಾರ ಮುದ್ರೆನ ಕೆಂಪು ಪಟ್ಟೆ ಹೆಗಲಲ್ಲಿ ಧರಿಸಿ ತಾಮ್ರದ ಸನದು ಬೆಳ್ಳಿನ ಪೆಟ್ಟಿಗೆಲಿರಿಸಿ 'ಗುರುಪಣ'ನ ಸಂಗ್ರಹಿಸುವ 8 ಮಾಗಣೆನ ಗೌಡರಲ್ಲಿಗೆ ಹೋಗುವ ಪದ್ಧತಿ ಇದ್ದ ಇವ್ಕೆ ಪೂರ್ಣ ಪ್ರಮಾಣಲಿ ಗೌಡ ಸಮುದಾಯನ ನಿಯಂತ್ರಿಸುವ ಸಾಮರ್ಥ್ಯ ಇತ್ತ್. ಈ ಎಲ್ಲ ಹಿನ್ನೆಲೆಲಿ ಬ್ರಿಟಿಷರ ವಿರುದ್ಧದ ಹೋರಾಟಲಿ ಲಿಂಗಾಯಿತ ಮೂಲದ ಕಬರ್ ಬಳಿಯ ಕೆದಂಬಾಡಿ ರಾಮಯ್ಯ ಗೌಡನ ನೇತೃತ್ವಲಿ ಕುಡೆಕಲ್ ಪುಟ್ಟ, ಕುಂಚಡ್ಕ ತಿಮ್ಮ, ದೇರಾಜೆಯ ಬಚ್ಚ, ದಾಖಲಾಗದೇ ಇರುವ ಪಂಜ ಸೀಮೆನ ಕೂಜುಗೋಡು ಅಪ್ಪಯ್ಯರ ನಿಷ್ಠಾವಂತ ಜೊತೆಗಾರ ಕಲ್ಲಡ್ಕ ಅಮ್ಮೆಯ ಮಲ್ಲಪ್ಪ, ಕಳಿಗೆ ಅಣ್ಣು ಗೌಡ, ನಡ್ತೊಟ್ಟು ತಿಮ್ಮಗೌಡ, ಮಣಿಯಾನ ಗೌಡ, ಕಳಿಗೆಯ ಕೊಡ್ತಂತರಾಮ ಇವೆಲ್ಲವೂ ಐನ್ ಮನೆಯೊವಾಗಿದ್ದ್, ಇವರ ಕೈಕೆಳಗೆ ಊರಿನ ಸಮಸ್ತರ್ ಸೇರ್ದು ಸಾಧ್ಯ ಆತ್. ಕೂಜುಗೋಡು ಕಟ್ಟೆಮನವ್ಕೆ ಇದ್ದ ನಿಯಂತ್ರಣದಂಗೆ ಪಡು ಬಲ್ನಾಡ್ ಕಟ್ಟೆ ಮನೆಯವ್ಕೆ ಪುತ್ತೂರ್. ಪಕ್ಕಂಗದ ಭಾಗದ ಗೌಡರ ಮೇಲೆ ನಿಯಂತ್ರಣ ಇತ್ತ್. ಇದರ ಒಟ್ಟಾರೆ ಫಲವಾಗಿ 1837ರ ಅಮರ ಸುಳ್ಯದ ಸ್ವಾತಂತ್ರ್ಯ ಹೋರಾಟ ನಡೆಯಕ್ಕೆ ಸಾಧ್ಯ ಆತ್. ಸೋತರೂ ಅಭಿಮಾನದ ಸಂಕೇತ ಆಗಿ ಉಳ್ದುಟು

ಚರಿತ್ರೆನ ಕಣ್ಣ್‌ಲಿ ಇಷ್ಟಾದರೆ: ಸ್ವಾತಂತ್ರ್ಯ ನಂತರ ಅರೆಭಾಷಿಕ ಸಮುದಾಯದ ಅನೇಕ ಜನ ರಾಜಕೀಯ ಶಕ್ತಿಯಾಗಿ, ಶಿಕ್ಷಣ ಕ್ಷೇತ್ರಲಿ, ಸಾಹಿತ್ಯ ಕ್ಷೇತ್ರಲಿ ಹೆಸರ್ ಪಡ್ದವರ ದೊಡ್ಡ ಪಟ್ಟಿ ನಮ್ಮೆದುರು ಉಟ್ಟು. ಗೌಡ್ರುಂತ ಹೇಳಿಕಂಬಕ್ಕೆ ನಾಚಿಕೆ ಪಟ್ಟ್ ಕೊಂಬ ಸಂದರ್ಭಲಿ ಅಕ್ಷರ ದಾನಿ ಕುರುಂಜಿಯವು ಮಾನ ಕೊಟ್ಟ್ ತಲೆ ಎತ್ತಿ ನಡೆವಂಗೆ ಮಾಡ್ದ. ಕೂಜುಗೋಡು ಕಟ್ಟೆಮನೆನ ಕುಶಾಲಪ್ಪ ಗೌಡ, ಸುಬ್ರಹ್ಮಣ್ಯ ಗೌಡರ್, ಹಾಂಗೆ ಡಿ.ವಿ. ಸದಾನಂದ ಗೌಡ ಇವೆಲ್ಲವೂ ರಾಜಕೀಯ ಶಕ್ತಿಯಾಗಿ ಬೆಳ್ದ್ ಗಮನ ಸೆಳೆದ್ದೊಳೊ. ಟಿ.ಜಿ ಮುಡೂರು, ಕೋಡಿ ಕುಶಾಲಪ್ಪ ಗೌಡ, ಕುತ್ಯಾಳ ನಾಗಪ್ಪ, ಪುರುಷೋತ್ತಮ ಬಿಳಿಮಲೆಯಂತ ನೂರಾರು ಜನ ಹಿರಿಯರೊಟ್ಟಿಗೆ ಅನೇಕ ಯುವಕರ್ ಇಂದು ಸಾಹಿತ್ಯ - ಕಲಾಕ್ಷೇತ್ರಲಿ ಗುರುತಿಸಿಕೊಂಡೊಳೊ.

ಗೌಡರ ಮೂಲ ಆರಾಧನಾ ಪರಂಪರೆಯನ್ನು ಸ್ಥೂಲವಾಗಿ ಪರಿಭಾವಿಸಿ ಹೇಳುದಾದರೆ, ಮೂಲತಃ ಇವು ಶೈವಮೂಲ ನಾಥ ಪಂಥದವು, ವೈರವಾರದಕರ್ ಜೊತೆಗೆ ಹೊಸಕೋಟೆ ಕೆಂಚಮ್ಮನ ಭಕ್ತರ್. ಪಳಿಯುಳಿಕೆ , ಹಾಂಗೆ ಪಣೆಮಜಲ್, ಏಣಡ್ಕ, ಕೂಜುಗೋಡ್‌ಗಳಲ್ಲಿ ಇಂದ್ ಕೆಂಚಮ್ಮನ ಆರಾಧನೆ ನಡಿತ್ತಾ ಉಟ್ಟು. ವಿವಾಹ ಸಂದರ್ಭಲಿ ಇಂದ್ ಸ ಈ ಕೆಂಚಮ್ಮನಿಗೆ ಹರಕೆ ಒಪ್ಪಿಸುವ ಕ್ರಮ ಉಟ್ಟು. ವಲಸಿಗ ಗೌಡರು ಮೂಲತ ದೈವಾರಾಧಕರಲ್ಲ, ಆದರೂ ಸಹ ಭೂ ಆಸ್ತಿ ಹಸ್ತಾಂತರ ಕಾರಣ ಆಗಿ ಅವು ಇಂದ್ ಹಲ ದೈವಗಳ ಪ್ರಧಾನ ಆಗಿ ಧರ್ಮದೈವನ ನೆಲೆಲಿ ರುದ್ರಾಂಡಿನ, ನಮ್ಮ ನಾಯಕರ್ ಎಂಬ ನೆಲೆಲಿ ಬಚ್ಚನಾಯಕ, ಪುರುಷ, ಶಿರಾಡಿ ದೈವನ ಆರಾಧಿಸುವೆ. ಅರಸು ದೈವಗಳ ಆರಾಧನೆಲಿ ಇವು ಪ್ರಧಾನ ಪಾತ್ರ ವಹಿಸುವೆ.

ಒಟ್ಟಾರೆ ಆಗಿ ಒಕ್ಕಲಿಗ ಅರೆಭಾಷಿಕ ಮೂಲದ ಗೌಡರು ಕ್ಷತ್ರೀಯ ವೀರ ಪರಂಪರೆಯವು ಜೀವನ ನಿರ್ವಹಣೆನ ಕಾರಣಕ್ಕಾಗಿ ತುಳುನಾಡಿಗೆ ಇಳ್ದ ಅವು ತಮ್ಮ ಭಾಷೆನ ಉಳಿಸಿಕಂಡ್ ಇಲ್ಲಿನ ಸಂಸ್ಕೃತಿನ ಅನಿವಾರ್ಯ ಆಗಿ ಒಪ್ಪಿಕೊಂಡೊಳೊ. ಪರಿವರ್ತನೆ– ಪರಿಷ್ಕಾರಕ್ಕೆ ಅನುವು ಮಾಡಿಕೊಂಡೊಳೊ. ಬಲ್ಲಾಳ ಬೀಡುಗಳಲಿ ಶ್ರಮಿಕರಾಗಿ ದುಡ್ದೊಳೊ. ಸಹಜತೆ–ಸಂಘರ್ಷಗಳಲಿ ಅಭಿಮಾನದ ಬದ್‌ಕ್‌ನ ಕಟ್ಟಿಕಂಡೊಳೊ. ಅರೆಭಾಷೆ ದ್ರಾವಿಡ ಭಾಷೆನ ಒಂದು ಕವಲ್. ನೀಲಗಿರಿ ಬೆಟ್ಟ ಸಾಲ್‌ನವು ಮಾತಾಡುವ ಬಡಗ ಭಾಷೆಗೆ ತೀರ ಸಮೀಪವರ್ತಿ ಬಾಷೆಂತ ಭಾಷಾ ತಜ್ಞರು ಕಂಡ್ ಕೊಂಡಳೊ. ಭಾಷೆ ಕನ್ನಡಕ್ಕೆ ತೀರ ಸಮೀಪ ಆಗಿ ಅದರ ನಿಷ್ಪನ್ನ ಅನ್ನುವ ಹಾಂಗೆ ಉಟ್ಟು. ಹಳಗನ್ನಡಲಿ ಸಾಮಾನ್ಯ ಆಗಿರುವ 'ಗಡ' ಇತ್ಯಾದಿ ಪದಗ ಸಮಾನ ಎಂಬಂತೆ ಬಳಕೆಲಿ ಒಳೊ. ಗೌಡ್ರು ಹಲ ಬದಲಾವಣೆಗೆ ಒಳಗಾದರೂ, ಭಾಷೆನ ವಿಷಯಲಿ ನಿಷ್ಠುರಾಗೊಳೊ ಅಲ್ಲದೆ ಆ ಭಾಷೆನ ಬೇರೆಯವ್ಕೆ ಹಂಚಿ ಕೊಟ್ಟೊಳೊ. ಈ ಕಾರಣ್ಕಕಾಗಿ ಅವು ಹೆಮ್ಮೆ ಪಡೊಕು. ಇನ್ನಷ್ಟು ಅದ್ ಬೇರೆಯವರ ಒಳಗೊಳ್ಳುವಂಗೆ ಮಾಡೊಕು. ಆ ಬಗೆನ ಮುಕ್ತತೆನ ಅವು ಹೊಂದೊಕು.

ವಿಶ್ವೇಶ್ವರಯ್ಯ ಹೇಳ್ದೊ ಗಡ

ನಿಂಗೆ ಏನ್ ಬೇಡನಾ ಅದರ ನೀ
ದುಡ್ಡು ಕೊಟ್ಟು ತಕ್ಕಂಡ್ರೆ,
ನಿಂಗೆ ಏನ್ ಅಗತ್ಯ ಬೇಕಾ ಅದ್ಕೆ
ನಿಂಗೆ ದುಡ್ಡು ಎತ್ತುದುಲೆ.

ಎ. ಕೆ. ಹಿಮಕರ ಹೇಳ್ದೊ ಗಡ

ಕುರುಂಜಿಯವು ಕೋಲೇಜ್
ಕಟ್ಟದಿದ್ದರೆ,
ನನ್ನಂಥವು, ಕಾಡ್‌ಲಿ ಜೇನ್
ಹುಡ್ಕೊಕಾತ್ !

ಅರೆಭಾಷೆ – ಭಾಷಾ ಪ್ರಯೋಗ



ಡಾ. ವಿಶ್ವನಾಥ ಬದಿಕಾನ,
ಕನ್ನಡ ವಿಭಾಗ,
ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ), ಮಂಗಳೂರು
9449615474,

ಒಕ್ಕಲಿಗ ಮನೆಮಾತು ಗೌಡ್ರ ಮನೆಮಾತು 'ಅರೆಭಾಷೆ'. ಹವ್ಯಕ ಬ್ರಾಹ್ಮಣ್ರ ಮನೆಮಾತು ಹವ್ಯಕ ಕನ್ನಡ. ಕುಂದಾಪುರಲಿ ಜನ ಮಾತಾಡ್ವ ಭಾಷೆ ಪ್ರಾದೇಶಿಕ ಉಪಭಾಷೆ. ಅರೆಭಾಷೆ ಮತ್ತ್ ಹವ್ಯಕ ಕನ್ನಡ ಎರಡೂ ಸಮುದಾಯದ ಭಾಷೆ.

'ಅರೆಭಾಷೆ' ಕರ್ನಾಟಕದ ದಕ್ಷಿಣಕನ್ನಡ ಮತ್ತ್ ಕೊಡಗ್ ಪ್ರದೇಶಲಿ ವಾಸ ಮಾಡ್ವ ಗೌಡ ಸಮುದಾಯದವು ಒಟ್ಟ್ ಸೇರ್ಕನ ಮಾತಾಡ್ವ ಕನ್ನಡದ ಒಂದ್ 'ಉಪಭಾಷೆ' ಆಗುಟ್ಟು. ದಕ್ಷಿಣಕನ್ನಡ ಜಿಲ್ಲೆನ ಪೂರ್ವಭಾಗದ ಸುಳ್ಯ ತಾಲೂಕು ಮತ್ತ್ ಕೊಡಗ್ ಜಿಲ್ಲೆನ ಮಡ್ಕೇರಿ, ಸೋಮವಾರ್‌ಪೇಟೆ, ವಿರಾಜ್‌ಪೇಟೆ ತಾಲೂಕ್‌ನ ಒಕ್ಕಲಿಗ ಗೌಡ್ರ ಹಾಂಗೆ ಕೊಡಗ್‌ನ ಮಡ್ಕೇರಿ ತಾಲೂಕ್‌ನ ಜನಸಂಖ್ಯೆನ ಅರ್ಧಂದ ಎಚ್ಚ ಅಂದ್ರೆ 40 ಸಾವಿರದಷ್ಟ್ ಜನ್ರ, ಕೇರಳ ರಾಜ್ಯನ ಕಾಸರಗೋಡ್ ಜಿಲ್ಲೆನ ಪೂರ್ವಭಾಗದ ಪಾಲಾರ್, ಬಂದಡ್ಕ, ಅಡೂರು–ಮುಡೂರು ಪ್ರದೇಸಲಿ ವಾಸ ಮಾಡ್ವ ಒಕ್ಕಲಿಗ ಗೌಡರ್ ಅರೆಭಾಷೆನ ಮಾತಾಡ್ತಾ ಒಳೊ. 2011ಲ್ಲಿ ಕರ್ನಾಟಕ ಸರ್ಕಾರ 'ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ'ನ ಸ್ಥಾಪಿಸಿ, ಆ ಮೂಲಕ ಅರೆಬಾಸೆಗೆ ಸಾಂಸ್ಥಿಕ ನೆಲೆ ಒದಗಿಸಿ ಕೊಟ್ಟೊ.

ಭಾಷಾವಿಜ್ಞಾನಿ ಪ್ರೊ. ಕೋಡಿ ಕುಶಾಲಪ್ಪಗೌಡ್ರ 'Gowda Kannada'(Annamalai University,1976) ಪುಸ್ತಕಲಿ ಅರೆಭಾಷೆನ 'ಗೌಡಕನ್ನಡ'ಂತ ಕರ್ದೊಳೊ. ಬಹುಸಂಖ್ಯಾತ ಒಕ್ಕಲಿಗಗೌಡ್ರ ಮನೆಮಾತ್ 'ಅರೆಭಾಷೆ'/'ಗೌಡಕನ್ನಡ'. It is a 'half-tongue', (Are= half, Bhashe= speech) which is actually an admixture Kannada ಅಂತ ಭಾಷಾವಿಜ್ಞಾನಿಗಳ್ ಗುರುತಿಸಿಯೊಳೊ. ಈ ಭಾಷೆನ ಪದಗ ಕನ್ನಡ ಅರ್ಥದೊಟ್ಟಿಗೆ ಮಿಸ್ರ ಆಗಿದ್ದದೆ. ಉದಾರ್ಣೆಗೆ,

1. ಕನ್ನಡ ಮತ್ತ್ ಅರೆಭಾಷೆನ ಕೆಲವ್ ಕ್ರಿಯಾಪದಗ :
   'ಆಯಿತು' – 'ಆತ್'. ಹೋಗಿದ್ದಾನೆ – ಹೋತ್. ಬಂದಿದ್ದಾನೆ – ಬಾತ್. ಬಿದ್ದಿದ್ದಾನೆ – ಬೀತ್. ಬರುತ್ತೇನೆ – ಬನ್ನೆ. ಹೋಗುತ್ತೇನೆ – ಹೋನೆ. ತಿನ್ನುತ್ತೀಯ – ತಿಂದ್ಯ. ಬರುತ್ತೀಯ – ಬಂದ್ಯ. ನಿಲ್ಲುತ್ತೀಯ – ನಿಂತ್ಯಾ. ಹೊಗುತ್ತೀಯ – ಹೋದಿಯ. ನಿಲ್ಲುತ್ತೀಯ – ನಿಂತ್ಯಾ
2. ಕನ್ನಡ ಮತ್ತ್ ಅರೆಭಾಷೆನ ಕ್ರಿಯಾಪದದ ಕಾಲವಾಚಿ ಪ್ರತ್ಯಯ ಬಳಕೆ :
   ಅ)ಭೂತಕಾಲ 'ದ' ಪ್ರತ್ಯಯ 'ತ್'/'ತ್ತ್' ಪ್ರತ್ಯಯ ಆಗಿ ಬಳಕೆ ಆದೆ. ಉದಾ: ಹೋದ–ಹೋತ್, ಬಂದ–ಬಾತ್, ನೋಡಿದ/ನೋಡ್ತ್, ಮಾಡಿದ/ಮಾಡ್ತ್, ಹಿಡಿದ/ಹಿಡ್ತ್ ಇತ್ಯಾದಿ.
   ಆ)ವರ್ತಮಾನ ಕಾಲ 'ದಪ'/ಅನೆ ಪ್ರತ್ಯಯವು 'ಉಟ್ಟು'/'ನ್ತ್' ಪ್ರತ್ಯಯವಾಗಿ ಬಳಕೆಯಲ್ಲಿದೆ. ಉದಾ : ನೋಡಿದಪ/ನೋಡಿದ್ದಾನೆ/ ನೋಡ್ಯುಟ್ಟು, ಬೆಂದಪಂ/ಬೆಂದನು/ಬೆನ್ತ್, ತಿಂದಪಂ/ತಿಂದನು/ತಿನ್ತ್ ಇತ್ಯಾದಿ ಬಳಕೆಯಲ್ಲಿದೆ. ನಪುಂಸಕ ಲಿಂಗ 'ಅತ್' ಬೆಂದಪಂ/ಬೆಂದತ್, ತಿಂದಪಂ/ತಿಂದತ್ ಆದೆ.
   ಇ)ಭವಿಷ್ಯತ್‌ಕಾಲದ 'ವ' ಪ್ರತ್ಯಯ 'ಡ್ಡು' ಪ್ರತ್ಯಯ ಬಳಕೆ ನಪುಂಸಕ ಲಿಂಗ ಆಗಿ ಉಟ್ಟು. ನೋಡುವಂ/ನೋಡಿದನು/ನೋಡ್ಡು, ಮಾಡಿದನು/ಮಾಡ್ಡು, ಬೇಡಿದನು/ಬೇಡ್ಡು, ಕೂಡಿದನು/ಕುಡ್ಡು ಇತ್ಯಾದಿ.
3. ಕನ್ನಡ ಮತ್ತ್ ಅರೆಭಾಷೆನ ಕಾಲ – ಭೂತಕಾಲ ಬಂದಿದ್ದೆ–'ಬಂದೆ', ವರ್ತಮಾನಕಾಲ ಬರುತ್ತೇನೆ–'ಬನ್ನೆ', ಭವಿಷ್ಯತ್ ಕಾಲ ಬರುವೆನು–'ಬಾಂವೆ' ಆದೆ. ಉದಾರ್ಣೆಗೆ, ನಿನ್ನೆ ಬಂದಿದ್ದೆ–'ನಿನ್ನೆ ಬಂದೆ', ಇವತ್ತು ಬರುತ್ತೇನೆ – 'ಇಂದ್ ಬನ್ನೆ', ನಾಳೆ ಬರುವೆನು – 'ನಾಳೆ ಬಾಂವೆ' ಇತ್ಯಾದಿ.

4. ಕನ್ನಡ ಮತ್ತ್ ಅರೆಭಾಷೆ ಪ್ರತ್ಯಯ ರೂಪ – 'ಬೇಕು' ಪದಕ್ಕೆ 'ಒಕು'ಂತೇಳ್ವ ಪ್ರತ್ಯಯ. 'ಬೇಡ'ವು 'ಒಡ'ಂತ ಪ್ರತ್ಯಯ ರೂಪ ತಾಳಿದೆ. ಉದಾರ್ನೆಗ: ಬರಬೇಕು–ಬರೊಕು. ಬರಬೇಡ–ಬರ್ಬಡ. ತಿನ್ನಬೇಡ–ತಿನ್ನೆಡ ಇತ್ಯಾದಿ.
5. 'ಅಂತೆ' ಎಂಬ ಅರ್ಥಲಿ 'ಗಡ' ಪ್ರತ್ಯಯ ವಿಶಿಷ್ಟವಾಗಿ ಉಟ್ಟು. ಏನಂತೆ–ಏನ್‌ಗಡ, ಹೌದಂತೆ–ಹೌದ್‌ಗಡ. ಹೋದಂತೆ–ಹೋತ್‌ಗಡ, ಬಂದಂತೆ–ಬಾತ್‌ಗಡ, ಇದ್ದಂತೆ–ಇತ್ತ್‌ಗಡ ಇತ್ಯಾದಿ. 'ಗಡ' ಪದನ ಕಾಸರಗೋಡ್‌ನ ಬಂದಡ್ಕ, ಮಡ್ಕೇರಿನ ಭಾಗಮಂಡಲ ಪರಿಸರಲಿ ಹೆಚ್ಚ್ ಬಳಸ್ವೆ. ಈ ಪ್ರದೇಶದ ಅರೆಭಾಷೆ ಮಾತಾಡ್‌ವವು 'ಗಡಗಡ ಭಾಷೆ'ಯವುಂತ ಕರ್ದವೆ.
6. ಕನ್ನಡದ 'ಗಳ್', 'ಗಳು' ಬಹುವಚನ ರೂಪ ಪ್ರತ್ಯಯಗ ಅರೆಭಾಷೆಲಿ ನಾಮಪದದೊಟ್ಟಿಗೆ 'ಗ' ಧ್ವನಿಯಾಗಿ ಬಳಕೆಯಾದೆ. ಉದಾರ್ನ್ಗ: ನಾಯಿಗಳು–ನಾಯಿಗ, ಮನೆಗಳು–ಮನೆಗ ಇತ್ಯಾದಿ.
7. ಕನ್ನಡದ 'ಅರ್' ಎಂಬ ಕ್ರಿಯಾ ವಿಭಕ್ತಿಪ್ರತ್ಯಯ 'ಗ' ಧ್ವನಿಯಾಗಿ, 'ಎರ್', 'ಅರ್‌ಗ', 'ಇರ್‌ಗ' ಕ್ರಿಯಾರೂಪ ಆಗಿ ಬಳಕೆಲಿ ಉಟ್ಟು. ಉದಾರ್ನೆಗ: ಮಾವಂದಿರ್–ಮಾವಗ/ಮಾವಂದಿರ್‌ಗ, ಜನರು–ಜನಗ, ಹೆಂಗಸರ್–ಹೆಣ್ಣ್‌ಗ/ಹೆಂಗಸರ್‌ಗ, ಭಾವಂದಿರ್–ಭಾವೆರ್/ಭಾವಂದಿರ್‌ಗ, ಅಣ್ಣಂದಿರ್–ಅಣ್ಣೆರ್ ಇತ್ಯಾದಿ
8. 'ಅತ್' ಎಂಬ ವಿಶಿಷ್ಟ ಕ್ರಿಯಾ ಪ್ರತ್ಯಯ ಬಳಕೆ ಅರೆಭಾಷೆಲಿ ಉಟ್ಟು. ಉದಾರ್ನೆಗ, ಬಿದ್ದಿದ್ದಾನೆ–ಬಿದ್ದತ್, ಕೂತಿದ್ದಾನೆ–ಕುದ್ದತ್, ನಿಂತಿದ್ದಾನೆ–ನಿಂತತ್, ಎದ್ದಿದ್ದಾನೆ - ಎದ್ದತ್, ಕುಡಿದಿದ್ದಾನೆ - ಕುಡ್ತ್, ನೋಡಿದ್ದಾನೆ – ನೋಡ್ತ್, ಮಾಡಿದ್ದಾನೆ - ಮಾಡ್ತ್ ಇತ್ಯಾದಿ.
9. ಕನ್ನಡದ ನಾಮಪದಗಳ್ಗೆ 'ಇಗ' ಪ್ರತ್ಯಯ ಸೇರುವಾಗ ಹಾವಾಡಿಗ, ಕಲ್ಲುಕುಟಿಗ, ಕನ್ನಡಿಗ ಮುಂತಾಗಿ ಬಳಕೆಯಾದೆ. 'ಇಗ' ಪ್ರತ್ಯಯ ಅರೆಭಾಷೆಲಿ ಕ್ರಿಯಾಪದಕ್ಕೆ ಸೇರಿಕೊಂಡದೆ. ಇದ್ ಪ್ರಾದೇಶಿಕ ವ್ಯತ್ಯಾಸ ಆಗಿ ರೂಪುಗೊಂಡದೆ. 'ಈಯ'(ಏಕವಚನ), 'ಈರಾ'(ಬಹುವಚನ) ಇಂತ ಪ್ರತ್ಯಯಗ 'ಇಗ'ವಾಗಿ ಬಳಕೆಲಿ ಉಟ್ಟು. ಉದಾರ್ನೆಗ, ಸುಳ್ಯ ತಾಲೂಕ್‌ನ ಗುತ್ತಿಗಾರ್ ಪರಿಸರಿ ಬರುತ್ತೀಯ–ಬಂದಿಗ(ಇಗ), ಬರುತ್ತೀರ/ಬಂದಿಗ(ಇಗ) ನಿಲ್ಲುತ್ತೀಯ–ನಿಂತಿಗ(ಇಗ), ಹೊಗುತ್ತೀಯ–ಹೋದಿಗ(ಇಗ), ಹಿಂಗೆ ಬಳಕೆ ಆದೆ. ಈ ಪ್ರದೇಶದವರ 'ಹೋದಿಗ–ಬಂದಿಗ' ಭಾಷೆಯವೆಂದು ಕರ್ದವೆ. ಕ್ರಿಯಾಪದಗಳ್ಗೆ ಸೇರ್‌ವ 'ಈಯ', 'ಈರ' 'ಇಗ' ಪ್ರತ್ಯಯದಂತೆ 'ಅಂಬ್ರಿ' ಪ್ರತ್ಯಯ ಪದ ಬಳಕೆನೂ ಕಡಬ ತಾಲೂಕ್‌ನ ಕುಕ್ಕೆ ಸುಬ್ರಹ್ಮಣ್ಯ ಆಚೆಕಡೆ ಉಟ್ಟು. ಉದಾರ್ನೆಗೆ ಹೋಗುತ್ತೀಯ–ಹೋತಂಬ್ರಿ, ಬರುತ್ತೀಯ–ಬಾತಂಬ್ರಿ, ನಿಲ್ಲುತ್ತೀಯ–ನಿಂತಬ್ರಿ ಹಿಂಗೆ ಈ ಪ್ರದೇಶದ ಅರೆಭಾಷೆ ಮಾತಾಡುವವ್ಕೆ ಹೋತಂಬ್ರಿ–ಬಾತಂಬ್ರಿ ಭಾಷೆಯವೆಂದ್ ಕರ್ದವೆ. ಈ ಮೇಲ್‌ನ ಎಲ್ಲ ವಿಚಾರಗಳ ಬಗ್ಗೆ ಹೆಚ್ಚ್‌ನ ಅಧ್ಯಯನ ನಡೆಯೊಕಷ್ಟೆ. ಅಡುಮಾತ್‌ನ ರೂಪಲ್ಲೇ ಬಳಕೆಲಿ ಇದ್ದ ಅರೆಭಾಷೆಗೆ ಸಂಸ್ಕೃತ ಭಾಷೆನ ಪ್ರಭಾವ ಆತ್ಲೆ.
10. ಐದ್ ಅನುನಾಸಿಕ ವ್ಯಂಜನಗ ಅರೆಭಾಷೆಲಿ ಬಳಕೆಲಿ ಉಟ್ಟು. ಉದಾರ್ನೆಗ, ಬಂಜ(ಕಷ್ಟ), ಮಂಜ(ಮಗ), ಪಂಞ(ಸ್ವಲ್ಪ), ಕುಂಞ್‌ನಾಯಿ (ಮರಿ ನಾಯಿ), ಕುಂಞಣ್ಣ ಇತ್ಯಾದಿ
11. ಅರೆಭಾಷೆನ ಸರ್ವನಾಮ, ಲಿಂಗ ಮತ್ತ್ ವಚನಲಿ ವಿಶೇಷ ಉಟ್ಟು. ಪ್ರಥಮಾ ಪುರಷ ಪುಲ್ಲಿಂಗ ಏಕವಚನ ಅಂವ(ಅವನು), ಬಹುವಚನ ಅವ್(ಅವರು) ಎಂದಾದೆ. ಉದಾರ್ನೆಗ, ಅಂವ ಹೈದ(ಅವನು ಹುಡುಗ), ಅವ್ ತಾತ(ಅವರು ತಾತ). ಪ್ರಥಮಾ ಪುರಷ ಸ್ತ್ರೀಲಿಂಗ ಏಕವಚನ ಅದ್(ಅವಳು) ಎಂದಾದ್ದೆ ಬಹುವಚನ ಅವ್(ಅವರು) ಆದೆ. ಉದಾರ್ನೆಗೆ ಅದ್ ಗೂಡೆ(ಅವಳು ಹುಡುಗಿ), ಅವ್ ಅವ್ವ (ಅವರು ಅವ್ವ). ಪ್ರಥಮಾ ಪುರುಷ ನಪುಂಸಕ ಲಿಂಗ ಏಕವಚನ ಅದ್(ಅದು), ಬಹುವಚನ್ರು ಅವ್(ಅವು) ಆದೆ. ಅದ್ ನಾಯಿ(ಅದು ನಾಯಿ), ಅವ್ ನಾಯಿಗ(ಅವು ನಾಯಿಗಳು). ಮಧ್ಯಮ ಪುರುಷ ಮತ್ತ್ ಉತ್ತಮ ಪುರುಷ ಏಕವಚನ ಮತ್ತ್ ಬಹುವಚನಲಿ ಅಂತ ವಿಶೇಷ ವ್ಯತ್ಯಾಸಗ ಏನೂ ಇಲ್ಲೆ. ಉದಾರ್ನೆಗೆ ನೀನು 'ನೀ', ನಾನು

'ನಾ' ಬಳಕೆಲಿ ಉಟ್ಟು. ಆದ್ರೆ ಮಧ್ಯಮಪುರುಷ ಸ್ತ್ರೀಲಿಂಗಲಿ 'ನೀನು' ಸರ್ವನಾಮ ಏಕವಚನಕ್ಕೂ ಬಹುವಚನಕ್ಕೂ ಒಂದೇ ಆಗುಟ್ಟು. ಉದಾರ್ನೆಗೆ ಅರೆಬಾಸೆಲಿ ಹೆಣ್ಣ್ ಗಂಡನ ಕರಿಯಕ್ಕನ 'ನೀ ಬಾಯ'(ನೀನು ಬಾರೊ) ಹಿಂಗೆ ಏಕವಚನಲಿ ಕರೆವ ಪದಗ ಬಳಕೆಲಿ ಉಟ್ಟು. ತುಳು-ಕನ್ನಡ ಪರಿಸರಲಿ ಅರೆಬಾಸೆಯವು 'ನೀವು' ಮಧ್ಯಮಪುರುಷ ಬಹುವಚನ ಪದ ಪ್ರಯೋಗ ಬಳಕೆ ಮಾಡ್ವೆ.

12. **ಅರೆಭಾಷೆಯ ಒಂದು ಜನಪದ ಕತೆ : ಕುರೆ ಮತ್ತ್ ಮೊಸಳೆ ಕತೆ**

ಒಂದ್ ಕುರೆ ಯಾಗೋಳು ಹಣ್ಣ್ ಹಂಪಲು ತಿಂಬೊದು. ಹಳ್ಳದ ಕರೆಲಿ ಕುದ್ಕಂಡ್ ತಿಂಬೊದು. ತಿಂದ್ ತಿಂದ್ ಆಕನ ಅದ್ ಯಾಕ ತಿಂಬೊದುಂತ ಈ ಮೊಸಳೆ ಅದ್ಕೆ ಪಾರ ಕಾಯ್ತು. ಮೇಲಿಂದ ಹಣ್ಣ್ ಬೀಳ್ಕನ ಮೊಸಳೆ ತಿಂದ್ಕೊಂಬೊದು. ಕುರೆ ಮೇಲೆ ಏನ್ ಮಾಡ್ತು ? ಇನ್ನ್ ಮೊಸಳೆ ಕುರೆನ ತಿನ್ನೊಕ್‌ಂತ ಒಂದ್ ದಿನ ಉಪಾಯ ಮಾಡ್ತ್. 'ಬಾ ನಾಮ್ಗೆ ಪಂಚಾತಿಗೆ ಉಟ್ಟು'ಂತ ಮೊಸಳೆ ಹೇಳ್ತ್. 'ಪಂಚಾತಿಗೆ ಸಣ್ಣದಪ್ಪಾ. ನೀನ್ ಬಾ ಇಲ್ಲಿ'. 'ಎಂತದ್ ? ಎಂತದ್ ?' 'ಏನಿಲ್ಲಪ್ಪ'. 'ಸಂತೋಷಲಿ ಬಾ ನನ್ನ ಮೇಲೆ ಕುದ್ದ್‌ರ್'. 'ಹಾಂ...ಹಾಂ....! ಆದೆಲ್ಲ ಆಕಿಲ್ಲಂತ ಕುರೆ ಹೇಳ್ತ್'. 'ಅಂದರೆ ನೀ ಸರಿ ನಿಲ್ಲೊಕ್ತಂತ ಕುರೆ ಹೇಳ್ತ್'. 'ಹ್ವಾಂ ನಿಲ್ಲೊಕು'. 'ನಾ ಮರಲಿ ಒಂದ್ ಸಣ್ಣ ಸಾಮಾನ್ ಇಸಿಯೊಕೆ. ಅದು ಉಟ್ಟೊ ಇಲ್ಲೆಯ ನಾ ನೋಡಿ ಬುಟ್ಟೆ. ಮತ್ತೆ ಬನ್ನೆ'. ಒಮ್ಮೆ ಹತ್ತಿದಂಗೆ ಮಾಡ್ತ್. ಹಣ್ಣ್ ತಿನ್ತ್. ಬಾತ್. 'ಕುದ್ರಣ್ಣ'. ಕುರೆ ಲಾಯ್ಕ್ ಕುದ್‌ಕನ್ತ್. ಅದ್ ಹೆಚ್ಚಿನಂಶ ಅರ್ಧ ಹಳ್ಳಂದ ಹಾರಿದ್ರು ಹಾರುವಂತ ಧೈರಲಿ ಕುದ್ದುಟು. ಮೊಸಳೆ ನಡೂ ಹಳ್ಳಕೆ ಎತ್ತಿಕನ ಏನ್ ಹೇಳ್ತ್ ? 'ಕುರೆ ನಿನ್ನ ಕರ್ಲ್ ನಂಗೆ ಬೇಕಾತ್'. 'ಯಾಕೆ ನೀ ಆಗಲೆ ಯಾಕೆ ಹೇಳದ್ದ್?' 'ನನ್ನ ಕರ್ಲ್ ಮರದ ಕೊಂಬೆಲಿ ಇದ್ದು'ಂತ ಕುರೆ ಹೇಳ್ತ್. ಮೊಸಳೆ ಕುರೆನ ಕುದ್ರಿಸಿಕಂಡ್ ಹಳ್ಳದ ಕರೆಗೆ ಬಾತ್. 'ಕರ್ಲ್ ಮರದ ಕೊಂಬೆಲಿ ಇದ್ದುಂತ ನಿಂಗೆ ಗೊತ್ತಿಲ್ಲನಾ ಮೊಸಳೆ'ಂತ ಹೇಳಿ ಕುರೆ ಆಚೆ ದಡಕೆ ಹಾರ್ತ್. ಹೋತ್.

ತೇಜಸ್ವಿ ಹೇಳ್ದೊ ಗಡ

ನಂಗೆ ಕಾಲ ಕಳೆದು ಹೇಂಗೆಂತ ಚಿಂತೆ ಇಲ್ಲೆ,
ಕಾಲ ಕಳೆದ್ ಹೋತಲ್ಲಾ ಎನ್ನುದೇ ಚಿಂತೆ !

ಕುರುಂಜಿಯವು ಹೇಳ್ದೊ ಗಡ

ದುಶ್ಚಟಗಳಂದ ದೂರ ಇರುದೇ
ಅಭಿವೃದ್ಧಿ ಲಕ್ಷಣ

ಗಾಂಧೀ ಹೇಳ್ದೊ ಗಡ ....

ಕೆಲ್ಸದ ಬದಲಾವಣೆಂತೇಳ್ರೆ, ವಿಶ್ರಾಂತಿ

ಸ್ವಾತಂತ್ರ್ಯ ಪೂರ್ವಲಿ–ಅರೆಭಾಷೆನವರ ಸ್ಥಿತಿಗತಿಗ

(ಸಮ್ಮೇಳನಲಿ ಮಂಡಿಸಿದ ವಿಚಾರ)



ಶ್ರೀ ವಿದ್ಯಾಧರ ಬಡ್ಡಡ್ಕ
ಸಾಹಿತ್ಯ ಚಿಂತಕರು ಮತ್ತು ವಕೀಲರು

ಅರೆಭಾಷೆ ಮನೆಮಾತಾಗಿರುವ ಸಮುದಾಯದ ರಾಜಕೀಯ ಸ್ಥಿತ್ಯಂತರಗ ಈ ಭೌಗೋಳಿಕ ಪ್ರದೇಶದ ಒಟ್ಟು ಸಮಾಜದ ಚಲನೆನ ಇತಿಹಾಸ ಕೂಡ. ಇದರ ಪ್ರಮುಖವಾಗಿ ಮೂರ್ ಹಂತಲಿ ಗುರ್ತ್‌ಸಕ್. ಒಂದನೆದ್ದಾಗಿ ಅರೆಭಾಷೆ ಸಮುದಾಯ ಹೆಚ್ಚಿಗೆ ಇರುವ ಸುಳ್ಯ–ಮಡಿಕೇರಿ ಭಾಗ ಕಳೆದ ಐನೂರು ವರ್ಷದ ಸುಮಾರಿಗೆ ರಾಜರ್‌ಗಳ, ಪಾಳೆಯಗಾರರ ಆಳ್ವಿಕೆಲಿ ಇದ್ದ ಸಮಯ. ಎರಡನೆದ್ ಬ್ರಿಟಿಷರ ಆಗಮನದ ಆರಂಭದ ಸಮಯ. ಅಕೇರಿದ್ ಬ್ರಿಟಿಷರ ಆಡಳಿತ ಅವಧಿ.

ಅರೆಭಾಷಿಕ ಸಮುದಾಯ ಎರಡನೇ ಸಹಸ್ರಮಾನದ ನಡುನ ಸಮಯಲಿ ರಾಜಕೀಯ ಶಕ್ತಿಗಳ ಒಟ್ಟಿಗೆ ಗಟ್ಟಿ ಬಾಂಧವ್ಯ ಹೊಂದಿತ್. ಅದ ಕಾರಣ ಅವ್‌ಕೆ ಧಾರ್ಮಿಕ ಕ್ಷೇತ್ರಗಳ ಆಡಳಿತದ ಜವಾಬ್ದಾರಿನ ಕೊಟ್ಟಿದ್ದೊ. ಊಳಿಗಮಾನ್ಯ ಸಮಾಜಲಿ ಈ ಜನ ಪ್ರಾಬಲ್ಯದ ಸ್ಥಾನಲಿ ಇದ್ದ ಕಾರಣ ಇದ್ ಸಾಧ್ಯ ಆತ್. ಪುರೋಹಿತಶಾಹಿ ವ್ಯವಸ್ಥೆಲಿ ಗ್ರಾಮದ, ಊರ್‌ನ ಜಮೀನ್ದಾರರಿಗೆ ದೇವಸ್ಥಾನಗಳ ಆಡಳಿತದ 'ಗೌರವ' ಸಿಕ್‌ತಿತ್. ಈ ಪ್ರಕ್ರಿಯೆನ ನಾವ್ ಬೇರೆ ಬೇರೆ ಕಡೆ ನೋಡಕ್. ಧಾರ್ಮಿಕ ಕ್ಷೇತಗಳ್ಳಿ ಎರಡ್ ತರ ಉಟ್ಟು. ಒಂದ್ ಪುರೋಹಿತಶಾಹಿ ವ್ಯವಸ್ಥೆನ ದೇವಸ್ಥಾನ. ಮತ್ತೊಂದ್ ನಮ್ಮ ಗ್ರಾಮೀಣ ದೈವಾರಾಧನೆನ ಚಾವಡಿ, ಮಾಳ, ಗುಡಿ, ಮಾಳಿಗೆ, ದೈವಸ್ಥಾನಗ. ಪುರೋಹಿತಶಾಹಿ ದೇವಸ್ಥಾನಗಳ ಆಳ್ವಿಕೆಗೂ, ಆ ಪ್ರದೇಶದ ರಾಜಂಗೂ ನೇರ ಸಂಬಂಧ ಇದ್ದುದರ ನಾವ್ ನೋಡಕ್. ಗ್ರಾಮೀಣ ದೈವಾರಾಧನೆಲಿ ಊರ್‌ನ ಜನರೇ ಆಡಳಿತದ ಜವಾಬ್ದಾರಿನ ನಿರ್ವಹಿಸುದು. ಈ ಎರಡ್ ರೀತಿನ ಧಾರ್ಮಿಕ ಕ್ಷೇತ್ರಗಳ್ಳಿನೂ ಅರೆಭಾಷೆ ಮಾತಾಡುವ ಜನ ಆಡಳಿತದ ಪ್ರಮುಖ ಸ್ಥಾನನ ವಹಿಸಿದ್ದೊ. ಅದರ ಅರ್ಥ ಏನ್‌ಂತ ಹೇಳ್ರೆ ಅವು ಸಾಮಾಜಿಕವಾಗಿ ಉನ್ನತ ಸ್ಥಾನಲಿ ಇದ್ದೊಂತ ಹೇಳ್ಳು.

ಈ ಭೌಗೋಳಿಕ ಪ್ರದೇಶದ ಅತ್ಯಂತ ಪ್ರಸಿದ್ಧ ದೇವಸ್ಥಾನಗಳ ನಾವು ನೋಡೊಮೊ. ಕುಕ್ಕೆ ಸುಬ್ರಹ್ಮಣ್ಯ ಬಹುಶಃ ಇಂದ್ ಕರ್ನಾಟಕಲಿ ಅತಿ ಹೆಚ್ ಆದಾಯ ಇರುವ ದೇವಸ್ಥಾನ. ದೇಶದ ಬೇರೆ ಬೇರೆ ಕಡೆಂದ ಭಕ್ತಾದಿಗ ಇಲ್ಲಿಗೆ ಬಂದವೆ. ಕೊಪ್ಪಡ್ಕ ಮನೆತನದವ್ ಕಾಯಿ ಒಡ್ದ ಮೇಲೆನೆ ಇಲ್ಲಿ ದೇವ್‌ರ ತೇರ್ ಹೊರ್‌ಡುದು. ಈ ದೇವಸ್ಥಾನದ ಆಡಳಿತ ತುಂಬ ವರ್ಷ ಕೂಜುಕೋಡ್ ಮನೆತನಕ್ಕೆ ಇತ್. 1837ರ ಸಮಯಲಿ ಕೂಜುಕೋಡು ಮಲ್ಲಪ್ಪ ಈ ಸ್ಥಾನಲಿ ಇದ್ದೊ. ಅವು ಅಮರಸುಳ್ಯ ಹೋರಾಟಲಿ ಪ್ರಮುಖ ಜವಾಬ್ದಾರಿ ನಿರ್ವಹಿಸಿಯೊಳೊ. ಅವ್‌ಕೆ ಅಕೇರಿಗೆ ಬ್ರಿಟಿಷರ್ ಕರಿನೀರ್ ಸಜೆ ನೀಡಿ ಇಂದ್‌ನ ಬರ್ಮಾ ದೇಶಕ್ಕೆ ಗಡಿಪಾರ್ ಮಾಡ್ದೊ.

ಇನ್ನ್ ತಲಕಾವೇರಿ, ಭಾಗಮಂಡಲ ಕ್ಷೇತ್ರಗ ದಕ್ಷಿಣ ಭಾರತದ ಸಾಂಸ್ಕೃತಿಕ ಇತಿಹಾಸಲಿ ಅತ್ಯಂತ ಮಹತ್ವದ ಜಾಗೆಗ. ತಲಕಾವೇರಿಗೆ ಕೋಡಿ ಮನೆಯವ್, ಭಾಗಮಂಡಲಕ್ಕೆ ಬಳ್ಳಡ್ಕ ಮನೆತನದವ್ ತಕ್ಕ ಮುಖ್ಯಸ್ಥರ್. ಈ ಎರಡ್ ದೇವಸ್ಥಾನಗ ಶೈವ ಮತ್ತೆ ಶಾಕ್ತ ಧರ್ಮಗಳ ಅತಿ ದೊಡ್ಡ ಆರಾಧನಾ ಕೇಂದ್ರಗ. ಸುಳ್ಯ ತಾಲೂಕು ಗುತ್ತಿಗಾರ್ ಹಕ್ಕಲೆನ ಕಂದಪ್ಪಾಡಿ ಪುರುಷದೈವದ ಪ್ರಸಿದ್ಧ ಕ್ಷೇತ್ರ. ಪುರುಷ ಒಬ್ಬ ನಾಥ ಪರಂಪರೆನ ಜಂಗಮ ಯೋಗಿ, ಹಾಂಗೇ ಚಾರಿತ್ರಿಕ ವ್ಯಕ್ತಿ. ಇಂದ ನಾಯಕ ಆಗಿ ದೈವತ್ವ ಸ್ಥಾನ ಪಡ್ದಂಬ ಕತೆ ಇವನ ಸಂದ್‌ಲಿ ಸಿಕ್ಕಿದೆ. ಪುರುಷನ ಐತಿಹಾಸಿಕ ಹಿನ್ನೆಲೆ ಬಗ್ಗೆ ಡಾ. ಪುರುಷೋತ್ತಮ ಬಿಳಿಮಲೆ ಲೇಖನಗಳ ಬರ್ದೊಳೊ. ಕಂದಪ್ಪಾಡಿ ಮತ್ತು ಪುರುಷನ ಬಗ್ಗೆ ಸಮಗ್ರ ವಿವರಣೆ, ವೈಜ್ಞಾನಿಕ ವಿಶ್ಲೇಷಣೆ ಇರುವ 'ಜನಮನದ ಕಂದ್ರಪ್ಪಾಡಿ' ಅಧ್ಯಯನ ಪುಸ್ತಕನ ಶ್ರೀ ಎ.ಕೆ. ಹಿಮಕರ ಬರ್ದೊಳೊ. ಈ ಪುರುಷ ಜೀವಂತ ಇರಿಕನ ಭಾಗಮಂಡಲಲಿ ಜಾತ್ರೆ ನಡ್ದುವ

ವಿವರ ನಾವ್‌ಗೆ ಸಿಕ್ಕಿದೆ. ಯೊಸೋಳಿಕಮ್ಮ ಈ ಪುರುಷನ ತಮ್ಮ. ಅವನೂ ನಾಥ ಪಂಥದ ಸನ್ಯಾಸಿ. ಇವನ ಯೊಸೋಳಿಕ ಅಮ್ಮ ಅಂತ ಹೆಣ್ ದೇವ್‌ರಾಗಿ ಕುಕ್ಕೆ ಸುಬ್ರಹ್ಮಣ್ಯಲಿ ಮತ್ತೆ ಹಾಸನದ ರಾಮನಾಥಪುರಲಿ ಆರಾಧನೆ ಮಾಡಿವೆ. ಅರೆಭಾಷೆ ಮಾತಾಡುವ ಸಮುದಾಯದ ಮೇಲೆ ಪುರುಷನ ಅಗಾಧ ಪ್ರಭಾವ ಉಟ್ಟು. ಕಂದ್ರಪ್ಪಾಡಿ ಊರ್‌ನ ಮತ್ತೆ ಪುರುಷದೈವದ ಕತೆ ಈ ಸಮುದಾಯದ ಅವೈದಿಕ ನೆಲೆಗಳ ಬಗ್ಗೆ ಸೂಕ್ಷ್ಮ ಒಳನೋಟ ಕೊಟ್ಟದೆ. ಇಂದ್‌ನ ಉಡುಪಿ ಜಿಲ್ಲೆನ ಕೋಟೇಶ್ವರಲಿ ಒಂದ್ ಶಿವ ದೇವಸ್ಥಾನ ಉಟ್ಟು. ಅಲ್ಲಿ ಕ್ರಿ.ಶ. 1551ರ್‌ಲಿ ಒಂದ್ ಹೋರಾಟ ನಡ್ತ್. ಇವರ ಬಗ್ಗೆ 'ಹಿಸ್ಟರಿ ಆಫ್ ಸೌತ್ ಕೆನರಾ' ಗ್ರಂಥಲಿ ಇತಿಹಾಸಜ್ಞ ಡಾ. ಕೆ.ವಿ. ರಮೇಶ್ ವಿವರಗಳ ಕೊಟ್ಟೊಳೊ. ಆ ಹೋರಾಟಲಿ ಬ್ರಾಹ್ಮಣರ, ಶೂದ್ರರ ಮತ್ತೆ ದನಗಳ ಹೆಣಗ ದೇವಸ್ಥಾನದ ಅಂಗಣಲಿ ಚೆಲ್ಲಾಡಿ ಬಿದ್ದಿದ್ದ ವಿಚಾರನ ಅವು ಹೇಳಿವೆ. ಇದ್ ಬಹುಶಃ ಅಂದ್‌ನ ಸಮಾಜಲಿ ನಡ್ದ ಜಾತಿ ಸಂಘರ್ಷದ ಕತೆನ ಹೇಳ್ತೆ. ಸರಿ ಸುಮಾರ್ ಅದೇ ಸಮಯಲಿ ಕಂದ್ರಪ್ಪಾಡಿಲಿನೂ ಒಂದ್ ಇಂತದ್ದೇ ಘಟನೆ ನಡ್ದದೆ. ಅಲ್ಲಿನ ಅರೆಭಾಷೆನ ಜನ ಒಂದ್ ಅಪರೂಪದ ಬಂಡಾಯ ನಡ್ಸಿವೆ. ಆಗ ಜೈನ ಬಲ್ಲಾಳರ ಆಳ್ವಿಕೆ ಇದ್ದ ಸಮಯ. ಕಂದ್ರಪ್ಪಾಡಿ ಊರಿನ ಅರೆಭಾಷೆ ಸಮುದಾಯದ ಜನ ಊರ್‌ನ ಹೊರವಲಯಲಿ ಇರುವ ಮಾಳಿಗೆ ಅಂತ ಹೇಳುವ ದೈವದ ಚಾವಡಿಂದ ಊರೊಳಗ ರಾಜ್ಯದೈವದ ಭಂಡಾರ ತಂದ್ ಕೋಲ ನಡ್ಸುದು ಸಂಪ್ರದಾಯ. ಆ ಸರ್ತಿ ಧ್ವಜಸ್ತಂಭ ನೆಟ್‌ದ್ ಶೈವ ಮತದ ಸಂಕೇತ ಆದ ಉರ್ಬುಳಿ ಸನ್ಯಾಸಿನ 'ಕೊಡಿ' ಹಾರ್‌ಸಿ ಜಾತ್ರೆ ನಡ್ಸಿಕೆ ತಯಾರ್ ಮಾಡ್ದೊ. ಅದ್ಕೆ ಬೇಕಾದ ಕೊಡಿನ ಅಡೂರ್‌ಲಿ ಮಾಡ್ಸಿ ತಂದೊ. ಈ ವಿಚಾರ ಅಲ್ಲಿನ ನಾಗಾರಾಧಕ ಬ್ರಾಹ್ಮಣರಿಗೆ ಇಷ್ಟ ಆತ್ಲೆ. ಅವ್ ಆ ಸಮಯಲಿ ಊರ್‌ನ ಎತ್ತರದ ಪ್ರದೇಶಲಿ ಒಂದ್ ದೇವಸ್ಥಾನ ಕಟ್‌ಸಿ 'ಶಂಖಪಾಲ' ದೇವ್‌ರ ಪ್ರತಿಷ್ಠಾಪನೆ ಮಾಡಿಕೆ ಎಲ್ಲ ತಯಾರ್ ನಡ್ಸಿದ್ದೊ. ಅರೆಭಾಷೆಯವರ ನಡವಳಿಕೆ ಅವರ ಪ್ರಾಬಲ್ಯಕ್ಕೆ ಧಕ್ಕೆಂತ ಅವ್ಕೆ ಕಂಡಿರೊಕು. ಆ ಬ್ರಾಹ್ಮಣರ್ ಸೀದಾ ಹೋಗಿ ದೊರೆಗೆ ದೂರ್ ಕೊಟ್ಟೊ. ಬಲ್ಲಾಳರ್ ಹೀಂಗೆಲ್ಲ ಹೊಸ ಹೊಸ ವಿಷಯ ಮಾಡ್ದು ಬೇಡಾಂತ ಅರೆಭಾಷೆಯವ್ಕೆ ಅಡ್ಡಗಾಲ್ ಹಾಕಿದೊ. ಅವ್‌ಕೆ ಸಿಟ್ ಬಾತ್. ಮುಂದನೇ ಬೇರೆ ಬೇರೆ ಕಾರಣಕ್ಕೆ ಅವ್‌ಕೆ ಬಲ್ಲಾಳರ ಮತ್ತು ವೈದಿಕರ ಮೇಲೆ ಸಿಟ್ ಇತ್ತ್‌ಂತ ಕಂಡದೆ. ಜಾತ್ರೆ ಸುರ್ ಆತ್. ಮಾಳಿಗೆಂದ ಭಂಡಾರ ತೆಗ್ದೊ. ಆ ಹೊತ್‌ಗೆ ಅವರ ಸಿಟ್ ನೆತ್ತಿಗೆ ಏರಿತ್. ಭಂಡಾರ ತಾಕನ ದಾರಿಲಿ ಸಿಕ್ಕಿದ ಬಲ್ಲಾಳರ ಮನೆಗಳ, ಬಸದಿಗಳ ನೆಲಸಮ ಮಾಡ್ದೊ. ಅಲ್ಲಿಂದ ಸೀದಾ ಎದ್‌ರ್‌ನ ಗುಡ್ಡೆಲಿ ಶಂಖಪಾಲಂಗೆ ಕಟ್ಟಿದ ದೇವಸ್ಥಾನದ ಹಕ್ಕಲೆ ಹೋದೊ. ಒಂದ್ ಕಡೆ (ಕಡವೆ ಪ್ರಾಣಿ) ನ ಹೊಡ್ದ್ ತಂದೊ. ಹೊಸ ಕಟ್ಟಡಕ್ಕೆ ಕಿನ್ನರಿ ಜೋಕ್ಕೆ ಕಟ್ಟಿ ಒಕ್ಕಲ್ ಆದವೆ ಅಲ್ಲ. ಹಾಂಗನೇ ದೇವಸ್ಥಾನದ ಕಟ್ಟಡಕ್ಕೆ ಕಡೆ ಕರ್‌ಳ್‌ನ ಸುತ್ತೂ ಕಟ್ಟಿ, ಗರ್ಭಗುಡಿ ಒಳಗೆ ದಂಬೆಕಲ್ (ಪಾಣಿಪೀಠ) ಮೇಲೆ ರಾಜ್ಯದೈವನ ಸ್ಥಾಪನೆ ಮಾಡಿ ಒಕ್ಕಲ್ ಮಾಡ್ದೊ. ಮತ್ತೆ ಶೈವ ಸಂಕೇತದ ಕೊಡಿ ಹಾರ್‌ಸಿ ಜಾತ್ರೆ ನಡ್‌ಸಿದೊ. ಇದ್ ಅರೆಭಾಷಿಕ ಜನ ನಡ್‌ಸಿದ ಒಂದು ವಿಶೇಷ ದಂಗೆದ್ ಕತೆ. ಅವ್ ಹೇಂಗೆ ಒಂದು ರಾಜಾಳಿತನ ಎದ್‌ರ್ ಹಾಕುದು ಮಾತ್ರ ಅಲ್ಲ. ಪಾಳೆಯಪಟ್‌ನನೇ ಮುಗ್ಗಿಬುಡುವಷ್ಟ್ ಮತ್ತೆ ಪುರೋಹಿತಶಾಹಿ ಸಂಕೋಲೆಗಳ ಕಳಚಿ ಹಾಕುವಷ್ಟ್ ಶಕ್ತಿಶಾಲಿ ಮನೋಭಾವನ ಹೊಂದಿದ್ದೊ ಅಂತ ಈ ಘಟನೆ ವಿವರ್‌ಸಿದೆ. ಇಂಥ ಸ್ವತಂತ್ರ ಚಿಂತನೆ, ಸಮಕಾಲೀನ ರಾಜಕಾರಣದ ತಿಳುವಳಿಕೆ ಮತ್ತೆ ಗೆದ್ದೇ ಗೆಲ್ಲುವೊಂತ ಹೇಳುವ ಆತ್ಮಸ್ಥೈರ್ಯ ಇದ್ದ ಕಾರಣ ಮುಂದೆ ಸೂರ್ಯ ಮುಳ್‌ಗದ ಸಾಮ್ರಾಜ್ಯನ ಕಟ್ಟಿದ ಬ್ರಿಟಿಷರ ಓಡ್‌ಸಿ ಕೆನರಾ ಪ್ರದೇಶಕ್ಕೆ ಎರ್ಡ್ ವಾರದಷ್ಟ್ ಕಾಲ ಸ್ವಾತಂತ್ರ್ಯ ಕೊಡ್ಸಿ ಕೊಟ್ಟ ಅಮರಸುಳ್ಯ ಹೋರಾಟನ ನಡ್ಸಿಕೆ ಸಾಧ್ಯ ಆತ್.

ಇನ್ ತೊಡಿಕಾನ ಮಲ್ಲಿಕಾರ್ಜುನ ದೇವಸ್ಥಾನ, ಪೆರಾಜೆ ಶಾಸ್ತಾವೇಶ್ವರ ದೇವಸ್ಥಾನ, ಅಲೆಟ್ಟಿ ಸದಾಶಿವ ದೇವಸ್ಥಾನ, ಮಂಡೆಕೋಲು ವಿಷ್ಣುಮೂರ್ತಿ ದೇವಸ್ಥಾನ, ಐವರ್ನಾಡು ಪಂಚಲಿಂಗೇಶ್ವರ ದೇವಸ್ಥಾನ, ಕಾಯತೋಡಿ ವಿಷ್ಣುಮೂರ್ತಿ ದೇವಸ್ಥಾನ, ಹರಿಹರ ಹರಿಹರೇಶ್ವರ ದೇವಸ್ಥಾನ, ಪಂಜ ಪಂಚಲಿಂಗೇಶ್ವರ ದೇವಸ್ಥಾನ, ಮಾರಕತ ದುರ್ಗಾಪರಮೇಶ್ವರಿ ದೇವಸ್ಥಾನ ಹೀಂಗೆ ಸುಳ್ಯ ಮತ್ತು ಅದರ ನೆರೆಕರೆನ ಹೆಚ್‌ನ ದೇವಸ್ಥಾನಗ ಎಲ್ಲ ಅರೆಭಾಷಿಕ

ಗೌಡರ ಆಡಳಿತಕ್ಕೆ ಒಳಪಟ್ಟತ್. ಅದೇ ರೀತಿ, ಉಬರಡ್ಕದ ಮಿತ್ತೂರು ನಾಯರ್, ಪನೆಕಲ್‌ನ ಬಚ್ಚ ನಾಯಕ, ಕಾಯತ್ತೋಡಿನ ಜಂಗಬಂಟ ಮತ್ತೆ ಹತ್‌ಹಲವು ದೈವಾರಾಧನೆಗ ಇವರ ಆಡಳಿತಲೇ ನಡ್ಕಂಡ್ ಬಂದುಟು.

'ಕಲ್ಯಾಣಪ್ಪನ ಕಾಟಕಾಯಿ' ಅಥವಾ 'ಅಮರಸುಳ್ಯ ಹೋರಾಟ' ಅಂತ ಕರೆವ 1837ರ ಕೊಡಗು ಮತ್ತೆ ಕೆನರಾ ಜಿಲ್ಲೆಗಳ್ಲಿ ನಡ್ದ ಬ್ರಿಟಿಷ್ ವಿರೋಧಿ ಹೋರಾಟದ ಬಗ್ಗೆ ಇಲ್ಲಿ ಹೆಚ್ಚಿಗೆ ಏನೂ ಹೇಳ್ತುಲ್ಲೆ. ಕೆದಂಬಾಡಿ ರಾಮಯ್ಯ ಗೌಡರ ಬುಡಮಟ್ಟದ ಸಂಘಟನೆಂದ ಇದ್ ಸಾಧ್ಯ ಆತ್. ಸುಳ್ಯಂದ ಸುರ್ ಆದ ಹೋರಾಟದ ಹಿನ್ನೆಲೆನ ಹಂಙ ನೋಡೊಮೊ. ಕೊಡಗ್‌ನ ಅಕೇರಿ ಅರಸ, ಹಾಲೇರಿ ಮನೆತನದ, ಚಿಕ್ಕವೀರರಾಜೇಂದ್ರ ಒಡೆಯರ್‌ನ 1834ರ್‌ಲಿ ಬ್ರಿಟಿಷರ್ ಪಟ್ಟಂದ ಇಳ್ಸಿವೆ. ಅವನ ಕಾಶಿಗೆ ಗಡಿಪಾರ್ ಮಾಡಿವೆ. ಇಲ್ಲಿನ ಜನಕ್ಕೆ ಅರಸನೊಟ್ಟಿಗೆ ಭಾವನಾತ್ಮಕ ಸಂಬಂಧ ಇತ್. ಅದ್ಕೆ ಈ ಘಟನೆ ತುಂಬ ಬೇನೆ ಕೊಟ್ಟತ್. ಚಿಕ್ಕವೀರರಾಜನ ದೇಶಾಂತರ ಕಳ್ಸಿದ ಮೇಲೆ 'ಕೆಳ ಕೊಡಗು' ಅಂತ ಕರಿಯತಿದ್ದ ಸಂಪಾಜೆಂದ ಕೆಳಗೆನ ಊರ್‌ಗಳ ಪ್ರತ್ಯೇಕ ಮಾಡಿ ಕೆನರಾ ಜಿಲ್ಲೆಗೆ ಸೇರ್ಸಿದೊ. ಕೆನರಾ ಜಿಲ್ಲೆಲಿ ಕಂದಾಯನ ನಗದ್ ಹಣದ ರೂಪಲಿ ಕೊಡ್ತಿದ್ದೊ, ಆದರೆ ಕೊಡಗ್‌ಲಿ ಕೃಷಿ ಉತ್ಪನ್ನ, ಕಾಡ್ ಉತ್ಪತ್ತಿ ಹಿಂಗೆ ವಸ್ತುಗಳ ರೂಪಲಿ ಕೊಡ್ತಿದ್ದೊ.ದಿದ್ ಇಲ್ಲಿನವ್ಕೆ ಭಾರೀ ಭಂಙ ಆತ್. ಒಟ್ಟಿಗೆ ಹೊಗೆಸೊಪ್ಪು ಮತ್ತೆ ಉಪ್‌ನ ಮೇಲೆ ಕಂಪೆನಿ ಸರಕಾರದ ಏಕಸ್ವಾಮಿತ್ವ ಹಾಂಗೆ ಹೊಸ ನ್ಯಾಯಾಂಗ ವ್ಯವಸ್ಥೆ ಇಲ್ಲಿನ ಭೂಮಾಲಕರಿಗೆನೂ ಗೇಣಿದಾರರಿಗೆನೂ ಕಷ್ಟದ ವಿಚಾರ ಆತ್. ಭೂಕಂದಾಯ ಪಾವತಿ ಮಾಡಿಕೆ ಸಾಧ್ಯ ಆಗದೆ ಆಸ್ತಿಗಳ ಹರಾಜ್ ನಡ್ತ್. ಮಧ್ಯವರ್ತಿ ವ್ಯಾಪಾರಿಗ ಕೃಷಿಭೂಮಿಗಳ ಲಪಟಾಯಿಸಿದೊ. ಕತ್ರಪ್ಪ ಬಾವು ಅಂತ ಪೂರ್ವಾಶ್ರಮದ ಹೆಸರ್‌ನ ಚಿತ್ರದುರ್ಗದ ಸ್ವಾಮಿ ಅಪರಂಪಾರ ಕೊಡಗ್‌ಲಿ ಹೋರಾಟ ಮಾಡಿಕೆ ಸಂಘಟನೆ ಮಾಡ್ತ್. ಅಂವ ಬ್ರಿಟಿಷರಿಗೆ ಸೆರೆ ಸಿಕ್ಕಿ ಅಂವನ ತಿರುಚಿರಾಪಳ್ಳಿ ಸೆರೆಮನೆಗೆ ಕಳ್ಸಿದೊ. ಇಲ್ಲಿಂದ ಉಬರಡ್ಕದ ಕೆದಂಬಾಡಿ ರಾಮಯ್ಯ ಗೌಡ, ಮೂಲತಃ ಅರಕಗೂಡ್‌ನ ಹುಲಿಕಡಿದ ನಂಜಯ್ಯ ಮತ್ತೆ ಭಾಗಮಂಡಲದ ಸಿರಕಜೆ ಮಲ್ಲಯ್ಯ ಆಗಾಗ ತಿರುಚಿರಾಪಳ್ಳಿಗೆ ಹೋಗಿ ಸ್ವಾಮಿ ಅಪರಂಪಾರನನ್ನು ಭೇಟಿ ಮಾಡಿ ಹೋರಾಟಕ್ಕೆ ಸಿದ್ಧತೆ ನಡ್ಸಿದೊ. ಶನಿವಾರಸಂತೆನ ಹೆಮ್ಮನೆ ಊರ್‌ನ ಪುಟ್ಟಬಸಪ್ಪಂಗೆ ಕಲ್ಯಾಣ ಸ್ವಾಮಿ ಅಂತ ಹೆಸರ್ ಇಟ್ಟಿ ಹೋರಾಟದ ಮುಖ್ಯ ಸ್ಥಾನದ ಪಟ್ಟ ಕಟ್ಟಿದೊ. 1837ರ ಯುಗಾದಿ ಸಮಯಲಿ ದಂಡ್ ಹೊರ್ಡುಕೂಂತ ನಿರ್ಧಾರ ಮಾಡ್ದೊ. ಎಲ್ಲ ತೀರ್ಮಾನಗ ತಿರುಚಿರಾಪಳ್ಳಿನ ಜೈಲ್‌ಲಿ ನಡ್ತ್. ಸ್ವಾಮಿ ಅಪರಂಪಾರನ ಒಟ್ಟಿಗೆ ಕೂಜುಗೋಡು ಮಲ್ಲಪ್ಪ ಗೌಡ, ಕೆದಂಬಾಡಿ ರಾಮಯ್ಯ ಗೌಡ, ಹುಲಿಕಡಿದ ನಂಜಯ್ಯ, ಚೆರಂಜಿ ಸುಬ್ರಾಯ, ಶೇಕ್, ಮಾನ್ಯದ ರಂಗಪ್ಪ, ವೀರಣ್ಣ ಬಂಟ, ಸಿರಕಜೆ ಮಲ್ಲಯ್ಯ ಈ ಒಳಸಂಚ್‌ನ ಮುಖ್ಯ ಪಾತ್ರಧಾರಿಗಳ.

ಹೋರಾಟದ ರೂಪುರೇಷೆಗೆ ತಕ್ಕಾಂಗೆ 1837ರ ಜನವರಿ ತಿಂಗಳ್ಲಿ ಕಲ್ಯಾಣಪ್ಪನ ಸುಳ್ಯಕ್ಕೆ ಕರ್ಕಂಡ್ ಬಂದ್ ಕೆದಂಬಾಡಿ ರಾಮಯ್ಯ ಗೌಡರ ಮನೆ ಹಕ್ಕಲೆ ಪೂಮಲೆ ಕಾಡ್‌ಲಿ ಮೂರ್ ವಾರ ಒಳ್ಸಿಕಂಡೊ. ಮತ್ತೆ ದಂಡ್ ಹೊರ್ಡಿಕೆ ಎಲ್ಲ ಸಿದ್ಧತೆ ಅಕೇರಿ ಹಂತಕ್ಕೆ ತಲ್ಪಿತ್. 1837ರ ಮಾರ್ಚ್ 30ರಂದ್ ಸುಳ್ಯದ ಪಕ್ಕ ಉಬರಡ್ಕ ಮಿತ್ತೂರು ಗ್ರಾಮಲಿ ಕೆದಂಬಾಡಿ ರಾಮಗೌಡ್ರಿಗ ಸೇರ್ದ ಮದುವೆಗದ್ದೆಲಿ ಕಲ್ಯಾಣಪ್ಪ ಪ್ರತ್ಯಕ್ಷ ಆತ್. ಸುಳ್ಯದ ಸಾವಿರಕ್ಕೂ ಹೆಚ್ ಜನ ದಂಡ್‌ಗೆ ಹೊರ್ಡಿಕೆ ತಯಾರಾಗಿ ಅಲ್ಲಿ ಸೇರಿದ್ದೊ. ಅಲ್ಲಿ ಜನ ಪ್ರೀತಿ, ಗೌರವಂದ ಕಲ್ಯಾಣಸ್ವಾಮಿಗೆ ಮಿತ್ತೂರು ನಾಯರ್ ದೈವದ ಕೆಂಪು ಕೊಡೆನ ಹಿಡ್ದವೆ. ಈ ಪ್ರದೇಶದ ಅತ್ಯಂತ ಕಾರಣಿಕದ ದೈವದ ಛತ್ರಚಾಮರನ ಒಬ್ಬ ನರಮನ್ಸಂಗೆ ಹಿಡ್ದದ್ ಈ ಹೋರಾಟದ ಬಗ್ಗೆ ಜನಸಾಮಾನ್ಯರಿಗಿದ್ದ ಅರ್ಪಣಾ ಮನೋಭಾವನ ತೋರ್ಸಿದ. ಅಲ್ಲಿಂದ ದಂಡ್ ಹೊರ್ಡಿಕೆ ಮುಂದೆ ಕೊಡಗ್‌ನ ದಿವಾನ ಲಕ್ಷ್ಮೀನಾರಾಯಣನ ತಮ್ಮ ಸುಳ್ಯದ ಹಕ್ಕಲೆನ ಅಟ್ಲೂರ್‌ಲಿ ಇದ್ದ ತುದಿಯಡ್ಕ ರಾಮಪ್ಪಯ್ಯನ ಕರ್ಕಕೆ ಕೆದಂಬಾಡಿ ರಾಮಯ್ಯ ಗೌಡ ಕೆಲವರ ಕಳ್ಸಿವೆ. ಅಂವ ಬಾರ್ದುಲ್ಲೆ. ಅದ್ಕೆ ಅವಂನ ಸೆರೆ ಹಿಡ್ದ್‌ದ್ ಕರ್ಕಂಡ್ ಬಂದವೆ. ದಂಡ್ ಮುಂದೆ ಅಂವನ ಕರ್‌ಕಂಡೇ ಬೆಳ್ಳಾರೆ ಪೇಟೆಗೆ ಹೋಗಿ ಸರಕಾರದ ಖಜಾನೆನ ವಶ ಪಡ್ಸಿಕಂಡದೆ. ಬೆಳ್ಳಾರೆಲಿ ರಾಮಪ್ಪಯ್ಯನ ವಿಚಾರಣೆ ನಡ್ಸಿಂದ ಬ್ರಿಟಿಷರಿಗೆ ಮಾಹಿತಿ ಕೊಡ್‌ತಿರ್‌ಂತ ಹೇಳುವ ಕಾರಣಕ್ಕೆ ಮರಣ ದಂಡನೆ ನೀಡಿವೆ. ಬೆಳ್ಳಾರೆಯಲ್ಲಿ ದಂಡ್‌ಲಿ 3,000 ಯೋಧರ

ಇದ್ದೊ. ಆನೆ ಮತ್ತೆ ಕುದುರೆಗಳೂ ಇದ್ದೊ. ಬೆಳ್ಳಾರೆಲಿ ದಂಡ್‌ನ ನಾಕ್ ವಿಭಾಗ ಮಾಡಿವೆ. ಚೆರಂಜಿ ಸುಬ್ರಾಯ. ಕುಂಚಡ್ಕ ರಾಮಯ್ಯ ಗೌಡ ಮತ್ತೆ ಕುಡೆಕಲ್ಲು ಪುಟ್ಟಗೌಡರ ನೇತೃತ್ವಲಿ ಕುಂಬ್ಳೆ–ಕಾಸರಗೋಡು–ಮಂಜೇಶ್ವರ ಗಲ್ಲಿಕೆ ಒಂದ್ ತಂಡ. ಬಂಟ್ವಾಳ–ಕಾರ್ಕಳ ವಶ ಪಡ್ಡಿಕೆ ಎರ್ಡನೇ ತಂಡ. ಕೂಜುಗೋಡು ಮಲ್ಲಪ್ಪ ಗೌಡ ಮತ್ತೆ ಅಪ್ಪಯ್ಯ ಗೌಡರ ಮುಂದಾಳುತನಲಿ ಉಪ್ಪಿನಂಗಡಿ–ಬಿಸಲೆ–ಐಗೂರು ಗೆಲ್ಲಿಕೆ ಮೂರನೇ ತಂಡ ಹೋದೆ. ಕಲ್ಯಾಣಪ್ಪ. ಕೆದಂಬಾಡಿ ರಾಮಯ್ಯ ಗೌಡ ಮತ್ತೆ ಕುಕ್ಕುನೂರು ಚೆನ್ನಯ್ಯ ಇದ್ದ ಪ್ರಧಾನ ಸೈನ್ಯ ಕೊಡಿಯಾಲ (ಮಂಗಳೂರು)ಕ್ಕೆ ಹೋದೆ. ಮಂಗಳೂರಿಗೆ ಹೊರಟ ದಂಡ್ ಮುಂದೆ ಪುತ್ತೂರ್‌ನ ಗದ್ದತ್. ಅಲ್ಲಿ 1,200 ಜನ ಸೇರಿದ್ದೊ. ಸರಕಾರಿ ನೌಕರಂಗ. ಪಟೇಲ್ರ್‌ಗ. ಶ್ಯಾನುಭೋಗರ್ ಎಲ್ಲ ಕಲ್ಯಾಣಪ್ಪನ ಕಡೆ ಸೇರಿಕಂಡೊಳೊ ಅಂತ ಕೆನರಾ ಕಲೆಕ್ಟರ್ ಲೆವಿನ್ ಬರ್ದುಟು. ಇದರ ಶ್ರೀ ಎನ್. ಎಸ್. ದೇವಿಪ್ರಸಾದ್ ಸಂಪಾಜೆ 'ಅಮರ ಸುಳ್ಯದ ಸ್ವಾತಂತ್ರ್ಯ ಸಮರ' ಪುಸ್ತಲಿ ಲಾಯ್ಕಲಿ ವಿವರ್ಸಿಯೊಳೊ.

ಎಪ್ರಿಲ್ 6ನೇ ತಾರೀಕ್‌ಗೆ ಪ್ರಧಾನ ಸೈನ್ಯ ಮಂಗಳೂರ್ ಹಕ್ಕಲೆ ತಲ್ಪಿತ್. ಅದೇ ಹೊತ್‌ಗೆ ಕಾಸರಗೋಡು. ಕುಂಬ್ಳೆ. ಮಂಜೇಶ್ವರಗಳ ಗದ್ದ ಇನ್ನೊಂದ್ ಸೈನ್ಯ ಮುಖ್ಯ ದಡ್‌ನೊಟ್ಟಿಗೆ ಸೇರ್ತ್. ಮಂಗಳೂರ್ ಹೆಚ್ ಪ್ರತಿರೋಧ ಇಲ್ಲದೆ ಈ ರೈತಸೈನ್ಯದ ಕೈವಶ ಆತ್. ಕೂಡಲೇ ರೈತರಿಗೆ ಕಂದಾಯ ವಿನಾಯತಿನ ಘೋಷಣೆ ಮಾಡ್ಡೊ. ಉಪ್ಪು ಮತ್ತೆ ಹೊಗೆಸೊಪ್‌ನ ಮೇಲೆ ಇದ್ದ ಏಕಸ್ವಾಮ್ಯನ ರದ್ದ್ ಮಾಡ್ಡೊ.

ಆದರೆ ಈ ಸಂತೋಷ ಹೆಚ್ ದಿನ ಉಳ್ಳ್ಲೆ. ಮುಂದೆ ಎರಡ್ ವಾರದ ಸಮಯಲಿ ಬ್ರಿಟಿಷರ ಪ್ರಬಲ ಸೈನ್ಯ ಬಂದ್‌ದ್ ಈ ಹೋರಾಟನ ಹತೋಟಿಗೆ ತಂದೊ. ಒಟ್ಟು 1115 ಜನರ ಬಂಧನ ಮಾಡ್ಡೊ. 35 ವಿಚಾರಣಾಧೀನ ಹೋರಾಟಗಾರರ್ ಸೆರೆಮನೆ ವಾಸಲಿ ಇರಿಕಾಕನ ಸತ್ತೊ. ಈ ಹೋರಾಟದ ಬಹುತೇಕ ಕೇಸ್‌ಗ ಮಂಗಳೂರ್‌ಲಿ ನಡ್ಡೊ. ಇಬ್ಬರ ವಿಚಾರಣೆ ಮಡಿಕೇರಿಲಿ ನಡ್ತ್. ಸ್ವಾಮಿ ಅಪರಂಪಾರನ ಕೇಸ್ ಮೈಸೂರ್‌ಲಿ ನಡ್ದುಟು. ಹೋರಾಟಲಿ ಪ್ರಮುಖ ಪಾತ್ರ ವಹ್ಸಿದ ಲಕ್ಷ್ಮಪ್ಪ ಬಂಗರಸನ 1837ರ ಮೇ 23ರಂದ್. ಉಪ್ಪಿನಂಗಡಿಯ ಮಂಜನ ಮೇ 30ರಂದ್ ಮತ್ತೆ ಪುಟ್ಟಬಸಪ್ಪನ ಜೂನ್ 19ರಂದ್ ಮಂಗಳೂರ್‍ನ ಬಿಕರ್ನಕಟ್ಟೆಲಿ ಗಲ್ಲಿಗೆ ಹಾಕಿವೆ. ಗುಡ್ಡೆಮನೆ ಅಪ್ಪಯ್ಯ ಗೌಡರ ಅದೇ ವರ್ಷ ಅಕ್ಟೋಬರ್ 31ರಂದ್ ಮಡಿಕೇರಿ ಕೋಟೆ ಒಳಗೆ ನೇಣಿಗೆ ಹಾಕಿವೆ. ಕೆದಂಬಾಡಿ ರಾಮಯ್ಯ ಗೌಡ. ಚೆಟ್ಟಿಕುಡಿಯ. ಕುಕ್ಕುನೂರು ಚೆನ್ನಯ್ಯ. ಕೂಜುಗೋಡು ಮಲ್ಲಪ್ಪ ಗೌಡ. ಬೀರಣ್ಣ ಬಂಟ. ಕಾರ್ಯಕಾರ ಸುಬೇದಾರ್ ಕೃಷ್ಣಯ್ಯ. ಮಂಗಳೂರ್ ಗೆಲ್ಲಿಕಾಕನ ಹಾಲೇರಿ ಬಾವುಟನ ಹಾರ್ಸಿದ ಗುಡ್ಡೆಮನೆ ತಮ್ಮಯ್ಯ ಮೊದಲಾದವರ ಪ್ರಾಣಿಗಳ ಹಾಂಗೆ ಗೂಡ್‌ಲಿ ತುಂಬಿಸಿ ಸಿಂಗಾಪುರ. ಬರ್ಮಾ ಹೀಂಗೆ ಸಮುದ್ರದಾಚೆನ ಊರ್‌ಗಳಿಗೆ ಕಳ್ಸಿ ಜೀವನದುದ್ದಕ್ಕೂ ಕೈಕಾಲ್‌ಗಳಿಗೆ ಕೋಳ. ಸಂಕೋಲೆ ಹಾಕಿ ರಸ್ತೆ ನಿರ್ಮಾಣದಂಥ ದೈಹಿಕಶ್ರಮದ ಸಾರ್ವಜನಿಕ ಕೆಲ್ಸಕ್ಕೆ ಉಪಯೋಗಿಸಿಕಂಡೊಳೊ. ಉಳುವಾರು ಕೃಷ್ಣ. ಗೌಡಳ್ಳಿ ಸುಬ್ಬಪ್ಪು. ಕುಕ್ಕೆಟ್ಟ ಸುಬ್ಬ. ಶೇಕ್. ದೇರಾಜೆ ಬಚ್ಚ ಪಟೇಲಿ. ನೆಡುಂಪಳ್ಳಿ ದೇವಪ್ಪ ರೈ. ಗುಂಡಾಲ್ ಸುಬ್ಬಪ್ಪ ಮತ್ತೆ ಕೆಲವ್ಕೆ ಜೀವಾವಧಿ ಶಿಕ್ಷೆ ಆಗುಟು. ಇನ್ ತುಂಬ ಜನಕ್ಕೆ 14 ವರ್ಷ. 10 ವರ್ಷ ಮತ್ತು 7 ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಿಯೊಳೊ. ಮಾನ್ಯದ ರಂಗಪ್ಪ ಯುದ್ಧಭೂಮಿಲಿ ಮೃತ ಪಟ್ಟರೆ. ಚೆರಂಜಿ ಸುಬ್ರಾಯ ಗಾಯ ಆಗಿ ಸೆರೆ ಸಿಕ್ಕಿ ಜೈಲೊಳಗೆ ಸತ್ತವೆ.

ಇಂಥ ಅದ್ಭುತ ಹೋರಾಟಲಿ ಭಾಗವಹಿಸಿದ ಅರೆಭಾಷಿಕರ ಪಟ್ಟಿನ ಒಮ್ಮೆ ನೋಡಿ. ಕೆದಂಬಾಡಿ ರಾಮಯ್ಯ ಗೌಡ. ಗುಡ್ಡೆಮನೆ ಅಪ್ಪಯ್ಯ ಗೌಡ. ಕೂಜುಗೋಡು ಮಲ್ಲಪ್ಪ ಗೌಡ. ಕುಕ್ಕುನೂರು ಚೆನ್ನಯ್ಯ. ಕುಡೆಕಲ್ಲು ಪುಟ್ಟ ಗೌಡ. ಉಳುವಾರು ಕೃಷ್ಣಯ್ಯ. ಪಟ್ರಕೋಡಿ ಸಣ್ಣಯ್ಯ. ಕುಂಚಡ್ಕ ರಾಮಗೌಡ. ಕಳಗಿ ಅಣ್ಣಯ್ಯ ಗೌಡ. ದೇರಾಜೆ ಪಟೇಲ್ ಬಚ್ಚ ಗೌಡ. ಕೋಡಿ ದೇರಣ್ಣ ಗೌಡ. ನಂಗಾರು ಸುಬ್ಬಯ್ಯ. ಮಾಣಿಬೆಟ್ಟು ಪುಟ್ಟಯ್ಯ. ಕುರುಂಜಿ ಅಪ್ಪಯ್ಯ. ಕುಕ್ಕೆಟ ಸುಬ್ಬಯ್ಯ. ಸಿರಕಜೆ ಮಲ್ಲಯ್ಯ. ಸುಳ್ಯಕೋಡಿ ಪಟೇಲ್ ತಿಮ್ಮಪ್ಪ. ಪರಿವಾರ ಅಪ್ಪಯ್ಯ ಗೌಡ. ಮಡಿಯಾಲ ತಿಮ್ಮಯ್ಯ ಗೌಡ. ಕಾರ್ಯನ ಅಣ್ಣಯ್ಯ ಗೌಡ. ಬಾರಿಕೆ ಕೃಷ್ಣಪ್ಪ ಗೌಡ. ದೇಂಗೋಡಿ ಸುಬ್ರಾಯ. ಅಮೆ ಮಲ್ಲಪ್ಪ ಗೌಡ. ಕೂಜುಗೋಡು ಅಪ್ಪಯ್ಯ. ಕೂಜುಗೋಡು ಕುಂಬಗೌಡ. ಗುಡ್ಡೆಮನೆ ತಮ್ಮಯ್ಯ ಗೌಡ.

ಕೆದಂಬಾಡಿ ಸಣ್ಣಯ್ಯ ಗೌಡ, ಕೆದಂಬಾಡಿ ಕೃಷ್ಣಪ್ಪ, ಕೆದಂಬಾಡಿ ಲಕ್ಷ್ಮಣ, ಕೆದಂಬಾಡಿ ದೇರಣ್ಣ, ಕೆದಂಬಾಡಿ ಸುಬ್ಬಯ್ಯ, ಕೆದಂಬಾಡಿ ಪುಟ್ಟಗೌಡ, ಕಾರ್ಯನ ತಿಮ್ಮಯ್ಯ, ಕಾರ್ಯನ ಬೊಳ್ಳ ಗೌಡ ಮತ್ತೆ ಕಾರ್ಯನ ಕುಂಜ ಗೌಡ. ಇವಲ್ಲದೆ ಇನ್ನೂ ತುಂಬ ಜನ ಇದರ್‌ಲಿ ಭಾಗವಹ್ಸಿಯೊಳೊ. ಈ ಹೋರಾಟಲಿ ಬೇರೆ ಬೇರೆ ಜಾತಿ ಸಮುದಾಯಗಳಿಗೆ ಸೇರ್ದ ಜನ ಇದ್ದೊ. ಆದರೆ ಹೆಚ್ಚಿಗೆ ಅರೆಭಾಷೆ ಗೌಡ್ರ್‌ಗ ಇದ್ದದರ್‌ಂದ ಈ ಹೋರಾಟನ ಜಿ. ರಿಕ್ಟರ್ 1870 ರ್‌ಲಿ ಬರ್ದ Coorg Gazetteer ಲಿ upraising of Gaudas ಅಂದರೆ ಗೌಡರ ಹೋರಾಟಾಂತ ಬರ್ದುಟು. ಹಿಂಗೆ ಅರೆಭಾಷಿಕರ್ ಈ ಅಪರೂಪದ ಸ್ವಾತಂತ್ರ್ಯ ಹೋರಾಟನ ಹುಟ್‌ಹಾಕಿ ವೀರಾವೇಷಂದ ಕಾದಾಡಿ ತಮ್ಮ ಛಾಪು ಮೂಡ್ಸಿಯೊಳೊ.

ಇಂಥದೊಂದ್ ಹೋರಾಟಕ್ಕೆ ನಿಜವಾದ ಮನ್ನಣೆ ಈಗಳೂ ಸಿಕ್ಕಿತ್‌ಲ್ಲೆ. ನಿಜಕ್ಕೂ ಇದರ್‌ಂದ ಆಗಿ ಅರೆಭಾಷೆ ಗೌಡ್ರ್‌ಗ ತಲೆಮಾರ್‌ನುದ್ದಕ್ಕೂ ನರ್ಕ ಪಡುವಂಥ ಸ್ಥಿತಿ ನಿರ್ಮಾಣ ಆತ್. ಬ್ರಿಟಿಷರ ಆಳ್ವಿಕೆ ಕಾಲಲಿ ಅವ್ ಅರೆಭಾಷಿಕರ ಅಭಿವೃದ್ಧಿನ ಎಲ್ಲ ಸಾಧ್ಯತೆಗಳ್‌ಂದ ದೂರ ಮಡ್ಗಿದೊ. ಸರಕಾರಿ ಉದ್ಯೋಗ, ಶಿಕ್ಷಣ ಯಾವ ಕ್ಷೇತ್ರಗಳ್ಳಿನೂ ಅವ್ಕೆ ಅವಕಾಶ ಸಿಕ್ಕಿತ್‌ಲ್ಲೆ. ಅರೆಭಾಷಿಕರ್ ಹೆಚ್ ವಾಸ ಇರುವ ಪ್ರದೇಶಗಳ್ಲಿ ಶಿಕ್ಷಣ ಸಂಸ್ಥೆಗಳೇ ಸ್ಥಾಪನೆ ಆತ್ಲೆ. ಕ್ರಿಶ್ಚನ್ ಮಿಶನರಿ ಸಹ ಇವರ ಅಭಿವೃದ್ಧಿ ಪಥಂದ ದೂರನೇ ಇಸಿಯೊಳೊ. ಇವರ ಎರಡನೇ ದರ್ಜೆನ ಪ್ರಜೆಗಳ ಹಾಂಗೆ ಕಂಡೊಳೊ. ಸ್ವಾತಂತ್ರ ಪ್ರೇಮ ಮತ್ತೆ ಧೀಶಕ್ತಿ ತೋರ್ಸಿದ ಅರೆಭಾಷೆ ಗೌಡ್ರ್ ಹಿಂಗೆ ಬ್ರಿಟಿಷ್ ಕಾಲಲಿ ಕತ್ತಲೆಲಿನೇ ಒಳ್ದೊ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ಮೇಲೆ, ಸಂವಿಧಾನ ರಚನೆ ಆಗಿ ಹೊಸ ಬೊಳ್ಪು ಮೂಡ್ದ ಮೇಲೆ ಈ ಜನ ಮುಖ್ಯ ಪ್ರವಾಹದ ಕಡೆ ಹಾಂಗೇ ಮೆಲ್ಲಂಗೆ ನಡಿಯಕೆ ಸುರು ಮಾಡ್ದೊಳೊ. ದಾರಿ ಅಂತೂ ತುಂಬ ದೂರ ಉಟ್ಟು.

ತಿರ್ಗುವ ಚಕ್ರ

ಈ ನೆಲ, ಈ ಮಣ್ಣ್, ಈ ಗಾಳಿಲಿ
ಹೊಡಿ ಧೂಳಾಗಿ
ಈ ನೀರ್, ನೀರ್‌ಲಿರುವ ಮೀನ್
ಮೀನಾಗಿ,
ಎಸಂಡ್, ಒಳ್ಳೆ, ಮಿಂಚುಳ್ಳಿಗೆ
ತಿನಿಯಾಗಿ,
ಮಣ್ಣ್‌ನೊಳಗೆ ಮಣ್ಣಾಗಿ
ಬಿತ್ತಾಗಿ,
ಮುಂಗೆ ಬಾವ ಹೊತ್ತ್‌ಲಿ
ಹಕ್ಕಿಗ ಒಮ್ಮೆ ತಿಂದ್
ಬಂಜಲಿ ಮುಂಗೆ ಬಾಕನ
ದನಂಗ ಮೇದ್

ಒಳ್ದದ್ ಬೆಳ್ದಾಕನ
ಫಸಲ್ ಬಾಕನ
ಅಕೇರಿಗೆ ಮುಡಿಲಿ ತುಂಬ್‌ಸಿ
ಅಟ್ಟದ ಮೂಲೆಲಿ
ಕತ್ತಲೇಲಿ ಹಾಕಿ...........
ಮತ್ತೆ ಒಮ್ಮೊಮ್ಮೆ
ಕಿಚ್ಚಿಲಿ ಬೇಸಿ ತಿಂದ್............
ಹಿಂಗೆ........
ಕರ್ಮದ ಹಣೆ ಬರ
ಯಾಗೋಳು ತಿರ್ಗುವ ಚಕ್ರ

ಜಯಪ್ರಕಾಶ್ ಕುಕ್ಕೇಟಿ
(ಆಕರ : ಸಡಗರ)

ಅರೆಬಾಸೆನ ಎಂಟನೆ ಪರಿಚ್ಛೇದಕೆ ಸೇರ್ಸದೂ, ಬಾಸೆನ ಬೆಳ್ಸದೂ –



ಡಾ. ಕರುಣಾಕರ ನಿಡಿಂಜಿ.

ಮೊಯಿಂಸ ಅವನ ಬುದ್ಧಿಬಲಂದ, ಅವನ ಬೊದ್ಕ್‌ನ ಅಗತ್ಯಕ್ಕೆಂತೇಳಿ ಹುಟ್ಸ್‌ಸಿಕಂಡ ಸೊರ ಮತ್ತೆ ಗೆರೆಗಳ ವ್ಯವಸ್ತೆನೆ ಬಾಸೆ. ಹೇಂಗೆ ನೋಡಿರೂ ಅದ್ ಅವನ ಬೊದ್ಕ್‌ನ ಆದಾರ ಕಂಬನೇ ಆಗಿ ನಿತ್ತ್‌ಕಂಡುಟ್ಟು. ಮೊಯಿಂಸ ಕಟ್ಟಿಕಂಡ ಸಂಸ್ಕೃತಿ, ಹಳೆಕಾಲದ ಬೊದ್ಕ್‌ನ ನೆಂಪುಗ– ಹೀಂಗೆ ಹೊಸ ತಲೆಮಾರಿಗೆ ಹೋಕಾದ ಸಂಗತಿಗೆಲ್ಲ ಹೋದು ಬಾಸೆಲಿ. ಇವೆಲ್ಲ ಎಷ್ಟರ ಮಟ್ಟಿಗೆ ಸತ್ಯಂತೇಳ್ರೆ, ಒಂದು ಜನಾಂಗನ ಹಾಳುಮಾಡೊಕುಂತೇಳ್ರೆ, ಅದ್ ಮಾತಾಡುವ ಬಾಸೆನ ಹಾಳ್‌ಮಾಡ್ರೆ ಸಾಕ್– ಅಂತೇಳುವ ಗಾದೆಮಾತೇ ಹುಟ್ಟಿಕಂಬಷ್ಟುಮಟ್ಟಿಗೆ. **ಯಾವ ಬಾಸೆನೂ ಒಂದುಬೊಳ್ಪಿಗೆ ಮಳೆಬಂದಾಂಗೆ ಒಮ್ಮೆಗೆ ಸೃಷ್ಟಿಯಾದ ಸಂಗತಿ ಅಲ್ಲ. ಹಾಂಗೆನೇ ಒಮ್ಮೆ ಹುಟ್ಟಿಕಾಕನ ಏನೂ ದೋಸ ಇಲ್ಲದೆ ಹುಟ್ಟಿ ನಿತ್ತದೂ ಅಲ್ಲ. ಅಷ್ಟು ಮಾತ್ರ ಅಲ್ಲ, ಅದ್ ಎಂದಿಗೂ ಒಂದೇ ರೂಪಲಿ ಇರುವಂತದೂ ಅಲ್ಲ. ಯಾಗೋಳು ಬದ್‌ಲಾದು ಒಂದು ಜುವ್ವಲಿರುವ ಬಾಸೆನ ಲಕ್ಷಣ.** ಹಾಂಗಂತೇಳಿ ಬಾಸೆಗೆ– ಅದ್ ಹೀಂಗೇ ಇರೊಕುಂತ– ಕಟ್ಟ್‌ಪಾಡ್ ಹಾಕಿದಂವನ ಮಾತ್ ನಿತ್ತತೂ ಇಲ್ಲೆ. ಒಂದು ಬಾಸೆಗೆ ಒಂದೇ ರೂಪ ಇರೊಕುಂತೇಳ್ದು, ಒಂದು ಬಾಸೆನ ಮಾತಾಡವರ ಆಚಾರ ವಿಚಾರಗೆಲ್ಲ ಒಂದೇ ತರ ಇರೊಕುಂತೇಳ್ದು ಬಾಸೆನ ಹಾಂಗೇ ಒಂದು ಜೆನಾಂಗನ ಕೊಲ್ಲುವ ಕ್ರಮನೂ ಆಗಿಬುಡುದು. ಯಾರೇ ಆಗಲಿ ಹೀಂಗೆ ಮಾಡಿಕೆ ಹೊರ್ಟ್‌ಕನ ಬಾರೀ ಎಚ್ಚರ ಬೇಕ್.

ಹಾಂಗೆ ನೋಡ್ರೆ, ಬಾಸೆಲಿ ಒಂದು ಪರಿಪೂರ್ಣಂತೇಳುವ ಸರಿರೂಪನೇ ಇಲ್ಲೆ. ಒಂದೊಂದು ಕಾಲಕೆ ಒಂದೊಂದು ರೂಪ ಸರಿಂತಾದೆ ಅಷ್ಟೆ. ಒಂದು ಬಾಸೆಗೆ ಇದೇ ಸರಿರೂಪಾಂತನೂ, ಇನ್ನ್ ಮುಂದೆ ಯಾವ ಹೆಚ್ಚಿಕಮ್ಮಿನೂ ಆಕೆ ಬೊತ್ತ್‌ಂತನೂ ಯಾರಾರ್ ಮಾಡಿರೆ– ಅದ್ ಆ ಬಾಸೆನ ಕೊಲ್ಲುವ ಕೆಲ್ಸಂತೇಳುದಲ್ಲಿ ಯಾವ ಸಂಸಯನೂ ಇಲ್ಲೆ. ಸಂಸ್ಕೃತ ಬಾಸೆನ ನೋಡಿ ಇದರ ಮರಿಯೊಕು. ಕಾಲ ಬದ್‌ಲಾದೆ. ಬೊದ್ಕ್ ಬದ್‌ಲಾದೆ. ಮೊಯಿಂಸರ್ ಬದ್‌ಲಾದವೆ, ಹಾಂಗಿರಿಕನ ಬಾಸೆ ಮಾತ್ರ ಬದ್‌ಲಾದು ಬೇಡಂತೇಳ್ರೆ ಹೇಂಗೆ? ಬಾಸೆನ ಹುಟ್ಸ್‌ಸಿದೂ ಜೆನ. ಬೆಳ್ಸದೂ ಜೆನಹೊರ್ತು, ಸರ್ಕಾರನೂ ಅಲ್ಲ; ಸಂಗಗಳೂ ಅಲ್ಲ. ಹಾಂಗಾಗಿ ಬಾಸೆಂತೇಳುದು ಜೆನಕ್ಕೆ ಎಷ್ಟ್‌ಕಾಲ ಬೇಕೋ ಅಷ್ಟ್ ಕಾಲ ಒಳ್ದದೆ. ಬೇಡಾಂತಾದ ದಿನನೆ ಅದ್ ಸತ್ತದೆ. ಅರೆಬಾಸೆ ಮಾತ್ರ ಅಲ್ಲ; ಯಾವ ಬಾಸೆನೆ ತಕಣೆ ಈ ಮಾತ್ ಸತ್ಯ. ಸ್ವಂತ ಇಚ್ಚೆಲಿ ಉಸುರು ತೆಗಿಯಂವ ಬೊದ್ಕಿದೆ. ಉಸುರಾಟನ ಮಿಶನ್ ಕೊಟ್ಟ್ ಮಾಡ್ಲಿರೆ, ಅದರ ತೆಗಿಯಕನ ಅಂವ ಸತ್ತದೆ. ಬಾರತ ದೇಶಲಿ ಸಾವಿರ ಸಾವಿರ ಬಾಸೆಗ ಇದ್ದೊ, ಒಳೊ. ಅವೆಲ್ಲ ಈಗ ಇರುವೊಂತೇಳಿಕೆ ಆದುಲೆ. ಆದೀಗ ಬೇಡ. ಅರೆಬಾಸೆನ ಬಗ್ಗೆ ಹೇಳುದಾದರೆ ನಾವು ಹೀಂಗೇ ಹೇಳಕಾದೆ. ಹಾಂಗೆಂತೇಳಿ ಇದೊಂದು ನಿರಾಸೆನ ಮಾತಲ್ಲವೇ ಅಲ್ಲ.

ದಕ್ಷಿಣ ಕನ್ನಡ ಭಾಗಲಿ, ಅಂದರೆ ಗಟ್ಟಂದ ಕೆಳೆಗೆ ಅರೆಬಾಸೆನ ಚರಿತ್ರೆನ ಹೇಂಗೆ ಗೇನಮಾಡಿರೂ 1500ಕ್ಕಿಂತ ಅಂದರೆ ಕ್ರಿಸ್ತ ಸಕ 15ನೇ ಸತಮಾನಂದ ಹಿಂದೆಗೆ ತಕಂಡ್ ಹೋಕಾದುಲೆಂತೇಳಿದ್ದ್ ಪ್ರೊ. ಪುರುಷೋತ್ತಮ ಗೌಡ್ರ್ ಇಂದ್ ನಾವುಗೆ ಸಿಕ್ಕುವ ಶಾಸನ, ಓಲೆಗರಿಗಳ ಬರದ ಆದಾರಗಳ ಮೇಲೆಂದ ಹೇಳಿಯೊಳೊ. ಇದೇ ಆದಾರಗಳ ಮೇಲೆನೆ,– ಸಮುದ್ರ ಕರೆನ ಗಟ್ಟದ ಕೆಳೆಗೆನ ಜಾಗೆಗಳಿಗೆ ಗೌಡ್ರ್ ಹಾಸನ ಕಡೆಂದ ಶಿರಾಡಿ ಗಾಟ ಇಳ್ದ್ ಬಂದೊವುಂತೇಳುವ ಇನ್ನೊಂದು ಸಂಗತಿನೂ ಹೇಳಿಯೊಳೊ. ಗೌಡ್ರ್ ಗಟ್ಟ ಇಳ್ದ್ ಬಂದೊವು ಇಲ್ಲಿ ಸುಮ್ಮನೆ ಒಂದಿಷ್ಟ್ ಜಾಗೆಲಿ ನೆಲೆನಿತ್ತ್ ಮಾತ್ರಬೊದ್ಕಿದೊವು ಅಲ್ಲ; ಅದರೊಟ್ಟಿಗೆ ಇಲ್ಲಿ ಆಳಿಕೆ ಮಾಡಿಕಂಡಿದ್ದ ರಾಜ ಪರಂಪರೆಗಳ ಹಕ್ಕಲೆನೇ ಇದ್ದ್‌ಕಂಡ್ ಆಳಿಕೆ ಮಾಡಿಕಂಡೋ, ಆಳಿಕೆಗೆ ಸಹಾಯ ಮಾಡಿಕಂಡೋ ಇದ್ದಿರೆಕು ಅಂತೇಳ್ವರ

ಬಡ್ಡಸ್ತ ವಿವ್ಯಾದರ ಗೌಡ್ರ್ ಹೇಳ್ದ್ ನಿಜಆಗಿರೊಕುಂತ ಕಂಡದೆ. ಯಾಕಂತೇಳ್ರೆ, ಗೌಡ್ರ್ ಹಾಂಗಿಲ್ಲದಿದ್ದಿದರೆ, ಅಂತ ತಾಕತ್ತ್‌ನ ಜೆನ ಅಲ್ಲದಿದ್ದಿದರೆ ಇಂಗ್ಲಿಸ್ ದೊರೆಗಳಿಗೆ ಗೌಡ ಮುಕಂಡರ ಹಿಡ್ದ್ ಗಲ್ಲಿಕ್ಕೆ ಕೊಡುವ ಅಗತ್ಯ ಬಾತಿತ್ತ್‌ಲೆ. ಜೆನ ಸಾಮಾನ್ಯರ್ ಅಗನ ಕಾಲದ ಗೌಡ ಮುಕ್ಯಸ್ತರ ಮಾತ್ ಕೇಳಿ ದಂಡ್‌ಗೆ ಸೇರ್‌ತನೂ ಇತ್ತ್‌ಲೆ. ಹೀಂಗೆ ಬೊದ್ಕಿದ ಕಾರಣಂದಾಗಿನೆ ಗೌಡ್ರ ಬಾಸೆಲಿ ಜನಪದ ಸಾಹಿತ್ಯನೂ ಹುಟ್ಟಿಬಾತ್‌ಲೆ ಆಗಿರೊಕು. ಬಾಸೆಲಿ ಜನಪದಸಾಹಿತ್ಯ ತುಂಬಇರುವ ಜಾತಿಜೆನಂಗ ಒಂದು ಕಡೆ ನೆಲೆನಿತ್ತ್ ಬೇಸಾಯ, ದನಕರ್ ಒಕ್ಕಲ್‌ಕೆಲ್ಸಂತ ಮಾಡಿಕಂಡ್ ಬೊದ್ಕಿದೊವು. ಗೌಡ್ರ್ ಅಷ್ಟೇ ಹೀಂಗೆ ಬೊದ್ಕಿದರ್‌ಂದಹೆಚ್ಚಿಗೆ ಒಳ್ವವರ ಕೈಲಿ ಕೆಲ್ಸಮಾಡ್ಸಿ, ಅಂದರೆ ದನಿಗ ಆಗಿ, ಊರುಗೌಡ ಆಗಿ, ಮುಕಂಡರಾಗಿ ಬೊದ್ಕಿದೊವ್ರೋಂತ ಕಂಡದೆ. ಶ್ರೀಮತಿ ಎಂ.ಜಿ. ಕಾವೇರಮ್ಮನೊವು ಹೇಳುವಾಂಗ ಹತ್ತ್ ಕುಟುಂಬದವರ ಬೇರೆ ಬೇರೆ ಕೆಲ್ಸಗಳ್‌ಂದಾಗಿ ಗೌಡ್ರ ಬೊದ್ಕ್‌ಗೆ ಬೇಕಾದ ಸಂಗತಿ ಒದ್‌ಗ್‌ತಿದ್ದೊಂತೇಳ್ರೆ, ಗೌಡ್ರ್ ಒಳ್ಳ ಕುಟುಂಬಸ್ತರ ಹಾಂಗೆ ಬೊದ್ಕದೆ, ಬೇರೆ ರೀತಿಲಿ ಬೊದ್ಕಿರೊಕೋಂತೇಳುವ ಗುಮಾನಿ ಬಂದದೆ. ಗೌಡ್ರ್ ಹುಟ್ಟಾ ಬುದ್ದಿವಂತ ಜೆನನೇ ಆಗಿರೊಕು. ಅದಿಕಾರದ ಕೇಂದ್ರದ ಹಕ್ಕಲೆ ಇದ್ದದರ್‌ಂದಾಗಿ ಇವುಕೆ ಬರವು ಸರಾವು ಗೊತ್ತಿದ್ದರ್‌ಂದಾಗಿ, ತಲೆಓಡ್ಸಿ ಬೊದ್ಕುದು, ದೂರದೃಷ್ಟಿಗ ಇದ್ದೊ. ಹಾಂಗೆ ಇದ್ದದರ್‌ಂದಾಗಿನೇ, ಕೊಡ್ಗ್ ರಾಜನ ಪೀಳಿಗೆ ಕುತ್ತಿಮುತ್ತಿಹೋದಮೇಲೆನೂ, ಸ್ವಾಮಿ ಅಪರಂಪಾರಂತೇಳುವ ಹೆಸರ್ ಹಾಕಿ ಒಬ್ಬನ ರಾಜನ ಪೀಳಿಗೆಂವಂತ ಸುಳ್ಳ್ ಮಾಡಿ, ಇಂಗ್ಲಿಸ್ ದೊರೆಗಳ ಎದ್‌ರ್ ಯುದ್ದಮಾಡಿಕೆ ಜೆನಗಳ ಒಲ್ಸಿಕಂಡೊ. ಹೀಂಗೆ ಪ್ರತ್ಯಕ್ಷ- ಪರೋಕ್ಷ ಸಾಕ್ಷಿಗಳ ಒಟ್ಟಿಗಿಸಿಕಂಡ್‌ದ್ದ್ ಚಿಂತನೆ ಮಾಡಿರೆ ಬೇರೆನೆ ಒಂದು ರೂಪದ ಚರಿತ್ರೆ ಗಟ್ಟಇಳ್ದ ಗೌಡ್ರಿಗೆ ಸೆರ್ದ್ ಬಂದದೆ.

ಇದೆಲ್ಲ ಸಂಶೋದನೆ ಮಾಡಿ ಇನ್ನಷ್ಟ್ ಸರ್ಿನೋಡಕಾದ ವಿಚಾರಗ. ಇದೆಲ್ಲ ಈಗ ಯಾಕೆ ಹೇಳೊಕಾತ್‌ಂತೇಳ್ರೇ, ನಮ್ಮ ಬಾಸೆನ ಸಂವಿದಾನದ ಎಂಟನೆ ಪರಿಚ್ಛೇದಕೆ ಸೇರ್ಸೊಕುಂತೇಳುವ ವಿಚಾರನ ನಾವು ಎತ್ತಿಕೆ ಮುಂದೆ ನಮ್ಮ ಬಾಸೆನ ಇಂದ್‌ನ ಸುರ್ಪನೂ, ಅದ್ ಎಷ್ಟ್ ಹಳ್ತ್‌ಂತೇಳ್ದರನೂ ಹಂಙ್ಞ ಗೇನಮಾಡಿಕಣಕಾದೆ. ಈಗ ನಾವು ಮಾತಾಡುವ ಸುದ್ದ ಕನ್ನಡಂದ ಈ ಬಾಸೆ ಬಾತ್‌ಂತೇಳುದು ಇಂದ್‌ನ ಚಾಲ್ತಿರುವ ಬಾಸೆನ ಪಂಡಿತರ ಅಬಿಪ್ರಾಯ. ಒಮ್ಮೆಗೆ ನೋಡಿಕೆ ಇದ್ ನಿಜಾಂತನೆ ಕಂಡದೆ. ಆದರೆ ನಂಗೇಕೋ ಇದ್ ಅಷ್ಟ್ ಸರಿಂತ ಆದೇಲೆ. ನಾ ಬಾಸೆನ ಪಂಡಿತ ಅಲ್ಲ. ಬವ್ರುಸ್ಸ, ಹಾಂಗಾಗಿನೆ ನಂಗೆ ಇಂತದೊಂದು ಗೇನ ಬಾತಿರಿಕೂ ಸಾಕ್. ಅದೇನೇ ಇರ್ಲಿ, ಅರೆಬಾಸೆಂತೇಳುವ ಮಾತ್ ಬಾಸೆನ ಹೆಸ್‌ರಾಗಿ ಇಂದ್ ಉಟ್ಟ್‌ಲೇ, ಇದ್‌ಕೆ ಅರ್ದ ಬಾಸೇಂತ ಅರ್ತ ಹೇಳಿಕಾದೆನೋ? ಅಂದರೆ ಕನ್ನಡದ ಹಾಂಗೆ ಕಾಂಬ ಮಾತ್‌ನ ಕಾರಣಂದಾಗಿ ಅರ್ದ ಕನ್ನಡಂತೇಳುವ ಅರ್ತಲಿ ಈ ಹೆಸ್‌ರ್ ಬಂದಿರುದಾದರೆ- ಅಲ್ಲಿ ಈ ಬಾಸೆ ಕನ್ನಡಂದಳೇ ಬಾತ್‌ಂತೇಳುವ ಅರ್ತ ಹೇಳಕಾಗಿಲ್ಲೆ. ಕನ್ನಡದ ಹಾಂಗೆ ಕಾಂಬೊದೂ ಕೇಳ್ಸೋ ಬೇರೆ, ಕನ್ನಡಂದಳೇ ಬಾದೇ ಬೇರೆ. ಹಾಂಗಾಗಿ ಕನ್ನಡದ ಹಾಂಗೆ ಕೇಳುವ ಬಾಸೆಂತೇಳುವ ಅರ್ತಲ್ಲೇ ಈ ಹೆಸ್‌ರ್ ಬಂದಿರೊಕೋಂತ ನನ್ನ ಗುಮಾನಿ. ಒಂದ್‌ಸಮೆ, ಅದ್ ಹೌದುಂತಾದರೆ ಈ ಬಾಸೆನ ಮೂಲ ಯಾದ್‌ಂತೇಳುವ ಪ್ರಸ್ನೆ ಎದ್ದದೆ. ಹಾಂಗೆನೆ ಅರೆಬಾಸೆಂತಾಕೆ ಮುಂದೆ ಅದ್ ಅರ ಬಾಸೆಂತೇನಾರ್ ಇದ್ದಿರುದೋ? ಅಂದರೆ ಅರಸು ಬಾಸೆಂತೇಳುದು (ಯಾಕೆಂತೇಳ್ರೆ ಈ ಗೌಡ್ರ್ ಗಟ್ಟ ಇಳ್ದ್ ಬಂದ್ ಕೂಲಿಗ ಗ್ಯೊದೊವಲ್ಲ) ಮುಂದೆ ಬಾಯಿಮಾತ್‌ಲಿ ಅರಬಾಸೆಂತಾಗಿ ಕಡೆಗೆ ಅರೆಬಾಸೆಂತಾಗಿರುದೋ? ಅರಣ್‌ಮನ್ಯೆ ಂತ ತಮಿಳ್ ಬಾಸೆಲಿ ಮಾತ್‌ನ ಕ್ರಮ ಉಟ್ಟು ಗಡ. ಕನ್ನಡಲಿ ಅರಮನೆ ಂತೇಳುವ ಮಾತ್ ಉಟ್ಟು. ಅಂದರೆ, ಅರಸನ ಮನೆ. ನಾ ಆಗಳೇ ಹೇಳ್ದಾಂಗೆ ನಾ ಬಾಸೆನ ಪಂಡಿತ ಅಲ್ಲ. ಆದರೆ ಬಾಸೆನ ಪಂಡಿತರ್ ಇದಿಕ್ಕೆ ಒಂದು ಪರಿಯಾರ ಹೇಳೊಕುಂತ ಕೇಳಿಕಂಡೊಳೆ.

ಈಗ ನಂಗೆ ನೆಂಪುಗೆ ಬಾದು ಪ್ರೊ. ಪುರುಷೋತ್ತಮ ಗೌಡ್ರ ಬರಾವ್ನ ಒಂದು ಸಣ್ಣ ಬಾಗ. ಮನ್ನೆ ಸುದ್ದಿಪೇಪರ್‌ಗೆ ಬರ್ದ ಅವರ ಬರಾವ್ಲಿ ಒಂದ್ ಕಡೆ ಅವು ಹೀಂಗೆ ಹೇಳಿಯೊಳೊ- ಪ್ರಸ್ತುತ ಲೇಖನದ ಆರಂಭದಲ್ಲಿ ಹೇಳಿದಂತೆ, ಅರೆಭಾಷೆಯಲ್ಲಿ ಅತಿ ಪ್ರಾಚೀನ ಪದಗಳಿವೆ. ಅವರ ಧ್ವನಿಮಾ ವಿನ್ಯಾಸ ಕನ್ನಡಕ್ಕಿಂತ ಭಿನ್ನವಾಗಿ. ಇದರ ಅವ್ಯಾತ ವಿಭಕ್ತಿಗಳ ಪ್ರಸರಣವನ್ನು ಗಮನಿಸಿಕೊಂಡು, ಅರೆಭಾಷೆಯು ಉತ್ತರ ದ್ರಾವಿಡ ಭಾಷಾ ಗುಂಪಿಗೆ ಸೇರಿದ ಸುಮಾರು 22 ಲಕ್ಷ ಜನ ಮಾತಾಡುತ್ತಿರುವ ಬಲೂಚಿಸ್ತಾನದ ಬ್ರಾಹುಈ ಯ

ಅನಂತರದ ಸ್ಥಾನವನ್ನು ಪಡೆಯುತ್ತದೆ ಎಂದು ಖ್ಯಾತ ವಿದ್ವಾಂಸ ಎಸ್.ಎ. ಷಣ್ಮುಗಂ ಅವರು ಅಭಿಪ್ರಾಯಪಟ್ಟಿದ್ದಾರೆ. (ಸುದ್ದಿಬಿಡುಗಡೆ, ಮಾರ್ಚ್ 2. 2019. ಪು.4) ಇಲ್ಲಿ ನಂಗೆ ಮುಕ್ಯಂತ ಕಂಡದ್ ಮೂರು ಸಂಗತಿಗ. ಒಂದು ಅರೆಬಾಸೆಲಿ ದ್ರಾವಿಡ ಬಾಸೆನ ತುಂಬ ಪಂಡ್‌ಕಾಲದ ಮಾತ್‌ಗ ಒಳ್ಳೊಳೊ. ಎರ್ಡ್- ಉತ್ತರ ದ್ರಾವಿಡ ಬಾಸೆಗಳ ಗುಂಪು. ಮೂರು ವಿದ್ವಾಂಸ ಷಣ್ಮುಗಂ ಅವು ತಲೆಓಡ್ಸಿದ ದಾರಿ.

ಕೆಲೊವು ಮಾತ್‌ಗಳ ನೋಡಿ. ಪೊಟುವ. ಮಂಜಣೆ. ಮಂಞಣ. ಚೆಣೆ. ಚೆಂಡಿ. ಕುರ್ಚಟೆ. ಮರ್ಚಟೆ. ಕುಂಞೆ. ಕೊಂಞ. ಜಿರ್ಸ. ಉಗ್ಗಪ್ಪ. ಉಗ್ಗವ್ವ. ಬಾಸೆ. ವೇಸ. ದೋಸ ಗಳ ಸ ಕಾರ. ಇಷ್ಟಲ್ಲದೆ ಇನ್ನೂ ಎಷ್ಟೋ ಮಾತ್‌ಗ ಒಳೊ. ಹಿರಿಯೊವು ಗಂಗಾದರ ಮಾಸ್ಟ್ರ ಮನ್ನೆನ ಸಾಹಿತ್ಯ ಸಮ್ಮೇಳನದ ಬಾಷಣಲಿ. ಅವರ ಡಿಕ್ಶ್ನರಿಲಿ ಇಂತ ಮಾತ್‌ಗಳ ವಿವರ ಉಟ್ಟು. ಹಾಂಗಾಗಿ ಕನ್ನಡಲಿಲ್ಲದ ಇಂತ ಮಾತ್‌ಗ ಈ ಬಾಸೆಲಿ ಹೇಂಗೆ ಒಳ್ಕಂಡೋಂತ ಚಿಂತನೆ ಮಾಡೊಕೆ. ಒಂದೊ ಷಣ್ಮುಗಂ ಹೇಳ್ದಾಂಗೆ ಈ ಬಾಸೆ ಉತ್ತರ ದ್ರಾವಿಡ ಬಾಸೆಗಳ ಹಿಂಡ್‌ಗೆ ಸೇರಿರೊಕು ಅತವಾ ಮೂಲ ದ್ರಾವಿಡ ಬಾಸೆಂದ ಕನ್ನಡದ ಹಾಂಗೆನೆ ಕಬುರೊಡ್ದ್ ಬಂದ ಇನ್ನೊಂದು ಬಾಸೆನೆ ಅರೆಬಾಸೆ ಆಗಿರಿಕಾಗದೇಕೆ? ನಾ ಆಗಳೇ ಹೇಳ್ದಾಂಗೆ. ಆಳಿಕೆ ಮಾಡಿಕಂಡಿದ್ದೊವು ಅತವಾ ಅವರ ಸಂಮ್ಮಂದಲಿದ್ದೊವು ಮಾತಾಡುವ ಬಾಸೆಯಾದ ಕಾರ್ಣ ಅದರ ಹೆಸ್‌ರ್ ಹೀಗಂಗಾಗಿರಿಕಾಗದೇಕೆ? ಇದೇನೂ ಇಡೀ ಕರ್ನಾಟಕಲಿ ನಡ್ದ ಒಂದು ಸಂಗತಿಅಲ್ಲ. ಸೀರಾಡಿಗಾಟೆಂದ ಕೆಳಗೆನ ಬಾಗದ ಸಮುದ್ರ ಕರೆ ಮತ್ತೆ ಒಳಗೆನ ಬಾಗಲಿ ಬಂದ ಮಾತ್‌ನ ರೂಪ ತಾನೆ?

ಅರೆಬಾಸೆನ ಪೇಟೆಂದ ದೂರ ಇರುವ ಜೆನ ಮಾತಾಡಿಕನ ನಂಗೆ ಯಾಕೋ ಪ್ರಾಕೃತ ಬಾಸೆನೇ ನೆಂಪಾದು. ನನ್ನ ಇಂದ್‌ನ ಈ ಬರಾವುನ ಅಂತದೇ ಬಾಸೆಲಿ ಬರೊಳೆ ಕೂಡಾ. ಉದಾರಣೆಗೆ ಇಲ್ಲೊಂದು ಸಾಲ್ ನೋಡಿ.- ಖಿಮ್ಮಾಮಿ ಸವ್ವೇ ಜೀವಾ ಸವ್ವೇ ಜೀವಾ ಖಿಮಂತುಮೇ....... ಣತ್ತಿ ಸಂದೇಹ. (ಅರ್ತ- ಸರ್ವ ಜೀವಗಳನ್ನೂ ನಾನು ಕ್ಷಮಿಸುತ್ತೇನೆ: ಸರ್ವ ಜೀವಗಳೂ ನನ್ನನ್ನು ಕ್ಷಮಿಸಲಿ...... ಇದರಲ್ಲಿ ಸಂದೇಹವಿಲ್ಲ). ಸೋ ಧಮ್ಮೋ ಜತ್ಥದಯಾ ಸೋ ವಿ ತ ಓ ವಿಸಯಣಿಗ್ಗಹೋ. ಜತ್ಥ ದಸ ಅಟ್ಠ ದೋಸರಹಿರತ ಓ ಸೋ ದೇವೋ ಣತ್ಥಿ ಸಂದೇಹೋ- ವಡ್ಡಾರಾಧನೆ- ಪು. 11. ಅರ್ತ- ಎಲ್ಲಿ ದಯೆ ಇದೆಯೋ ಅದು ಧರ್ಮ: ಎಲ್ಲಿ ಇಂದ್ರಿಯ ನಿಗ್ರಹ ಇದೆಯೋ ಅದು ಕೂಡಾ ಧರ್ಮ: ಹದಿನೆಂಟು ದೋಷಗಳಿಲ್ಲದವನೇ ದೇವತೆಯು. ಇದರಲ್ಲಿ ಸಂದೇಹವಿಲ್ಲ) ಅಂದರೆ. ಅರೆಬಾಸೆಂತೇಳ್ತೀನ್ ಪ್ರಾಕೃತಂದಳೇ ಬಾತ್‌ಂತ ನಾ ಹೇಳಿಕಂಡಿಲ್ಲೆ. ಮಾತಾಡಿಕನ ಕನ್ನಡದ ಹಾಂಗೆ ಕೇಳುವ ಅರೆಬಾಸೆ- ಪ್ರಾಕೃತದ ಮಾತ್/ ಧಾಟಿನ ಹಾಂಗೂ ಕೇಳ್ದು ಮಾತ್ರ ಅಲ್ಲ. ಹಂಞ ಹೆಚ್ಚಿಗೇ ಪ್ರಾಕೃತ ಬಾಸೆನ ಹಾಂಗೆ ಕೇಳ್ದ್. ಪ್ರಾಕೃತ ಮಾತ್‌ಗಳ ನಡುಲಿ ಬಾವ ಸ ಕಾರಗ ಇದಿಕ್ಕೆ ಕಾರಣಂತ ನಂಗೆ ಕಂಡದೆ. ಅದೇನೇ ಇದ್ದರೂ. ಹವ್ಯಕ. ಅರೆಬಾಸೆಂತೇಳುವ ಬಾಸೆಗಳಿಗೆಲ್ಲ ಯಾದ್ ಮೂಲಂತೇಳುವ ಮಾತ್ ಬಾಕನ ಕನ್ನಡಕ್ಕೆ ನೇಲುವ ಬದ್‌ಲ್‌ಗ ಬೇರೆಕಡೆಗೆನೂ ನೋಡುವ ಅಗತ್ಯ ಬರೊಕೂಂತ ನಂಗೆಆದೆ. ಸಂಸೋದನೆಗೆ ಒಂದು ಪೂರ್ವಪರಿಕಲ್ಪನೆಂತ ಬೇಕು. ಇಂಗ್ಲಿಸ್‌ಲಿ ಇದರ ಹೈಫಾಥಿಸಿಸ್‌ಂತೇಳುವೆ. ಸಂಸೋದನೆ ಮಾಡಿಕೆ ಮುಂದೆ ಮಾಡುವ ಹೇಪಾಥಿಸಿಸ್‌ನ ಹಾಂಗಾದರೂ ಹೀಂಗೆ ಗೇನ ಮಾಡುದು ತಪ್ಪಾಕಿಲೆಂತ ನನ್ನ ಬಾವನೆ. ಕನ್ನಡಂತೇಳುವ ಹೆಸ್‌ರ್ ಹೇಂಗೆ ಬಾತ್‌ಂತೇಳುವ ಬಗ್ಗೆ ನಮ್ಮ ವಿದ್ವಾಂಸರ್ ಕೊಟ್ಟ ಅಬಿಪ್ರಾಯಗ ಏನ್‌ಂತೇಳುದು ಬಾಸೆನ ಚರಿತ್ರೆ ಗೊತ್ತಿದ್ದೊವ್ರುಕೆಲ್ಲ ಮತ್ತೊಮ್ಮೆ ಹೇಳೊಕಾಗಿಲ್ಲೆಂತ ಕಂಡದೆ. ಹಾಂಗಾಗಿ ಅರೆಬಾಸೆಂತೇಳುವ ಹೆಸ್‌ರ್‌ನ ಬಗ್ಗೆ ಹತ್ತ್ ದಿಕ್ಕ್‌ಲಿ ಗೇನ ಮಾಡಿನೋಡುದರ್ಲಿ ತಪ್ಪಿಲ್ಲೆಂತ ಕಂಡದೆ.

ಬಾಸೆನ ಹೆಸ್‌ರ್‌ನ ಬಗ್ಗೆ ಹಳೆದಾರಿನೇ ಸರಿ. ಹೊಸ್ತೇಕೆ? ಂತ ಕೇಳೊವು ಇರುವೊ. ಹೊಸ್ತೇನಾರ್ ಹೇಳೊಕಲೇಂತೇಳಿಕಾಗಿ ಹೇಳ್ದ ಸಂಗತಿ ಇದಲ್ಲ. ಒಂದು ಕಾಲಲಿ ನಾ 5ನೇ ಕ್ಲಾಸ್‌ಲಿರಿಕನ. ಸಂಸ್ಕೃತಂತೇಳುದು ಎಲ್ಲ ಬಾಸೆಗಳಿಗೂ ಮೂಲಂತ ನಾವುಗೆ ಮಾಸ್ಟ್ರ ಹೇಳಿ ಕಲ್ಸಿದ್ದೊ. ನಾವು ಹಾಂಗೆ ಬರ್ದ್ ಮಾರ್ಕ್‌ನೂ ತಕಂಡಿದ್ದೊ. ಆದರೆ ಆಮೇಲೆ ಏನಾತ್‌ಂತ ಎಲ್ಲೊವುಕೂ ಗೊತ್ತಿದ್ದದೇ ತಾನೆ? ಇಂದ್ ಸಂಸ್ಕೃತದ ಮೂಲನೇ ಬೇರೆ. ಕನ್ನಡದ ಮೂಲನೇ ಬೇರೆಂತಾತ್ಲೆನೋ? ಹಾಂಗನೆ. ಕಾಲಕಾಲಕ್ಕೆ ಹುಡ್ಕಿನೋಡಿರೆ ತಾನೆ? ಏನಾರ್ ಕಾಂಬೊದುಇದೆಲ್ಲ ನಾವು ಕಾಣದ ಕಾಲದ ಸಂಗತಿಗಲ್ಲ? ಹಾಂಗಾಗಿ. ಈ ಹುಡ್ಕಾಟ ಬೇಕೇಬೇಕು. ನಾವಿಂದ್

ಹೋಗುತ್ತೇನೆಂತೇಳುದೇ ಹೋನೆಂತಾಗಿರೊಕುಂತ ಹೇಳಿಕಂಡವೆ. ನಾ ಕೇಳ್ತು ಯಾಕೆ ಹೋನೆಂತೇಳುದೇ ಹೋಗುತ್ತೇನೆ ಅಂತಾಗಿರಕಾಗದ್? ಹಳೆಕನ್ನಡ ಬಾಸೆಲಿ ಪೋಪೆಂ, ಬರ್ಪೆಂ ಅತಿದ್ದದ್ ಕಾಲಾಂತರಲಿ, ಕಾಲಕ್ರಮಲಿ ಹೋಗುತ್ತೇನೆ ಅಂತಾಗಿರಿಕಾಗದ್? ಹಳೆಕನ್ನಡ ಬಾಸೆಲಿ ಪೋಪೆಂ, ಬರ್ಪೆಂ ಅತಿದ್ದದ್ ಕಾಲಾಂತರಲಿ, ಹೋಗುತ್ತೇನೆ ಬರುತ್ತೇನೆ ಅತಾತ್ಂತ ನಾವುಗೆ ಮಾಸ್ಟ್ರ ಪಾಟ ಮಾಡ್ಯೊಳೊ. ಹಾಂಗಿರಿಕನ, ಅರೆಬಾಸೆನ ಹೋನೆ ಬನ್ನೆ ಗಳೇ ಹೋಗುತ್ತೇನೆ, ಬರುತ್ತೇನೆ ಅಂತಾಗಿರಕಾಗದ್ ಯಾಕೆ? ಹಳೆಗನ್ನಡಕ್ಕೊಂದು ನ್ಯಾಯ ಅರೆಬಾಸೆಗೊಂದು ನ್ಯಾಯ ಹೇಳಿ ಬಾರಿ ಅನ್ಯಾಯನೇ ಆವುಟೋಂತ ಗುಮಾನಿ ಮಾಡಿರೆ, ನನ್ನಂತ ಸಾಮಾನ್ಯರ ಸಂಸಯನ ಬೇಕಾದ ಕಾರಣ ಸಮೇತ ಪರಿಯಾರ ಮಾಡಕಾದ್ ಬಾಸೆನ ಪಂಡಿತರ ಜಬಾವ್ದಾರಿ.

ಭಾರತೀಯ **ಸಂವಿಧಾನದ ಆರ್ಟಿಕಲ್ 344 (1) ಮತ್ತೆ 351 ರ ಪ್ರಕಾರ** ಹಿಂದಿ ಈ ದೇಸದ ಅದಿಕೃತ ಬಾಸೆ. ಹಾಂಗಿದ್ದರೂ ಇಂದ್, ಒಟ್ಟು 22 ಬಾಸೆಗ ಸಂವಿದಾನದ 8ನೆ ಪರಿಚ್ಛೇದಲಿ ಸೇರ್ರ್ಯೊಳೊ. ಇದರ್ಲಿ, 14 ಬಾಸೆಗ ಸಂವಿದಾನ ಮಾಡಿಕಾಕನೆ ಸೇರಿಕಂಡಿದ್ದೊ. 1967ರ್ಲಿ ಸಿಂಧಿ ಬಾಸೆನ, 1992 ರ್ಲಿ ಕೊಂಕಣಿ, ಮಣಿಪುರಿ, ಮತ್ತೆ ನೇಪಾಳಿ ಬಾಸೆಗಳ ಸೇರ್ಸಿದೊ. 2004ರ್ಲಿ ಬೋಡೋ, ಡೋಗ್ರಿ, ಮೈಥಿಲಿ, ಮತ್ತೆ ಸಂತಾಲಿ ಬಾಸೆಗಳ ಸಂವಿದಾನದ 8ನೆ ಪರಿಚ್ಛೇದಕ್ಕೆ ಸೇರ್ಸಿಕಂಡೊಳೊ. (ಕಡೆಗೆ ಸೇರ್ಸಿದ ನಾಲ್ಕ್ ಬಾಸೆಗಳ ಸಂವಿದಾನಕ್ಕೆ ಸೇರ್ಸಿದ್ ರಾಜಕೀಯ ಕಾರಣಕ್ಕಂತೇಳ್ಳರ ನೆಂಪಿಸಿಕಣೊಕು.) ತುಳುನೂ ಸೇರ್ದಾಂಗೆ, ಇಂದಿಗೆ ಸುಮಾರ್ 98 ಬಾಸೆಗ 8ನೇ ಪರಿಚ್ಛೇದಕ್ಕೆ ಸೇರೊಕುಂತೇಳುವ ಉಮೇದ್‌ಲಿ ಅರ್ಜಿಹಾಕಿ ಕುದ್ದೊಳೊ. ಬವುತ ಅರೆಬಾಸೆ ಸೇರ್ರೆ 99 ಆದೆ. ಇದ್ಕೆ ಒಂದು ಪರಿಹಾರ ಕಂಡ್‌ಹಿಡಿಯಕಂತ ಕೇಂದ್ರ ಸರ್ಕಾರ 1996ರ್ಲಿ ಪಾವಾ (*pahwa*) ಮತ್ತೆ ಸೀತಾಕಾಂತ ಮಹಾಪಾತ್ರ ಅವರ ಮುಕ್ಯಸ್ತಿಕೆಲಿ ಒಂದು ಕಮಿಟಿ ಮಾಡ್ತ್. ಆದರೆ ಇದರ ಸಾಧಕ ಬಾದಕನೆಲ್ಲ ಪರಿಶೀಲನೆ ಮಾಡ್ದ ಕಮಿಟಿಗೆ, ಈ ಸಮ್ಮಂದಲಿ ಏನೂ ನಿಯಮಗಳ ಮಾಡಿಕೆ ಸಾದ್ಯ ಆತೇಲೆ. ಹಾಂಗಂತೇಳಿ ಸರ್ಕಾರ ಏನೂಮಾಡಿಕಾಗದೆ ಸುಮ್ಮನೆ ಕುದ್ದತ್‌ಲೆ. ಜನರ ಬಾವನೆ ಅದ್ಕೆ ಅರ್ತಆದೆ. ಸದ್ಯಕ್ಕೆ ಇದ್ ಮುಗ್ದವಿಷಯ ಅಲ್ಲಂತೇಳ್ದೆ ನಾವುಗೆ ಗೊತ್ತಿರಕಾದ ಸಂಗತಿ.

ಒಂದು ಬಾಸೆ **8ನೆ ಪರಿಚ್ಛೇದಲಿ ಬಂದರೆ ಏನ್ ಲಾಬಂತೇಳುದರ** ಹಂಜ ನೋಡೊಕು. ಯಾವ ಭಾಸೆ 8ನೆ ಪರಿಚ್ಛೇದಲಿ ಬಂದದೆನೋ ಅಂತ ಬಾಸೆನ ಅಬಿವೃದ್ಧಿಮಾಡಿಕೆ ಕೇಂದ್ರ ಸರ್ಕಾರ ಬಜೆಟ್‌ಲಿ ದುಡ್ಡು ಇಸೊಕಾದೆ. (ಇಂದ್ ಹಿಂದಿ ಅಬಿವೃದ್ದಿಗೆ 150 ಕೋಟಿಂದಳೂ ಹೆಚ್ಚಿಗೆ ದುಡ್ಡುನ ಕೇಂದ್ರ ಸರ್ಕಾರ ಕರ್ಚಿಮಾಡ್ದೆ). ಪ್ರಸಾರ ಭಾರತೀಂತೇಳುದು 8ನೆ ಪರಿಚ್ಛೇದಕ್ಕೆ ಸೇರುವ ಬಾಸೆಗೆ ಸ್ವತಂತ್ರ ಚಾನೆಲ್ ಕೊಡಕಾದೆ. ಯು.ಪಿ.ಎಸ್.ಸಿ ಪರೀಕ್ಷೆಲಿ ಈ ಬಾಸೆಲಿ ಪರೀಕ್ಷೆ ಬರಿಯಕೆ ಅವಕಾಶ ಮಾಡಿಕೊಡಕಾದೆ. ನಮ್ಮ ದುಡ್ಡುನ ನೋಟುಗಳ ಮೇಲೆ ಇಂತ ಬಾಸೆನ ಹೆಸ್ರ್ ಬರಿಯಕಾದೆ. ಹೀಂಗೆ 8ನೇ ಪರಿಚ್ಛೇದಕ್ಕೆ ಸೇರ್ದರ್ಲಿ ಒಂದು ಬಾಸೆಗೆ ತುಂಬ ಲಾಬನೂ ಉಟ್ಟು. ಅದಿಕ್ಕಾಗಿ ತುಂಬ ಕರ್ಚಿನೂ ಸರ್ಕಾರಕ್ಕೆ ಉಟ್ಟು.

8ನೆ ಪರಿಚ್ಛೇದಕೆ ಈಗ ಸೇರ್‌ದ 22 ಬಾಸೆಗಳ ಈ ದೇಶದ 97% ಂದಳೂ ಹೆಚ್ಚಿ ಜೆನ ಮಾತಾಡುವೆ. ಆದರೆ 8ನೇ ಪರಿಚೇದಕ್ಕೆ ಒಂದು ಬಾಸೆ ಸೇರೊಕರೆ ಅದಿಕ್ಕೆ ಬೇಕಾದ ಅರ್ಹತೆ ಏನ್‌ಂತೇಳುದರ ಬಗ್ಗೆ ಒಂದು ಸ್ಪಷ್ಟ ನಿಯಮ ನಮ್ಮಲ್ಲಿ ಇಲ್ಲೆ. ಸೀತಾಕಾಂತ ಮಹಾಪಾತ್ರ ಕಮಿಟಿನೇ ಇದರ ಹೇಳಿಟು ಕೂಡಾ ಹಾಂಗಿದ್ದರೂ, **ಒಂದು ಬಾಸೆ ಉಪಬಾಸೆಯಾಗಿರದೆ ಮೂಲ ಮಾತೃಬಾಸೆ ಆಗಿರಕಾದ್, ಹಾಂಗೆನೆ, ಅದರ ಎಷ್ಟ್ ಜೆನ ಮಾತಾಡುವೆಂತೇಳುದೂ– ಒಂದು ಬಾಸೆ 8ನೆ ಪರಿಚ್ಛೇದಕೆ ಸೇರುವ ಅರ್ಹತೆಗಂತೇಳಿರೆ ತಪ್ಪಲ್ಲಂತ ಕಂಡದೆ.**

ಈ ಬಾಸೆನ ಮಾತಾಡವರ ಸಂಕೆನ ತಕಂಬದಾದರೆ, ಇಲ್ಲಿ ಲೆಕ್ಕಕೆ ಬಾದು ಮಾತೃಬಾಸೆಯಾಗಿ ಮಾತಾಡುವವೇ ಪೊರ್ತು ವ್ಯವಹಾರಕ್ಕಾಗಿ ಮಾತಾಡುವವ್ರ ಅಲ್ಲ. ಹಾಂಗೆ ನೋಡಿರೆ ಅರೆಬಾಸೆನ ಮಾತೃಬಾಸಂತ ಮಾತಾಡುವವರ ಸಂಕೆ ಎರ್ಡ್ ಲಕ್ಷ ಮೀರಿಕಿಲೆ. ಅರೆಬಾಸೆ ಗೌಡ್ರ್‌ದ್ ಮಾತ್ರ ಅಲ್ಲ; ಅದ್ ಎಲ್ಲೊವ್ರಕೆ ಸೇರ್ದ್ಂತ ಹೇಳಕಂಡಿರುದು ಇಲ್ಲಿ ಪ್ರಯೋಜನಕೆ ಬಾದುಲಂತೇಳ್ಳರನೂ ನೆಂಪುಮಾಡಿಕಣೊಕು. ಅದ್ ಹೇಂಗೇ ಇಲ್ಲಿ, ಬಾಸೆನ ಮಾತಾಡವರ ಸಂಕೆ ತುಂಬ ಕಮ್ಮಿ ಉಟ್ಟುಂತೇಳುದು ಒಪ್ಪಿಕಣಕಾದ ವಿಸಯ. ಎಂಟನೆ ಪರಿಚ್ಛೇದಕ್ಕೆ ಸೇರೊಕುಂತೇಳಕನ ಇದೂ ಒಂದು ಸಮಸ್ಯನೇ ಅದೆ. **ಮಾತಾಡವರ ಸಂಕೆ ಹೆಚ್ಚಾಕಾದ್ ಕೂಡ ಒಂದು ಅಗತ್ಯನೇ.** ಇದರ್ಲಿ ಸಾಹಿತ್ಯಂತೇಳುದು ಮನ್ನೆ ಮನ್ನೆ ಸುರಾದ್ದೇ ಪೊರ್ತು ಹಿಂದೆಂದೇನು ಇತ್ತ್‌ಲೆ. ಕಾರಣ ಏನೇ ಇಲ್ಲಿ, ಸತ್ಯ ಒಪ್ಪಕಾದೆ. ಹಾಂಗಂತೇಳ

ಸುಮ್ಮನೆ ಕುದ್ರೊಕುಂತ ನನ್ನ ಮಾತ್‌ನ ಅರ್ತ ಅಲ್ಲ; ಒಂದು ಕೆಲ್ಸಕೆ ಹೊರ್ಟಿಕನ ಅದರ ಬಗ್ಗೆ ಸರಿಯಾದ ತಿಳುವಳಿಕೆ ಕೂಡಾ ಇರೊಕುಂತೇಳುವ ಕಾರಣಕ್ಕೆ ಹೀಂಗೆ ಹೇಳಿಕಂಡೊಳೆ. ಎಂಟನೆ ಪರಿಚ್ಚೇದಕೆ ಸೇರ್ಸುದು ಬರೀ ರಾಜಕಾರಣಿಗಳ ಕಸ್‌ರಾತ್ ಅಲ್ಲ. ಇಲ್ಲಿ ಬಾಸೆನ ಮಾತೃಬಾಸೆ ಆಗಿ ಮಾತಾಡವರ ಜವಾಬ್ದಾರಿಕೆನೂ ಉಟ್ಟುಂತ ನೆಂಪುಮಾಡಿಕಂಡೊಳೆ ಅಷ್ಟೆ.

ಸ್ವತಂತ್ರ ಲಿಪಿ ಇರಕಾದ್ ಇಲ್ಲಿ ಮುಕ್ಯ ಅಲ್ಲಂತ ಕಂಡದೆ. ಯಾಕೆಂತೇಳಿರೆ ದೇವನಾಗರಿ ಲಿಪಿನ ತಕಂಡಿರುವ ಹಿಂದಿಗೆ ಸ್ವಂತ ಲಿಪಿನೇ ಇಲ್ಲೆ.(ಇಂಗ್ಲಿಷಿಗೂ ರೋಮನ್ ಲಿಪಿನೇ ಇಂದಿಗೂ ಬರಿಯಕೆ ಬೇಕು.) ಹಾಂಗಾಗಿ. ಅರೆಬಾಸೆನ 8ನೆ ಪರಿಚ್ಚೇದಕ್ಕೆ ಸೇರ್ಸೊಕುಂತಾದರೆ ಅದಿಕ್ಕೆ ಲಿಪಿ ಇಲ್ಲದಿರುದು ಒಂದು ಸಂಗತಿನೇ ಅಲ್ಲ.(ಹಾಂಗೆಂತ ಲಿಪಿ ಮಾಡುವ ಪ್ರಯತ್ನ ಮಾಡಿಕಾಗದ್‌ಂತ ಅಲ್ಲ. ಅದರ ಒಂದು ಕರೆಲಿ ಮಾಡಿಕಂಡಿರೊಕು.) ಆದರೆ. ಅದ್ ಸ್ವತಂತ್ರ ಬಾಸೆ ಆಗಿರೊಕು. ಆದರೆ. ಅರೆಬಾಸೆನ. **ಈಗ ಇರುವ ಎಲ್ಲ ಬಾಷಾ ವಿಜ್ಞಾನಿಗಳೂ ಡಯಲೆಕ್ಟ್‌ಂತೇಳುವೆನೇ ಹೊರ್ತು ಸ್ವತಂತ್ರ ಬಾಸೆಂತೇಳಿಕೆ ತಯಾರಿಲ್ಲೆ.** ಈ ಎಲ್ಲ ಕಾರಣಕ್ಕಾಗಿ ಅಂದರೆ. ಅರೆಬಾಸೆನ ಮೂಲ ಯಾದ್? ಅದರ್ಲಿರುವ ಪ್ರಾಚೀನ ಹಳೆಮಾತ್‌ಗ ಯಾದ್. ಅವು ಎಲ್ಲಿಂದ ಬಂದೊ? ನಮ್ಮಲ್ಲಿಂದ್ ಹೇಳುವ ಮಾತ್‌ಗಳ ಅರ್ತ ಹೇಂಗೆಬಾತ್ ಇಂತವೆಲ್ಲ ಸಂಗತಿಗಳ ಬಗ್ಗೆ ಸರಿಯಾಗಿ ಸೆರ್ಚ್ ನೋಡೊಕರೆ ನಾವ್ರುಗೆ ಅಂದರೆ ಅರೆಬಾಸೆಗೊಂದು ಎಟಿಮಾಲಾಜಿಕಲ್ ಡಿಕ್ಷನರಿ ಮಾಡ್ವೇಮಾಡೊಕು. ಎಟಿಮಾಲಜಿಂತೇಳ್ರೆ ಶಬ್ದನಿಷ್ಪತ್ತಿ ಶಾಸ್ತ್ರ. ಇದ್ ಒಂದು ಮಾತ್‌ಗೆ ಬರಿ ಅರ್ತಮಾತ್ರ ಹೇಳುವ ಅರ್ತಕೋಶ ಅಲ್ಲ. ಒಂದು ಮಾತ್ ಯಾವ ಮೂಲಂದ ಹುಟ್ಟಿದೆಂತೇಳುವ. ಅದರ ಅರ್ತ. ಮಾತ್‌ಲಿ ಅದ್ ಬಾವ ಕ್ರಮ ಹೇಂಗೇಂತೇಳುವ ಸಂಗತಿಗಳ ಹುಡ್ಕುವ ಕೆಲ್ಸ. ಹೀಂಗೆ ಮಾಡಿಕನ ಅರೆಬಾಸೆನ ಮೂಲರೂಪನೂ ಗೊತ್ತಾಕೆ ಸಾದ್ಯ ಉಟ್ಟು. ಆಗ ಮಾತ್ರ ಇದರ ಸರಿಯಾದ ಸುರ್ಪ ಗೊತ್ತಾದುಂತ ನನ್ನ ನಂಬಿಕೆ. ಹಾಂಗೆ ಮಾಡ್ಲರ್‌ಂದಾಗಿ ಈ ಬಾಸೆನ ಎಂಟನೆ ಪರಿಚ್ಚೇದಕೆ ಸೇರ್ಸಿಕೆ ಪ್ರಯೋಜನನೂ ಉದು. ಎಲ್ಲಕೂ ಮುಂದೆ ನಮ್ಮ ಬಾಸೆನ ಬಗ್ಗೆನೇ ಏನ್ ಎತ್ತಂತ ಗೊತ್ತುಮಾಡಿಕಣಕಾದ್ ಆಗತ್ತಂತ ನನ್ನ ಮನ್ಸ್. ಹಾಂಗೆ ಹೇಳೊಕರೆ ಸರಿಯಾದ ಆದಾರ ಇರುವ ಸಂಶೋದನೆ ಆಕು. ಆ ಸಂಶೋದನೆ ಮಾಡೊವ್ರಕ್ಕೆ ಬಾಷಾವಿಜ್ಞಾನನೂ ಗೊತ್ತಿರೊಕು. ಹೀಂಗೆ ಹುಡ್ಕಿ ನೋಡವ ಕೆಲ್ಸ ಈಗ ಆಕಾದ ಕೆಲ್ಸ. ಇಂತದರ ಹುಡ್ಕಿಕೆ. ಹೌದೋ ಅಲ್ಲನೋಂತ ತೀರ್ಮಾನ ಮಾಡಿಕೆ– ಅಕಾಡೆಮಿ. ಸರ್ಕಾರ. ದುಡ್ಡು ದುಗ್ಗಣೇಂತ ಬೇಕಾದ್. ಇದ್ ಒಬ್ಬಂದ ಆವ ಕೆಲ್ಸನೂ ಅಲ್ಲ. ಒಂದು ವರ್ಸಲಿ ಆವಂತದೂ ಅಲ್ಲ. ನಾ ಇದರ ಕೊಲ್ಲದ ಗಿರೀಶಣ್ಣನವರ ಕಾಲಂದಳೇ ಹೇಳಿಕಂಡೊಳೆ.

ನಿಜ ಹೇಳೊಕುಂತೇಳ್ರೆ ನಮ್ಮ ದೇಶಲೇ ಒಂದು ಸರಿಯಾದ ಬಾಷಾನೀತಿ ಇಲ್ಲೆ. ಸಂವಿದಾನಲಿ ಹಿಂದಿ ಬಾಸೆನ ಅದಿಕೃತ ಬಾಸೆಂತ ಹೇಳಿರುದು ನಿಜ. ಬಾಸೆಂತೇಳ್ರೆ ಬರೀ ಮಾತಲ್ಲಂತ ಎಲ್ಲೊವ್ರುಕೂ ಗೊತ್ತುಟು. ಬಾಸೆಂತೇಳ್ರೆ ಅದರ ಮಾತಾಡವರ ಸಂಸ್ಕೃತಿನೂ ಹೌದು. ಹಾಂಗಿರಿಕನ ಹಿಂದಿ ಮಾತ್ರ ಅದಿಕೃತ ಬಾಸೆಂತೇಳ್ರೆ– ನೋಡಿ. ಹಿಂದಿ ಮಾತಾಡವರ ಸಂಸ್ಕೃತಿ ಮಾತ್ರ ಸಂಸ್ಕೃತಿಂತ ಹೇಳ್ದಂಗಾದೆ. ಅದರ್ದಂದಾಗಿ ಒಳ್ದ ಬಾಸೆನ ಮಾತಾಡುವವ್ರುಕ್ಕೆ. ಕೀಳರಿಮೆನೂ ಸುರಾದು. ಸಿಟ್ಟೂ ಬಾದು. ಹಿಂದೆ ಒಮ್ಮೆ ತಮಿಳ್ ನಾಡ್‌ಲಿ ಹಿಂದಿ ವಿರೋಧ ಹೇಂಗೆ ಬಾತ್‌ಂತೇಳ್ದರ ಹಂಡ್ಸಾ ನೆಂಪುಮಾಡಿಕಣೊಕು. ಹಲವು ಬಾಸೆಗಳ. ಸಂಸ್ಕೃತಿಗಳ ನಾಡಾದ ಬಾರತದಲಿ ಇದೇನೂ ಸಣ್ಣ ಸಂಗತಿ ಅಲ್ಲವೇ ಅಲ್ಲ. ಜನಕ್ಕೆ ಕಾಲಕ್ರಮಲಿ ಎಚ್ಚರಿಕೆ ಆಗಿ. ಅವರ ಬಾಸೆಗಳ ನೇಟಿ ನಿಲ್ಸೊಕುಂತ ಬುದ್ದಿಬಂದರೆ ನಾವು ಎಲ್ಲ ಬಾಸೆಗಳ್ದೂ ಒಪ್ಪಕಾಗಿ ಬಾದು. ಆಗ **ನಮ್ಮಲ್ಲಿ ಒಂದು ಸರಿಯಾದ ಭಾಷಾನೀತಿ ಬೇಕೇ ಬೇಕು.**

ಈಗನ ನ್ಯೂ ಎಜುಕೇಶನ್ ಪಾಲಿಸಿ ಪ್ರಕಾರ ಆಯಾ ರಾಜ್ಯಗಳ ಪ್ರಮುಕ ಬಾಸೆಗಳ ಸಂರಕ್ಷಣೆ ಮಾಡಕಾದ್ ರಾಜ್ಯ ಸರ್ಕಾರಗಳ ಕೆಲ್ಸಗಡ. ಹಾಂಗಿರಿಕನ ರಾಜ್ಯ ಸರ್ಕಾರನೇ ತುಳು. ಕೊಡವ. ಅರೆಬಾಸೆಗಳ ರಾಜ್ಯದ ಮುಕ್ಯ ಬಾಸೆ ಗಂತೇಳಿ ಯಾಕೆ ಗೋಸಣೆ ಮಾಡಿಕಾಗದ್? ರಾಜ್ಯಂಗಳೇ ಇದರ ಮಾಡದಿದ್ದರೆ ಕೇಂದ್ರ ಹೇಂಗೆ ಮಾಡಿಕೆ ಸಾದ್ಯ? ಹಾಂಗಾಗಿ ರಾಜ್ಯ ಸರ್ಕಾರ ಇಂದ್ ಅರೆಬಾಸೆನೂ ರಾಜ್ಯದ ಒಂದು ಪ್ರಮುಕ ಬಾಸೆಂತ ಗೋಸಣೆ ಮಾಡೊಕಾದೆ. ಉದಾರಣೆಗೆ ಡಿಲ್ಲಿಲಿ ನಾಲ್ಕ್ ಬಾಸೆಗ ಅದಿಕೃತ ಬಾಸೆಗ ಗಡ. ಬಂಗಾಳಕ್ಕೆ ಐದ್ ಬಾಸೆಗ ಅದಿಕೃತ ಬಾಸೆಗ ಗಡ. ನಮ್ಮ ರಾಜ್ಯಸರ್ಕಾರ ಯಾಕೆ ಹೀಂಗೆ ಮಾಡಿಕೆ ಬೊತ್ತ್? ನಾವು ಕೇಳೊಕಾದೆ. ಕನ್ನಡ ಒಂದೇಂತ ಯಾಕೆ ಹೇಳೊಕು? ಹೇಂಗೆ ಹೇಳ್ದೊಂತ ಕೇಳೊಕಾದೆ.

ಆದರೆ ಹಂಞ **ಇದರ್ಲಿ ಇರುವ ಸಮಸ್ಯೆಗಳನೂ ಚಿಂತನೆ ಮಾಡಿ ನೋಡೊಕು**. 8ನೆ ಪರಿಚ್ಛೇದಕ್ಕೆ ಸೇರ್ಲಿದ ಬಾಸೆಗಳ ಅಭಿವೃದ್ಧಿ ಕೆಲ್ಸಕೆ ಸರ್ಕಾರ ಅನುದಾನ ಕೊಡಕಾದೆಂತ ಉಟ್ಟಲೇ. ಸಂಕೆ 14 ಇರಿಕನ, ಅಲ್ಲಿಂದ 22 ಆಕನ ಪೇಂಗೋ ನಷ್ಟ್. ಆದರೆ 100ರ ಮೇಲ್ ಹೋಕೆ ಹೆಚ್ಚಿದಿನ ಬೇಡ. ಆಗ ಇದೆಲ್ಲ ತುಂಬ ಕರ್ಜಿನ ಸಂಗತಿಯಾದೆ. ಭಾರತಲಿ ಸುಮಾರ್ 19,569 ಮಾತ್ರ ಬಾಸೆಗ ಒಳೊ ಗಡ. ಇವರ್ಲಿ 1396 ಬಾಸೆಗ ಮೂಲ ಮಾತೃಬಾಸೆಗ ಗಡ. ಈ ಬಾಸೆಗಳ ಮತ್ತೂ ಪರಿಶೀಲನೆ ಮಾಡಿಕನ 121 ಬಾಸೆಗ ಮಾತ್ರ ಮುಕ್ಯಂತಾದೊ. ಇದರ್ಲಿ 22 ಬಾಸೆಗಳ ಸಂವಿದಾನಕ್ಕೆ ಸೇರ್ಲಿಕಂಡೊಳೊ. ಇನ್ನ್ ಒಳ್ದ 99 ಬಾಸೆಗ ಕಾದ್ ನಿತ್ತೊಳೊ. ತುಳುಕೂಡಾ ಅದರ್ಲಿ ಒಂದು. ಅರೆಬಾಸೆನೂ ಆ ಸಾಲ್‌ಗೆ ಈಗ ಸೇರ್ದ್. ಆದರೆ ಇಂದ್ ಒಳ್ದ ಬಾಸೆಗಳ ಮಾತಾಡುವ ಜನಗಳಿಗೂ ಎಚ್ಚರಿಕೆ ಆಗಿ. ಅವರವರ ಬಾಸೆಗಳ ಅಭಿವೃದ್ಧಿ ಮಾಡಿಕೆ ಸುರುಮಾಡಿಕಂಡೊಳೊ. ಹಾಂಗಿರಿಕನ, ಹತ್ತೊಂಬತ್ತ್ ಸಾವಿರ ಬಾಸೆಗಳ್‌ಲಿ, ಕಾಲಂಶದಷ್ಟ್ ಬಾಸೆಗಳ ಮಾತಾಡುವವ್ರು ಕೇಳಿಕೆ ಸುರುಮಾಡಿರೂ ಸರ್ಕಾರಕ್ಕೆ ಅದ್ ಹೊರಿಕೆ ಬೊತ್ತದ ಹೊರೆನ ವೃಪಾಟಾಗಿ ಕುದ್ದುವೆ. ಅದಿಕ್ಕಾಗಿ ಸರ್ಕಾರಗಳೂ ಈ ಬಾಸೆಗಳ ಜನರ ಬೇಡಿಕೆಗೆ ಗಮನ ಕೊಡಿಕೆ ಮೇಲ್ ಕಳೆಗೆ ನೋಡುವೆ. ಯಾರಾದರೂ ಯೋಚನೆ ಮಾಡಕಾದ ಸಂಗತಿ ತಾನೆ? ಇನ್ನ್ ಈ ಬಾಸೆಗಳ್‌ಲಿ ಯು ಪಿ ಎಸ್ ಸಿ ಪರೀಕ್ಷೆ ಮಾಡಕಾದರೆ, ಅದಿಕ್ಕೆ ಅಯಾ ಬಾಸೆಲಿ ತಜ್ಞ ವಿದ್ವಾಂಸರ್ ಬೇಕು. ಆದರೆ ಅಂತ ವಿದ್ವಾಂಸರಾಗಲಿ, ಅಂತ ಸಾಹಿತ್ಯಾಗಲಿ ತುಳು ಅರೆಬಾಸೆನೂ ಸೇರ್ದಾಂಗೆ ಮೇಲ್ ಹೇಳ್ದ 99 ಬಾಸೆಗಳ್ಲ ಬಾಸೆಗಳ್‌ಲಿ ಸದ್ಯಕ್ಕೆ ಇಲ್ಲೆ. ಅಗಳೂ ತೊಂದರೆ ಸುರಾದೆ. ರಿಸರ್ವ್ ಬ್ಯಾಂಕ್ **8ನೆ ಪರಿಚ್ಛೇದದ ಎಲ್ಲ ಬಾಸೆಗಳ್ನೂ ನೋಟುಲಿ ಬರಿಯಕಾದೆ**. ನೂರಾರ್ ಬಾಸೆಗಳ ಸೇರ್ಲಿರೆ ಅದ್ ಬರಿಯಕೆ ಬೇರೆ ನೋಟೇ ಮಾಡಕಾದು.

ಒಟ್ಟುಮೇಲ್ ನಾವು ನಮ್ಮ ಬಾಸೆನ ಸಂವಿದಾನದ 8ನೆ ಪರಿಚ್ಛೇದಕ್ಕೆ ಸೇರ್ಲಿಕೆ ಕೇಳ್ದರ್ಲಿ ಯಾವ ತಪ್ಪೂ ಇಲ್ಲೆ. ಆದರೆ ಅದಕ್ಕೆ ನಾವು ಬರೀ ಅರ್ಜಿ ಹಾಕಿ ಕುದ್ದುವ ಕೆಲ್ಸ ಮಾಡಿರೆ ಸಾಲದ್. ಅರ್ಜಿಹಾಕುದರೊಟ್ಟಿಗೆ ಅರ್ಹತೆನೂ ಬೆಳ್ಸಿಕಣಕಾದ. ಅಕಾಡೆಮಿನ ಪದಾದಿಕಾರಿಗ ಈ ಕಡೆಗೆ ದೃಷ್ಟಿ ಇಸಿ ಕೆಲ್ಸ ಮಾಡೊಕಾದ; ಬರೀ ಅಕಾಡೆಮಿನ ಕೆಲ್ಸ ಅದ್ ಅಲ್ಲ. ಬಾಸೆನ ಅಕಾಡೆಮಿ ಬಾಕೆ ಮುಂದೆನೇ ಒಳ್ಳಿ ಬೆಳ್ಸಿಕಂಡ್ ಬಂದ ಗೌಡ್ರ ಮತ್ತೆ, ಗೌಡ್ತಿಗಾಗಿ ಮಾತಾಡಿಕಂಡ್ ಬಂದ್‌ಕಂಡಿರುವ ಒಳ್ಳವರ ಜವಾಬ್ದಾರಿನೂ ಹೌದು. ಹಾಂಗಾಕನ ಬಾಸೆನೂ ಹಂಞ ಚೂಲ್ಯರ್ದ್ ಪಿಣ್ಣಂಗಾದೆ. ಹೀಂಗೆ ಆದರನೇ ಕನ್ನಡಲಿ ಬಾಷಾಸ ಬಲೀಕರಣಂತೇಳ್ದು. ○

(ಚುಟುಕು)

ಹೆಂಡ – ಪಿಂಡ

ಗಂಡ ಕುಡೀತಿತ್ತ್ ಹೆಂಡ
ಹೆಂಡ ಕುಡ್ದ್ ಬಂದ್ ಹೆಣ್ಣ್‌ನ
ಮುಂದೆ ಆಗ್ತಿತ್ತ್ ಭಂಡ
ಮನೇಲಿ ಯಾವ ಮೂರು ಕಾಸಿಗೂ
ಬಾರದ ದಂಡ ಪಿಂಡ
ಹೆಂಡ ಕುಡ್ದ್ ವಿಪರೀತ ಆಗಿ
ಕಡೇಗೆ ಹಾಕ್ಯಾತ್ ಅಂವಂಗೆ ಪಿಂಡ!

ಕಾಳಮನೆ ರಶ್ಮಿ ಚಂದ್ರ ಪ್ರಕಾಶ್
ಗ್ರಾಮ & ಅಂಚೆ : ಜಾಲ್ಸೂರು
ಸುಳ್ಯ ತಾಲೂಕು, ದಕ್ಷಿಣ ಕನ್ನಡ
ಮೊ : 9483203795

ಅರೆಬಾಸೆನ ಸೊಯೆಲಿ ಸಾಹಿತ್ಯ ಬರ್ಲಿ



ಎ. ಕೆ. ಹಿಮಕರ
ಸದಸ್ಯರು, ಕರ್ನಾಟಕ ಅರೆಭಾಷೆ ಸಂಸ್ಕೃತಿ
ಮತ್ತು ಸಾಹಿತ್ಯ ಅಕಾಡೆಮಿ

Doubt Everything ಅಂತೇಳುವಲ್ಲಿಂದ ವಿಜ್ಞಾನ ಸುರು ಆದೆ. ಎಲ್ಲದರ್‍ಲೂ ಅನುಮಾನಂದ ನೋಡೊಂತ ವಿವರ್‍ಲಿ ಹೇಳ್ದವ ಕಾರ್ಲ್ ಮಾರ್ಕ್ಸ್. ಅನುಮಾನ ಹಲವಾರ್ ಪ್ರಶ್ನೆಗಳ ಹುಟ್ಟಿ ಹಾಕಿದೆ. ಅಂತಾ ಪ್ರಶ್ನೆಗಳಿಗೆ ಉತ್ತರ ಹುಡ್ಕಿಕೆ ಹೊರ್‍ಡುದರ್‍ಲಿ ಅಧ್ಯಯನ, ಸಂಶೋಧನೆ ಸುರು ಆದೆ. ಇದ್ ನಾವುಗೆ ತಿಳುವಳಿಕೆನ ಕೊಟ್ಟದೆ. ಇಂತಹ ತಿಳುವಳಿಕೆಗ ನಮ್ಮ ಗ್ರಹಿಕೆ, ಆಲೋಚನೆಗಳ ಹೆಚ್ಚಿಸಿ, ವಿಚಾರವಂತರನ್ನಾಗಿ ಮಾಡಿದೆ. ಈ ರೀತಿಲಿ ನಮ್ಮ ನಾವೇ ತಿದ್ದಿಕಣೆಕೆ ಸಮಾಜನ ಸರಿದಾರಿಗೆ ತಾಕೆ, ಜನಾಭಿವೃದ್ಧಿಗೆ ಎಡೆಮಾಡಿಕೊಟ್ಟದೆಂತೇಳುವ ಉದ್ದೇಶ ಜೆಕ್ಕ್ ಬಂದುಟು.

ಅನುಮಾನಂತೇಳುದು ಬರೇ ಅನುಮಾನ ಅಲ್ಲ. ಬರೇ ಅನುಮಾನಗ ನಮ್ಮ ಎಲ್ಲಿಗೂ ತಕಂಡ್ ಹೋದುಲೆ. ಅನುಮಾನಗಳ ಬಗೆಹರಿಸಿಕಂಬ ಪ್ರಯತ್ನಗಳ ಫಲವೇ ಜಗತ್ತ್‌ಲಾದ ಆವಿಷ್ಕಾರಗ ಒಳ್ಳೆ ಅನುಮಾನ, ಒಳ್ಳೆ ಪರಿಹಾರ. ಇಂತಹ ಹಿನ್ನೆಲೆಲಿ ನಮ್ಮ ಅರೆಬಾಸೆ ಜಗತ್ತ್‌ನ ಕೆಲವು ವಿಚಾರಗಳ ಸಮಾಜದ ಮುಂದೆ ತರುವ ಸಣ್ಣ ಪ್ರಯತ್ನಗ ನಡೀತಾ ಉಟ್ಟು. ನಮ್ಮ ಎದ್‌ರ್ ಹತ್ತ್ ಹಲವು ಪ್ರಶ್ನೆಗಳೂ ಒಳೊ. ಕೆಲವುದರ ಮಾತ್ರ ಇಲ್ಲಿ ಎತ್ತ್‌ಳೆ.

ಅರೆಬಾಸೆ ಜನ ಎಲ್ಲಿಯವು? ಇವರ ಚರಿತ್ರೆ ಏನ್ ಹೇಳ್ದೆ?

ಇಂತಹ ಪ್ರಶ್ನೆಗಳಿಗೆ ಉತ್ತರ ಸುಲಭಲಿ ಸಿಕ್ಕುದುಲೆ. ಇದರ ಬಗ್ಗೆ ಸರಿಯಾದ ಮಾಹಿತಿಗಳೂ ಸಿಕ್ಕುದುಲೆ. ಉದಾಹರಣೆಗೆ ತುಳುಬಾಸೆಲಿ ಸಿಕ್ಕುವಸ್ಟ್ ಸಂದಿ, ಪಾಡ್ದನಗ ದೊಡ್ಡ ಚರಿತ್ರೆಗಳೇ ಹೇಳ್ದೆ. ಅಂತ ಒಂದೇ ಒಂದು ತುಂಡು ಅರೆಬಾಸೆಲಿ ಯಾಕೆ ಇಲ್ಲೆ. ಹಾಂಗಾದರೆ ಅರೆಬಾಸೆಲಿ ಜಾನಪದ ಸಾಹಿತ್ಯನೇ ಇಲ್ಲೆನೋ? ನಮ್ಮ ಮೊದ್ವೆಗಳ್ಲಿ ಹೇಳುವ ಸೋಬಾನೆನೂ ಕನ್ನಡಲೇ ಯಾಕೆ ಉಟ್ಟು? ಹಾಂಗೆನೇ ನಮ್ಮ ಮೂಲ ಧರ್ಮ ನಂಬಿಕೆಗ ಯಾವುದ್, ನಮ್ಮ ಆರಾದನಾ ಕ್ರಮಗ ಏನ್? ನಮ್ಮ ದೆವ್ವ ದೇವ್ರು ಯಾವುದು? ನಮ್ಮ ಹಿರ್‍ಯವು ಯಾವ ಕ್ರಮಲಿ ಬೊದ್ಕಿ ಬಾಳ್ದೊ. ನಮ್ಮ ಪರಂಪರೆ ಏನ್, ಒಟ್ಟು ಸಮಾಜಲಿ ನಮ್ಮ ಸ್ಥಾನಮಾನಗ, ಆಳ ಅಂತಸ್ತ್ ಏನ್? ಇಂತ ಮೂಲದ ಪ್ರಶ್ನೆಗಳಿಗೆ ಪರಿಹಾರ ಕಂಡ್ಕಣದೆ ಮುಂದೆ ಏನ್‌ಂತೇಳುದು ಗೊತ್ತಾಕಿಲೆ. ನಾವು ಯಾರ್‍ದೊ ರಂಗ್‌ಗೆ ಮೊರ್‍ಲಾಗಿ ಏನೂ ಅಲ್ಲದವರಾಂಗೆ ಜೀವನ ಸಾಗ್ಸುವ ಪರಿಸ್ಥಿತಿ ಬಂದದೆ.

ನಮ್ಮವರಲ್ಲಿ ವೈಚಾರಿಕ ಬಡತನ ಎಷ್ಟರಮಟ್ಟಿಗೆ ಉಟ್ಟೊಂತ ಹೇಳ್ಟಕೆ ಒಳ್ಳೆ ಉದಾರಣೆ ಅರೆಬಾಸೆ ಅಕಾಡೆಮಿನ ಹಿಂಗಾರ ಪತ್ರಿಕೆ. (ಆ ಹಿಂದೆ ಬಂದ ಕೆಲವು ಸ್ಮರಣ ಸಂಚಿಕೆಗಳನ್ನೂ ಸೇರ್‍ಸಿಯೇ ಹೇಳಕ್) ಇದುವರೆಗೆ **'ಹಿಂಗಾರದ'** ಹನ್ನೊಂದು ಪುಸ್ತಕಗ ಅರೆಬಾಸೆಲಿ ಬಂದುಟು, ಬರ್‍ದವ್ರುಕೆ ಕೃತಜ್ಞತೆ, ಅಭಿನಂದನೆ ಹೇಳೊಕಾದ್ದು, ಕತೆಗ, ಕವನಗ, ಗಾದೆಮಾತ್, (ರಿಪೀಟಾಗ್ತಾ ಉಟ್ಟು) ಹಾಸ್ಯ, ತಮಾಸೆನ ಬುಟ್ಟರೆ ಒಂದೇ ಒಂದು ವೈಚಾರಿಕ ಲೇಖನಗ ಪ್ರಕಟ ಆತ್ಲೆ ! ನಮ್ಮೊಲ್ಲಿ ಚಿಂತನೆ ಇರೊವು ಇಲ್ಲೆನೋ, ಬರೆವು ಇಲ್ಲೆನೊ ಗೊತ್ತಾದುಲೆ. ಅರೆಬಾಸೆಲಿ ವಿಚಾರ ಸಾಹಿತ್ಯನೇ ಕಾಣ್ತಾ ಇಲ್ಲೆ. ಇದೊಂದು ಆಘಾತಕಾರಿ ಬೌದ್ಧಿಕ ಬಡತನ. ಅಧ್ಯಯನ ಮಾಡ್ದ, ಸಂಶೋಧನಾ ಬರವಣಿಗೆಗಳಿಗಾಗಿಯೇ ಪತ್ರಿಕೆನ/ಜರ್ನಲ್ ತಾದು ಅಕಾಡೆಮಿನ ಮೂಲ ಉದ್ದೇಶ. ಆ ದಿಕ್ಕ್‌ಲಿ ಅರೆಬಾಸೆವು ಇನ್ನೂ ಹೊರ್‍ಟ್ಲೆ. ಇನ್ನ್ [?] ಅಕಾಡೆಮಿ ಪ್ರಕಟಣೆ ಮಾಡ್ದ ಪುಸ್ತಕಗಳ ಸಂಖ್ಯೆ ಇಪ್ಪತ್ತರ ಮೇಲೆ ಉಟ್ಟು. ಇವುಗಳ ಸಂಗತಿನೂ ಅಷ್ಟೇ. ಅವು ಯಾವುದೂ ಅಧ್ಯಯನ ಮೂಲದಿಂದ ಸೃಷ್ಟಿ ಆದ ಸಾಹಿತ್ಯ ಕೃತಿಗೆ ಅಲ್ಲ. ಯಾಕೆ ಹಿಂಗಾತ್ ?

ಆದರೆ, ಅರೆಬಾಸೆಲಿ ಬರೆವ ಆಸ್ಥೆಸ ಬಾರೀ ವೇಗಲಿ ಬೆಳ್ಕತಾ ಉಟ್ಟು. ಪುಸ್ತಕ ಬರೊಣ್ದು ಹೆಚ್ಚಾತಾ ಬೊಕು. ಓದೊವು ಹೆಚ್ಚಾಗೊಳೊ. ಕಳ್ದ ಒಂದು ವರ್ಸ್‌ಲಿ ಹಿಂಗಾರಕ್ಕೆ 183 ರಷ್ಟು ಚಂದಾದಾರರ ಸಂಖ್ಯೆ 800

ಕ್ಕೇರಿಟು. ಸಾಹಿತ್ಯ ಹರಡ್ತಾ ಉಟ್ಟು ಬಾಸೆನ ಬಗ್ಗೆ ಪ್ರೀತಿ ಹೆಚ್ಚ್‌ತ್ತಾ ಉಟ್ಟು. ಸರ್ಕಾರಂದ ರಾಜ ಮುದ್ರೆ ಬಿದ್ದ ಮೇಲೆ, ಸಾರ್ವಜನಿಕವಾಗಿ ಅಧಿಕೃತ ಬಾಸಂತೇಳುವ ಮಾನ-ಮೊರ್ಯಾದಿ ಸಿಕ್ಕಿಕೆ ಸುರಾಗುಟುಂತೇಳುದು ಸಮಾದಾನದ ಇಸಯ,

ಇದರೊಟ್ಟಿಗೆ ಜಾತ್ರೆ ಇರುವಲ್ಲಿಗೆ ಸಂತೆ ಬಂದಾಂಗೆ ಅಂಗಡಿ ಹಾಕುವ ಪ್ರಯತ್ನನೂ ನಡೀತಾ ಉಟ್ಟು. ಒಬ್ಬನೇ ಬರ್ದ ಕನ್ನಡಲಿರುವ ನಾಲ್ಕ್ ಪುಸ್ತಕಗಳ ಅರೆಬಾಸೆಗೆ ಅನುವಾದ ಮಾಡ್ಡಿ ಅಕಾಡೆಮಿ ಪ್ರಕಟಮಾಡೊಕೂಂತ ಒತ್ತಾಯನೂ ಕೆಲವರ್‌ಂದ ನಡೀತಾ ಉಟ್ಟು. ಕನ್ನಡಲೇ ಇರುವ ಪುಸ್ತಕನ ಈಗಾಗ್ಲೆ ಓದುವ ಅಬ್ಬೇಸ ಇರೋವ್ರ ಓದ್ಯೊಳೊ. ಇಲ್ಲೆ ಇನ್ನೂ ಓದಿಕೆ ಅದೆ. ಅದರ್ನ ಮತ್ತೆ ಅರೆಬಾಸೆಲಿ ಓದುವ ಅಗತ್ಯ ಇರ್ದುಲೆ. ಅದ್ ಅಂತ ಮಹತ್ವದ ಪುಸ್ತಕಗಳೂ ಅಲ್ಲ. ಪುಸ್ತಕದ ವಸ್ತು ಇಸಯನೂ ಅರೆಬಾಸೆ ಸಮುದಾಯ, ಬಾಸೆ, ಸಂಸ್ಕೃತಿಗೆ ಸಂಬಂದಿಸಿದುನೂ ಅಲ್ಲ. ಯಾವ ಪ್ರತಿಫಲಾಪೇಕ್ಷೆನೂ ಇಲ್ಲದೆ ಪಾಪ ಬಂಜ ಬಂದ್ ಅನುವಾದ ಮಾಡ್ಡುವ್ರು ಮಾತ್ರ ಅರೆಬಾಸೆನವ್ರು. ಯಾವುದೇ ಬಾಸೆನ ಜನಾಂಗದವಾದರೂ ಅರೆಬಾಸೆಲಿ ಸ್ವತಂತ್ರ ಕೃತಿ ಬರ್ದೊದು ಸ್ವಾಗತಾರ್ಹ; ಇದರ್‌ಂದ ಬಾಸೆ ಬೆಳ್ದದೆ. ಮಲ್ಯಾಳ, ತಮಿಳ್, ಹಿಂದಿ-ಇಂಗ್ಲಿಸ್‌ಂದ ಒಳ್ಳೆ ಪುಸ್ತಕಗಳ ಕನ್ನಡಕ್ಕೂ ಅರೆಬಾಸೆಗೂ ತಾದುನೂ ಉಪಯೋಗ ಆವಂತದೇ. ಯಾಕೆಂತೇಳಿರೆ ಬೇರೆ ಬಾಸೆಲಿರುವ ಒಳ್ಳೆ ಸಾಹಿತ್ಯಗಳ ಅರೆಬಾಸೆನವ್ರೂ ಓದಿ ತಿಳ್ಕಂಕು ಅದರ್‌ಂದ ಅರೆಬಾಸೆಗೂ ಲಾಭ ಅದೆ. ಈ ಮೇಲೆನ ಪ್ರಸಂಗ ಒಂದು ಪ್ರಶ್ನೆನ ಬಲವಾಗಿ ಮುಂದೆ ಇಸಿದೆ. ಅಂತೇಳಿರೆ, ಅರೆಬಾಸೆನವ್ರುಕೆ ಸ್ವತಂತ್ರ ಕೃತಿ ಬರ್ಯೆಕೆ ಅದುಲೆನೋ?! ಓದಿಕೆ ಬರುವ ಕನ್ನಡದ ಹೊರತಾಗಿ ಬೇರೆ ಬಾಸೆನೂ ಗೊತ್ತಾದುಲೆನೋ?! ಇಂತಹ ದರಿದ್ರ ಪರಿಸ್ಥಿತಿ ಅರೆಬಾಸೆಲಿ ಬರ್ಯುವ್ರುಕೆ ಬಾಕೆ ಬೊತ್ತುಂತೇಳುದೇ ನನ್ನ ಕಳಕಳಿ. ಅರೆಬಾಸೆನವ್ರು ಇಂತ ಬಿಚಾರಗಳ್ಲಿ ಮುಲಾಜಿಗೆ ಬೀಳಿಕಾಗದ್.

ಅರೆಬಾಸೆ ಸೊಯಿಲಿ ಬರ್ಯುವ್ರು ಒಳ್ಳೊಳ್ಳೆ ಬರಹಗಾರ್ ಒಳೊ. ಎಂ. ಜಿ. ಕಾವೇರಮ್ಮನವ್ರು ನಂಗೆ ಅರೆಬಾಸೆನ ತ್ರಿವೇಣಿಂತ ಅನ್ಸದೆ. ನಾ ಸಣ್ಣದಲ್ಲಿ ಇರ್ಕನ ಓದುವ ಚಟ ಹತ್ತಿದ ಕಾದಂಬರಿಗಳ್ಲಿ ತ್ರಿವೇಣಿನ ವರ್ದೆ ಸುರೂನ ಹೆಸ್ರ್. ಕಾವೇರಮ್ಮನವ್ರು ಅರೆಬಾಸೆನ ಮಟ್ಟಿಗೆ ತ್ರಿವೇಣಿಯವ್ರುಕ್ಕೂ ದೊಡ್ಡೊವ್ರೆ.

ಇನ್ನ್ ಅರೆಬಾಸೆನ ಆದಿಕವಿ ಹೊದ್ದೆಟ್ಟಿಯವ್ರು. ಅವರ ಒಂದೇ ಪದ್ಯ ಅರೆಬಾಸೆಗೆ ಚಾರಿತ್ರಿಕ ಮಹತ್ವನ ತಂದುಟು. ಇನ್ನ್ ಅದೇ ಮೂರಿಲಿ ಹೊರ್ಟಂವ ಕುಡೆಕಲ್ಲ್ ಯಶವಂತ. ಇತ್ತೀಚೆಗೆ ಕಾಂಬ ಹೆಸ್ರ್ ನಿಡಿಂಜಿ ಕರುಣಾಕರ ಕನ್ನಡ ಸಾಹಿತ್ಯ ಓದಿ ಪಾಠ ಮಾಡ್ತ ಇವ್ರು ಸಾಹಿತ್ಯದ ಶಾಸ್ತ್ರಗಳೆಲ್ಲಾನ ಅವ್ರು ಬರ್ಯುವ ಪದ್ಯಗಳ್ಲಿ ಕಾಣ್ಸಿಕೆ ಪ್ರಯತ್ನ ಮಾಡ್ತಾ ಅರೆಬಾಸೆಲಿ ಇದುವರೆಗೆ ಕಾಣದ ಕಾವ್ಯದ ಒಂದು ಮೈ ಈಗ ಕಾಂಬಕೆ ಸುರಾಗುಟು. ಆದರೆ ಅರೆಬಾಸೆಲಿ ಗಟ್ಟಿ ಸಾಹಿತ್ಯ ಇಲ್ಲೆನೋಂತೇಳಿರೆ ಉಟ್ಟು. ಅದ್ ಬಡ್ಡಡ್ಕದ ವಿದ್ಯಾಧರ, ತೇಜಕುಮಾರ, ಇಂತವರ ಬರವಣಿಗೆಲಿ ಕಂಡದೆ. ಇನ್ನ್ ನಮ್ಮೊದರಾಂಗೆ ಇರುವ ಬ್ಯಾರಿ, ಕೊಂಕಣಿ, ತುಳು, ಕೊಡವಕ್ಕಿಂದ ಒಂದು ಸೌಭಾಗ್ಯಂತೇಳಿರೆ ಅದ್ ಕೋಡಿಯವ್ರು. ಅರೆಬಾಸೆನೇ ಮನೆ ಮಾತಾಗಿ ಬೆಳ್ಸಿಕಂಡ್ ಬಂದ ಇವ್ರು ಅರೆಬಾಸೆನ ಲಿಪಿ, ವ್ಯಾಕರಣ ರೂಪಿಸಿಕೊಟ್ಟದ್ ಚರಿತ್ರೆಲೇ ಶಾಶ್ವತ ಆಗಿ ಒಳ್ದದೆ. ಈ ಕೆಲ್ಸ ಅವ್ರೊಬ್ಬ ವ್ಯಾಕರಣ ಶಾಸ್ತ್ರಜ್ಞಮತ್ತೆ ಭಾಷಾ ವಿಜ್ಞಾನಿ ಆಗಿರುವ ಕಾರಣ ನಡ್ದು ಹೋತ್. ಈ ಕೆಲ್ಸನ ಮುಂದುವರ್ಸಿಕಂಡ್ ಹೋವ ಅರೆಬಾಸೆನವ ಈ ಮಟ್ಟಿಲಿ ಇದ್ದದಂತೇಳುದು ಸ್ವಲ್ಪ ಕಷ್ಟನೇ. ಇನ್ನ್ ಕೆ. ಆರ್. ಗಂಗಾಧರನವ್ರು ಮಾಡ್ದ ಅರೆಬಾಸೆ ಪದಕೋಶದ ಕೆಲ್ಸ ಸುರೂನ ಪ್ರಯತ್ನ ಆದರೂ ಒಳ್ಳೆ ಆರಂಭ. ಇನ್ನ್ ಕೊಡ್ಗ್‌ಲಿ ಸದ್ಯ ಬಿ. ಜಿ. ಅಂಬೆಕಲ್ಲ್ ಜೋಯಪ್ಪನವರ ಬಿಟ್ಟರೆ ಬೇರೆ ಹೆಸ್ರ್ ಸಂಬಿಗೆ ಬಾದುಲೆ. ಹಾಂಗೆ ಹೇಳಿರೆ ಕೊಡ್ಗ್‌ನ ಗಡಿ ಒಳಗೆ ಇದ್ದರೂ ಕುಯಿಂತೋಡು ದಾಮೋದರನವ್ರು, ಲೀಲಾ ದಾಮೋದರನವ್ರು. ಮತ್ತೆ ಇತ್ತನ ಅಡ್ಡಲೆ ಭವಾನಿಶಂಕರ, ಉಂಬಾನ ಸುಬ್ರಾಯ ಗೌಡ, ಸಂಜೀವ ಕುದ್ಪಾಜೆ, ನಮ್ಮ ಹೊಸೊಳಿಕೆ ಯೋಗೀಶ, ಕುಂಞಟ್ಟ ಶಿವರಾಮ, ಸಂಗೀತ ರವಿರಾಜ, ಹೀಂಗೆ ಅರೆಬಾಸೆಗೆ ಕೀರ್ತಿ ತಂದೊವ್ರು ಒಳೊ. ಇನ್ನ್ ಡಾ। ಪುಬೀಶ, ವಿನೋದ್ ಮೂಡಗದ್ದೆ, ಮನೋಜ್ ಕುಡೆಕಲ್ಲ್, ಹೀಂಗೆ ಕೆಲವು ಹೊಸಹುಡ್ಗರ್ ಅರೆಬಾಸೆಗೆ ಬಾರೀ ಉತ್ಸಾಹ ತುಂಬುತ್ತಾ ಒಳೊ. ಇದೆಲ್ಲಾ ಬೆಳವಣಿಗೆಗಳ ನೋಡಿರೆ ತುಂಬಾ ಆಶಾದಾಯಕ ಆಗಿ ಕಂಡದೆ.

ಇದರೊಟ್ಟಿಗೆ ಇನ್ನೊಂದು ಹೊಸಾ ಸಂಗತಿ ನಡ್ಕತಾ ಉಟ್ಟು. ಅರೆಬಾಸೆನ ಜನರ ಚರಿತ್ರೆಲೀ ಒಂದು ಹೊಸ ಅಧ್ಯಾಯ ಸುರಾಗುಟ್ಟು. ಹತ್ತ್ ಜನ ಬಾರೀ ಉತ್ಸಾಹಲಿ ಗಂಭೀರವಾಗಿ ಅರೆಬಾಸೆ ಅಧ್ಯಯನಕ್ಕೆ ಇಳ್ದೊಳೊ. ಅರೆಬಾಸೆ ಅಕಾಡೆಮಿನ ಉದ್ದೇಶನೇ ಅಧ್ಯಯನ, ಸಂಶೋಧನೆ ಮತ್ತೆ ಪ್ರಕಟಣೆ (ಹಿಂಗಾರ). ಈ ಅಕಾಡೆಮಿ ಸುರಾಗಿ ಎಂಟ್ ವರ್ಸಾದರೂ ಈ ಕೆಲ್ಸನ ಇದ್‌ವರೆಗೆ ಮಾಡ್ತ್‌ಲೆ. ಬರೀ ಸಭೆ ಸಮಾರಂಭ, ಸನ್ಮಾನ, ಕ್ರಿಕೆಟ್, ಕಬಡ್ಡಿ, ಉಂಡೊದು ತಿಂದೊದೂ, ಕೊಣ್ತ್‌ಲೀ ಕೆಲವೊಂದು ತಿರ್ಗಾಟಲೀ ದುಡ್ಡು ಮುಗ್ದಿದ್. ಇದೆಲ್ಲವೂ ಇರೊಕಾದೇ ಆದರೆ ಅಕಾಡೆಮಿ ಉದ್ದೇಶಿತ ಮೇಲೆ ಹೇಳ್ದ ಕೆಲ್ಸಗಳಿಗಾಗಿ ಮಾತ್ರ. ಇದರ ಹೊರತಾಗಿ ಮಾಡಿರೆ ಅದ್ ಕೇವಲ ಜನಪ್ರಿಯತೆಗಾಗಿ ಮಾಡ್ದಾಂಗಾದೆ ಎಂಬುದರ ನಿಷ್ಠುರವಾಗಿ ಹೇಳದೆ ವಿಧಿಯುಲ್ಲೆ. ಅಕಾಡೆಮಿ ಈಗ ಸುರಾದ್ದಷ್ಟೆ. ಇಂತದ್ದೆಲ್ಲ ಸಹಜಂತೇಳುವ ರೀತಿಲಿ ಅದರ ಪರ್ತ್ ಬುಡೊಮೊ. ಆದರೆ ಮುಂದೆ ಅದೂ ಅಕಾಡೆಮಿ ಸೂಚಿತ ದಾರಿಗೆ ಬರೊಕು.

ಇಂತ ಒಂದು ಸನ್ನಿವೇಸಲಿ ಅಕಾಡೆಮಿನ ಆಡಳಿತ ಮಂಡಳಿನ ಸಭೆಲಿ ಅಧ್ಯಯನ ಫೆಲೋಶಿಪ್ ಕೊಡೊಕೂಂತ ನಾ ಮನವಿ ಮಾಡೊಕಾಗಿ ಬಾತ್. (ಈ ವಿಷಯನ ನಾನೇ ಬರ್ದಕೆ ಒಸಿ ನಾಮೋಸು ಅದೆ). ಅಧ್ಯಕ್ಷ ಪಿ. ಸಿ. ಜಯರಾಮ ನವರ ನೇತೃತ್ವದ ಸಭೆ ಮನವಿನ ಪುರಸ್ಕರ್ಸಿ, 2018–19ಲ್ಲಿ ಜಾಲ್ತಿಗೆ ಬರುವ ಹಾಂಗೆ ಅರ್ಹ ಹತ್ತ್ ಜನ ಅಧ್ಯಯನಶೀಲರ್‌ಗೆ ತಲಾ ರೂ. 75/– ಸಾವಿರ ರೂಪೈನಾ ಹಾಂಗೆ ಸಹಾಯಧನ ಕೊಟ್ಟ್ ಸಂಶೋಧನೆ ಕೆಲ್ಸ ಸುರು ಮಾಡ್ಸಿಟು. ಪೇಪರ್‌ಲ್ಲಿ ಪ್ರಕಟಣೆ ಕೊಟ್ಟ ಪ್ರಕಾರ ಒಟ್ಟು 24 ಅರ್ಜಿಗ ಬಂದಿದ್ದೊ ಆ ಪೈಕಿ 17 ಜನ ಸಂದರ್ಶನಕ್ಕೆ ಹಾಜರಾಗಿದ್ದೊ. ಅವರ ಪೈಕಿ ಹತ್ತ್ ಜನ ಆಯ್ಕೆ ಆಗಿದ್ದೊ. ಆಯ್ಕೆ ಸಮಿತಿಲಿ ಅಕಾಡೆಮಿ ಅಧ್ಯಕ್ಷ ಪಿ. ಸಿ. ಜಯರಾಂ, ಸದಸ್ಯ ಸಂಚಾಲಕ (ಫೆಲೋಶಿಪ್) ಎ. ಕೆ. ಹಿಮಕರ, ವಿಷಯ ತಜ್ಞ, ಸಂಜೀವ ಕುದ್ಪಾಜೆ, ಅಕಾಡೆಮಿ ಸದಸ್ಯ ಬಾರಿಯಂಡ ಜೋಯಪ್ಪ ಮತ್ತೆ ರಿಜಿಸ್ಟ್ರಾರ್ ಚಂದ್ರಹಾಸ ರೈಗ ಇದ್ದೊ.

ಈಗ ನಡ್ಕತಾ ಇರುವ ಅರೆಬಾಸೆ ಅಧ್ಯಯನಗಳ ವಿವರ ಹೀಂಗುಟ್ಟು–

1. ಗೋಪಾಲ ಪೆರಾಜೆ – "ಅರೆಬಾಸೆ ಗೌಡರ ಸಂಸ್ಕೃತಿಯ ನೆಲೆಗ"
2. ಕೆ. ಆರ್. ತೇಜಕುಮಾರ್ – "ಅರೆಬಾಸೆನವರ ಬೊಮ್ಮಲಿ ಮಾನವ–ನಿಸರ್ಗ ಸಂಬಂಧಗ (ಕೊಡಗು, ಕನ್ನಡ ಜಿಲ್ಲೆ ಮತ್ತೆ ಕೇರಳ ಗಡಿಭಾಗದ ಪ್ರಾದೇಶಿಕ ಅಧ್ಯಯನ)"
3. ಚರಣ್ ಐವರನಾಡ್ – ಮಾಧ್ಯಮಲಿ ಅರೆಬಾಸೆ ಒಂದು ವಿಶ್ಲೇಷಣಾತ್ಮಕ ಅಧ್ಯಯನ
4. ಕುಡೆಕಲ್ ಆರ್. ವಿದ್ಯಾಧರ – 'ಅರೆಬಾಸೆ ಗೌಡರ ಹೋರಾಟದ ಚರಿತ್ರೆ'
5. ಲೋಕೇಶ್ ಪೆರ್ಲಂಪಾಡಿ – 'ತುಳು ಮತ್ತೆ ಅರೆಬಾಸೆ ಗೌಡರ ಸಾಮಾಜಿಕ, ಸಾಂಸ್ಕೃತಿಕ ವಿಶ್ಲೇಷಣೆ: ಪುತ್ತೂರು ತಾಲೂಕಿನ ಕೊಳ್ತಿಗೆ–ಪೆರ್ಲಂಪಾಡಿ ಪ್ರಾದೇಶಿಕ ಅಧ್ಯಯನ.
6. ಬೇಕಲ್ ಶೀಲಾವತಿ ರಮಾನಾಥ್ – "ಅರೆಬಾಸೆ ಜನಪದರಲ್ಲಿ ಪಾರಂಪರಿಕ ಚಿಕಿತ್ಸಾ ಪದ್ಧತಿಗಳು"
7. ಡಾ. ಪುರುಷೋತ್ತಮ ಕೆ. ವಿ. – "ಅರೆಬಾಸೆ ಸಾಹಿತ್ಯಾವಲೋಕನ – ಒಂದು ತೌಲನಿಕ ಅಧ್ಯಯನ"
8. ಡಾ. ನಾರಾಯಣ ಸೇಡಿಕಜೆ – "ಅರೆಬಾಸೆ ಗೌಡರ ಸಾಂಸ್ಕೃತಿಕ ಪಲ್ಲಟ–ಒಂದು ಅಧ್ಯಯನ"
9. ಪ್ರೊ. ಸೀತಾರಾಮ ಕೇವಳ – "ಬದಲಾಗುತ್ತಿರುವ ದೈವಾರಾಧನಾ ವಿಧಾನ"
10. ಡಾ. ಕೋರನ ಸರಸ್ವತಿ – "ಅರೆಬಾಸೆ ಸಂಸ್ಕೃತಿಲಿ ಸ್ತ್ರೀ ಬದುಕು"

ಸುಮಾರ್ 120–150 ಪುಟದಷ್ಟ್ ವಿವರ ಇರುವ ಈ ಅಧ್ಯಯನ ಪ್ರಬಂಧಗಳ ಐದ್ ತಿಂಗಳೊಳಗೆ ಬರ್ದ್ ಕೊಡುವ ಶರ್ತದ ಮೇಲೆ ಅಕಾಡೆಮಿ ಈ ಸಂಶೋಧಕರ ಆಯ್ಕೆ ಮಾಡಿಟು. ಇವೆಲ್ಲವೂ ಅವರವರ ಕ್ಷೇತ್ರಲಿ ಒಳ್ಳೆ ಹೆಸ್ರ ಮಾಡ್ದ ಪರಿಣಿತರ್. ಮುಂದೆ ಈ ಹತ್ತ್ ಮಹಾಪ್ರಬಂಧಗ ಪುಸ್ತಕ ರೂಪಲಿ ಪ್ರಕಟ ಆದು. ಈ ಯೋಜನೆನ ಈ ವರ್ಸನೂ ಮುಂದುವರ್ಸುವ ಉದ್ದೇಶ ಇದ್ದ್ ಆಸಕ್ತರ್ ಈಗಂದಳೇ ಕೆಲ್ಸ ಸುರು ಮಾಡಿರೆ ಪ್ರಯೋಜನ ಆದು. ಅಧ್ಯಯನ ಖಾಸಗಿಯಾಗಿ ಕೂಡಾ ಮಾಡಕ್. ಅದ್ ಬುಡಾದೆ ನಡ್ಕಾದ ಕೆಲ್ಸ.)

ಕುಂಜ಼ಿಯವರ ಶಿಕ್ಷಣ ಸಂಸ್ಥೆಗ ಮತ್ತು ಅರೆಬಾಸೆ ಜನಗಳ ಅಭಿವೃದ್ಧಿ



ಸೀತಾರಾಮ ಕೇವಳ,
ಪ್ರಾಂಶುಪಾಲ, ವಿದ್ಯಾರಶ್ಮಿ ವಿದ್ಯಾಲಯ,
ಸವಣೂರು, ಪುತ್ತೂರು.

'ಊರುಗೊಂದು ಮಾರ್ಗ ಬಂದರೆ ಅದ್ ಜನಂಗಳ ಬೊದ್ಕುಗೊಂದು ಮಾರ್ಗ' ತೇಳುವೆ ಓರಿಯೊಪ್ಪ. ಈ ಮಾತ್ ಸುಳ್ಯದ ಮಟ್ಟಿಗೆ ಮತ್ತು ಸುಳ್ಯ ಮತ್ತು ಆಜೀಕೆನ ಸುಮಾರ್ ಅರೆಬಾಸೆ ಜನ್ರ ಮಟ್ಟಿಗೆ ದೊಡ್ಡ ಸತ್ಯ. ಸುಳ್ಯಲಿ ವಾಹನ ಹೋಗುವ ಮಾರ್ಗಂದೊಳು ಹೆಚ್ಚಿಗೆನ ಸಂಗತಿತೇಳ್ರೆ ಶಿಕ್ಷಣದ ಮಾರ್ಗ ಬಂದದ್. ಸುಳ್ಯತೇಳ್ರೆ ಕೂಡ್ಲೆ ಕುಂಜ಼ಿ. ಕುಂಜ಼ಿತೇಳ್ರೆ ಸುಳ್ಯತೇಳ್ದು ಎಲ್ಲವ್ಕ ಗೊತ್ತಿದ್ದದೆ.

ಕುಂಜ಼ಿಯವ್ರ ಹೆಚ್ಚಿಗೆ ಓದಿದವು ಅಲ್ಲ. ಆದರುನು ಅವು ಇಡಿ ಊರ್‌ನ ಮತ್ತು ಪರವೂರ ಜನ್ರ ಓದ್ಲಿದ್ ಉಟ್ಟಲ್ಲ ಅವರ ಕತೆ ಹೇಳಿಕೆ ಸದಾರ್ಲ್ಲಿ ಬೊತ್ತು. ಶಿಕ್ಷಣ ಸಂಸ್ಥೆಗಳ ಕಟ್ಟದರ ಒಟ್ಟೊಟ್ಟಿಗೆ ಅದಂದರ್ಾಗಿ ಮತ್ತು ಅವಂದರ್ಾಗಿ ಆದಂತಹ ಬೆಳವಣಿಗೆಗ/ಬದಲಾವಣೆಗ ಸುಮಾರ್ ನಮೂನೆದ್. ಕುಂಜ಼ಿಯವಂದರ್ಾಗಿ ಸುಳ್ಯಲಿ ಆವ ಬದಲಾವಣೆಗಳ ನಾ ನಾಲ್ಕ್ ಬಗೆಲಿ ಇಲ್ಲಿ ಕೆಳಗೆ ಗುರ್ತು ಮಾಡೆಳೆ.

1) ಶೈಕ್ಷಣಿಕ ಬದಲಾವಣೆ. 2) ಔದ್ಯೋಗಿಕ ಬದಲಾವಣೆ. 3) ವೈದ್ಯಕೀಯ ಕ್ಷೇತ್ರದ ಬದಲಾವಣೆ ಹಾಂಗೆ
4) ಒಟ್ಟು ಸಾಮಾಜಿಕ ಬದಲಾವಣೆ

1) **ಶೈಕ್ಷಣಿಕ ಬದಲಾವಣೆ**: ಕುಂಜ಼ಿಯವ್ರ ಸುಳ್ಯಲಿ ಕೋಲೇಜ್ ಮಾಡಿಕೆ ಸುಮಾರ್ ವರ್ಷಗಳ ಮುಂದೆನೆ ಹೇಳ್ತಾ ಇದ್ದೊಗಡ **'ಯಾರಾರ್ ಒಂದು ಕೋಲೇಜ್ ಮಾಡಿಯಪ್ಪ. ನಾ ಒಂದು ಲಕ್ಷ ರೂಪಾಯಿ ಕೊಟ್ನೆ'** ತೇಳಿ. ಅದರೆ ಆವರ ಮಾತ್‌ನ ಯಾರೂ ಕೆಬಿಗೆ ಹಾಕಂತಿಲೆ. ಹಂಗಾಗಿ 1960ರ ದಶಕಲಿ ಕುಂಜ಼ಿಯವ್ರ ಅಕಾಡೆಮಿ ಅಫ್ ಲಿಬರಲ್ ಎಜ್ಯುಕೇಶನ್‌ನ ಸ್ಥಾಪನೆ ಮಾಡಿ ಹಂಞ ವರ್ಷ ಕಳ್ದ್ ಅವ್ರೆ ಅವರ ಅಕಾಡೆಮಿನ ಅಡಿಲಿ 1976ಲ್ಲಿ ನೆಹರು ಸ್ಮಾರಕ ಮಹಾವಿದ್ಯಾಲಯನ (*N.M.C.= Nehru Memorial College*) ಸುರು ಮಾಡ್ದೊ. ಅದ್ ಇಲ್ಲಿನ ಜನಗಳಿಗೆ ಒಂದು ಭಾಗ್ಯದ ಬಾಗ್‌ಲೇ ಆಗಿಬುಟ್ಟತ್ ತೇಳ್ದು ಬಡಾಯಿ ಏನೂ ಅಲ್ಲ. ಈ ಎನ್ನೆಂಸಿಲಿ ಪಿ.ಯು.ಸಿ. ಮತ್ತು ಡಿಗ್ರಿಗಳ ಮಾಡಿಕಂಡ ಎಷ್ಟ್ ಜನ ಇಂದ್ ಸುಳ್ಯಲಿ, ಸುತ್ತ ಮುತ್ತ್‌ನ ಊರುಲಿ ಮತ್ತು ಹೊರಗಿನ ದೇಶಗಳ್ಲಿ ಕೂಡ ಇಲ್ಲೆ ಹೇಳಿ?. (**ಅವರ ಪೈಕಿ, 1983ಂದರ್ 1986ರವರೆಗೆ ಹಾಸ್ಟೆಲ್‌ಲಿ ಇದ್ದ್‌ಕಂಡ್ ಎನ್ನೆಂಸಿಲಿ ಬಿ.ಎ. ಡಿಗ್ರಿ ಮಾಡ್ದ ನಾನೂ ಒಬ್ಬ**). ಇಂದ್ ಎಷ್ಟೋ ದೊಡ್ಡ ದೊಡ್ಡ ಜನಗಳ ಅಯ್ಯಪ್ಪ ಹೇಳಿಕಂಡವೆ **'ಗೌಡ್ರ್ ಒಂದು ಕೋಲೇಜ್ ಮಾಡ್ತಿಲೆ ತೇಳಿ ಆಗಿದ್ದರೆ ಇಂದ್ ನನ್ನ ಮಂಙ/ಮಗಳ್ ಇಷ್ಟ್ ದೊಡ್ಡ ಜನ ಆಕೇ ಇತ್ಲೆ ಅಂತ.**

ಸುಳ್ಯದ ಕುಂಜ಼ಿಬಾಗ್‌ಲಿ ಎನ್ನೆಂಸಿಂದ ಸುರಾದ ಅವರ ಶೈಕ್ಷಣಿಕ ಕೆಲ್ಸ, ಕೆ.ವಿ.ಜಿ. ಪೊಲಿಟೆಕ್ನಿಕ್, ಕೆ.ವಿ.ಜಿ. ಇಂಜಿನಿಯರಿಂಗ್ ಕೋಲೇಜ್, ಕೆ.ವಿ.ಜಿ. ನರ್ಸಿಂಗ್ ಕೋಲೇಜ್, ಕೆ.ವಿ.ಜಿ.ಐ.ಟಿ.ಐ., ಕೆ.ವಿ.ಜಿ. ಇಂಗ್ಲಿಷ್ ಮೀಡಿಯಂ ಹೈಸ್ಕೂಲ್, ಕೆ.ವಿ.ಜಿ. ಲಾ ಕೋಲೇಜ್, ಕೆ.ವಿ.ಜಿ. ಡೆಂಟಲ್ ಕೋಲೇಜ್, ಕೆ.ವಿ.ಜಿ. ಆಯುರ್ವೇದಿಕ್ ಮೆಡಿಕಲ್ ಕೋಲೇಜ್, ಕೆ.ವಿ.ಜಿ. ಮೆಡಿಕಲ್ ಕೋಲೇಜ್ ಹಿಂಗೆ ಮುಂದುವರ್ಕಂಡ್ ಕೂಡ್ಲ್ ಮತ್ತು ಬೆಂಗ್ಳೂರುಗಳಿಗೂ ಎತ್ತಿಟು ತೇಳಿಕೆ ಬಾರಿ ಖುಷಿ ಆದೆ.

ಅರೆಬಾಸೆನ ಊರುನ ಈ ಮಕ್ಕ ಇಂಗ್ಲಿಷ್ ಕೂಡ ಕಲಿಯೊಕು ತೇಳಿ ಕುಂಜ಼ಿಯವ್ಕೆ ಬಾರಿ ಮನಸ್ಸ್. ಅದಕ್ಕಾಗಿಯೇ ಅವು ಸುಳ್ಯ ತಾಲೂಕುನ ಸುಮಾರ್ ಇನ್ನೂರರಷ್ಟ್ ಶಾಲೆಗಳಿಗೆ ಇಂಗ್ಲಿಷ್ ಟೀಚರ್ ತೇಳಿ ಒಂದೊಂದು

ಕಬ್ಬಿಣದ ಕಪಾಟುನೂ, ಒಂದು ರಾಶಿ ಇಂಗ್ಲಿಷ್ ಪುಸ್ತಕಗಳ್ನ ಕೊಟ್ಟೊಳೊ. ಅದಂದ್ರಾಗಿ ಎಷ್ಟೊ ಮಕ್ಕ ಇಂಗ್ಲೀಷ್‌ನ ಬಗ್ಗೆ ಹಚ ನೋಡಿಕೆ ಸುರುಮಾಡುವಂಗಾತ್‌ತೇಳ್ದು ಸುಳ್ಳಲ್ಲ.

ಇಂದ್ ಎಷ್ಟೋ ಜನ ಮಾಷ್ಟ್ರಗ, ಡಾಕ್ಟ್ರಗ, ನರ್ಸ್‌ಗ, ಜಡ್ಜ್‌ಗ, ವಕೀಲ್ರ್‌ಗ, ಪೋಲೀಸ್‌ಗ, ಪೇಪರ್‍ನವ್ರು, ವ್ಯಾಪಾರಿಗ, ಡ್ರೈವರ್‌ಗ, ರಾಜಕೀಯ ನಾಯಕರ್‌ಗ ಆಗಿರ್ದು ಕುಂಜ಼ಿಯವರ ಶಿಕ್ಷಣ ಸಂಸ್ಥೆಗಳ್ಲಿ ಓದಿದ ಕಾರಣಂದಾಗಿ ತೇಳುವಂತದ್ದ್ ದೊಡ್ಡ ಸಂಗತಿ. 1970ಕ್ಕು ಮುಂದೆ ಎಷ್ಟೋ ಜನಕ್ಕೆ ಓದೊಕು ತೇಳಿ ಆಸೆ ಇದ್ದರೂ ದೂರದ ಊರುಗೆ ಹೋಕೆ ಅನುಕೂಲ ಇಲ್ಲದ್ದಂದ್ರಾಗಿ ಹೋತಿತ್ತಿಲೆ. ಹಂಗಾಗಿ ನಮ್ಮ ಅರೆಬಾಸೆ ಸಮುದಾಯದ ಎಷ್ಟೋ ಪ್ರತಿಭೆಗ ಮನೆ ಒಳಗನೆ ಒಳ್ದೋಗಿಬುಟ್ಟೊಳತೇಳ್ದು ಸತ್ಯ ಸಂಗತಿ. ಅದರೆ ಇಂದ್ ದೊಡ್ಡ ಜನ ಆಕು ತೇಳಿ ಹಚ ಏನಾರ್ ಮನ್ಸ್ ಮಾಡ್ದ ಸುಳ್ಯದವ್ಕೆ ಬೇಕಾದಷ್ಟ್ ಅವಕಾಶ ಕಾಲ್ ಬುಡಲೆ ಬಿದ್ದ್‌ಕಂಡ್ ಉಟ್ಟಲೆ!

2) **ಔದ್ಯೋಗಿಕ ಬದಲಾವಣೆ:** ಜಿ.ಪಿ. ರಾಜರತ್ನಂತೇಳುವ ಒಬ್ಬ ದೊಡ್ಡ ಕವಿ ಬರ್‍ದೊಳ 'ಗಂಡು ಹೊಲಕ್ಕೆ, ಹೆಣ್ಣು ಒಲೆಗೆ' ತೇಳಿ. ಮುಂದಲ್ಲ ಅರೆಬಾಸೆನವರ್ದ್ ಅಷ್ಟೆ ಕತೆ. ಗಂಡ್‌ಗ ಗದ್ದೆ, ತೋಟಗಳ ಕೆಲ್ಸಕ್ಕೆ ಹೋದು, ಸಂಪಾದನೆ ಮಾಡ್ದು. ಹೆಣ್ಣ್‌ಗ ಮನೆಲಿ ಇದ್ದ್‌ಕಂಡ್ ತೋಟ, ಗದ್ದೆ ಕೆಲ್ಸಗಳೊಟ್ಟಿಗೆ ಅಡ್ಗೆ ಕೆಲ್ಸ ಮಾಡ್ದು, ನಾಲ್ಕೋ ಎಂಟೋ ಹೆರ್ದು, ಮಕ್ಕಳ ಸಾಂಕುದು. ಅಲ್ಲಿಗೆ ಆತ್. ಈ ಸಂಗತಿಗಳ ಬುಟ್ಟು ಬೇರೆ ಉದ್ಯೋಗದ ವಿಸಯನೆ ಇತ್ತ್‌ಲೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಾಕೆ ಮುಂದೆ ಎಲ್ಲೋ ನೂರೊಕ್ಕೊಬ್ಬನೋ ಸಾವಿರಕ್ಕೊಬ್ಬನೋ ಹೊರಗೆ ಹೋಗಿ ಓದಿಕಂಡ್, ಉದ್ಯೋಗಕ್ಕೋ ಮತ್ತೊಂದಕ್ಕೋ ಹೋತಿದ್ದೊ. ಅದರೆ ಸ್ವಾತಂತ್ರ್ಯ ಬಂದ ಮೇಲೆ ಜನಗ ಎಲ್ಲ ಬಾರಿ ಬಾರಿ ಬದಲಾವಣೆಗಳ ಮಾಡಿಕಂಡ್ ಬುಟ್ಟೊ. ಏದ್ನ ಬಗೆಲಿ ಎಲ್ಲವ್ರು ಮನ್ಸಾತ್. ಓದಿಕೆ ಮನ್ಸ್ ಮಾಡುವರ ಸಂಖ್ಯೆ ಹೆಚ್ಚಾಗುವ ಹೊತ್ತಿಗೆ ಸರಿಯಾಗಿ ಕುಂಜ಼ಿಯವ್ರು ಸುಳ್ಯಲಿ ಬೇಕ್ ಬೇಕಾದ ನಮೂನೆನ ಶಿಕ್ಷಣ ಸಂಸ್ಥೆಗಳ ಕಟ್ಟಿ ಜನಗಳಿಗೆ ಕೊಟ್ಟೊ.

ಸುಳ್ಯಲಿ ಕುಂಜ಼ಿಯವರ ಶಿಕ್ಷಣ ಸಂಸ್ಥೆಗಳ್‌ಂದಾಗಿ ಶಿಕ್ಷಣ ಸಿಕ್ಕುದರೊಟ್ಟಿಗೆ ಎಷ್ಟೋ ಜನಕ್ಕೆ ಉದ್ಯೋಗನೂ ಸುಲಾಬಲಿ ಸಿಕ್ಕಿತ್. ಇಂದ್ ಸುಮಾರ್ ಸಾವಿರದಕ್ಕಲೆ ಅರೆಬಾಸೆವ್ರು ಕುಂಜ಼ಿಯವರ ಶಿಕ್ಷಣ ಸಂಸ್ಥೆಗಳ್ಲೇ ಪ್ರಿನ್ಸಿಪಾಲ್ರಿಂದ ಹಿಡ್ದ್ ಡ್ರೈವರ್, ಪಿಯೋನ್‌ಗಳಮುಟ್ಟ ಒಳೊತೇಳ್ದು ಎಷ್ಟ್ ಕುಸಿನ ಸಂಗತಿ ಅಲ್ವಾ?

ಇನ್ನ್ ಕುಂಜ಼ಿಯವರ ಸಂಸ್ಥೆಗಳ ಬುಟ್ಟ್‌ದ್ ಬೇರೆ ಸಂಸ್ಥೆಗಳ ತಕ್ಕಂಡ್ರುನು ಅಲ್ಲಿರುವ ಅರೆಬಾಸೆ ಉದ್ಯೋಗಿಗಳಿಗೆ ಉದ್ಯೋಗ ಸಿಕ್ಕೊಕಾರೆ ಕುಂಜ಼ಿಯವರ ಸಂಸ್ಥೆಗಳ್ಲಿ ಓದಿದಂದ್ರಲೆ ಅದು ಆಗುಟು. ಇಂದ್ ಎಷ್ಟೊ ಫೈನಾನ್ಸ್ ಸಂಸ್ಥೆಗ, ತಾಲೂಕು ಆಪೀಸ್, ತಾಲೂಕು ಪಂಚಾಯತ್, ಕೃಷಿ ಆಪೀಸ್, ಶಿಕ್ಷಣಾಧಿಕಾರಿಯವರ ಆಪೀಸ್‌ನಂತ ಸರ್ಕಾರಿ ಆಪೀಸ್‌ಗ, ಸುಮಾರ್ ವರ್ಷಗಳ ಹಿಂದೆ ಅಲ್ಯಲ್ಲಿ ಇದ್ದ ಎಸ್.ಟಿ.ಡಿ. ಬೂತ್‌ಗ, ಚಾರ್ಟರ್ಡ್ ಅಕೌಂಟೆಂಟ್ರ್‌ಗಳ ಆಪೀಸ್‌ಗ, ವಕೀಲ್ರ ಆಪೀಸ್‌ಗ, ರಿಯಲ್ ಎಸ್ಟೇಟ್ ಆಪೀಸ್‌ಗ, ಕೊರಿಯರ್ ಆಪೀಸ್‌ಗ, ರಾಜಕೀಯ ನಾಯಕರ್‌ಗಳ ಆಪೀಸ್‌ಗ, ಸೈಬರ್ ಸೆಂಟರ್‌ಗ, ಫ್ಯಾನ್ಸಿ ಅಂಗ್ಡಿಗ, ಬಟ್ಟೆ ಅಂಗ್ಡಿಗ, ಬೇಕರಿಗ, ಚಿನ್ನ-ಬೆಳ್ಳಿ ಅಂಗ್ಡಿಗ ಹಿಂಗ ಬೇರೆ ಬೇರೆ ಕಡೆಗಳ್ಲಿ ನೋಡ್ರೆ ಸುಳ್ಯದ ಕೆ.ವಿ.ಜಿ. ಸಂಸ್ಥೆಗಳ್ಲಿ ಒಂದಲ್ಲ ಒಂದು ಕೋರ್ಸ್‌ನ ಓದಿದವೆ ತುಂಬಿಕಂಡೊಳೊ. ಅಂತವರ್‌ಲಿ ಅರೆಬಾಸೆವೆ ದೊಡ್ಡ ಸಂಖ್ಯೆಲಿ ಒಳೊ. ಹಿಂಗೆ ಕೆಲ್ಸಕ್ಕೆ ಸೇರ್ದವರ್‌ಲಿ ಎಷ್ಟೊ ಜನ ಉದ್ಯೋಗದೊಟ್ಟಿಗೆ ಕೃಷಿನನ್ನೂ ಮಾಡಿಕಂಡ್ ಉಸಾರಾಗೊಳೊ.

3) **ವೈದ್ಯಕೀಯ ಕ್ಷೇತ್ರದ ಬದಲಾವಣೆ:** ಸುಳ್ಯಕ್ಕೊಂದು ಮೆಡಿಕಲ್ ಕೋಲೇಜ್ ಸಿಕ್ಕುದುತೇಳಿ ಸ್ವತಃ ಕುಂಜ಼ಿಯವ್ರೇ ಪೂರ ನಂಬಿಕೆ ಇತ್ತಾ ಇಲ್ಲೆನೋತೇಳಿ ನಂಗೆ ಒಮ್ಮೊಮ್ಮೆ ಸಂಶಯ ಆದೆ. ಯಾಕೆತೇಳ್ರೆ ಇಲ್ಲಿ ಮೆಡಿಕಲ್ ಆಕೊರೆ

ಆ ಡೆಲ್ಲಿ, ಬೆಂಗ್ಳೂರುಂದ ಬಂದ ಕಮಿಟಿಯೊವ್ರು ಕುಂಜಿರ್ಯವರ ಎಷ್ಟ್ ಬಜ ಬರ್ಸೆಳೊತೇಳ್ರ್ ಹೇಳಿ ಪೂರ್ತ್ಯಸಿಕೆ ಬೊತ್ತು ಬುಡಿ. ಅದರೆ ಸುಳ್ಯಕ್ಕೆ ಬೂರಿ ಶಿಕ್ಷಣ ಕೊಟ್ಟದ್ ಮಾತ್ರ ಅಲ್ಲದೆ ಕುಂಜಿರ್ಯವ್ರು ಆರೋಗ್ಯ ಸೇವೆನೂ ಬರಾಬ್ಬರಿ ಕೊಟ್ಟೊಳೊ.

ಸುಮಾರ್ 1985ರ ಸುಮಾರಿಗನೆ ಕುಂಜಿರ್ಯವ್ರು ಇಡಿ ಸುಳ್ಯ ತಾಲೂಕಿಗೆ ಮತ್ತು ಕಾಸರಗೋಡ್‌ನ ಕೆಲವು ಕಡೆಗಳಿಗೆ ಪಾರಕ್ಕೊಮ್ಮೆ ಎರ್ಡ್ ಸರ್ತಿ ಸಂಚಾರಿ ಆರೋಗ್ಯ ಘಟಕಗಳ ಕಳ್ಸಿ ಹಳ್ಳಿ ಹಳ್ಳಿಲಿ ಮನೆಬಾಗ್‌ಲ್‌ಗೆ ಆರೋಗ್ಯ ಸೇವೆ ಕೊಟ್ಟದ್ ಬಾರಿ ದೊಡ್ಡ ಸಂಗತಿ. ನಾಲ್ಕ್ ಎಂ.ಎಂ. 540 ಜೀಪುಗ ಹಳ್ಳಿನ ಕಾಡ್ ಗುಡ್ಡೆಗಳ ದಾರ್ಗಗಳ್ಲಿ ಹೋತಿದ್ದದ್ ನಂಗೆ ಈಗೂಳೂ ಕಣ್ಣಿಗೆ ಕಟ್ಟದಂಗೆ ಉಟ್ಟು. ನಾ ಹುಟ್ಟದ ಮಡಪ್ಪಾಡಿಗೆಸಾನು ಪಾರಕ್ಕೊಮ್ಮೆ ಬಾತಿದ್ದ ಆ ಡಾಕ್ಟ್ರ ಜೀಪುಗೆ ಜನಂಗ ಕಾದ್ ನಿಲ್ತಿದ್ದದ್ ನಂಗೆ ಸರಿ ಗೊತ್ತುಟು.

ನರ್ಸಿಂಗ್ ಕೋಲೇಜ್ ಮಾಡ್ದುಂದಾಗಿ ಇಂದ್ ಎಷ್ಟ್ ನರ್ಸ್‌ಗ ಊರು-ಪರವೂರುಗಳ್ಲಿ ಮತ್ತು ಹೊರಗಿನ ದೇಶಗಳ್ಲಿ ಬಳೊತೇಳಿ ಲೆಕ್ಕ ಇಸಿದವ್ರು ಬಳೊನೋ ಇಲ್ಲೆನೋ. ಡೆಂಟಲ್ ಕೋಲೇಜ್ ಮತ್ತು ಮೆಡಿಕಲ್ ಕೋಲೇಜ್‌ಗಳ್‌ಂದಾಗಿ ಎಷ್ಟ್ ಒಳ್ಳೊಳ್ಳ ಡಾಕ್ಟ್ರ್‌ಗ ಈ ಭಾಗಕ್ಕೆ ಸಿಕ್ಕಿದೊ. ಇಂದ್ ಸುಳ್ಯಲಿ ಮೆಡಿಕಲ್ ಕೋಲೇಜ್‌ಲಿ ಇಲ್ಲದ ಸೌಕರ್ಯ ಇಲ್ಲೆ. ಮಂಗ್ಳೂರು ಬೆಂಗ್ಳೂರ್ಲಿ ಆಗುವಂತ ಸ್ಕ್ಯಾನಿಂಗ್, ಆಪರೇಷನ್‌ಗ ಎಲ್ಲ ಇಂದ್ ಇಲ್ಲಿಯೆ ಆದೆ. ಅದುಂದಾಗಿ ಜನಗಳಿಗೆ ಎಷ್ಟ್ ಸುಲಭ ಆತ್, ಎಷ್ಟ್ ದುಡ್ಡು ಒಳ್ತ್? ಅದರೊಟ್ಟಿಗೆನೆ ಎಷ್ಟ್ ಮೆಡಿಕಲ್ ಟೆಸ್ಟಿಂಗ್ ಲ್ಯಾಬೋರೇಟರಿಗ, ಎಷ್ಟ್ ಮೆಡಿಕಲ್ ಅಂಗ್ಡಿಗ, ಮಸಾಜ್ ಸೆಂಟರ್‌ಗ ಸುರಾಗೊಳೊ. ಅದರ್ಲಿ ಎಷ್ಟ್ ಜನಕ್ಕೆ ಉದ್ಯೋಗ ಸಿಕ್ಕಿಟು ಅಲ್ಲನಾ?

4) **ಒಟ್ಟು ಸಾಮಾಜಿಕ ಬದಲಾವಣೆ**: ಒಂದೂರ್ಲಿ ಯಾವುದೇ ಒಂದು ಕ್ಷೇತ್ರ ಅಭಿವೃದ್ಧಿ ಆದರೆ ಅದರ ಒಟ್ಟೊಟ್ಟಿಗೆನೆ ಬೇರೆ ಕ್ಷೇತ್ರಗಳೂ ಅದರಷ್ಟಕ್ಕೆ ಅಭಿವೃದ್ಧಿ ಆದವೆ. ಇದ್ಕೆ ಕೆ.ವಿ.ಜಿ. ಸಂಸ್ಥೆಗ ಮತ್ತು ಸುಳ್ಯದ ಅಭಿವೃದ್ಧಿಗಳೆ ಸಾಕ್ಷಿ. ಸುಮಾರ್ 1980ನೆ ಇಸ್ವಿನವರೆಗೂ ಕುಂಜಿರ್ಬಾಗ್‌ನ ಜಾಗೆ ಯಾರಿಗೂ ಬೇಡಿತ್ತ್. ಎನ್ನೆಂಸಿನ ಹಿಂದೆ-ಮುಂದೆ-ಮಡೆಲಿ ಎಲ್ಲ ಇದ್ದ ಕಾಡ್‌ಬಲ್ಲೆಗಳ ನೋಡಿಕನ ಅಲ್ಲಿ ಮೊನ್ನಾದಂವ ಕುದ್ರಿಕಿಲೆತೇಳುವಂಗೆ ಇತ್ತ್. 1985-86ಲ್ಲಿ ನಾ ಎನ್ನೆಂಸಿಲಿ ಬಿ.ಎ. ಡಿಗ್ರಿ ಫೈನಲ್ ಇಯರ್ ಓದ್ತಾ ಇದ್ದೆ. ಹಾಸ್ಟೆಲ್‌ಲಿ ಇದ್ದೆ. ಈಗ ಮಾಷ್ಟ್ರ ಆಗಿರುವ ವಾಸು ಗೌಡ್ರು ಆಗ ಅಲ್ಲಿ ವಾರ್ಡನ್. ಹಣ ಸಮಯ ಕಳ್ದ್ ದಿ. ಬೆದ್ಗಲ್ಲ್ ವಸಂತಣ್ಣ ವಾರ್ಡನ್ ಆಗಿ ಬಂದೊ. ಉಳುವಾರು ಸೀತಾರಾಮಣ್ಣನೂ ಆಗ ಅಸಿಸ್ಟೆಂಟ್ ವಾರ್ಡನ್ ಮತ್ತು ಎನ್ನೆಂಸಿ ಆಫೀಸ್‌ಲಿ ಕ್ಲರ್ಕ್ ಆಗಿ ಹಾಸ್ಟೆಲ್‌ಲಿ ನಮ್ಮೊಟ್ಟಿಗೆ ಇದ್ದೊ. ಆಗ ಕೇರಳ ಕಡೆನ ಒಬ್ಬ ದೊಡ್ಡ ಕಳ್ಳ, ಕೊಟ್ಟು-ಪಿಕ್ಕಾಸ್‌ಲಿ ಜನಂಗಳ ಬೊಡ್ಡ್ ಕೊಲ್ಲುವ 'ರಿಪ್ಪರ್ ಚಂದ್ರನ್'ನ ಕಾರ್ಬಾರದ ಸಮಯ. ಒಂದು ದಿನ ಹಿಂಜೊತ್ತಾಕನ ನಮ್ಮ ಹಾಸ್ಟೆಲ್‌ನ ಮಡೆನ ಕಾಡ್‌ಲಿ ಚಂದ್ರನ್ ಬಂದು ಅಡ್ಗಿಟುತೇಳಿ ಸುದ್ದಿ ಆತ್. ನಾವೆಲ್ಲವ್ರು ಕೈಗೆ ಸಿಕ್ಕಿದ ದೊಣ್ಣೆ, ಬೊಡ್ಗ ಹಿಡ್ಕಂಡ್ ಆ ಕಮಿನಿಷ್ಟ್ ಬಲ್ಲೆಲಿ ಬಲೆ ಹುಡ್ಕಿದೊ,. ಅಂವ ಸಿಕ್ಕಿಲ್ಲೆ. ಇದರ ನಾ ಯಾಕೆ ನೆಂಪು ಮಾಡಿಕಂಡದ್‌ತೇಳ್ರೆ ಅಲ್ಲಿ ಕಾಡ್ ಎಷ್ಟ್ ಇತ್ತ್‌ತೇಳಿ ನೀವ್ಗೆ ಹೇಳಿಕೆ ಮಾತ್ರ.

ಕುಂಜಿರ್ಯವರ ಸಂಸ್ಥೆಗ ಆದ ಮೇಲೆ ಪರವೂರುನ ಮಕ್ಕ ಇಲ್ಲಿ ವಿದ್ಯಾಭ್ಯಾಸಕ್ಕೆ ಬಂದ್ ರಾಶಿ ಬೀಳಿಕೆ ಸುರಾದೊ. ಅವ್ಕೆ ಬೇಕಾದಷ್ಟ್ ಹಾಸ್ಟೆಲ್ ವ್ಯವಸ್ಥೆ ಮಾಡಿಕಂಕೆ ಕುಂಜಿರ್ಯವ್ಕೆ ಹಣ ಸಮಯ ಬೇಕಾತ್. ಅದರೆ ಮಕ್ಕಳ ಸಂಖ್ಯೆ ದಿನೇದಿನೇ ಹೆಚ್ಚಿನದ್ರ ಒಕೆಂಡ್ ಹೋಕನ ಮಕ್ಕಳಿಗೆ ನಿಲ್ಲಿಕೆ ರೂಮುಗ, ಮನೆಗ ಬೇಕಾದೊ. ಆಗ ನೋಡಿ ಕುರುಂಜಿಬಾಗ್‌ನ ಸುತ್ತಮುತ್ತ ಇದ್ದ ಆಕ್ಕಳದಗಲ ಜಾಗೆವ್ನೂ ಕಾಯ್ಚಾದ್. ನಾಕ್ ಗೋಡೆ, ಒಂದು ಮಾಡ್ ಮಾಡಿರೆ ಸಾಕ್ ಮಕ್ಕ ಬಂದ್ ಅಲ್ಲಿ '**ನಮಿಗೆ ಇಷ್ಟು ಸಾಕು. ಎಷ್ಟು ಕೊಡ್ಬೇಕು ಹೇಳಿ**' ತೇಳಿ ಕುದ್ರ್‌ತಿನಿದ್ದ ಇಡಿ ವರ್ಸದ ಬಾಡಿಗೆನ ಒಮ್ಮೆಗೆ ಕೊಟ್ಟು ಒಟ್ಟಿಗೆ ಸೆಕ್ಯೂರಿಟಿ ಡಿಪೋಸಿಟ್‌ನೂ ಕೊಡ್ತಿದ್ದೊ. ಎಷ್ಟೊ ಜನ ಅಂದ

ಮಕ್ಕಳ ಅಡ್ವಾನ್ಸ್ ದುಡ್ಡುಲೇ ಕಟ್ಟೊಣ ಎದ್ವರ್ಸಿಯೊಳೊ. ಒಳ್ಳದಾಗೊಳೊ. ಆ ಸಮಯಲಿ ಸುಳ್ಯ ಪೇಟೆಲಿ ಎಷ್ಟ್ ಟೆಲಿಫೋನ್ ಕಾಯಿನ್ ಬಾಕ್ಸ್‌ಗ ಇದ್ದೊ. ಸುಮಾರ್ ನೂರರಕ್ಕಲೆ ಇದ್ದಿರ್ದು. ಎಷ್ಟ್ ರಿಕ್ಷಾಗ, ಕಾರ್‌ಗ, ವ್ಯಾನ್‌ಗ, ಬಸ್‌ಗ ಹೆಚ್ಚಾದೊ. ಎಷ್ಟ್ ಅಂಗ್ಡಿಗ ಸುರಾದೊ. **'ತಕ ಮಾರಾಯ, ದುಡ್ಡು ಇರ್‌ಕನ ಕೊಡು'** ತೇಳಿ ಭೂಮಿನ ಕೊಟ್ಟರೂ ಕುಂಜಿಬಾಗ್‌ಲಿ **'ಈ ಕಾಡ್‌ಗುಡ್ಡೆಲಿ ನಂಗೆಂತಕೆ, ನೀವೆ ಇಸಿಕಣಿ'** ತೇಳಿ ಬುಟ್ಟು ಹೋತಿದ್ದ ಪರಿಸ್ಥಿತಿ ಹೋಗಿ ಇಂದ್ ಸ್ಕ್ವೇರ್ ಫೀಟ್ ಲೆಕ್ಕಲಿ ಹಂಚಿ ಜಾಗೆ ಕುಂಜಿಬಾಗ್‌ಲಿ ತಕಣತೇಳ್ರೆ ಸಿಕ್ಕಿಕಿಲ್ಲೆ. ಎಲ್ಯಾರ್ ಸಿಕ್ಕಿರುನೂ ಅದ್ಕೆ ಪೈಸೆ ಚಿನ್ನಂದ ಹೆಚ್ಚಿಗೆ ಕೊಡೊಕಾದೆ.

ಇದೆಲ್ಲದರ ಒಟ್ಟೊಟ್ಟಿಗೆ ಒಂದು ದೊಡ್ಡ ಸಾಂಸ್ಕೃತಿಕ ಬದಲಾವಣೆನೂ ಇಲ್ಲಿ ಆಗಿ ಬುಟ್ಟುಟು. ಕೃಷಿ ಕುಟುಂಬದ ಅಯ್ಯಪ್ಪ ದುಡ್ಡ್ ಸಂಪಾದನೆ ಮಾಡಿ ಓದ್ಸಿದ ಮಕ್ಕ ಇಂದ್ ಕೃಷಿಯೇತರ ಕೆಲ್ಸಗಳಿಗೆ ಹೋಗ್ತಾ ಒಳೊ. ಒಂದು ಲೆಕ್ಕಲಿ ಮುಳ್ಗ್‌ತಾ ಇರುವ ಕೃಷಿ ಕ್ಷೇತ್ರಕ್ಕೆ ಒಂದು ಆಧಾರದಾಂಗೆ ನಿಲ್ಸಿಕೆ ಅವ್ಕೆ ಒಂದು ನೆಲೆನೂ ಸಿಕ್ಕಿಟುತೇಳ್ರೆ ತಪ್ಪಾಕಿಲೆ.

ಶಿಕ್ಷಣ ಸಂಸ್ಥೆಗ ಒಂದು ಕಡೆಲಿ ವಿದ್ಯಾವಂತರ ಮತ್ತು ಪ್ರಗತಿಪರರ ಸೃಷ್ಟಿ ಮಾಡ್ತಾ ಹೋದಂಗೇನೆ, ಮತ್ತೊಂದು ಕಡೆ ಸಾಂಪ್ರದಾಯಿಕತೆನೂ ಹೆಚ್ಚಾತ ಹೋತ್. ಇಲ್ಲಿ ಜನಸಂಖ್ಯೆ ಹೆಚ್ಚಿಗಾದಾಂಗೆ ದೇವಸ್ಥಾನ, ಪಳ್ಳಿ, ಚರ್ಚ್‌ಗಳೂ ಹೆಚ್ಚಾಗೊಳ. ಜ್ಯೋತಿಷ್ಯ, ಅಜ್ಞಾನದವ್ರುನೂ ಹೆಚ್ಚಾಗೊಳೊ. ಆದರೂ ಈ ಕ್ಷೇತ್ರಲಿನೂ ಅರೆಬಾಸೆವ್ರು ಜೀವನಕ್ಕೊಂದು ದಾರಿ ಕಂಡ್‌ಕಂಡೊಳ ತೇಳಕ್.

ಇನ್ನ್ ಸಾಹಿತ್ಯ ಕ್ಷೇತ್ರ ನೋಡ್ರೆ ಅಲ್ಲಿನೂ ಅರೆಬಾಸೆವ್ಕೆ ಒಳ್ಳೆ ಚಾನ್ಸ್ ಆಗುಟು. ಅದ್ ಬರವಣಿಗೆಲಿ ಇರ್ದು, ಪತ್ರಿಕೋದ್ಯಮಲಿ ಇರ್ದು, ಪುಸ್ತಕ ಪ್ರಕಟಣೆಲಿ ಇರ್ದು ಹಿಂಗೆ ಬೇರೆ ಬೇರೆ. ಕುಂಜಿಯವರ ಮತ್ತು ಅವರ ಮಕ್ಕ ಡಾ. ಚಿದಣ್ಣ ಮತ್ತು ಡಾ. ಪ್ರಸಾದಣ್ಣನವರ ನೇತೃತ್ವಲಿ, ಹಂಗನೆ ಬೇರೆ ಬೇರೆ ಜನ್ರ ನೇತೃತ್ವಲಿ ಸುಳ್ಯಲಿ ಎಷ್ಟೊ ಸಾಹಿತ್ಯ ಸಮ್ಮೇಳನಗ ಆಗಿ ಹೋಗೊಳ. ಅದರ್ಲಿ ನಮ್ಮ ಅರೆಬಾಸೆನ ಎಷ್ಟೊ ಸಾಹಿತಿಗ, ಲೇಖಕರ್‌ಗ ಬೆಳ್ಕ್‌ಗೆ ಬಂದುಬುಟ್ಟೊ. ಅದರ್ಲಿನೂ ಈ ಸರ್ತಿ ಆದ ಅರೆಬಾಸೆನ ಸುರೂನ ಸಮ್ಮೇಳನ ಕುಂಜಿ ಗಂಗಾಧರ ಮಾಷ್ಟ್ರ ಅಧ್ಯಕ್ಷತೆಲಿ ನಡ್ದದ್ ಒಂದು ಚಾರಿತ್ರಿಕ ಘಟನೆ ತೇಳುವ ಮಟ್ಟಲಿ ನಡ್ದೋತ್. ಈ ಸಮ್ಮೇಳನದ ನೆಂಪಿಗೆತೇಳಿ ತರ್ತಾ ಇರುವ ಈ ಸಂಚಿಕೆಲಿ ನನ್ನದೊಂದು ಲೇಖನನ ಸೇರ್ಸಿಕೆ ಅವಕಾಶ ಮಾಡಿಕೊಟ್ಟೊವ್ರು ಇದರ ಸಂಪಾದಕ ಯು.ಸು. ಗೌಡ್ರು ತೇಳಿ ನೆಂಪು ಮಾಡಿಕಂಡ್ ಇಲ್ಲಿಗೆ ನಿಲ್ಸಿಬುಟ್ಟನೆ. ❍

ಗೀತೆಲಿ ಶ್ರೀ ಕೃಷ್ಣ ಹೇಳ್ತ್ ಗಡ

ದೊಡ್ಡ ಮನುಷ್ಯರ್ ಏನ್ ಮಾಡ್ವನೋ
ಅದನ್ನೇ ಸಾಮಾನ್ಯ ಜನ್ರ್ ಅನುಸರಿಸುವೆ !

ಕಲಾಂ ಹೇಳ್ದೊಗಡ

ಕನಸ್‌ಂತೇಳ್ರೆ ರಾತ್ರಿ ನಿದ್ರೆಲಿ ಬಾದು ಅಲ್ಲ,
ಕನಸ್‌ಂತೇಳ್ರೆ ನಿದ್ರೆನೇ ಬಾರದಿರುವ ಸ್ಥಿತಿ.

ಹಿರಿಯರ ಹಿತಮಾತ್
ಅರೆಬಾಸೆನ ಒಳ್ಸಿಕೆ ನಾವೇನ್ ಮಾಡೋಕು



ಎಂ. ಜಿ. ಕಾವೇರಮ್ಮ
'ನಿಸರ್ಗ' ಮಾವಜಿ, ಸುಳ್ಯ

ಹೌದು. ಇದ್ ಹಂಙ ಏಚನೆ ಮಾಡ್ವ ಇಸಯನೇ. ನಮ್ಮ ಅರೆಬಾಸೆಗೆ ಅದರ್ದೇ ಆದ ಒಂದ್ ಹೆಗ್ಗಳ್ಕೆ ಉಟ್ಟು. ಇದರ್ಲಿ ಲೆಕ್ಕ ಇಲ್ಲದಷ್ಟ್ ಸಬ್ದಗಳ ಬಂಡಾರನೇ ಉಟ್ಟು. ಅದ್ ರೂಡಲಿ ಇಲ್ಲದೆ ತೆರೆಮರೆಗೆ ಸರ್ಯಕೆ ಮುಂದನೇ ಅದರ ನಾವು ಹುಡ್ಕಿದ್ ಮುಂದೆನ ಜನಾಂಗಕ್ಕೆ ಅದರ ತಿಳ್ಸಿ ಕೊಡ್ದು ನಮ್ಮಂತಾ ಹಿರ್ಯರ ಹಕ್ಕ್‌ನ ಕೆಲ್ಸ.

ಅರೆ ಬಾಸಲಿ ಅಕ್ಷರಮಾಲೆನ ಅಕ್ಷರ್ಲಿರ್ವ 'ಜ' ಮತ್ತು 'ಞ' ಇದರ ಉಪ್ಯೋಗ ತುಂಬಾ ಕಡೆ ಬಂದದೆ. ಬೇರೆ ಬಾಸಲಿ ನೋಡ್ರೆ 'ಜ' ಮತ್ತೆ 'ಞ' ಇದರ ಉಪ್ಯೋಗ ಕಮ್ಮಿ. ಅರೆಬಾಸಲಿ ಮಂಜ. ಕುಂದೋಳಂಜ. ಚಂಜಾಯಿ. ತಂಜಣೆ. ಮಂಜಣೆ. ಬಣ್ಣಂಜಾಯಿ ಇದರ್ಲೆಲ್ಲಾ ಜ ಅಕ್ಷರ ಕಂಡದೆ.

ಹಂಞ. ಕುಂಞ. ಮಂಞ. ಕೊಂಞ–ಇದರ್ಲಿ 'ಞ' ಅಕ್ಷರ ಸೇರಿಕೊಂಡುಟು. ಈ ಸಬ್ದಗಳ ತೆರೆಮರೆಗೆ ಸರ್ಯಕೆ ನಾವು ಬುಡಿಕಾಗದ್.

ಹಿಂದೆನೊವು ಅಡ್ಗೆ ಮಾಡ್ವ, ಉಂಬ ಪಾತ್ರಗಳ ಅಳಗೆ. ಕುರ್ಚಟೆ. ಮರ್ಚಟೆ. ಕಂದಲ್. ಗುಂಬ ಎಂತ ಎಲ್ಲ ಹೇಳ್ತಿದ್ದೊ. ಈಗನೋವ್ಕೆ ಇದರ ಹೆಸ್ರ್‌ನೂ ಕೇಳಿ ಗೊತ್ತಿರ್ಕಿಲ್ಲೆ. ನಾವು ಇದರ ಒಳ್ಸಿಕೊಣೊಕು.

ನಮ್ಮ ಹಿರ್ಯರ್ ಓದ್. ಬರಾವು ಕಲ್ತೋವು ಅಲ್ಲ. ಆದರೆ ಅವು ಅರೆಬಾಸೆ ಮಾತಾಡಿಕಾಕನ ಅವರ ಬೊದ್ಕ್‌ನ ಸಾರಂದಾಗಿ ಒಳ್ಳೊಳ್ಳೇ ಗಾದೆ ಮಾತ್ನ ಹೇಳಿಕಂಡ್ ಮಾತಾಡಿ ಬಾಸೆನ ಪೋರ್ಲುನ ಸಬ್ದಗಳ ಒಳ್ಸಿಕೊಣೊಕು. ಅದ್ ಅಳ್ದ್ ಹೋಗದಾಂಗೆ ನೋಡಿಕೊಣೊಕು.

ಪಂಡ್‌ನೊವು ಗಾದೆ ಮಾತ್‌ಗಳ. ಪಳ್ಮೆಗಳ ಹೇಳಿಕಂಡ್ ಮಾತಾಡಿ ಬಾಸೆನ ಪೊರ್ಲುನ ಹೆಚ್ಚಿಸ್ತಿದ್ದೊ. ಅರೆಬಾಸೆನ ಗಾದೆಗಳ ಅದಷ್ಟ್ ಒಟ್ಟು ಮಾಡಿ. ಸಾಹಿತ್ಯ ಲೋಕಕ್ಕೆ ಪರ್ಚಯ ಮಾಡ್ವೋಕು.

ಉದಾರ್ಣೆಗೆ :

1. ಏಮೆ ಉ   ಳ್ಳಿಗೆ ಕಿಚ್ಚಿಸಿದಾಂಗೆ.
2. ಕಕ್ಕೆ ಹೇಳ್ತ್‌ಗಡ ನಾ ಎಲ್ಲರ ಹೇಲ್ ತಿಂದನೆ, ನನ್ನ ಹೇಲ್ನ ಯಾರ್ ತಿಂದವೆ?
3. ನೆರ್ದ ಮೇಲೆ ನಾಚಿಕೆ ಹೋತ್. ಹೆತ್ತ ಮೇಲೆ ಹೇಸಿಗೆ ಹೋತ್.
4. ಮಕ್ಕಳ ಮಾತ್ ಕೇಳಿ ಒಕ್ಕಲೆದ್ದ್ ಹೋದೊಗಡ.
5. "ಹಾಲ್ ಕುಡ್ದ ಮಕ್ಕಳೇ ಬೊದ್ಕುದುಲ್ಲೆ ಗಡ, ಇನ್ನ್ ಇಸ ಕುಡ್ದ ಮಕ್ಕ ಬೊದ್ಕ್‌ವೆನೋ?" ಇಂತಾ ತುಂಬಾ ಗಾದೆಗ ಒಳೊ.

ಅರೆಬಾಸಲಿ ತುಂಬಾ ಒಡ್ಡುವ ಕತೆಗಸಾ ಒಳೊ. ಅದರ್ನೂ ಒಟ್ಟು ಮಾಡಿ ಪುಸ್ತಕ ರೂಪಲಿ ಮುಂದೆನ ಮಕ್ಕಳ್ಗೆ ತಿಳ್ಕಕೆ ಇಸಿಕೊಂಬೊದು ಒಳ್ಳದಾಂತ್ ನನ್ನ ಎಣ್ಕೆ. ಇಲ್ಲರೆ ಅದೆಲ್ಲಾ ಕಾಲ ಸಂದ ಹಾಂಗ ಅಣ್ಣಾಂಗಿ ಹೋದೆ.

ಉದಾರ್ಣೆಗೆ :

1. ಚೀಯಂ ಚಿಟ್ಟಂ. ಗೋಡೆಗೆ ಲಟ್ಟಂ : ಇದರ ಒಡ್ಡಿರೆ ಉತ್ತರ = ಮೊಂಯಿಂಸಂಗೆ ನೆಗಡಿ ಬಾಕಾಕನ ಅದರ ಸಪ್ಪ್ ಮಡಿ ಚೀಯಂ–ಎಂತ ಸಿಂಟ ತೆಗ್ದ್‌ದ್ ಹಿಂದೆನೊವು ಗೋಡೆಗೆ ಉಜ್ದ್‌ತಿದ್ದೊ.
2. ಅಪ್ಪಮರಲಿ ಬೊಡ್ಡತ ಕುದ್ದುಟು : ಇದರ ಒಡ್ಡಿರೆ ಉತ್ತರ = ಹಲ್ಸಿನಕಾಯಿ.

3. ಉದ್ದಮರಲಿ ಕೆಂಪು ಸನ್ನೇಸಿ : ಇದರ ಒಡ್ಪಿರೆ ಉತ್ತರ = ಕಮ್ಮುಲಿರುವ ಹಣ್ಣಡ್ಕೆ ಕೀಲೆ.
4. ಅಕ್ಕನ ಮನೆಗೆ ತಂಗೆ ಹೋದೆ. ತಂಗೆ ಮನೆಗೆ ಅಕ್ಕಂಗೆ ಹೋಕೆ ಆದುಲೆ : ಇದರ ಒಡ್ಪಿರೆ ಉತ್ತರ = ಸೇರ್ ಮತ್ತೆ ಪಾವು.

ಹಿಂಗೆ ತುಂಬಾ ಒಡ್ಪುವ ಕತೆಗ ಸಾ ಒಳೊ. ಅದರೆಲ್ಲಾ ತಿಳ್ಕಂಡ್, ಅರೆಬಾಸೆನ ಜನಂಗಳ ಹಕ್ಕಲೆ ಕೇಳಿಕಂಡ್ ಬರ್ದ್‌ದ್ ಪುಸ್ತಕ ಮಾಡಿರೆ ಅದೆಲ್ಲಾ ಒಳ್ಳ್. ಅರೆಬಾಸೆನ ಬೆಳವಣ್ಗೆಗೆ ಸಾಯ ಆದೆ.

ಅರೆಬಾಸೆಲಿ ಕೆಲವು ಅಪೂಪ್ರದ ಪದಗ ಒಳೊ. ಅದರ ಸೇರ್ಸಿಕಂಡ್ ಬರ್ದರೆ ಬರವಣ್ಗೆನೂ ಪೋರ್ಲಾದೆ. ಓದೋವ್ಕನೂ ಕುಸಿ ಕೊಟ್ಟದೆ. ಅದ್ ಯಾವ್ದುಂತೇಳ್ರೆ–ಚಿದೆಂಗ್, ಎಡ್‌ಂಗ್, ಚಂಜಾಯಿ, ಬೊಮ್ಮಣ, ಪಡ್ಪೋಸು, ಹೊಯ್ಮಾಲಿ, ಒಟ್ಟೆ ಕೊರುಂಗು, ಕೋಂತ್ರಾಸ್ ಬುದ್ಧಿ, ಚುಂಗ್ಡಿ, ಚೊಂಯ್ಯುಟೆ, ಚೆಲ್ಯಾಣತ್ತ್, 'ತೆಕಲಿ ಬಿದ್ದ ಎಲೆ' – ಹೀಂಗೆ ಸುಮಾರ್ ಅರೆಬಾಸೆ ಪದಗ/ಪದಪುಂಜಗ ಬಾಸೆನ ಪೊರ್ಲುನ ಹೆಚ್ಚಿಸಿದೆ.

ಉದಾರ್ಣೆಗೆ : "ಚಿದೆಂಗ್" ಎಂತ ಹೇಳ್ರೆ ಎಡ್ಡಪುಡೆ. ಬೊಲ್ಪುಗೆ ಎದ್ರಿಕಾಕನ ಚಿದೆಂಗ್‌ಲಿ ಏದ್‌ಬಡ ಬಲಾ. **"ಎಡ್‌ಂಗ್"** ಎಂತ ಹೇಳ್ರೆ ಎರ್ಡ್ ನೋಡುವ ಜಾಗೆ. ಅಂವನ ಎಡ್‌ಂಗ್‌ನ ಸೆರೆಗೆ ಹೊಗು ಎಂತ ಹೇಳ್‌ವ ಪಳ್ಮೆಗ ಒಳೊ.

ಇಬ್ಬೊರು ಮೊಂಯಿಂಸರ ನೊಡುಲಿ ಬಾರೀ ಜೋಸ್ತಿ ಇದ್ದರೆ ಅದರ ಅವಿಬ್ಬೊರ ಬಾಳ ಚಂಜಾಯ್‌ಲಿ ಒಳೋಂತೇಳಿವೆ.

ಬಾಯಿಲಿ ಬಡಾಯಿ ಕೊಚ್ಚುವವರ ನಿನ್ನ ಬಾಯಿ **ಬೊಮ್ಮಣ** ಸಾಕ್‌ಂತೇಳ್ವೆ.
ಯಾವ ಕೆಲ್ಸಕ್ಕೂ ಆಗದವನ ಅಂವ ಬರೇ **ಪಡ್ಪೋಸು** ಎಂತ ಹೇಳ್ವೆ.
ಇನ್ನೊಬ್ಬರ ಮೊರ್ಳ್‌ಗೊಳ್ಳುವ ಹೆಣ್ಣ್‌ನ ಅದ್ ಬರೇ **ಹೊಯ್ಮಾಲಿ** ಹೆಣ್ಣ್‌ಂತೇಳ್ವೆ.
ಬರೇ ಸಪೂರ ಇದ್ದಂವನ, ಅಂವ **ಒಟ್ಟೆಕೊರ್‌ಂಗ್** ನಾಂಗೆ ಉಟ್ಟೊಂತೇಳ್ವೆ.
ಒಣ್‌ಂಗಿದ ಕಡ್ಡಿನಾಂಗೆ ಇದ್ದಂವನ ಅಂವ ತಿಂಬಕೆ ಇಲ್ಲದೆ **ಚೊಂಯ್ಯುಟೆ** ಕಟ್ಟಟು ಎಂತ ಹೇಳ್ವೆ.
ಕಂತ್ರಿ ಬುದ್ಧಿನ ಜನನ, ನಿನ್ನ **ಕೋಂತ್ರಾಸ್** ಬುದ್ಧಿನ ನನ್ನ ಹಕ್ಕಲೆ ತೋರ್ಸ್‌ಬಡ ಎಂತ ಹೇಳ್ವೆ.
ಚಿಲ್ಲರೆ ದುಡ್ಡುನ ನಿನ್ನ ಹಕ್ಕಲೆ **ಚುಂಗ್ಡಿ** ಹಣ ಮನಿ ಉಟ್ಟೋಂತ ಕೇಳ್ವೆ.

ಹೀಂಗೆ ಎಸ್ಟೊ ಪೊರ್ಲು ಪೊರ್ಲುನ ಅಡ್ ಮಾತ್‌ಗ ಅರೆಬಾಸೆಲಿ ಉಟ್ಟು. ಅದರೆಲ್ಲಾ ನಮ್ಮ ಬರಹಲಿ ಸೇರ್ಸಿಕಂಡ್ ಬಾಸೆನ ಬೆಳ್ಸೋಕು.

ಅರೆಬಾಸೆಲಿ ಬೆಳ್ಸೋಕಾದರೆ ಅದಸ್ಟ್ ಜನಂಗಳ್ಗೆ ತಲ್ಪುವ ಹಾಂಗೆ ಕತೆ, ಹಾಡ್‌ಗ, ಸೋಬಾನೆಗ, ನೇಜಿ ಹಾಡ್‌ಗ, ತೊಟಗಿಲ್ ಒಜ್ಜಿಕನ ಹೇಳ್ವ ಪದಗ, ಕೋಲಟ ಪದಗ ಇದರೆಲ್ಲಾ ಬರ್ಯೋದರ ಕಡೆಗೆ ಗಮನ ಇಸಿ, ಅವೆಲ್ಲಾ ಪುಸ್ತಕ ರೂಪಲಿ ಪ್ರಕಟಣೆ ಆಕೆ ಮೋಸ್ಸ್ ಮಾಡೊಕು. ಅದರ ಈಗಾಗಳೇ ಅರೆಬಸೆ ಅಕಡೆಮಿಯೊವು ಮಾಡ್ತಾ ಒಳೊ.
ಅದರೆ ಅದ್ ಅದಸ್ಟ್ ಹೆಚ್ಚ್ ಜನಕ್ಕೆ ತಲ್ಪುವಾಂಗೆ ನೋಕೊಣೊಕು.

ಅರೆಬಾಸೆಲಿ ನಾಟಕಗ, ಸಿನೇಮಗ ತುಂಬಾ ಬಂದ್‌ದ್ ಜನಂಗಳ್ ನೋಡ್ವಾಂಗೆ ಆಕು. ಆಕಾಸವಾಣಿಲಿ ಪ್ರಸಾರ ಮಾಡ್ವ ಕೆಲ್ಸ ಹುರ್ಪುಲು ಸಾಗೋಕು. ಆಗಾಗ ಅರೆಬಾಸೆ ಕವಿಗೋಸ್ಟಿ ನಡ್ಸಿ ಬರ್ಯೋವ್ಕೆ ಹುರ್ಪು ಕೊಡುಕು. ಇದನ್ನೂಸಾ ಅರೆಬಾಸೆ ಅಕಡೆಮಿಯೊವು ಮಾಡ್ತಾ ಒಳೊ. ಅರೆಬಾಸೆ ದತ್ತಿನಿಧಿನ ಮಡಿ ಬರ್ಯೋವ್ಕೆ ಇನಾಮು ಕೊಟ್ಟರೆ ಜನಂಗ ಬಿರ್ಸ್‌ಲಿ ಕೆಲ್ಸ ಮಾಡ್ವೊ.

ಅರೆಬಾಸೆ ಬೆಳ್ಯಕಾದರೆ ಅದ್ ಒಂದ್ ಜತಿನ ಮಿತಿಲಿ ಇರಿಕಾಗದ್. ಅದ್ ಒಂದ್ ಊರ್ನ ಬಾಸೆ ಆಗಿ ಬೆಳ್ಯೋಕು. ಸುಳ್ಯ ಸೀಮೆಲಿ ಹೆಚ್ಚಿನ ಎಲ್ಲಾ ಜಾತಿನ ಜನಂಗ ಅರೆಬಾಸೆನ ಸಲೀಸಾಗಿ ಮಾತಾಡ್ವೆ. ಇದ್ ಬಾಸೆ ಬೆಳ್ಯಕೆ ಒಳ್ಳೆ ಸಾಯ ಆದೆ.


ಸುರುಲಿ ಸಂಪಾಜೆ ದಿ। ಸಣ್ಣಯ್ಯ ಪಟೇಲರ ಮಂಜ ಎಸ್. ಎಸ್. ದೇವಿಪ್ರಸಾದ್ ನೋದ್ರ್ ಅರೆಬಾಸೆ ಅಕಾಡೆಮಿ ಆಕೊಂತ ಬಾರೀ ಪ್ರಯತ್ನ ಪಡ್ತದ್ರೊ. ಆ ಸಮಯಲಿ ಮಾನ್ಯ ಡಿ. ವಿ. ಸದಾನಂದ ಗೌಡ್ರು ಕರ್ನಾಟಕದ ಮುಖ್ಯಮಂತ್ರಿ ಆಗಿದ್ರೊ. ಅವು ಒಪ್ಪಿಗೆ ಕೊಟ್ರೊ. ಹಾಂಗೆ ಅಕಾಡೆಮಿ ಜಾರ್ಸಿಗೆ ಬಾತ್. ಅದ್ ಬಂದ

ಮೇಲೆ ಅರೆಭಾಷೆ ಬೆಳವಣಿಗೆ ಹುರ್ಪುಲಿ ಸಾಗಿತ್. ಡೆಲ್ಲಿ, ಬೆಂಗ್ಳೂರ್, ಮೈಸೂರ್ ನಂತಾ ನಗರಲಿ ಅರೆಭಾಷೆನ ಡೋಲು ಬಾರ್ಸಿತ್. ಹಳ್ಳಿ ಅರೆಭಾಷೆ ಜಂಬರಗ ನಡ್ತ್. ಜನಂಗ ಕಣ್ಣ್ ಬುಟ್ರೊ. ಓ...... ನಮ್ಮ ಭಾಷೆನೂ ಪೊರ್ಲುನ ಭಾಷೆ, ನಾವ್ಗನೂ ಈ ಸಮಾಜಲಿ ಒಂದ್ ಸ್ಥಾನ-ಮಾನ ಉಟ್ಟೂಂತ ಅರೆಭಾಷೆ ಜನಂಗ ಗ್ರೇಸುವಾಂಗೆ

ಈಗಾಗಳೇ ಅರೆಭಾಷೆಲಿ ಒಳ್ಳೊಳ್ಳೆ ಸಾಹಿತಿಗ ಹುಟ್ಟಿಕೊಂಡೊಳೊ. ಪಂಡ್‌ಲಿ ಸುರುಗೆ ಟಿ. ಜಿ. ಮುಡೂರು, ಭವಾನಿಶಂಕರ ಪೊದ್ದುಟ್ಟಿ, ಮತ್ತೆ ಯಶವಂತ ಕುಡೆಕಲ್ಲುನೊವು ಅರೆಭಾಷೆ ನಾಟಕ, ಪದಗಳ ಬರ್ದ್ ಹೆಸ್ರ್ ಗಳ್ಸ್‌ದೊ. ಅದರ್‌ಂದ ಮೇಲೆ ಈಗ ತುಂಬಾ ಜನಂಗ ಬರ್ಯಕೆ ಸುರು ಮಾಡ್ಯೊಳೊ.

ಅರೆಭಾಷೆ ಬೆಳ್ಸಕೆ ಮನೆಂದಲೇ ಸುರು ಮಾಡೊಕು. ಹೆಚ್ಚಿನೊವು ಅರೆಭಾಷೆ ಮಾತಾಡಿಕೆ ಹಿಂಜರ್ದವೆ. ಕನ್ನಡ, ಇಂಗ್ಲೀಷ್ ಅರೆಭಾಷೆಲಿ ಸೇರಿಕಂಡ್ ಭಾಷೆನ ಸುರ್ಪುನೇ ಬದ್ಲಾಗುಟ್ಟು ಹಾಂಗೆ ಆಕೆ ಬೊತ್ತ್. ನಮ್ಮ ಭಾಷೆ ಒಳ್ಯೋಕಾದರೆ ನವು ಮನೆಲಿ ಅರೆಭಾಷೆ ಮಾತಾಡಿ, ಮಕ್ಕಳಿಗೆ, ಪಿಳ್ಳೆಕಳ್ಗೆ ಕಲ್ಸೋಕು. ಅದಸ್ಟೆ ಅರೆಭಾಷೆನ ಸಬ್ದಗಳನೇ ಹಾಕಿ ಮಾತಾಡಿಕೆ, ಬರ್ಯಕೆ ಕಲ್ತರೆ ಭಾಷೆ ಒಳ್ದದೆ, ಬೆಳ್ದದೆ. ❍

ಅರೆಭಾಷೆ ಚುಟುಕ್‌ಗ



ಮೂಲ: ಶ್ರೀ ಕುಲ್ಲಚನ ಕಾರ್ಯಪ್ಪ ಶ್ರೀಮಂಗಲ & ಇತರರು
ಸಂಗ್ರಹ : **ಬಾಬು ಗೌಡ ಅಚ್ರಪ್ಪಾಡಿ**

೧. **ತಾತ್ಸಾರ ಸಲ್ಲದು**

ಅಪ್ಪಂಗೆ ಜರ
ಅವ್ವಂಗೆ ಕುರ
ನಂಗೆಮ್ಮೆ ಪಾರ
ಚಾಂಪಂಗೆ ದನ ಪಾರ
ನಿಮಿಗೆ ಬಾಳ ಸಸಾರ
(ಯಾವ ಬಗೆಯ ಕೆಲ್ಸನೂ ಕೀಳಲ್ಲ, ಯಾವ್ದೂ ಮೇಲಲ್ಲ - ಹಾಂಗೆ ಕೆಲ್ಸದ ಮೇಲೆ ತಾತ್ಸಾರ ಬೊತ್ತ್ ಎಂಬ ಅರ್ಥ.)

೨. **ಅಸಹಾಯಕತೆ**

ಈ ವರ್ಷ ಮಳೆಗಾಲ ಬಾಳ
ನಮ್ಮಪ್ಪ ಒಲೆ ಬುಡದಿಂದೇಳ
ಸಾಲ ಕೊಟ್ಟವೆಲ್ಲಾ ಬನ್ನಿ
ನಮ್ಮಂಗಳ ಮಣ್ಣೆ ತಿನ್ನಿ
(ಸಂಸಾರದ ಯಜಮಾನನೇ ಕಷ್ಟದಲ್ಲಿ ಇರ್ಕನ ಏನ್ ಮಾಡ್ಕೆ ಸಾಧ್ಯ? ರೈತನ ಅಸಹಾಯ ಸ್ಥಿತಿ ಇಲ್ಲಿ ಉಟ್ಟು)

೩. **ಅಳ್‌ಬ್ಯಾಡ**

ಕೊಟ್ಟ್‌ಕತ್ತಿ ಬಾಣೆಲಿ
ಕೊಂಬೋಲಗ ಕೇಳಿದೆ
ಅಳಬ್ಯಾಡ ನೀ ಕುಂಞಕ್ಕ
ದಬ್ಬಡ್ಕ ಬಾಣೆಲಿ
ದಿಬ್ಬಣ ಬಂದುಟು
ಅಳಬ್ಯಾಡ ನೀ ಸಣ್ಣಕ್ಕ
(ದಿಬ್ಬಣ ನಿರೀಕ್ಷೆಯ ಬಂಧುಗ ಮೊದೊಳಿಗೆ ಗೂಡೆನ ತಮಾಷೆ ಮಾಡ್ದು)

೪. **ಸೋಮಾರಿಗಳಿಗೆ**

ದಾಸ ಬಂದ್ ದೋಸೆ ಹೊೖತ್
ಎಂಥ ನಿದ್ದೆನೆ ?
ಕೋಳಿ ಬಂದ್
ಕೊಡ್ಡಿ ತೀಂತ್, ಎಂಥ ನಿದ್ದೆನೇ ?
(ಸೋಮಾರಿ ಮಕ್ಕ ಬೇಗ ಬೆಳಗ್ಗೆ ಎದ್ರಿಕಿಲ್ಲೆ; ಅವ್ರಿಕೆ ಸಂಬಂಧದ ಚುಟುಕ)

೫. **ಕೂಸ್‌ಗೆ ಸಮಾಧಾನ**

ಸಗ್‌ಣಿ ಕಟ್ಟೆ ಕಟ್ಟಿ
ಮೊವ್ವ ಕುಪ್ಪ ಹಾಕಿ
ಹಾಲ್ ಬೋನ ಉಂಡ್
ಮಾಮನೆಗೆ ನಡಿಮಂಜ
ಮುಂದೆ, ಮುಂದೆ
ನಾ ಬನ್ನೆ ನಿನ್ನ ಬೆನ್ನ್
ಹಿಂದೆ ಹಿಂದೆ
(ಕೂಸ್ ಹಠಮಾಡ್ಕನ ಅವನ ಅಲಂಕರಿಸಿ ಸಮಾಧಾನ ಮಾಡ್ದು)

೬. **ಸಂತೆಮಾತ್**

ನೇರಳೆ ಹಣ್ಣಾತ್
ಅಣ್ಣಂಗೆ ಹೆಣ್ಣಾತ್
ಮಲ್ಲಿಗೆ ಹೂವಾತ್
"ಮಳ್ಳಿ" ಗಂಡಾತ್
ದಿಬ್ಬಣ ಹೋಗ್ಯಾತ್
ಪಂಗ್ ತಂದಾತ್
(ಸಂತೆಲಿ ಸಿಕ್ಕ್‌ಕನ ಹಿಂಗೆ ಸಾಂಧಬಿಕರ ಮಾತ್ ಕತೆ)

ಅರೆಬಾಸೆ ಯಾಕೆ?



ಕುಂಞೇಟಿ ಶಿವರಾಮ ಗೌಡ
ಅಂಚೆ : ಕೊಲ್ಲಮೊಗ್ರ-574218
8762121694 (ವ್ಯಾಸ)

ಹವ್ಯಕ, ಕುಂದಾಪುರ ಕನ್ನಡದಾಂಗೆ ಅರೆಬಾಸೆ ಕನ್ನಡದ ಒಂದು ಉಪಬಾಸೆ. ಈ ಬಾಸೆನ ಮನೆ ಬಾಸೆ ಆಗಿ ಮಾತಾಡ್ವ ಜನ ದಕ್ಷಿಣ ಕನ್ನಡ, ಕೊಡಗು ಜಿಲ್ಲೆಲಿ ಚದ್‌ರಿ ಹೋಗೊಳೊ. ಸುಳ್ಯ ಮತ್ತೆ ಮಡಿಕೇರಿ ತಾಲೂಕಿಲಿ ಅರೆಬಾಸೆ ಮಾತಾಡ್ವ ಜನಗಳೇ ಬಹು ಸಂಖ್ಯಾತರಾಗಿ ವೊಳೊ. ಅರೆಬಾಸೆಗೆ ಸ್ವಂತ ಲಿಪಿ ಇಲ್ಲೆ ಕನ್ನಡ ಲಿಪಿ ಸಹಾಯಂದ ಬರೆದು ಓದುದು ನಡ್ದದೆ. ಮುಂದೆ ಬಾಸೆ ಬೆಳ್ವಂಗೆ ಸ್ವಂತ ಲಿಪಿ ತಯಾರಾಕ್ಕೊ ಸಾಕ್. ಬೆಂಗಳೂರು, ಮೈಸೂರು ಮತ್ತೆ ಮಂಗಳೂರಂತ ದೊಡ್ಡ ನಗರಗಳ್ಲಿ ಅರೆಬಾಸೆ ಮಾತಾಡ್ವ ಜನ ದೊಡ್ಡ ಪ್ರಮಾಣಲಿ ವೊಳೊ. ಒಂದು ಅಂದಾಜಿ ಪ್ರಕಾರ ಅರೆಬಾಸೆ ಮಾತಾಡ್ವ್ ಜನ ಹಕ್ಕಲೆ, ಹಕ್ಕಲೆ ಮೂರರ್‌ಂದ ನಾಲ್ಕ್ ಲಕ್ಷ ಇರ್ವೊಂತ ಕಂಡದೆ.

ಅರೆಬಾಸೆನ ಉಗಮ ಯಾಗಂತ ಹೇಳ್ಕೆ ಸಾಧ್ಯ ಇಲ್ಲೇ. ಈ ಬಾಸೆ ಬೆಳ್ದ್ ಬಂದ ಬಗ್ಗೆ ನಮ್ಮ ಸಮಾಜಲಿ ಯಾವುದೇ ಪುರಾವೆಗ ಸಿಕ್ಕುದಿಲ್ಲೆ. ತಜ್ಞರ ಪ್ರಕಾರ ಒಂದು ಪ್ರದೇಸಲಿ ವಾಸ ಮಾಡ್ವ ಜನ ನಮ್ಮ ವ್ಯವಹಾರಕ್ಕೆ ಬೇಕಾಗಿ ಒಂದು ಬಾಸೆ ಮಾತಾಡ್ಕೆ ಸುರು ಮಾಡ್ವೆ. ಆ ಬಾಸೆ ಮುಂದೆ ಕಾಲ ಕಳ್ದಂಗೆ ಬೆಳ್ದ್ ಈಗನ ಹೊಸ ರೂಪ ಪಡ್ದುಟುಂತ ಹೇಳ್ವೆ. ಕನಿಷ್ಠಂತ ಹೇಳೊತ್ರ ಒಂದು ಹೊಸ ಪ್ರಬೇದ ಬೆಳ್ದ್ ಬಾಕ ಐನೂರು ವರ್ಷ ಅದ್ದೊತ್ರ ಬೇಕುಂತ ಭಾಷಾ ತಜ್ಞರ ಅಬಿಪ್ರಾಯ.

ಅರೆಬಾಸೆ ಬರೇ ಆಡ್ ಮಾತಿನ ಹಂತಲಿ ಇರ್ದ್ ಕಾರಣ ಬೇರೆ ಬಾಸೆಗಳ ಸಂಪರ್ಕಂದ ಹೊಸ ಹೊಸ ಶಬ್ದಗಳ ಪ್ರಯೋಗ ಕಂಡ್ ಬಂದದೆ. ಇದ್ ಎಲ್ಲಾ ಬಾಸೆಗಳ್‌ಲಿ ನಡೆವ ಪ್ರಕ್ರಿಯೆ. ಈಗ ಬಾರಿ ಪ್ರಚಾರಲಿರುವ ಇಂಗ್ಲಿಸ್ ಬಾಸೆ ಐನೂರ್ ವರ್ಸಕೆ ಹಿಂದೆ ಇಂಗ್ಲೇಂಡಿಲೇ ಬಾರಿ ಕೆಳ ಮಟ್ಟಲಿ ಇತ್ತ್.

ಒಂದು ಬಾಸೆ ಬೆಳೆಕೆ ಅದರ ಮನೆ ಮಾತಾಗಿ ಬಳ್ಸುವ ಜನಗಳ ಮೇಲೆ ಜವಾಬ್ದಾರಿ ಬಿದ್ದದೆ. ಬಾಸೆ ಬೆಳೆದು ಮತ್ತೆ ಅದರ ಅಳಿವು ಜನಗಳ ಕೈಲಿ ವುಟ್ಟು. ಅತಿರೇಕದ ಇಂಗ್ಲಿಸ್ ಹುಚ್ಚಿಂದ ಅರೆಬಾಸೆ ಸೇರ್‍ದಂಗೆ ಸಣ್ಣ ಸಣ್ಣ ಬಾಸೆಗ ಅಳ್ದ್ ಹೋವ ಹೆದ್ರಿಕೆ ಕಂಡದೆ. ಆ ಕಾರಣಂದಾಗಿ ಆಳಿವಿನ ಹಕ್ಕಲೆ ಇರ್ದ್ ಅರೆಬಾಸೆನ ಉಳ್ಸಿ ಬೆಳ್ಸ್‌ಕೆ ರಾಜ್ಯ ಸರ್ಕಾರ ಅರೆಬಾಸೆ ಸಂಸ್ಕೃತಿ ಮತ್ತೆ ಸಾಹಿತ್ಯ ಅಕಾಡಮಿ ಸ್ಥಾಪನೆ ಮಾಡಿ ಪ್ರೋತ್ಸಾಹ ಕೊಟ್ಟುಟು. ಆ ಸಮಯಲಿ ಶ್ರೀ ಡಿ. ವಿ. ಸದಾನಂದ ಗೌಡ್ರು ರಾಜ್ಯದ ಮುಖ್ಯಮಂತ್ರಿ ಆಗಿ ಅಧಿಕಾರಲಿದ್ದ ಕಾರಣ ಬಾರಿ ಹಿಂದೆಂದ ಮಾಡ್ದ ಪ್ರಯತ್ನ ಫಲಕಾರಿ ಆತ್. ಒಂದು ಬಾಸೆ ಮಾತಾಡುವ ಸಂಪರ್ಕ ಸಾದನ ಮಾತ್ರ ಅಲ್ಲ. ಅದ್ ಒಂದ್ ಪ್ರತ್ಯೇಕ ಸಂಸ್ಕೃತಿನ ಜೀವಂತ ಲಕ್ಷಣಂತ ಹೇಳ್‌ಕ್. ಪ್ರಪಂಚಲಿ ಸಣ್ಣ ಪುಟ್ಟ ಸಾವಿರಾರ್ ಬಾಸೆಗೆ ಇಂದಿನ ಕಾಲಲಿ ಕಣ್ಮರೆ ಆಗ್‌ತಾ ವೊಳೊ.

ಅರೆಬಾಸೆ ಸಂಸ್ಕೃತಿ ಮತ್ತೆ ಸಾಹಿತ್ಯನ ಉಳ್ಸಿ ಬೆಳ್ಸ್‌ಕೆ ನಾವೇನ್ ಮಾಡಕುಂತ ಹೇಳ್ವ ಪ್ರಶ್ನೆ ನಮ್ಮ ಎದ್ರುಗೆ ನಿತ್ತುಟು. ಒಂದು ಭಾಷೆನ ಅಳಿಸಿ ಹಾಕುದು ತುಂಬಾ ಸುಲಬದ ಕೆಲ್ಸ. ಕಟ್ಟಿ ಬೆಳ್ಸಿಕೆ ತುಂಬಾ ಕಷ್ಟ. ಆ ಕೆಲ್ಸಕೆ ತುಂಬಾ ಸಮಯ ಬೇಕು. ನಾಲ್ಕೈದ್ ವರ್ಸಲಿ ಅದರ ಬೆಳವಣಿಗೆ ಗೊತ್ತಾಗದ್. ನಮ್ಮ ಅರೆಬಾಸೆನ ಉಳ್ಸಿ ಬೆಳ್ಸ್‌ಕೆ ಈಗ ಒಂದು ಸುವರ್ಣಾವಕಾಸ ಬಂದುಟು.

ಸರ್ಕಾರದ ಕಡೆಂದ ಸ್ಥಾಪನೆ ಆದ ಅಕಾಡಮಿ ಒಂದು ಕಡೆ ಕೆಲ್ಸ ಮಾಡ್ತಾ ವುಟ್ಟು. ಬಾಸೆ ಮಾತಾಡ್ವ ಜನ ಈ ಕೆಲ್ಸಕ್ಕೆ ಕೈ ಜೋಡ್ಸಿತ್ಲಾರ್ ಗುರಿ ಮುಟ್ಟಿಕೆ ಕಷ್ಟ. ಒಂದ್ ಬಾಸೆನ ಮಾತಾಡ್ಕೆ ಕಲೆದು ಬಾರಿ ಸುಲಬ. ಓದುದು.

ಬರೆಮು ಮಾಡ್ಕೆ ಹನಿಯು ಹೆಚ್ಚ್ ಪ್ರಯತ್ನ ಮಾಡೊಕು. ಅರೆಬಾಸೆ ಓದಿಕೆ ಕಷ್ಟಂತ ಕೆಲವು ಜನ ಹೇಳ್ವೆ, ಆದರೆ ಸಾಮಾನ್ಯ ಜನಕ್ಕೆ ದೊಡ್ಡ ಉಪಯೋಗಕ್ಕೆ ಬೇಡದ ಇಂಗ್ಲಿಸ್‌ನ ಕಲಿಕೆ ಬಾವ ಕಷ್ಟ ಅವ್ರುಕೆ ಗೊತ್ತಿರ್ದುಲ್ಲ.

ಅರೆಬಾಸೆನ ಅಭಿವೃದ್ಧಿ ಪಡ್ಡಿಕೆ ಗ್ರಾಮ ಮಟ್ಟಲಿ ಅರೆಬಾಸೆ ಸಂಸ್ಕೃತಿ ಮತ್ತೆ ಸಾಹಿತ್ಯ ಸಮಿತಿಗಳ ರಚನೆ ಮಾಡೊಕು. ಪ್ರಾಥಮಿಕ ಮತ್ತೆ ಹೈಸ್ಕೂಲು ಮಕ್ಕಳಿಗೆ ಸಾಂಸ್ಕೃತಿಕ ಮತ್ತೆ ಸಾಹಿತ್ಯನ ಬೆಳ್ಸುವ ಕಾರ್ಯಕ್ರಮ ಮಾಡ್ರೆ ಒಳ್ಳೆದ್. ಆಗಾಗ ಗ್ರಾಮ ಮಟ್ಟ, ಹೋಬಳಿ, ತಾಲೂಕು, ಜಿಲ್ಲೆ, ರಾಜ್ಯ ಮಟ್ಟಲಿ ಸ್ಪರ್ಧೆಗಳ ನಡ್ಸಿ ಎಳೆ ಮಕ್ಕಳಿಗೆ ಪ್ರೋತ್ಸಾಹ ಕೊಟ್ಟರೆ ಮುಂದೆಗೆ ಪ್ರಯೋಜನ ಆದೆ.

ಅರೆಬಾಸೆ ಸಂಸ್ಕೃತಿಲಿ ಕೆಲವು ಕಾಲಬಾಹಿರ ಸಂಪ್ರದಾಯಗ ಸೇರಿ ಹೋಗೊಳೊ. ಹಿಂದೆನ ಕಾಲದ ಒಂದು 'ಪ್ರಿಮಿಟಿವ್' ಸಮಾಜಲಿ ಆಚರಣೆ ಮಾಡ್ತ ಕೆಲವು ಸಂಪ್ರದಾಯ ಆಚರಣೆಗ ದೇಸದ ಕಾನೂನಿಗೂ ವಿರುದ್ಧ ಕಂಡದೆ. ಉದಾರಣೆ, ಪ್ರಾಣಿ ಬಲಿನ ನಾವು ನಡ್ಸುದು ಎಷ್ಟ್ ಸರಿಂತ ಸಮಾಜಲಿ ಚರ್ಚೆ ನಡ್ದ್ ಸೂಕ್ತ ತೀರ್ಮಾನ ತಕಂದು ಒಳ್ಳೆದ್.

ಬಹಳ ಪ್ರಾಮುಖ್ಯ ವಿಷಯಂತೇಳ್ರೆ, ಅರೆಬಾಸೆ ಸಂಸ್ಕೃತಿ ಮತ್ತೆ ಸಾಹಿತ್ಯ ಅಕಾಡೆಮಿಗೆ ಅಧ್ಯಕ್ಷರ ಮತ್ತೆ ಸದಸ್ಯರ ನೇಮಕ ಮಾಡ್ತ ಸಮಯ ರಾಜಕೀಯ ಪಕ್ಷದ ನೆಲೆಲಿ ಮಾಡ್ದು ಸರಿ ಕಾಂಬೊದಿಲ್ಲೆ. ಎಲ್ಲಾ ಪಕ್ಷಗಳ್ಲಿ ಸಂಸ್ಕೃತಿ ಸಾಹಿತ್ಯದ ಬಗ್ಗೆ ಆಸಕ್ತಿ ಇರ್ವ ವ್ಯಕ್ತಿಗಳ ಮಾತ್ರ ನೇಮಕ ಮಾಡ್ರೆ ಒಳ್ಳೆಕೆಲ್ಸ ನಡೆಕೆ ಸಾಧ್ಯ. ಬಾಸೆ ವೊಳ್ದರೆ, ಸಂಸ್ಕೃತಿ ವೊಳಿಕೆ ಸಾದ್ಯಂತ ಹೇಳ್ವ ಮಾತ್ ಯಾಗೋಳು ನೆನ್‌ಪುಲಿ ಇಸಿಕಂಡ್ ಕೆಲ್ಸ ಮಾಡ್ರೆ ಜಯ ಸಿಕ್ಕುದು ಕಂಡಿತ.

ಹಳೆ ಪದಗಳ ತಿಳ್ಕಂಕು

1. ಸೊಯಿ – ಬುದ್ಧಿ, ಜ್ಞಾನ
2. ತಳಕಟ್ಟ್ – ಅಡಿಪಾಯ
3. ಗುಪ್ಪಿ – ಕೊಂಡಿ, (Button)
4. ಇರ್ದರ – ಪುನಃ, ಎರಡನೆ ಸಲ
5. ಪೊಟುವ – ಹೆಚ್ಚು, X ಹಂಞ; (ಹನೀಸ್) ಒಸಿ
6. ಚೊಟ್ಟಕ್ಕಂದು – ಅಂಟಕೊಳ್ಳುವುದು, ಓಸಿ
7. ತಪಾವತ್ – ತಪ್ಪು, ಪ್ರಮಾದ
8. ಅಪ್ಪಿಯ – ಚಿಕ್ಕ ಮಕ್ಕಳನ್ನು ಸಂಭೋದಿಸುವ ಪದ
9. ವಜಯ – ಹೋಲಿಕೆ, ಸಾಮ್ಯತೆ
10. ಚೆಟ್ಟ್ – ಖಾಲಿ
11. ಚಿಯ್ಪು – ಕೊಚ್ಚುವುದು, ಸಣ್ಣ ಸಣ್ಣ ತುಂಡು ಮಾಡುವುದು
12. ಅರ್ಪಾಲೆ – ಮೇಲಿನ ಸೆಲ್ಲ್
13. ಪತ್ತಂಡೆ – ತೇಪೆ
14. ತಬ್ರುಸು – ಮೆಲ್ಲ ಹುಡುಕು
15. ಜೊಂಯ್ಕ – ನಿಂತು ಹೋಗುವುದು, ಕೆಟ್ಟು ಹೋಗುವುದು
16. ಬಗ್ ತಾರ – ಒಳ್ಳೆಯ ಮಾತಿನಲ್ಲಿ
17. ಸೂನೆ – ಕೆಡುಕು, ನುರೆ
18. ಮೊಂದ್ರಿ – ಚಾಪೆ
19. ವಾಯರ – ಕೆಟ್ಟ ಬುದ್ಧಿ
20. ಅಕ್‌ಲ್ – ಬುದ್ಧಿ
21. ಆದ್ರಸ್ – ಆಧಾರ ನೀಡು
22. ಓಲ್ಬು – ಆಲಿಸು
23. ಮುಗ್ಗ್ – ಹಳಸು, ವಾಸನೆ
24. ದೊಡ್ಡಿತ್ – ದೊಡ್ಡ
25. ಬೆಂಗ್ರನೆ – ವಯ್ಯಾರದ ಬೆಡಗಿ (ಮಜಣೆ)
26. ಪೊಂದು – ನಿಧಾನ ಕೆಲಸಮಾಡು
27. ಹೆಟ್ಬು – ತೂರಿಸು

ಮೊದ್ವೆ ಮನೆ



– ಎನ್. ಸುಕುಮಾರ ಗೌಡ

ಇದ್ ಸುಮಾರ್ 70–75 ವರ್ಷಗಳ ಹಿಂದೆನ ವಿಚಾರ. ನಾ ಸಣ್ಣಂವಾಗಿರ್ಕನ ಆಡಿ ಬೆಳದದ್ದೆಲ್ಲಾ ನನ್ನ ಅಜ್ಜನ ಮನೆ ಗೂನಡ್ಕ ಪೆಲತ್ತಡ್ಕಲಿ. ಅಂದರೆ ನನ್ನವ್ವನ ತವರು ಮನೇಲಿ. ಅದೊಂದ್ ಕೂಡುಕುಟುಂಬ. ಮಕ್ಕ ಮರಿ ಎಲ್ಲಾ ಸೇರಿ ಸುಮಾರ್ ಹತ್ತ್ ಅರ್ವತ್ ಜನ ಇದ್ದ ಕುಟುಂಬ. ಮನೆ, ಜಾಲ್ ಕೊಟ್ಟೆ ಎಲ್ಲಾ ಮುಳಿ ಮಾಡಿದ್ದೇ ಆದರೂ ಮನೆ ಮುಂದೆನ ವಿಷ್ಣುಮೂರ್ತಿ ದೈವದ ಚಾವಡಿ ಮಾತ್ರ ಹಂಚ್‌ದ್. ಏನೋ ಹೇಳಿಕೆ ಹೋಗಿ ಏನೆಲ್ಲಾ ಆತ್. ಆಗನ ಕಾಲಲಿ ಮೊದ್ವೆ ಹೇಂಗೆ ಆತಿತ್ತ್ ಅಂತ ನಾ ಹೇಳಕಾದ್.

ಮೂರ್ ವರ್ಷಕ್ಕೊಮ್ಮೆ ದೈವಗಳಿಗೆ ಕೊಡುವ ಕ್ರಮ ಇತ್ತ್. ಆಗ ಅದ್ ಹರ್ಸಾಯ (ಹರಿಸೇವೆ)ಂದ ಶುರು ಆಗ್‌ತಿತ್. ಅದರೊಟ್ಟಿಗೆ ಮೊದ್ವೆ ಜಂಬರನೂ ಸೇರ್‍ಕೊಂಬತಿತ್. ಮೊದ್ವೆ ಅಂದರೆ ಹತ್ ಕುಟುಂಬ, ಹದಿನೆಂಟ್ ಗೋತ್ರ, ನೆಂಟರಿಷ್ಟರ್, ಊರ್‍ನ ಜನ ಒಟ್ ಸೇರುವ ಸಂದರ್ಭ ಆಗಿತ್. ಹೆಣ್ಣು ನೋಡ್ದು, ಸಂಧಾನ, ವೀಳ್ಯಶಾಸ್ತ್ರ ಎಲ್ಲನ ನಾಲ್ಕ್ ಜನ ಹಿರಿಯರಿದ್ದೇ ನಿರ್ಧರಿಸುತ್ತಿದ್ದೊ. ಬಳಿ ನೋಡಿ ಇಂಥಾ ಗಂಡಿಗೆ ಗೂಡೆನ ಕೊಡ್ದು ಅಂಥಾ ನಿಶ್ಚಯ ಆದ ಮೇಲೆ ವೀಳ್ಯ ಬದಲಾಯಿಸುವ ಕ್ರಮ ಇತ್ತ್. ಆದರೆ ಮೊದ್ವೆ ಗಂಡ್ ಮತ್ತ್ ಹೆಣ್ಣ್ ಒಟ್ಟು ಸೇರಿ ಮಾತಾಡ್ಕೊಂಬ ಕ್ರಮ ಇತ್ಲೆ.!

ಹಳೆ ಕಾಲದ ಮೊದುವೆ ಸುರಾದೇ ಕೊಲೆಗಳಿಗೆ ಇಸುವ ಮೂಲಕ ಅಂತಾಳ್ತೆ ಗುರುಕಾರ್ನೂರಿಗೆ ನೀರ್‌ದೋಸೆ ಮೇಲೆ ಕೋಳಿನ ಕಣ್‌ಕರ್‍ಟ ಇಕ್ಕಿ ಪ್ರಾರ್ಥನೆ ಮಾಡಿ ಹಿರಿಯರ ಕಾಲ್ ಹಿಡ್ದ್ ಆಶೀರ್ವಾದ ತಕಂದು. ಮೊದ್ವೆ ನಡೆಕೋಂತಿದ್ದರೆ ಊರು ಗೌಡ ಮತ್ ಮಡ್ತ್ಯೊಳ ಅಲ್ಲಿ ಮುಖ್ಯವಾಗಿ ಇರುತ್ತಿದ್ದೊ. ಅವಿಬ್ಬರು ಇಲ್ಲದೆ ಮೊದ್ವೆ ನಡೆತಿತ್ತಿಲೆ, ಅದ್ ಊರಿನ ಕಟ್‌ಕಟ್ಟೆ. ಕರ್ಮ್‌ನ ಚಪ್ಪರ ವಾರದ ಹಿಂದೇನೇ ತಯಾರಾಗ್‌ತಿತ್ತ್. ಒಮ್ಮೊಮ್ಮೆ 4–5 ಜೋಡಿ ಕೊಡುದು ತಾಮ ಇರ್‌ತಿತ್. ಮೊದ್ವೆ ಹಿಂದಿನ ದಿನನೇ ಮಾಡ್ತ್ಯೋಳ ಬಂದ್ ಬಿಳಿ ಬಟ್ಟೆಲಿ ಚಪ್ಪರಕ್ಕೆ ಮೇಲ್ಕಟ್ ಕಟ್‌ತ್ತಿತ್.

ಮೊದ್ವೆ ದಿನ ಗಂಡನ ದಿಬ್ಬಣ ಬರುವ ವಾಲಗದ ದನಿಕೇಳುದು. ಗರ್ನಾಲ್ ಹೊಡ್ಕೊಂಡು ದಿಬ್ಬಣ ಬಾದು. ಇತ್ತ ಹೆಣ್ಣಿನ ಕಡೆಯಿಂದಲೂ ಗರ್ನಾಲ್ ಹೊಡೆತಿದ್ದೊ. ಈ ಕಡೆಯೂ ವಾಲಗದವು ಅಥವಾ ಮಾಪ್ಳೆಗಳ ಜೀನಿಯೂ ಸುರುಮಾಡುತ್ತಿದ್ದೊ. ಮೆಟ್ಲ ಹಕ್ಲೆ ಕಡಾಯಿಲೊ, ಹಂಡೆಲೋ ದಿಬ್ಬಣದವಕ್ಕೆ ಕೈಕಾಲು ತೊಳಕೆ ತುಂಬಾ ನೀರು ತುಂಬಿರ್‌ತಿತ್.

ಬಂದ ದಿಬ್ಬಣದ ಕಡೆಯವ್ರುಕ್ಕೆ ಪಾನಕ ಕೊಟ್ಟ್ ಉಪಚಾರ ಆದಮೇಲೆ ಊಟಕ್ಕೆ ತಯಾರಿ ಆಗ್ತಿತ್. ಬಂದ ನೆಂಟರಿಗೆಲ್ಲಾ ಊಟ ಆದ ಮೇಲೆ ಎಣ್ಣೆ ಅರಶಿನ ಕಾರ್ಯಕ್ರಮ ನಡೇತಿತ್. ಆ ಮೇಲೆ ಹೆಣ್ಣಿಗೆ ಮೀಯಿಸುದು. ಮೀಂದ್ ಆದ ಮೇಲೆ ಮದರಂಗಿ ಶಾಸ್ತ್ರ ನಡೆತಿತ್ತ್. ಆ ಹೊತ್ತಿಗೆ ಮುತ್ತೈದೆಯರ್ ಶೋಭಾನೆ ಹಾಡುತಿದ್ದೊ. ಆ ಮೇಲೆ ಗಂಡ್‌ನ ಕಡೆಯವ್ರು ತಂದ ಬಣ್ಣ ಬಂಗಾರ ಅಂದರೆ ಸೀರೆ ಒಡವೆಗಳಿಂದ ಹೆಣ್ಣ್‌ನ ಶೃಂಗಾರಆಗಿತ್. ಮೊದೋಳಿಗೆಗೆ ಕಳಸಕನ್ನಡಿ ಹಿಡಿಯಂವ ಗೂಡೆ ಒಂದು ಇದ್ದಾಂಗೆ ಮೊದು ಮಂಜಂಗೆ ಅಡಿಕುರುಂಟು ತಾ ಒಬ್ಬ ಕೊಡೆ ಹಿಡಿಯುವ ಇರ್‌ತಿತ್. ಸಾಮಾನ್ಯವಾಗಿ ಅಂವ ಮೊದು ಮಂಜನ ಬಾವ ಆಗಿರ್‌ತಿತ್. ಯಾಕೋ ಏನೋ ಗೊತ್ತಿಲೆ 'ಧಾರಾಕಾರ್ಯಕ್ರಮ' ಹೆಚ್ಚಾಗಿ ರಾತ್ರೆ ಹೊತ್ತೆ ನಡೆತಿತ್ತ್. ಮೊದೋಳಿಗೆನ ಅಪ್ಪನೇ ಎರೆದು ಕೊಡುವಕ್ರಮ. ಅಪ್ಪ ಇಲ್ಲದಿದ್ದರೆ ಕುಟುಂಬದ ಯಜಮಾನ ಧಾರೆ ಎರೆಯುವ ಕ್ರಮ. ವಿಧವೆಯರ್ ಧಾರಾಕಾರ್ಯಕ್ರಮಲಿ ಭಾಗವಹಿಸುತಿತ್ಲೆ.

ಮಾರ್‍ನೆ ದಿನ ಬೊಳ್ಳಿಗೆ ಓಲೆ ಬೆಲ್ಲದ ಕಣ್ಣ ಕಾಪಿ ಚಾ, ತಿಂಡಿನೂ ಇರ್‌ತಿತ್. ಆ ಮೇಲೆ ಹಗಲ್ ಹೊತ್ತ್ ನೆಂಟರಿಷ್ಟರೆಲ್ಲಾ ಬಾಕ ಶುರು. ಮೊದ್ವೆ ಮನೇಲಿ ಶೇಷೋಪಚಾರಕ್ಕೆ ತಯಾರಿ ಆಗ್ತಿತ್. ಊರು ಗೌಡ ಇಂಥಾ ಗಂಡ್‌ಗೆ ಇಂಥಾ ಹೆಣ್ಣನ ಕೊಡುವ ಕಾರ್ಯಕ್ರಮಕ್ಕೆ ನಾಂದಿಯಾಗಿ " ಹತ್ತ್ ಕುಟುಂಬ ಹದಿನೆಂಟ್ ಗೋತ್ರ..... "ಅಂತಾ ಗಟ್ಟಿಯಾಗಿ ಕರ್ದ್ ಹೇಳಿ, ಗಂಡ್ ಹೆಣ್ಣನ ಶೇಷೋಪಚಾರಕ್ಕೆ ಕುದ್ರುಸುವ ಕ್ರಮ. ಆಗೆಲ್ಲಾ ಫೋಟೋ

ತೆಗೆಯುವ ಕ್ರಮನೇ ಇತ್ತ್. ನೆಂಟರಿಷ್ಟರ್ ಒಟ್ಟೊಟ್ಟಾಗಿ ಬಂದ್ ಮೊದುಮಕ್ಕಳಿಗೆ ಉಡುಗೊರೆ, ಹೆಚ್ಚಾಗಿ ನಗದು ಕೊಡುದುಕ್ರಮ. ನಗದು ಕೊಟ್ಟದರ ಊರು ಗೌಡ ಗಟ್ಟಿಯಾಗಿ ಕರ್ದ್ ಹೇಳುವಕ್ರಮ ಇತ್ತ್. ಅಂದರೆ ಕೊಟ್ಟವನ ಮನೆ ಹೆಸ್ರ್, ಅವನ ಹೆಸ್ರ್, ಕರ್ದ್ ಹೇಳಿ.....½ ರೂಪಾಯಿ, 1 ಪಾವಲಿ, 2ಪಾವಲಿಂತ ಹೇಳ್ದು ವಾಡಿಕೆ. ಇನ್ನೊಟ್ಟ್ ಅದರ ಬರ್ಕೊಂತಿತ್. ಯಾಕಂತೇಳಿರೆ, ಮುಯ್ಯಿಗೆ ಅಂತಾ ಶೇಸೆ ಹಾಕಿದ ಅಕ್ಕಿ ಸುಮಾರ್ ಒಂದು ಮುಡಿ ಆದು. ಅದು ಎಲ್ಲಾ ಮೊಡ್ಯೋಳಂಗೇ.

ಶೇಷೋಪಚಾರ ಆದ ಮೇಲೆ ಊಟೋಪಚಾರ. ಮನೆ ಯಜಮಾನ ಸಭೆಗೆ ಊಟಕ್ಕೆ ಎದ್ರೊಕ್ ಅಂಥಾ ನೀರುಕೊಟ್ಟ ಮೇಲೆ ಊಟ. ಅದೇ ಚಪ್ಪರದಡೀಲಿ ಕಮ್ಮ ದಂಪೆಗಳ ಪಂಕ್ತಿ. ಉಂಬಕೆ ಬಾಳೆ ಎಲೆ. ಮಕ್ಕಳಿಗೆ ದೊಡ್ಡವು ಕಿಳ್ಕಟ್ಟ ಕೊಡುದು. ಅಂದರೆ ಪಾಯಸ ಅತ್ತ ಇತ್ತ ಹರಿದು ಹೋಗದ ಹಾಂಗೆ ಕಿಳ್ಳಿಕಟ್ಟುದು.

ಎರಡೋ ಮೂರು ಸಾಲಿನವು ಊಟ ಆದ ಮೇಲೆ, ಅಂದರೆ ಮಧ್ಯಾಹ್ನದ ಮೇಲೆ ಹೆಣ್ಣ ಇಳಿಸಿ ಕೊಡುವ ಕಾರ್ಯಕ್ರಮ. "ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು ನಿಮ್ಮ ಮಡಿಲೊಳಗೆ ಇರಿಸಲು ತಂದಿರುವೆವು" ಎಂದು ಭಾವಪೂರ್ಣವಾಗಿ ಹಾಡ್‌ಕನ ಹೆಚ್ಚಿನ ಹೆಣ್ಮಕ್ಕ ಹಾಂಗೆ ಮನೆಯವು ಅಳುದು ಸಾಮಾನ್ಯ ಸಂಗತಿಯಾಗಿತ್ತ್. ಆ ಮೇಲೆ ಹೆಣ್ಣ್‌ನ ಕರ್ಕೊಂಡು ದಿಬ್ಬಣ ಗಂಡ್‌ನ ಮನೆಗೆ ಹೊರ್ಡ್‌ತಿತ್ತ್

ಆಮೇಲೆ ಒಂಬತ್ತನೆ ದಿನಲಿ ಗಂಡ್‌ನ ಮನೆಂದ ಹೆಣ್ಣ್‌ನ ಮನೆಗೆ ತುಪ್ಪ ತರುವ ಕ್ರಮ ಇರ್ತಿತ್. ಇನ್ನ್ ಇದರ ಜೊತೆಲಿ ದೈವಗಳಿಗೆ ಕೊಡುವ ಕ್ರಮ ಇದ್ದರೆ ಆತ್ –ಊರಿಗೇ ಊರೇ ಸಡಗರ, ಸಂಭ್ರಮ!

ಈಗ ಅದೆಲ್ಲ ಬರೇ ನೆಂಪು ಮಾತ್ರ. ಇಂದ್ ಜನರಲ್ಲಿ ಕಂಡಾಬಟ್ಟೆ ದುಡ್ಡು ತುಂಬಿಟು. ದುಡ್ಡು ತುಂಬಿದೊವು ಆಡಂಬರಲ್ಲಿ ಮೊದ್ವೆ ಮಾಡ್ತಿರೆ, ಇಲ್ಲದವೂ ಇದ್ದವರ ಹಾಂಗೆ ಖರ್ಚು ಮಾಡಿ ಸಾಲ ಸೋಲಕ್ಕೆ ಬಿದ್ದವೆ. ಮನುಷ್ಯನಲಿ ದುಡ್ಡು ಹೆಚ್ಚಿದಷ್ಟೂ ಮನಸ್ ದಡ್ಡ್ ಕಟ್ಟುತ್ತಾ ಬಂದದೆ. ಇಂದ್ ಎಲ್ಲಾ ಆಡಂಬರದ ಕಾಲ ಆಗುಟು.

ಒಮ್ಮೆ ನೆಗಾಡಿ



ಯನ್. ಕೆ. ಧನಲಕ್ಷ್ಮಿ ಕನಕಮಜಲು

ಕೆಂಪ: (ಹೊರೆಗೆಂದ) ಏಯ್ ಕೆಂಪಿ, ನಿನ್ನೆ ನಿನ್ನ ಹೆಣ್ಣ್ಳಿ ಕೊಡುಕನ
ನೆತ್ತಿ ಎಣ್ಣೆ ಆರ್‌ತಿಲೆ, ಕಡೆ ಹಲ್ ಬಾತ್‌ಲೇ ಅಂತ ಹೇಳ್ದೊಲ್ಲ
ಅದು ಹೌದೋ ಅಲ್ಲೋ ಅಂತ ತಿಳ್‌ಕೊಣಕು. ಅಲ್ಲಾಂತಾದ್ರೆ
ಆ ಹೇಳ್ದವರ ಕರ್ದನೆ !
ಕೆಂಪಿ: (ಒಳಗೆಂದ ದೇವ್ರುರ ಮೇಲೆ ಭಾರ ಹಾಕಿ ತಲೆಗೆ ಪದನಾ ಎಣ್ಣೆ ಹಾಕಿ)
ಓಯ್, ಇಂದನಿ ಬಂದೆ..... ಏಕೆ?
ಕೆಂಪ: ನೋಡ ನಿನ್ನ ತಲೆ–ಸರಿ, ನೆತ್ತಿ ಎಣ್ಣೆ ಆರ್‌ತಲೆ !
ನೋಡ ನಿನ್ನ ಬಾಯಿ–ಸರಿ, ಕಡೆ ಹಲ್ಲ್ ಬಾತಿಲೆ !
(ಕಡೆ ಹಲ್ಲ್ ಹುಳತಿಂದ್‌ಹೋಗುಟು !)
ಕೆಂಪಿ: ಸರಿ ನಾ?
ಕೆಂಪ: ಸರಿ, ಸರಿ ಪಾಪದ ಗೂಡೆ ನೀ!

ಕೂಡ್ಸುವ–ಕಳಿವ ಆಟ!



ಬರೆದವರು. **ಪಿ. ಜಿ. ಅಂಬೆಕಲ್,**
ವಿಶ್ವಾಸ ಡೆಫೋಡಿಲ್ಸ್
ಬೆಂಗಳೂರು.

ಕಣ್ಣ್ ಕುಕ್ಕುವ ಬೆಳ್‌ಕ್‌ನೊಟ್ಟಿಗೆ ಧಡ್ ದಢಾಲ್‌ಂತ ಸಿಡ್ಲ್ ಬೊಡ್ದ್! ಈ ಬಟ ಬಟ ಮಧ್ಯಾಹ್ನ ಕರಿಕೂಟ ಕತ್ತಲ್ ಆಗುಟ್ಟು. ಬೊಳ್ಳಂದಲೇ ಮೋಡ ಮುಚ್ಚಿದ ಬಾನ್‌ನ ಒಮ್ಮೆ ನೋಡಿ, ಬೇಡ ಹೋಗ್‌ಬೇಡೀಂತ ಎಷ್ಟು ಬೊಡ್‌ಕಂಡ್ರೂ ನನ್ನ ಮಾತ್‌ನ ಕಿವಿ ಮೇಲೆ ಹಾಕಿಕಣದೆ ಹೆಗ್‌ಲಿಗೆ ಕಂಬ್ಳಿಕುಪ್ಪೆನ ಏರ್ಸಿಕಂಡ್ ಹೊರ್‌ಟೇ ಬುಟ್ಟತ್ ಕಾಳಪ್ಪ. ಹೆಸ್ರ್ ಮಾತ್ರ ಕಾಳಪ್ಪ; ಬೆಳ್ಳ ಬೆಳ್ಳಂಗೆ ಸುರಿ ಹೂವ್ನಂಗಿದ್ದ ಗಂಡಂಗೆ ಕಾಳಪ್ಪಂತ ಯಾವ ಮಹಾತ್ಮ ಹೆಸರ್ ಮಡ್‌ಗಿದನೊಂತ ಮನ್‌ಸಿನೊಳಗೇ ನಗಾಡ್ತ್ ಪೊನ್ನಮ್ಮ. ಛೇ ಇದೆಂತ ಮಳೆ; ಬಾನೇ ಒಟ್ಟೆ ಆದಾಂಗೆ ಒಂದೇ ಸಮನೆ ಸುರಿತಾ ಉಟ್ಟು. ಮಳೆ ನಡಲಿ, ಈ ಸಿಡ್ಲ್ ಬೊಡಿದು ನೋಡಿಕೆ ಹೆದ್‌ರಿಕೆ. ಕಿವಿ ಪೊಟ್ಟ ಹೋದಾಂಗೆ ಆದೆ. ಈ ಹೆದ್‌ರಿಕೆಂದಲೇ ಗಂಡನ ತೋಟಕೆ ಹೋಗ್‌ಬಡೀಂತ ಬೊಡ್‌ಕಂಡದ್. ಅಲ್ಲಾ ಈ ಗೂಡೆಗೆ ಎಂತ ಗೊತ್ತ್ ಪೊಣ್ಣ್, ಕಾಪಿಗೆ ರೇಟ್ ಇಲ್ಲೆ ! ಒಮ್ಮೆ ಕಾಪಿಗೆ ಒಳ್ಳೆ ರೇಟ್ ಬಾತ್‌ಂತ ಜನ ಕುಸಿಲಿ ಇರ್‌ಕನೇ, ರೇಟ್ ಇಳ್ತ್, ಈ ಮಳೆಲಿ ಕಾಪಿನೂ ಉದರ್‌ತಾ ಉಟ್ಟು. ತೋಟದ ಕೆಲ್ಸ ಮಾಡ್‌ಸುದೇ ಬೇಡಾಂತೇಳುವಷ್ಟ್ ರೇಟ್ ಡೌನ್ ಆತ್! ಕಾಪಿಗೆ ರೇಟ್ ಇರ್‌ಕನ ಕೂಲಿ ಆಳ್‌ಗಳ ದಮ್ಮಯ್ಯ ಗುಡ್ಡೆ ಹಾಕಿ ಜೀಪುಲಿ ಕರ್‌ಕಂಡ್ ಬರಕಾಗಿತ್ತ್. ಇನ್ನ್ ಸಂಬಳನೋ ಅವು ಕೇಳ್ದಷ್ಟ್. ಒಂದ್ ಕಾಲಲಿ ಅದೇ ಆಳ್‌ಗ ನೀವು ಕೊಟ್ಟ ಸಂಬಳ ಸಾಕ್, ಎರಡ್ ಹೊತ್ತ್‌ನ ಅಂಬ್ಲಿಗೂ ಗತಿ ಇಲ್ಲೆ ನಿಮ್ಮ ದಮ್ಮಯ್ಯ ಕೆಲ್ಸ ಕೊಡೀಂತ ದಮ್ಮಯ್ಯ ಗುಡ್ಡೆ ಹಾಕಿದ್ದೊ. ಹೂಂ ಏನ್ ಮಾಡ್‌ದು ಸುಖ–ದುಃಖ, ಏಳ್–ಬೀಳ್, ಕೂಡ್ಸುದು ಕಳಿಯೊದು ಇದೆಲ್ಲಾ ಪ್ರಕೃತಿನ ನಿಯಮಂತ ಏಲಕ್ಕಿ ಮಲೆ ಕಡೆ ಬೀಸ ಹೆಜ್ಜೆ ಹಾಕಿತ್ ಕಾಳಪ್ಪ.

ಈಗ ಏನಾರ್ ನಾಕ್‌ಕಾಸ್ ಗಿಟ್ಟುದು ಈ ಸಂಬಾರ ರಾಣಿ ಏಲಕ್ಕಿಂದ. ಹಿಂದೊಮ್ಮೆ ಏಲಕ್ಕಿ ತೋಟ ಮಾಡ್‌ಕನ ಕಟ್ಟೆ ರೋಗ ಬಂದ್ ಕೈ ಸುಟ್ಟ್‌ಕಂಡ ಕಾಳಪ್ಪ. ಮತ್ತೆ ಆ ಜಾಗು ಜಾಗಲಿ ಹಸಂದಾದ ಏಲಕ್ಕಿ ತೋಟ ಮಾಡಿಟ್ಟು. ಕಾಪಿ, ಕಿತ್ತಳೆ ದೈನ ಕೊಡಲಿಕಾಯಿ ಬುಟ್ಟರೆ ಏಲಕ್ಕಿ ದೈನ ಬುಡಲಿ ಕದ್‌ರ್‌ದ ಕೂದೋಲ್‌ನಾಂಗೆ ಅಷ್ಟ್ ಅಗಲ ಹರ್‌ಂಡಿಕಂಡ್ ಕಾಯಿ ಬುಟ್ಟದೆ. ಕೊತ್ತ್‌ಂದ ಕಾಯಿ ಬುಡ್ಸಿಕೂ ಜಾಣತನ ಬೇಕು. ಪೀಚೆಕಾಯಿ ಕೀಳ್‌ರೆ ರೇಟ್ ಸಿಕ್ಕಿಕ್ಕಿಲ್ಲೆ. ಅದ್ಕೆ ಆಳ್‌ಗಳಿಗೆ ಹೇಂಗೆ ಕೀಳೊಕೂಂತ ಹೇಳ್‌ತ್ತಾ ತಾನೂ ಕೀಳಿಕೆ ಸುರು ಮಾಡ್ತ್ ಕಾಳಪ್ಪ. ಹಿರಾಕ್‌ಲಿ ಕಟ್ಟಿದ ಐನ್‌ಮನೆ ದೊಡ್ಡದೇನೋ ಉಟ್ಟು, ಆದರೆ ಈಗನ ಕಾಲಕ್ಕೆ ಲಾಯಿಕ್ ಕಾಂಬೊದುಲ್ಲೆಂತ, ಎಲ್ಲಾ ಸೌಕರ್ಯ ಇರುವ ಆರ್.ಸಿ.ಸಿ. ಮನೆ ಕಟ್ಟಿಕೆ ಸುರು ಮಾಡಿಟು ಕಾಳಪ್ಪ. ಹೊಸ ಮನೆ ಕಟ್ಟಿಕೆ ಸುರು ಮಾಡ್‌ಕನ ಕಾಪಿಗೆ ರೇಟ್ ಇತ್ತ್. ಈಗ ರೇಟ್ ಇಳ್ದುಟು. ಏಲಕ್ಕಿಗೆ ಪರವಾಗಿಲ್ಲೆ. ಹೇಂಗಾರ್ ಮಾಡಿ ಈ ವರ್ಷ ಮನೆ ಕೆಲ್ಸ ಮುಗ್ಸಿಯೇ ಬುಡೊಕೂಂತ ರಭಸಲಿ ಏಲಕ್ಕಿ ಬುಡಿಕ್ಸ್ ಸುರು ಮಾಡ್ತ್ ಕಾಳಪ್ಪ. ಹತ್ತಾರ್ ಜನ ಆಳ್‌ಗಳೊಟ್ಟಿಗೆ ಕಾಳಪ್ಪನೂ ಏಲಕ್ಕಿ ಬುಡ್‌ಸ್‌ತ್ತಾ ಉಟ್ಟು. ಕೈಕಾಲೆಲ್ಲಾ ಉಂಬುಳು ಕಚ್ಚಿ ನೆತ್ತರ್ ಸುರಿತಾ ಉಟ್ಟು. ಅವಂಗೆ ಅದ್ಯಾವುದೂ ಲೆಕ್ಕಯಿಲ್ಲೆ. ಸುಣ್ಣ, ಹೊಸಮುನ ಉಂಡೆ ಮಾಡಿ ಕಿಬಿನ ಹಿಂದೆ ಉಜ್ಜಿಕನ ಹೆಪ್ಪಿಟ್ಟ್ ತೋರದ ಉಂಬುಳೊಂದು ಕೆಳಗೆ ಬೀತ್. ಬೂಟ್‌ಕಾಲ್‌ಂದ ಅದರ ಹೊಸ್‌ಕಿ ಹಾಕ್‌ಕನ ಅಷ್ಟಗಲ ನೆತ್ತರ್ ರಟ್ಟತ್. ಛತ್ ಈ ಹಾಳಾದ ಉಂಬುಳ್‌ಗಂತ ಸಾಪ ಹಾಕಿಕಂಡೇ ಏಲಕ್ಕಿ ಬುಡ್ಸಿಕಂಡೇ ಇತ್ತ್.

ಮಳೆನ ರಭಸ ಗುಡುಗು ಸಿಡ್ಲ್‌ನೊಟ್ಟಿಗೆ ಸುರಾಗಿ ಜೋರು ಗಾಳಿನೂ ಸೇರಿಕಂಡ್ ಅಟ್ಟಹಾಸ ತೋರ್‌ಸ್ತಾ ಇತ್ತ್. ತೋಟಲಿದ್ದ ಬಾನೆತ್ತರದ ಮರಗ ರೊಂಯಿ, ರೊಂಯಿನೇ ಬೀಸುವ ಗಾಳಿನ ರಭಸಕ್ಕೆ ಅತ್ತಂದ ಇತ್ತ, ಇತ್ತಂದ ಅತ್ತ ಓಲಾಡ್‌ತಿತ್ತ್. ಇನ್ನ್ ಇಲ್ಲಿದ್ದರೆ ಅಪಾಯ, ಮರನೇ ಬುಡ ಸೊಗ್‌ಚಿ ಬಿದ್‌ಬುದುದು; ಗೆಲ್ಲಾಗ ತಲೆ ಮೇಲೆ ಬೀಳುವಾಂಗೆ ಇದ್ದರೆನೂ ಆಳ್‌ಗ ಮಾತ್ರ ಹುರುಪುಂದಲೇ ಏಲಕ್ಕಿ ಬಿಡ್‌ಸ್‌ತ್ತಾ ಒಳೊ. ಯಾಕೆಂತ ಹೇಳ್‌ರೆ ಆ ಪಕ್ಕದ ಎಸ್ಟೇಟ್‌ನ ಚೆಟ್ಟಿಯಾರ್‌ಂದ್ ಎರ್‌ಡ್ ರೂಪಾಯಿ ಸಂಬಳ ಹೆಚ್ಚೆ. ಮತ್ತೆ ನಾಲ್ಕು ಗಂಟೆ ಮುಂದೆನ ಕೆಲ್ಸ ಕೈದ್ ಮಾಡ್ದು, ಅಲ್ಲದೆ ಹತ್ತ್‌ಗಂಟೆಗೆ ಕಡಕ್ ಚಾಯಿ, ಅದೂ ಕಜಿನೊಟ್ಟಿಗೆ. ಏಲಿ ಮೊಟ್ಟೆಲಿ

ಸಿನ್ನೆನ ತಣಿಯೆಣಾನ ಅರೆಹೊಟ್ಟೆ ತಿಂದ್ ಬಂದವುಕೆ ಇದ್ ಬಾರಿ ಸಮ್ಮನದಾಂಗೆ ಕಣ್‌ತಿತ್. ಆ ಕುಷಿಲಿ ಮಳೆನ ಲೆಕ್ಕಕೆ ತಕಣದೆ ಪಿಲಕ್ಕಿ ಬುಡ್‌ಸ್ತಾ ಇದ್ದೊ.

ಕಾಳಪ್ಪನ ಪಿಲಕ್ಕಿ ತೋಟದ ಕೆಲ್ಸಕ್ಕೆ ಕನ್ನಡ ಜಿಲ್ಲೆಂದ ಮಾಂಕು, ಗುರುವ, ಚೆನ್ನು, ಚುಕ್ರಿಗ, ಕೇರಳ ಕಡೆಂದ ಉನ್ನಿಕೃಷ್ಣ, ಗೋಪಾಲನ್ ಮುಂತಾದವೊ, ಮೂಡಸೀಮೆಂದ ರಾಮೇಗೌಡ, ಚಿಕ್ಕೇಗೌಡ್ರೂ, ಹಾಂಗೆ ಕೊಡ್ಗ್‌ನ ಮೂಲದವು ಆದ ಜೇನು ಕುರುಬರ್, ಮಲೆ ಕುಡಿಯರ್ ಎಲ್ಲಾ ಕಡೆವೂ ಇದ್ದೊ. ಇವುಕ್ಕೆಲ್ಲಾ ನಮ್ಮ ಕೈಲ್‌ಪೋದ್ ಬಾಳ ಕುಷಿನ ಹಬ್ಬ!? ಕೈಲ್‌ಪೋದ್‌ಲಿ ಹಂದಿ ಉದ್ಕ ಕಡ್‌ಂಬಿಟ್ಟ್‌ನೊಟ್ಟಿಗೆ ಕಾಟಿ ಕುಪ್ಪಿ ಸಿಕ್ಕಿರೆ ಇವುಕೆ ಸ್ವರ್ಗಕ್ಕೆ ಮೂರೇ ಗೇಣ್!!!

ಕಾಳಪ್ಪ ಯಾಗೋಳು ಜೋಬ್‌ಲಿ ಒಂದು ಜಿಗಿಲ್ ಇಸಿಕಂಡರೆ, ದೂರ ದೂರಲಿ ಕೆಲ್ಸ ಮಾಡುವ ಆಳ್‌ಗಳ ಕರಿಯೊಕುತಾವರ ಜಿಗಿಲ್ ಉರಿಗಿರೆ ಸಾಕ್ ಅವುಕೆ ಅರ್ಥ ಆದೆ. ಬೇರೆ ಬೇರೆ ಊರ್‌ಗಳ್‌ಂದ ಬಂದ ಆಳ್‌ಗ ಅಲ್ಲಲ್ಲಿ ಗುಂಪು ಸೇರಿಕಂಡ್ ಅವರವರ ಭಾಸೆಲಿ ಮಾತಾಡಿಕಂಡ್ ಇದ್ದವೆ. ಯಾರ ಗುಂಪು ಹೆಚ್ಚ್ ಕೆಲ್ಸ ಮಾಡ್‌ದನೋ ಅವುಕೆ ಕಾಳಪ್ಪನ ಕಡೆಂದ ಸ್ಪೆಸಲ್ ಟ್ರೀಟ್‌ಮೆಂಟ್ ಉಟ್ಟು. ಎಲ್ಲವುಕೂ ಒಂದೊಂದ್ ಗ್ಲಾಸ್ ಹುಳಿ ಸೇಂದಿ. ಹೆಚ್ಚಿ ಕೆಲ್ಸ ತೆಗ್‌ಸಿದ ಮೇಸ್ತ್ರಿಗೆ ಒಂದು ಕುಪ್ಪಿ ಕಾಟಿ. ಎಲ್ಲಾ ಮೇಸ್ತ್ರಿಗಳಿಗೆನೂ ಈ ಮಳೆ ಚಳಿಗೆ ಒಂದು ಕುಪ್ಪಿ ಕಾಟಿನ ಗಂಟ್ಲ್‌ಗೆ ಬೊಗ್ಸುವ ಆಸೆ. ಇದ್ದಕ್ಕಿದ್ದಂಗೆ ಹೊತ್ತಲ್ಲದ ಹೊತ್ತುಲಿ ಜಿಗಿಲ್ ಜೋರಾಗಿ ಕೇಳ್ತ್. ಯಾಗೋಳು ತೋಟದ ಎತ್ತರಂದ ಕೇಳ್‌ತಿತ್. ಇಂದ್ ಮಾತ್ರ ನಮ್ಮ ಸುತ್ತಮುತ್ತಂದಲೇ ಕೇಳ್‌ದೆ. ಆಳ್‌ಗಳಿಗೆ ಅಪಾಯ ಸೂಚನೆ ಗೊತ್ತಾಗಿ ಯಜಮಾನನ ಹುಡ್‌ಕಿಕಂಡ್ ಹೋದೋ. ಹೋಗಿ ನೋಡ್ರೆ ಯಜಮಾನನ ಮೈ ನೀಲಿ ಆಗ್‌ತ್ತಾ ಉಟ್ಟು. ಮೊಣ್‌ಕಾಲ್‌ಂದ ಕೆಳ್ಗೆ ಗಾಯಾಗಿ ನೆತ್ತರ್ ಅರಿತಾ ಉಟ್ಟು. ಇದರ ನೋಡ್ದ ಕುರುಬರ ಮಂಜ ಕೂಡ್‌ಲೇ ಬಾಯಿಲಿದ್ದ ಎಲೆ ಅಡಿಕೆ ಉಗ್‌ದ್, ಅಲ್ಲೆ ಜೋಡಿಲಿದ್ದ ನೀರ್‌ಲಿ ಬಾಯಿ ಮುಕ್ಕ್‌ಳ್ಸಿ, ಗಾಯಕ್ಕೆ ಬಾಯಿ ಹಾಕಿ ನೆತ್ತರ್‌ನ ಹೀಂಪಿ ಹೀಂಪಿ ಉಗಿತಾ ಇತ್. ಬೋಜನ, ಮಾಂಕು ಯಾವುದೊ ಹಸಿಸೊಪ್ಪು ತಂದ್ ಕಾಡ್ ಕಲ್ಲ್‌ಲಿ ಅರ್ದ್ ಅದರ ಮುದ್ದೆನ ಗಾಯಕ್ಕೆ ಪಟ್ಟಿಕಟ್ಟಿದೊ. ಯಾವುದೊ ಘಾಟ್ ವಾಸನೆನ ಒಂದೆರಡ್ ತೊಟ್ಟು ರಸನ ಮೂಕ್‌ಗೆ ಹಿಂಡಿದೊ. ಆ ರಸ ಮೂಕ್‌ನೊಳ್ಗೆ ಹೋದ್ದೇ ತಡ, ಮೇಲೆಂದ ಮೇಲೆ ಸೀನಿ, ಉಸುರಾಟ ಸರಾಗ ಆತ್. ಅಂತ ಚಳಿಲೂ ಕಾಳಪ್ಪನ ಹಣೆಲಿ ಬೆಗ್‌ರ್ ಬಿಚ್ಚಿತ್, ಮುಚ್ಚಿದ ಕಣ್ಣ್ ಬುಟ್ಟಿತ್. ಸಾವುನ ಕರಿ ನೆರಳ್ ಆವರ್ಸಿದ್, ಕರಿ ಮೋಡದ ಮರೆಂದ ಮಿಂಚ್ ಮಿಂಚಿದಂಗೆ ಆತ್. ಇನ್ನ್ ಯಾವ ಹೆದ್‌ರಿಕೆನೂ ಇಲ್ಲೆಂತ ಯಜಮಾನನ ಹೊತ್ತ್‌ಕಂಡ್ ಆಳ್‌ಗ ಮನೆ ಕಡೆ ಹೊರ್‌ಟೊ.

ತುಂಬಿದ ಬಸ್‌ರಿ ಪೊನ್ನಮ್ಮನ ಮೋರೆಗೆ ಹೆಸರ್‌ನ ಹಾಂಗೆ ಕೆಂಪು ಕೆಂಪು ಕಿತ್ತುಳಿ ಬಣ್ಣ ಬರ್‌ತಾ ಉಟ್ಟು. ಮನೆನ ಯಾಗೋಳ್ನ ಕೆಲ್ಸ ಗಿಲ್ಸ ಮುಗ್‌ಸಿ ಮುಂದೆ ಹುಟ್ಟುವ ಕೂಸಿಗಾಗಿ ಉಲ್ಲನ್‌ಂದ ಟೊಪ್ಪಿ, ಸ್ವೆಟರ್ ಕಾಲ್‌ಚೀಲ ಎಲ್ಲಾ ಹೆಣೆಯಕೆ ಸುರು ಮಾಡಿಟ್ಟು. ಇದ್ದಕ್ಕಿದ್ದಂಗೆ ಗುಡಿಗಿದ ಗುಡುಗುನ ಆರ್ಬಟೆಗೆ ಕರೆಂಟ್ ಕೈಕೊಟ್ಟಿತ್. ಗಾಳಿನ ರಬಸಕ್ಕೆ ಕಿಟಕಿ ಬಾಗಿಲ್‌ಗ ಎಲ್ಲಾ ಬಡಬಡ ಹೊಡ್‌ಕಂಡೊ. ಅದರೊಟ್ಟೊಟಿಗೆ ಕಣ್ಣ್ ಕುಕ್ಕುವ ಮಿಂಚಿನೊಟ್ಟಿಗೆ ಬಾಂಬು ಬಿದ್ದಂಗೆ ಸಿಡ್ಲ್ ಬೊಡ್ತ್, ದೂರದ ತೋಟಲಿದ್ದ ಮರವೊಂದು ಸಿಡ್ಲ್‌ನ ಪೆಟ್ಟಿಗೆ ಪಳಾರ್‌ಂತ ಸೀಳಿ ಹೋಗಿ ಕಿಚ್ಚಿಹೊತ್ತಿಕಂಡಾಂಗೆ ಆತ್. ಅಡಿಗೆ ಮನೇಲಿದ್ದ ಅತ್ತೆ, ಕಟ್ಟ್‌ಲಿ ಮಲ್‌ಗಿಕಂಡಿದ್ದ ಅವರತ್ತ ಬೋಜೀ...... ಬೋಜೀ..... ಇಲ್ಲಿ ಬಾನೆ ಅಲ್ಲೆಂತ ಮಾಡ್ತ ಒಳಾಂತ ಕರ್‌ದೊ. ಸಿಡ್ಲ್‌ನ ಬೊಳ್‌ಪುಲಿ ದೊಡ್ಡ ಹಲ್ಸ್‌ನ ಮರಕ್ಕಲೆ ಯಾರ್‌ನೋ ಹೊತ್ತ್‌ಕಂಡ್ ಬಾದು ಕಂಡತ್. ಸ್ಪಂದವನಾಂಗಿದ್ದ ಮಲೆಕುಡಿಯ ಸೇಸ ಸಣ್ಣ ಮಕ್ಕಳ ಹೆಗಲ್ ಮೇಲೆ ಕೂರ್ಸಿಕಂಡ್ ಬಾವಹಾಂಗೆ ತನ್ನ ಗಂಡನ ಹೊತ್ತ್‌ಕಂಡ್ ಬಾದರ ನೋಡಿ ಪೊನ್ನಮ್ಮ 'ಅಪ್ಪಯ್ಯಾ, ಏನಾಗಿಬುಟ್ಟ್ ನನ್ನ ಗಂಡಂಗೇಂತ' ಕಿರ್‌ಚಿದ್ ಕೇಳಿ ಬಾಮಮ್ಮ, ಅತ್ತೆ ಇಬ್ಬರೂ ಹೊರಗೆ ಓಡಿ ಬಂದೊ.

ಇದ್ದಕ್ಕಿದ್ದಂಗೆ ಪೊನ್ನಮ್ಮಂಗೆ ಹೊಟ್ಟೆಬೇನೆ ಬಾತ್. ಮನೇಲಿ ಕಾರೇನೊ ಉಟ್ಟು. ಷೆಡ್ಲಿ ಬೆಚ್ಚಂಗೆ ನಿತ್ತುಟು. ತುರ್ತುಗೆ ಮಾತ್ರ ಹೊರ್‌ಡುವ ಕಾರ್‌ಗೆ. ಇಂದ್ ಅದರ ಬುಡುವ ಯಜ್‌ಮಾನ ಹಾವು ಕಚ್ಚ್‌ಸಿಕಂಡ್ ಮಲ್‌ಗಿಟ್ಟು. ಕಾರ್ ಬುಡುಂವ ಇಲ್ಲಿರೂ ಅದರ ತಳ್‌ಕಂಡ್ ಪೇಟೆಗೆ ಹೋವ ತಾಕತ್ತ್‌ನ ಆಳ್‌ಗೇನೊ ಒಕೊ. ಅದರ ಬಸ್ ಮಾಡ್ತು ಮಾರ್ಗಲಿಡೀ ಮರಗ ಮುರ್ದ್ ಬಿದ್ದೆಳೊ. ಈ ಮಳೆಲಿ ಬಸ್‌ರಿ ಹೆಂಗ್ಸ್‌ನ ಐದಾರ್ ಮೈಲ್‌ನ ಆಸ್ಪತ್ರೆಗೆ ಹೊತ್ತ್‌ಕಂಡ್ ಹೋದಾರು ಹೇಂಗೆ? ಮುಳ್ಳಕ್ಕೆ ಬಾಮುವಂಗೆ ಕುರುಬರ ತೊಂಬಿ ಉಚ್ಚಿಯು ನೆನಪಾತ್. ಅವರ ಕೇರಿಗೆಲ್ಲಾ ಅ ತೊಂಬಿ ಉಚ್ಚಿನೇ ದೊಡ್ಡ ನರ್ಸ್! ಏಷ್ಟೋ ದೂರಲಿದ್ದ ಕುರುಬರ ಗುಡ್ಲ್‌ಗೆ ನಡ್‌ದೇಬುಟ್ಟೊ

ಚಾಮವ್ವ, ಬಾಗ್‌ಲಿಗೆ ಬಂದ ಯಜಮಾಂತಿನ ಕಂಡ್ಕೇ ಅರ್ತ ಮಾಡಿಕಂಡ ಲಚ್ಚಿ ತನ್ನ ಸಂಚಿನಸೊಂಟಕ್ಕೆ ಸಕ್ಕಿಸಿ, ಬೊಚ್ಚುಬಾಯಿ ಅಗಲ್‌ಸಿ ಒಮ್ಮೆ ನಗಾಡಿ ದೊಣ್ಣೆನೊಂದು ಕೈಲಿ ಹಿಡ್‌ಕಂಡ್ ಚಾಮವ್ವನೊಟ್ಟಿಗೆ ನಡ್‌ದೇಬುಟ್ಟತ್.

ಅಲ್ಲಾ ಈ ಕೂಟೆ ಮಳೆ ಹೊಯ್ದರೆ ಹೇಂಗೆ? ಬಾನೇ ಒಟ್ಟೆ ಆಗುಟ್ಟು ಕಂಡದೆ. ಹಿಂಗಾರೆ ಬಸ್‌ರಿ, ಬಾಣಂತಿಗ, ಕಾಯಿಲೆ ಕಸಾಲೆವರ ಗತಿ ಏನ್. ವಟವಟಾಂತ ಮಳೆಗೆ ಸಾಪ ಹಾಕಂಡ್ ನಡೀತಿತ್ತ್ ಲಚ್ಚಿ. ಹತ್ತುವ ದಾರಿಲಿ ದೊಣ್ಣೆನ ಊರಿ ರೌಕೆ ಹಾಕದ ಬೊಗ್ಗಿದ ಬೆನ್ನ್‌ನ ಒಮ್ಮೆ ನೆಟ್ಟಂಗೆ ಮಾಡಿ ನಡ್ತೇ ನಡ್ತ್. ಮನೆಗೆ ಎತ್ತಿದ್ದೇ ಗೊತ್ತು ಸೀದಾ ಬಸ್‌ರಿ ಇದ್ದ ಕೋಂಬರೆಗ ಹೋಗಿ ಬಾಗ್‌ಲ್ ಹಾಕಿಕಂಡತ್ ತೊಂಡಿ.

ಮೂಡು ದಿಕ್ಕ್‌ಲಿ ದಿನಮಣಿ ನೆತ್ತ್ ಮೆತ್ತಿಕಂಡ ಹಾಂಗೆ ಮೇಲೆದ್ದ್ ಬರ್‌ತ್ತಾ ಉಟ್ಟು. ಮಳೆನ ಅರ್ಬಟ ಕಮ್ಮಿ ಆಗುಟ್ಟು, ಸಿಡ್ಲ್ ಮಿಂಚಿನ ಸದ್ದಿಲ್ಲೆ. ತೆಣ್ಣನೆಗಾಳಿ ಮಲ್ಲಂಗೆ ಬೀಸ್‌ತ್ತಾ ಉಟ್ಟು, ಕೋಳಿ ಕೂಂಗಿ ಜಿನ್ನ ಎದ್ದಿರೀಂತ ಹೇಳ್ತ್ ಉಟ್ಟು. ಹಕ್ಕಿಗ ಚಿಲಿಪಿಲಿಗುಟ್ಟಿಕಂಡ್ ಇರುವ ಹೊತ್ತಿಗೆ ಕೋಣೆಂದ ಕೂಸುನ ಮರ್ದ್ ಕೇಳ್ದತ್. ನಿದ್ದೆಲಿ ತೂಗ್ತ್ಯಾಂಡ್ ಇದ್ದ ಚಾಮವ್ವ, ಅತ್ತೆ ಎಲ್ಲಾ ಗಡಿಬಿಡಿಲಿ ಎದ್ದ್ ಕೋಣೆಗೆ ಓಡ್ದೊ. ಕೆಂಪು ನೆತ್ತ್‌ರ್‌ನ ಮುದ್ದೆನಾಂಗೆ ಇದ್ದ ಗಂಡ್ ಕೂಸುನ ಕಂಡ್ ಅವರಿಬ್ಬರ ಮೋರೆ ಮೊರದಗಲ ಅತ್. ಬೊಗ್ಗಿ ಹೋದ ಬೆನ್ನ್‌ನ ಲಚ್ಚಿ, ಪಕ್ಕದ ಕೋಣೆಲಿ ಮಲ್‌ಕಂಡಿದ್ದ ಯಜಮಾನನ ಒಮ್ಮೆ ಬೊಗ್ಗಿ ನೋಡಿ ಮುಸ್‌ಕ್ ನಗೆ ಮಾಡ್ತ್. ಮೈಲಿಗೆ ತೊಳ್ಕ್ ಸುಚಿ ಆಕೆ ಹಳ್ಳದ ಕಡೆ ಹೊರ್‌ಟತ್. ಉಕ್ಕಿ ಹರಿವ ಕನ್‌ಕ್ ನೀರ್‌ಲಿ ಮೀಯೊದು ಬೇಡ, ಇಲ್ಲೇ ಬಿಸಿ ನೀರ್‌ಲಿ ಮೈ ತೊಳ್‌ಕಾಂತ ಹೇಳ್‌ರೂ ಕೇಳದೆ 'ನಾ ಯಾಗ ಬಿಸಿ ನೀರ್‌ಲಿ ಮೀಯೊಳೆ, ತಣ್ಣೀರ್‌ಲಿ ಮೀಯದ್ದರೆ ಮೈಲಿಗೆ ಹೋದೂಂತ' ಹೇಳ್ತಾ ಹಳ್ಳದ ಕಡೆ ನಡ್‌ದೇ ಬುಟ್ಟತ್. ಯಾರ ಮಾತ್‌ನೂ ಕೇಳ್ದ ಲಚ್ಚಿ ಉಕ್ಕಿ ಹರಿವ ಕನ್‌ಕ್ ನೀರ್‌ಲಿ ಕಂತಿಯೇ ಬುಟ್ಟತ್! ?

❍

ಗಾದೆಗ

1. ಅಂಡೆಲಿ ಇಲ್ಲೆ ಅಳಿಗೆಲಿ ಇಲ್ಲೆ
2. ಅಯ್ಯ ಹೊಟ್ಟೆ ನೋಡ್ತ್, ಹೆಣ್ಣ್ ಜೇಬು ನೋಡ್ತ್
3. ಕಕ್ಕೆಗೆ ಬೀಜ ಇದ್ದರೆ, ಹಾರ್‌ಕನ ಕಾಣುದು
4. ಆನೆ ಮೇಲೆ ಮಳೆ ಹೊಯ್ದಂಗೆ
5. ಬದ್ಕುವ ಮಕ್ಕಳ ಕಕ್ಕ ನೋಡ್ರೆ ಗೊತ್ತಾದು
6. ಭತ್ತ ಬಂಡಾರಿಗೆ, ದೂರು ಕುಂಡಚ್ಚಂಗೆ
7. ಕಳ್ಳನ ಹೆಜ್ಜೆ ಕಳ್ಳಂಗೇ ಗೊತ್ತು.
8. ಮಣಂಜಿ ಹೋದಲ್ಲಿ ಕಣಂಕ್ ತಪ್ಪಿಕ್ಕಿಲ್ಲೆ
9. ಹಸ್ತ್ ಹಲ್ಸನ ಹಣ್ಣ್‌ನ ತಿನ್ನ್, ಉಂಡ್ ಬಾಳೆ ಹಣ್ಣ್ ತಿನ್ನ್
10. ಸತ್ತ ಎಮ್ಮೆಗೆ ಹತ್ತ್ ಕೊಂಡೆ ಹಾಲ್

(ಸಂಗ್ರಹ) – ಮಂಜುನಾಥ ಉಂಞನ

ಹೆಣ್ಣು ವಹಿಸಿ ಕೊಡ್‌ಕಾನ ಹೇಳುವ ಮಾತ್



ಮೂಲ ಕನ್ನಡ (ಸಂಗ್ರಹ)
ಅರೆಭಾಷೆಗೆ : **ಯುಸುಗೌ**

ಜಾರೀ ಸಡಗರಲಿ ನಿಮ್ಮ ಇಷ್ಟ ಮಿತ್ರರೊಟ್ಟಿಗೆ ಹೈದನ ಕಡೆಂದ ಬಂದ ದಿಬ್ಬಣದ ಯಜ್‌ಮಾನ್‌ರಾದ ಗೌರವಸ್ಥರ್ ಯಾರಣ್ಣ ? ಹಾಂಗರೆ ನಾವು ನಮ್ಮ ಹಿಂದೆನ ಕ್ರಮದಂಗೆ, ಕೇಳಿಕ್ಕನ ಪದ್ದ್- ಶ್ರೀ ರಾಮಂತೇಳುವ ಹುಡ್ಗಂಗೆ - ಸೀತೆ ಎಂಬ ಗೂಡೆನ ಮದುಮಕ್ಕಂತ ಮಾಡ್ತುಂತ. ಈ ಹಿಂದೆ ಯೋಚನೆ ಮಾಡಿ ಆಮೇಲೆ ಮಾತ್‌ಕತೆ ಆತ್ ಅಲ್ಲನಾ ? ಮಾತ್ ಕತೆ ಪ್ರಕಾರ ನಾವು ಎರ್ಡ್ ಕಡೆವೆಲ್ಲ ಸೇರಿ ಆಕಾಶದಷ್ಟ್ ದೊಡ್ಡ ಚಪ್ಪರ ಹಾಕಿ ಭೂಮಿಯಷ್ಟ್ ದೊಡ್ಡ ಹಸೆ ಬರ್ದ್ ಚಿನ್ನದ ಮಂಟಪದಡಿಲಿ ಎಲ್ಲ ಬಂಧು ಬಾಂಧವರ ಎದ್‌ರ್ ಅಗ್ನಿ ಸಾಕ್ಷಿ ಪ್ರಕಾರ ನಮ್ಮ ಕನ್ಯಾರತ್ನನ ಧಾರೆ ಹೊಯ್ದ್ ಕೊಟ್ಟಳೊತಾನೆ?

ಹಾಂಗರೆ . ನಿನ್ನೆ ದಿನ ಹೈದನ ಮನ್ಮಥನಾಂಗೆಯೂ ಗೂಡೆನ ರತಿದೇವಿಯಾಂಗೆಯೂ ಸಿಂಗಾರ ಮಾಡ್ದರಲ್ಲಾಗಲಿ, ರೂಪ ಲಾವಣ್ಯಲ್ಲಾಗಲಿ ಏನೊಂದು ಸೂನೆ ಇಲ್ಲದಂಗೆ, ಕಾಮ ಚಕ್ರಾಧಿಪತಿ ಮನ್ಮಥನ ವಜಯದ ಹೈದನ ಎರ್ಡ್ ಕೈಗಳ್ಗೆ ನಾಲ್ಕ್ ಕೈಗಳಾಗಿ ಮಾಡ್ದರಲ್ಲಾಗಲಿ ಯಾವ ಕುಂದು ಕೊರ್ತೆ ಕಂಡತ್ಲ್ಲೆ ತಾನೆ ? ಹಾಂಗರೆ, ನಮ್ಮ ಮುದ್ದು ಮಗಳ ನಿಮ್ಮ ಸ್ವಾಧೀನಕ್ಕೆ ಒಪ್ಸಿ ಕೊಟ್ಟವೆ. ಹಾಂಗೆ ಒಪ್ಸಿ ಕೊಡ್ವಾಕನ ಮಗಳಿಗೆ ಹನ್ನೆರಡ್ - ಹನ್ನೆರಡ್ ಇಪ್ಪತ್ತನಾಲ್ಕ್ ವರಹಗಳೂ, ಉಡಿಕೆ ಬಟ್ಟೆನೂ, ಹಾಕ್ಯಂಕೆ ಚಿನ್ನಾಭರಣಗಳೂ, ಉಂಬಕೆ ಬೆಳ್ಳಿಬಟ್ಟ್‌ನೂ, ಕೈತೊಳೆಕೆ ಬೆಳ್ಳಿ ಗಿಂಡಿನೂ ಹಾಲ್‌ಕರಿಯಕೆ ದನಗಳ ಹಿಂಡ್‌ನೂ ಉಡ್ಗಿರೆ ಕೊಟ್ಟೊಳೊತಾನೆ !

ಹೀಂಗೆ ನಾವು ಕೊಟ್ಟ ಹಂಜ ಐಸ್‌ರನ ಒಂದಕ್ಕೆ ಹತ್ತ್, ಹತ್ತಕ್ಕೆ ನೂರು. ನೂರಕ್ಕೆ ಸಾವಿರಕಟ್ಟೆ ಊರ್ಜಿತ ಮಾಡಿ ಹೆಸ್ರ್ ಮಾಡುವಂಗೆ ಮಾಡುವ ಖ್ಯಾಸ್ತಿವಂತ ಪುಣ್ಯಾತ್ಮರ್ ಯಾರಣ್ಣ ?

ನಮ್ಮ ಕೂಸಿಗೆ ಕಡೆಹಲ್ಲ್ ಜಾತಿಲ್ಲೆ, ನೆತ್ತಿ ಎಣ್ಣೆ ಆರ್ತಿಲೆ, ಕಟೆ ಬಾಯಿನ ಹಾಲ್ ಆರ್ತಿಲೆ, ಅಂಗೈ ಬರೆ ಮಾಸಿತಿಲ್ಲೆ, ಬುದ್ಧಿ ತಿಳ್‌ವಳಿಕೆ ಜಾತಿಲೆ, ಹುಟ್ಟಿದ ಅಯ್ಯಪ್ಪನ ನೆಂಪು ಮರ್ತತಿಲೆ; ಹಸಿ ಆಗೆಕೆ ಗೊತ್ತಿಲೆ. ಒಣ್ಗಲ್ ಮುರೆಕೆ ಗೊತ್ತಿಲೆ, ಲ್ಯಾಕ್ ಗುಡ್ಸಿಕೆ ಬಾದುಲೆ. ಜಾಲ್‌ಲಿ ಆಡಿ, ಹಾಲ್ ಕೂಡ್ದ್ ಮೆಟ್ಟ್‌ಲಿ ಓಡಿ ತೊಟಗಿಲ್ಲಿ ಮಲ್ಗಿಕೆ ನೋಡ್ವ ಈ ಸಣ್ಣ ಬಾಲಕಿಗೆ ಬೇಕ್ ಬೇಕಾದ ಬುದ್ಧಿಮಾತ್ ಹೇಳೊವು ಯಾರಣ್ಣ ?

ಈ ನಮ್ಮ ಸಣ್ಣಗೂಡೆಗೆ ಮಾವನ ಮನಸ್ಸ್ ಹೇಂಗೆಂತ ಗೊತ್ತಿಲ್ಲೆ. ಅತ್ತೆ ಮಾಡ್ವ ಅಡ್ಗೆ ಕೆಲಸ ಬಾದುಲೆ. ಬಾವ ಮೈದನರ ಭಾವನೆ ಏನ್ ಗೊತ್ತಿಲ್ಲೆ. ಅಕ್ಕ ತಂಗೆಕಳ ಹಂಗ್‌ಗೆ ಸೇರ್ತಿಲೆ. ಕುಟುಂಬದ ಕೂಟಕೆ ಸೇರಿ ಗೊತ್ತಿಲ್ಲೆ. ಹೀಂಗಿರ್ವಾಕನ ವಿಸಾರ್ ಮಾತ್ ಲಿ ತಪಾವತ್ ಆಗಿ ಆದ ಕಲಹಗಳ ಕಮ್ಮಿ ಮಾಡೊವು ಯಾರಣ್ಣ ?

ಹಾಂಗರೆ. ದಿಬ್ಬಣದ ಗಣ್ಯರೇ. ನಾವು ಹೇಳುವ ಮಾತಿಗೆ ಎರ್ಡ್‌ಂತೇಳದೆ ನಾವು ಕೊಡುವ 'ಕನ್ಯಾರತ್ನ'ನ ಭಗವಂತ ಭಕ್ತರ ಪ್ರೀತಿಸುವ ಹಾಂಗೆ ನರಹರಿ ಕೂರ್ಮನಾಗಿ ಕಾದ ಹಾಂಗೆ. ಪಶ್ ಏಳೆಕರ್‌ನ ಪ್ರೀತಿಸುವ ಹಾಂಗೆ ಪ್ರೀತಿಸುವರಿಂತ ಅಗ್ನಿಸಾಕ್ಷಿಯಾಗಿ ನಾವ್ ನಂಬುವೆ. ಇನ್ನ್ ಮುಂದೆ ಈ ಹೊಸ ಮದುಮಕ್ಕಳ ಆ ಮಹಾವಿಷ್ಣು ಹೊಕ್ಕುಳ್‌ಲಿ ಬ್ರಹ್ಮಂಗೆ ಜಾಗ ಕೊಟ್ಟಹಾಂಗೆ. ಆ ಕ್ಷೀರ ಸಮುದ್ರದಲಿ ಮಲ್ಗಿದ ಶ್ರೀ ಮನ್ನಾರಾಯಣನೇ ಕಾಪಾಡಲಿಂತ ನಾವೆಲ್ಲ ಪ್ರಾರ್ಥನೆ ಮಾಡುವ.

ಅರೆಬಾಸೆಲಿ ಗಾದೆಗ



ಸಂಗ್ರಹ : **ಕು ವಾರಿಧಿ ಎನ್. ಕೆ.** *M. Tech*
D/o ದಯಾನಂದ ಎನ್. ಕೆ.
'ದೇವಿಕೃಪಾಲಯ' ಕನಕಮಜಲು
ಮೊ: 8277771836

1. ಮಜ್ಜಿಗೆಗೆ ಬಂದಂವಂಗೆ ಎಮ್ಮೆಕ್ರಯ ಯಾಕೆ ಗಡ ?
2. ಮರದ ಹುಳ ಮರಕ್ಕೆ ನಾಶ
3. ಮಕ್ಕ ಇದ್ದ ಮನೆ ಮಾಣಿಕ್ಯ ಇದ್ದಹಾಂಗೆ
4. ಹುಟ್ಟು ಗುಣ ಬೆಟ್ಟ ಹತ್ತಿರೂ ಹೋಕಿಲ್ಲೆ
5. ಕಾರ್ಯ ಆಕಾದರೆ ಕತ್ತೆ ಕಾಲು ಹಿಡಿಯೋಕು
6. ಅದ್‌ರಾದೆ ಉದುರಿಕಿಲ್ಲೆ
7. ಕೆಟ್ಟ ಮೇಲೆ ಬುದ್ಧಿ ಬಾತ್ ಗಡ
8. ಕುಂಬಳ ಕಾಯಿ ಕದ್ದಂವ ಹೆಗ್‌ಲ್ ಮುಟ್ಟಿ ನೋಡ್ತ್.
9. ಊರಿಗೆ ಅರಸಾದ್ರು ಅಮ್ಮಂಗೆ ಮಂಜ
10. ಇಬ್ಬರ ಜಗಳ ಮೂರನೆಯವಂಗೆ ಲಾಭ ಗಡ
11. ಉಪ್ಪು ತಿಂದ ಮನೆಗೆ ಎರ್ಡ್ ಬಗೆಕ್ಕಾಗದ್
12. ಆನೆ ಮೇಲೆ ಮಳೆ ಹೊಯ್ದಂಗೆ
13. ಐಶ್ವರ್ಯ ಬಾಕನ ಅರ್ಧರಾತ್ರಿಲಿ ಕೊಡೆ ಹಿಡ್ದಾಂಗೆ
14. ಕಷ್ಟಕ್ಕೆ ಆದವನೇ ನೆಂಟಗಡ
15. ಕೋಣೆಯಾಕೆ ಆಗದಂವ ಅಂಗಳ ಡೊಂಕುಂತ ಹೇಳ್ತ್ ಗಡ
16. ಕಂಡದ್ ಕಂಡಾಂಗೆ ಹೇಳಿರೆ ಕೆಂಡದಂತ ಕೋಪ
17. ಗಂಡ ಸೀರೆ ತಂದದೆ ಅಂತ ಹೆಣ್ಣ್ ಇದ್ದ ಸೀರೆ ಸುಟ್ಟತ್ ಗಡ
18. ಬರಿ ಕೈಲಿ ಮೊಳ ಹಾಕಿದಾಂಗೆ
19. ದುಡ್ಡಿದ್ದವ ದೊಡ್ಡಪ್ಪ
20. ಅಪ್ಪ ಕೊಟ್ಟ ದುಡ್ಡು ರಾಶಿ ರಾಶಿ ಆದ್ರೂ ಎತ್ತಿಕಿಲ್ಲೆ
21. ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ
22. ಅಡಿಗೆ ಬಿದ್ದರೂ ಮೂಗು ಮೇಲೆ ಗಡ
23. ನೆರೆಮನೆ ದೋಸೆ ಒಟ್ಟೆ, ನಮ್ಮ ಮನೆ ಕಾವಲಿ ಒಟ್ಟೆ
24. ಊಟಕ್ಕೆ ಮುಂದೆ ಗಡ, ಕೆಲಸಕ್ಕೆ ಹಿಂದೆಗಡ
25 ತುಂಬಿದ ಕೊಡ ಸಬ್ದ ಮಾಡಿಕ್ಕಿಲೆ

)

ಹೆಣ್ಣು ವಹಿಸಿ ಕೊಡುವ ಹಾಡ್ (ಅರೆಭಾಷೆಲಿ)

ಯುಸುಗೌ

ನಮ್ಮ ಮನೆ ಜಾಲ್‌ಲೀ ಅರಳಿದಾ ಹೂವೊಂದು
ನಿಮ್ಮ ಮಡಿಲಿಗೆ ಇಸಿಕೆ ತಂದೊಳಿಂದ್ ॥ ೧ ॥

ಕರ್ಕಣೀ ಕೂಸ್‌ನ ನಮ್ಮ ಮನೆ ಬೊಳ್ಪುನ
ನಿಮ್ಮ ಮನೆ ತುಂಬಿಸಿಕೆ ತಂದೊಳಿಂದ್ ॥ ೨ ॥

ಕಪಟ ವಂಚನೆ ಕೊಂಕ್ ಗೊತ್ತಿಲ್ಲೆ ಹೇಂಗೆಂತ ।
ವಿಶ್ವಾಸ ದ್ರೋಹನಾ ಮಾಡದವುಳೂ ॥ ೩ ॥

ಕಷ್ಟಗಳ ತಾಳದೆ ಕಾಣದೆ ಬೆಳ್ದವಳ್ ।
ಸಾಂಕಿಕನಿ ನೀವಿಂದ್ ಕೂಸ್‌ನೊಪ್ಪಿಸುವೆ ॥ ೪ ॥

ಕಠಿಣಂತೇಳ್ರೆ ಬಾಡಿ ಉದುರಿಹೋದು ।
ಹಿಮಹಿಡ್ದ್ ನಡ್ಗ್‌ವ ಹೂವುನಂಗೆ ॥ ೫ ॥

ಸುಖವೋ–ದುಃಖವೋ–ಎಂಥದಿದ್ದರೂ ಸಾ ।
ನಿಮ್ಮ ಕಡೆಗಿರುವ ಕೂಸು ಇವ್ಳೂ ॥ ೬ ॥

ನೀವ್ಗೆ ಇವ್ಳು ಕೊಡುವ ಹಾಲ್ ಹಣ್ಣ್‌ನ ರುಚಿ ।
ಎಂದೆಂದ್ ಇವ್ಳ ನಡೆ ನಿಮ್ಮ ಕಡೆಗೆ ॥ ೭ ॥

ನಿಮ್ಮ ಕೀರ್ತಿ ಬೆಳೆಲಿವ್ಳ ಗುಣಶೀಲಲಿ ।
ನಿಮ್ಮ ಕುಲಶೀಲಗ ಗಮಗಮಿಸಲಿ ॥ ೮ ॥

ಸುಖವಾಗಿರು–ಮಂಜ–ನಿನ್ನ ಹೆಣ್ಣ್‌ನ ಸೇರಿ
ನಿಮ್ಮ ಸೊಸೆ ಮಗಳ್ ತಕ್ಕನಿವಳಾ ॥ ೯ ॥

ಜೀವನದ ಕಡಲ್ ಲೀ ಸಂಸಾರ ದೋಣಿನ ।
ಕಾಯುವ ಜಲ್ಲೆ–ಯೀ ಮಗಳ್ ॥ ೧೦ ॥

ಕೈ ಬುಡದೆ ಕಾಪಾಡು ಪ್ರೀತಿಲೀ ಎಂದ್ ।
ಇಂದ್‌ಂದ ನಿಮ್ಮವಳೆ ಮುಂದೆ ಇವ್ಳೂ ॥ ೧೧ ॥

ಅತ್ತೆ ಮಾವನವು ಇನ್ನ್ 'ಅಯ್ಯಪ್ಪ' ನಿಂಗೆ ।
ಒಳ್ಳೆ ಗುಣದವಳಾಗಿ ನೀಯವರ ಚಾಕ್ರಿ ಮಾಡ್ ॥ ೧೨ ॥

ಗಂಡನೇ ದೇವ್ರು ನಿಂಗೆ –ಬೇರೆ ದೇವ್ರೆ ಇಲ್ಲೆ ।
ಗಂಡನೆ ಗತಿ ನಿಂಗೆ , ಗಂಡನೇ ಎಲ್ಲ ॥ ೧೩ ॥

ದಾಸಿಯಾಗಿ ನೀ ಪಾದಸೇವೆನ ಮಾಡ್ ।
ಸಂಸಾರಲಿ ಗಂಡಂಗೆ ನೀ ಮಂತ್ರಿಯಾಂಗೆ ॥ ೧೪ ॥

ಊಟ ಬಡಿಸಿಕೆ ನೀ ಅವನ ಅಮ್ಮನಾಗು ।
ಪ್ರೀತಿ ಬದ್ಕ್‌ಲಿ ನೀ ಖುಶಿಯಾಗಿ ಬಾಳ್ ॥ ೧೫ ॥

ಹಡೆದವರ ಮನೆಗಿಂದ್ ಹೊರಗೆ ನೀ ಮಗಳೆ ।
ಹತ್ತಿದಾ ಮನೆಯವೇ –ನಿನ್ನವುತ ಮುಂದೆ ॥ ೧೬ ॥

ಅವೇ ಅಮ್ಮಂದಿರ್, ದೋಸ್ತಿಗ, ಭಾಗ್ಯನೀಡೊವು ।
ಅವೇ ನಿನ್ನ ದೇವ ದೇವ್ರುಗಳ್ ॥ ೧೭ ॥

ಏನ್ ಉಡಿಗಿರೆ ಕೊಡ್ಲಿನಿಂಗೆ ಮಗಳೆ ।
ಯಾವ್ದರ ಕೊಟ್ಟ್ ಕಳ್ಸಲಿ ನಿನ್ನಾ ॥ ೧೮ ॥

ಮಾವನಾ ಮನೆಗಿಂದ್ ಹೋಗುವಾ ಮಗಳೆ ।
ದೇವ್ರಿತ್ತ ವಸ್ತುವಾಹನನ ಕೊಡಲ್ಯಾ ॥ ೧೯ ॥

ಬಡತನಲಿ ಬೆಂದ್ ಬಡವಾದ ನಾ ।
ನಿನ್ನ ಕೊಂಡಾಟಲಿ ಸಾಂಕಿ ಸಲಯಿದೆ ॥ ೨೦ ॥

ಆಗಾಗ ಬರ್ತಿದ್ದ ತಾಪತ್ರೆಗಳ ಸಯಿಸಿ ನಾ ।
ಬಡತನದ ಸಾಗರಲಿ ಕೊಡಿಮುಟಿತಿಲೇ ॥ ೨೧ ॥

ಮಗಳೆ ನಾ ನಿಂಗೇನ್ ಕೊಡ್ಲಿ ।
ಅಗಲಿ ಹೋಕನ ಉಪದೇಶ ನಿಂಗೆ ॥ ೨೨ ॥

ಪತಿಗೆ ಸರಿಯಾದ ಸತಿಯೆಂಬ ಮಾತ್ ನಾ ।
ತಿಳ್ದ್ ನೀ ಒಳ್ಳ ನಡ್ತೆಲೀ ಬಾಳ್ ॥ ೨೩ ।

ಗಂಡನಾ ಮಾತಿಗೆ ಎದ್‌ರಾಡಿಕಾಗದ್ ।
ಗಂಡನೆ ದೇವ್ರೆಂದ್ ನಂಬುನೀ ಮಗಳೆ ॥ ೨೪ ॥

ಕಣ್ಣೀರ್ ಒರ್ಸಿಕಾ–ಅಳ್ಬೇಡ ಮುದ್ದು ನೀ ।
ಅವ್ವಂದಿರೆ–ಅಪ್ಪಂದಿರೆ ಪಡ್ದದೆ ಆ ॥ ೨೫ ॥

ಎರಡ್ ಮನೆಗಳ ಹೆಸ್ರ್ ಖ್ಯಾಸ್ತಿ ಉಳಿವಂಗೆ
ದೀರ್ಘಾಯುಸಲಿ ಬಾಳಿ ಬೊದ್ಕು ನೀ ಮಗಳೆ ॥ ೨೬ ॥

ಯಾಗ ನೋಡಲಿ ಅವ್ವಾ

ಶ್ರೀ ಎ.ಕೆ. ಅಜಿಲ ಸುಳ್ಯ
'ಸ್ವಾಮಿ ಪ್ರಸಾದ್'
(ಅರೆಭಾಷೆ ಅಕಾಡೆಮಿ ಗೌರವ ಪ್ರಶಸ್ತಿ ಪುರಸ್ಕೃತರು)
ಬೊಳಿಯಮಜಲು ಸುಳ್ಯ
ಮೊ: 9008912695



ಯಾಗ ನೋಡಲಿ ಅವ್ವ ನಿನ್ನ ಸಿಂಗಾರನಾ ।
ಮುಡ್ಸುದು ಯಾಗ ನಿಂಗೆ ಅಡಿಕೆ ಹಿಂಗಾರನಾ ॥
ಬೆಳ್ಳಂಗೆ ಬೆಳ್ಜಾರ್ ಹೊತ್ತಿಗೆ ।
ಕೊಡುದು ಯಾಗ ಕಲ್ಗಿಚ್ಚಿ ಹಟ್ಟಿಲಿದ್ದ ಎತ್ತಿಗೆ ॥ ೧ ॥

ಹೆಗ್‌ಲಿಲೀ ಇಸಿಕ್ಕಂಡ್ ನೊಂಜ ನೇಗಿಲ್ ।
ಹಾಕಿಕ್ಕಿಲ್ಲೆ ಈಗ ಎತ್ತಿಗೆ ಸೂಡಿ ಬಿಳ್ಗಿಲ್ ॥
ಚೆಳಿಗೆ ನಡಿವ ಹೋರಿಗ।
ಹುಳಿಮರಲಿ ಕೂಂಗುವ ಕೋಳಿಗ ॥ ೨ ॥

ಕಂಪ ಗದ್ದೆಲಿ ನೇಗಿಲೆಳೆವ ಎತ್ತ್‌ಗ।
ಸೋಂಪನ ದನಿ ಕೇಳ್ದೆ ಮಾತದ್ ಮುತ್ತುಗ॥
ನೇಜಿ ತೆಗಿಯಕೆ ಹತ್ತಾರ್ ಹೆಳ್ಮಕ್ಕ।
ಹೊತ್ತ್ ಹಾಕಿಕೆ ಹದಿನಾರ್ ಗಂಡ್ಮಕ್ಕ ॥ ೩ ॥

ಹಲಗೆ ಕಟ್ಟಿ ಗದ್ದೆ ಗೋರ್‌ಕನ ।
ಅಪ್ಪನ ಕಾಲಡಿಲಿ ಕುದ್ದ್ ಸರ್ರಂತ ಹೋಕನಾ॥
ಗದ್ದೆಲಿದ್ದ ಚೆರ್ಗ್‌ಗಳ ಮೊರ್‌ಂಟೆ ಮೊರಿಗಳಾ।
ಕೆಸ್ರ್‌ಲಿ ಹಿಡ್ದ್ ಕುಶಿ ಪಡಿದು ಯಾಗ ॥ ೪ ॥

ಗದ್ದೆ ನೆಡೂಲಿ ಕುತ್ತಿದಾ ಕಾಪು।
ಕಂಡೆದೆ ಕುದ್ಕೊಂಡ್ ಹಕ್ಕಿ ಅದ್ ಕೊಪ್ಪು॥
ಕದರ್ ತಂದ್ ಮನೆ ತುಂಬಿಸುವೊ ಇಲ್ಲಿ ।
ಹೊಸ ಬತ್ತ ಬೇಸಿಕೆ ಕಾಡ ಹೊಲಿ ಬೊಳ್ಳಿ ॥ ೫ ॥

ಹಲ್ ಕತ್ತಿ ಹಿಡ್ದ್ ಕೊಯ್ದುವೆ ಕೈಯಿನಾ।
ಜಾಲ್‌ಲಿ ಪೊಡಿ ಇಸಿ ಹೊಡ್ದವೆ ಸೂಡಿನಾ॥
ಒಣ್ಕೆ ಹಾಕಿದಾ ಗಂಧದಾ ಬೊಟ್ಟು।
ಹೊಸ್ತಿಲಿ ಕೊಣ್ದವೆ ಮಕ್ಕೆಲ್ಲಾ ಒಟ್ಟು ॥ ೬ ॥

ಯಾರ ಕೊಟೆಗೆಲಿ ಉಟ್ಟು ಬತ್ತದಾ ಪತ್ತಯ।
ಕಾಂಬಕ್ಕಿಲ್ಲೆ ಈಗ ಹೋತದ್ ಎತ್ತಯಾ॥
ಎಲ್ಲಿಟ್ಟು ಎಲ್ಲಿಟ್ಟು ಅಲ್ಲಲ್ಲಿ ಬ್ಯೊಲ್।
ಹೆಸ್ರ್ ಒಳ್ದುಟ್ಟು ಅದ್ ಬೊಳುಬೈಲು ॥ ೭ ॥

ಬ್ಯೊಲಿನ ಕೊಡಿಲಿ ಸುಡುಗಾಡ್ ಮಜಲ್।
ಕಂಡದೆ ಹಕ್ಕಲೆ ರಬ್ಬರ್‌ನ ಅಗ್‌ಲ್॥
ಬತ್ತ ತುಂಬ್ಸುವ ಕಡಿಕೆ ಎಲ್ಲಿಟ್ಟು।
ಎತ್ತ ನೋಡ್ರೂ ಅಡಿಕೆ ಅಲ್ಲಿಟ್ಟು ॥ ೮ ॥

ಬಾತ್ ಈಗ ನೋಡಿ ದುಡ್ದುನಾ ಬೆಳೆಗ।
ಸೊಲ್ದವೆ ಅಡಿಕೆನಾ ಗುಡ್ಡಣ್ಣ ಬಳಗ॥
ಗದ್ದೆನೇ ನಂಗಿತ್ತ್ ಮುಡಿ ಅಂದ್ ನೂರು ।
ಅದೆಲ್ಲಾ ಹೋಗಿ ನಾ ಈಗ ಬೋರು ॥ ೯ ॥

ಕೂಸಿನಾಂಗೆ ಇದ್ದ್ ಬುಡ್



* ಬಾಬು ಗೌಡ ಅಚ್ರಪಾಡಿ

ಹೆಜ್ಜೆ ಇಸುದಾದರೆ ನೀ ಮುಂದೆಗೆ ಇಸ್
ಹಿಂದೆಳೆಕೆ ಜನ ಇರುವೊ-ಜಾಕ್ರತೆ

ಕನ್ಸ್ ಕಟ್ಟಿಯಾನಾ, ಎತ್ತರಕೆ ನೋಡ್
ಕೆಳಗೆಳೆಕೆ ಕೆಲವು ಇರುವೊ-ತಿರ್ಗಿ ನೋಡಿಕ

ನಿನ್ನೊಳಗಿರುವ ಒಳ್ಳೆದರ ಹುಡ್ಕಿ ನೋಡ್
ನಿಂಗೊತ್ತಿಲ್ಲದೆ ಮಾಡ್ದ ಕೆಟ್ಟದರ ಹೇಳಿಕೆ ಕೆಲವು ಇರ್‍ವೊ

ಏನಾರೂ ಮಾಡ್‌ದಾದರೆ ಎಲ್ಲವು ನೆನ್ಪಿಸುವಂತದ್ ಮಾಡ್
ಪೆರಂಟ್ ಹೇಳಿಕೆ ಕೆಲವು ಒಳೊ, ಅವು ಕರೆಗಿರ್‍ಲಿ

ಒಂದು ನೆನ್ಪಿಸಿಕ, ನಂಬುದಾದರೆ ನಿನ್ನ ನೀ ನಂಬಿಕ
ನಿನ್ನ ಬಗ್ಗೆ ಅಪನಂಬಿಕೆಯವು ಕೆಲವು ಇರ್‍ವೊ

ನಿಂಗೆ ಒಂದು ಗೊತ್ತಿರ್‍ಲಿ, ಒಳ್ಳೆದರ ಮಾಡಿ ತೋರ್‍ಸಿದನಾ
ಮತ್ತೆ ಚಪ್ಪಾಳೆ ಬೊಟ್ಟಿಕೆ ಜನ ಒಳೊ ಹೆದರ್‌ಬಡ

ಒಟ್ರಾಸಿ ಜನ ಮೆಚ್ಚೊಕುಂತಿಲ್ಲೆ
ದೇವ್ರು ಮೆಚ್ಚುವ ಕೆಲ್ಸ ಮಾಡ್
ಹಸ್ ಗೂಸಿನ ಮನ್ಸ್ ನಿನ್ನದಾದರೆ ಸಾಕ್.

ಅವ್ವ ನಿನ್ನ ನೆನಪಾದೆ

(ಗೌಡ ಕನ್ನಡದಲ್ಲಿ)



ಡಾ. ಗುಡ್ಡೆಮನೆ ರಾಘವ ಗೌಡ

ಅವ್ವ ನಿನ್ನ ನೆನಪಾದೆ, ಆಗಾಗ ನೆನಪಾದೆ ॥
ಒಬ್ಬನೇ ಇರಿಕನ, ಜಡಿಮಳೆ ಬೀಳಿಕನ
ಸುಳಿಗಾಳಿ ಬೀಸಿಕನ, ಗುಡುಗು ಸಿಡ್ಲ್ ಬಾಕನ ॥ಅವ್ವ॥
        ಬಂಟಮಲೆ ಜರೆಕಾನ, ಪಯಸ್ವಿನಿ ಉಕ್ಕಿ ಹರೆಕನ
        ಕಾಡೆಲ್ಲ ಹೊತ್ತಿಕನ, ಊರೆಲ್ಲ ಮುಳ್ಗಿಕನ ॥ಅವ್ವ॥
        ಹೊಟ್ಟೆ ಹಸಿದ್ ಹೋಕನ, ಬಾಯಾರಿಕೆ ಆಕನ
        ಜ್ವರಲಿ ನಾ ಮಲಗಿಕನ, ಚಳಿ ಹಿಡಿದ್ ನಡ್ಗಿಕನ ॥ಅವ್ವ॥
ನನ್ನ ಎಲ್ಲವೂ ಬುಟ್ಟ್ ಹೋಕನ, ಮನೆಂದ ಹೊರಗೆ ಹಾಕಿಕನ
ಎಲ್ಲ ದಾರಿ ಮುಚ್ಚಿಕನ, ಬಾಳಿಲೇ ಬೇಸರ ಬಾಕನ ॥ಅವ್ವ॥
ನಿನ್ನ ನೆನಪು ಆಕನ, ನಿನ್ನ ಕೆಲಸ ನೆನಸಿಕನ
ಎದೆ ಹಿಂಡಿ ಹೋಕನ, ಕಣ್ತುಂಬಿ ಬಾಕನ ॥ಅವ್ವ॥

ನನ್ನ ಕನ್ಸ್‌ನ ಗೂಡೆ
ನನ್ನ ಗೂಡೆ,

ಯೊಗೀಶ ಹೊಸೋಳಿಕೆ
ಕಿರಣರಂಗ ಅಧ್ಯಯನ ಸಂಸ್ಥೆ
ಗುತ್ತಿಗಾರು–574216
ಮೊ: 9449576632



ಟಿ.ವಿ. ನೋಡಿಕಿಲ್ಲೆ
ಪೇಪರ್ ಓದಿದೆ, ರೇಡಿಯಾನು ಕೇಳ್ದೆ
ನನ್ನ ಕನ್ಸ್ ಮನ್ಸ್‌ಲ್ಲಿ;

ಜಡೆ ನೆಯ್ದು ಹೂವು ಮುಡ್ಡದೆ
ದೊಡ್ಡ ಬೊಟ್ಟು ಹಾಕಿದೆ
ನನ್ನ ಕನ್ಸ್ ಮನ್ಸ್‌ಲ್ಲಿ ;

ಚೆಡ್ಡಿ ಬೊನಿಯಾನ್ ಹಾಕಿಕಿಲೆ
ಮೈ ಪೂರ ಮುಚ್ಚುವಂಗೆ ಸೀರೆ ಉಟ್ಟದೆ
ನನ್ನ ಕನ್ಸ್ ಮನ್ಸ್‌ಲ್ಲಿ;

ಮೊಬೈಲ್ ಫೇಸ್‌ಬುಕ್ ನೋಡ್ತುಲಿ
ಈಗೊಳು ಕಾಗದನೇ ಬರ್‌ದದ್ದು ನಂಗೆ
ನನ್ನ ಕನ್ಸ್ ಮನ್ಸ್‌ಲ್ಲಿ;

ಬಾಯಿ ಬುಟ್ಟರೆ ಅರೆಬಾಸೆ ಮಾತಾಡ್ದೆ
ಬೇರೆ ಬಾಸೆನ ಸೇರ್ಸಿ ಅರೆಬಾಸೆನ ಕೊಲ್ಲಿಕಿಲೆ
ನನ್ನ ಕನ್ಸ್ ಮನ್ಸ್‌ಲ್ಲಿ;

ನೆಂಟ್ರ್‌ಗಳ ಪೊರ್ಲುಲಿ ಮಾತಾಡ್ಸಿದೆ
ಇದ್ದದರ ತಿಂಬಕ್ಕೆ ಕೊಟ್ಟದೆ
ನನ್ನ ಕನ್ಸ್ ಮನ್ಸ್‌ಲ್ಲಿ;

ನಾವು–ನಮ್ಮೋದ್‌ತ ಬೆರ್ದದೆ
ಕಷ್ಟ ಇದ್ದೊವುಕೆ ಉಪಕಾರ ಮಾಡ್ದೆ
ನನ್ನ ಕನ್ಸ್ ಮನ್ಸ್‌ಲ್ಲಿ:

ಮನೆಲ್ಲಿ ಎಲ್ಲವರ ಗೌರವಿಸಿದೆ
ತಪ್ಪಿನಡ್ಡರೆ ಬುದ್ದೀನು ಹೇಳ್ದೆ
ನನ್ನ ಕನ್ಸ್ ಮನ್ಸ್‌ಲ್ಲಿ:

ದೊಡ್ಡ ಶಾಲೆಲಿ ಹೆಚ್ಚಿಗೆ ಕಲ್ತುಟ್ಟು
ತುಂಬಾ ಸಂಬಳತ ಊರು ಬುಟ್ಟೊತ್ತಿಲೆ.
ನನ್ನ ಕನ್ಸ್ ಮನ್ಸ್‌ಲ್ಲಿ;

ಹೆತ್ತ ಅವ್ವ ಅಪ್ಪನ ನೆನ್ಸಿಕಂದೆ
ಹುಟ್ಟಿದ ಮನೆನ ಮರ್‌ತ್ತಿಲೆ
ನನ್ನ ಕನ್ಸ್ ಮನ್ಸ್‌ಲ್ಲಿ;

ನನ್ನ ಗೂಡೆ ಎಂದಿಗೂ
ನನ್ನ ಕನ್ಸ್ ಮನ್ಸ್‌ಲ್ಲಿ ನನ್ನವಳೆ

ಹನಿ

ನೀರಿಲ್ಲೆ, ನೀರಿಲ್ಲೆಂತ ಎಲ್ಲವು ಹೇಳ್ವೆ
ಬೋರ್ ಕೊರ್ಸಿದವು ಹೇಳಲಿ–
ನೀರಿರ್‍ಕನ– ಮಳ್ಗಾಲಲಿ ಬೋರಿಗೆ
ನೀರಿಂಗಿಸಿಯೊಳೊನಾ ?
ನಾವ್ಗೆ ಕೊಟ್ಟೊವ್ಕೆ ನಾವು ಕೊಡ್ಬೆಡನಾ ?

ಬಾಬು ಗೌಡ ಅಚ್ರಪಾಡಿ

ಪ್ರಕೃತಿ-ಕವನ

ಹರ್ಷಿತಾ ಕೇಶವ ಪೇರಿಯನ
ಮರಗೋಡು ಗ್ರಾಮ ಮತ್ತು ಅಂಚೆ
ಮಡಿಕೇರಿ ತಾಲೂಕು
ಕೊಡಗು ಜಿಲ್ಲೆ-571252
ಮೊ: 9113652752

ಹಸಿರು ಸೀರೆ ಉಟ್ಟು ನಿತ್ತುಟ್ಟು ಪ್ರಕೃತಿ
ಕೈ ಚಾಚಿ ನನ್ನ ಕರಿತ ಉಟ್ಟು
ಅದೋ ಅಲ್ಲಿ ನೋಡು ಬನ
ಇದೇ ನೋಡಾ ನಮ್ಮ ಸೊಬಗನ

ಕೈ ಬೀಸಿ ಕರ್ದದೆ ನಮ್ಮ ಬನ
ಅಲ್ಲಿ ನೋಡಕು ಪ್ರಕೃತಿ ಮಾತೆನ
ಬನದ ಹೂಗಳ, ಹಕ್ಕಿಗಳ, ಪ್ರಾಣಿಗ ಕಲರವ
ನಿಸರ್ಗ ಸೌಂದರ್ಯ ವರ್ಣಿಸಿಕ್ಕೆ ಅಸಾಧ್ಯ

ಕಾಡು ಒಳಗೆ ಜುಳು ಜುಳು ಹರೆವ ತೋಡು
ಕೈ ಚಾಚಿ ಕರ್ದದೆ ನದಿ ನನ್ನ ಸೊಬಗು ನೋಡು
ಹಕ್ಕಿಗಳ ಕಲರವ, ಆದ್ರೂ ಪ್ರಕೃತಿ ನಿಶಬ್ದ
ಕೈ ಹಿಡಿದು ಕರ್‌ಂದಂಗೆ ಅದೇ ಪ್ರಕೃತಿ

ತಂಪಾದ ತಂಗಾಳಿ ಪದ್ಯ ಹಾಡ್ತಾ ಉಟ್ಟು
ಹೂಗಳ ಪರಿಮಳ ನನ್ನ ಕರಿತ ಉಟ್ಟು
ಹಕ್ಕಿಗಳ ಹಾಡು ಕೇಳಿ ಬರ್ತಾ ಉಟ್ಟು
ಹರಿವ ನೀರ್‌ನ ಸದ್ದು ಕೇಳ್ತಾ ಉಟ್ಟು

ಎಷ್ಟು ಹೇಳಿದ್ರು ಸಾಕಾಲೇ, ಈ ಪ್ರಕೃತಿನ
ಪ್ರಕೃತಿ ಕೋಪಗೊಂಡರೆ, ಅಡಿ-ಕೊಡಿ ಒಂದಾದೆ
ಹಸಿರು ಸೀರೆ, ಕೆಂಪು ಬಣ್ಣ ಆದೆ
ಮಳೆಗಾಗಿ ಕಾಯ್ತಾ ಉಟ್ಟು ಪ್ರಕೃತಿ

ಮಳೆ ಬಾಕನ, ನವಿಲು ಗರಿ ಬಿಚ್ಚಿದೆ
ಜಿಂಕೆಗ ಒಡಾಡುವೇ, ಹಕ್ಕಿಗ ಹೋಗಿ ಗೂಡು ಸೇರ್ವೆ
ಹಣ್ಣುಗ ಮಳೆಗೆ ಉದ್ರುವೆ,
ನೀರು ಅಂತರ್ಜಲ ಸೇರ್ದೆ

ಪ್ರಕೃತಿಯ ಮಡಿಲಲ್ಲಿ ನಾವು ಕೂಸಾಗಿ ಒಳೋ
ಪ್ರಕೃತಿಯ ಸೌಂದರ್ಯನ ನೋಡಿ ಸವಿಯಕು
ವಿವರ್ಸಿಕೇ ಆದುಲೇ
ಆದ್ರೂ ಪ್ರಕೃತಿ ಕೈ ಚಾಚಿ ಕರಿತುಟ್ಟು.

ನಿವೇದನೆ



ಶ್ರೀಮತಿ ಅನಿತ ಮುಂಡೋಡಿ

ಬರೆಕೆ ಕುದ್ರಕನಲೆ
ಕಟುಸತ್ಯ ಗೊತ್ತಾತ್,
ಪದಗ ಬರೆಕೆ ಸಿಕ್ಕದೆ
ಕಣ್ಣಾಮುಚ್ಚಾಲೆಯಾಡ್‌ತ್ತಿದ್ದೊ.......

ಹಿಡಿತಕ್ಕೆ ಸಿಕ್ಕದ ಪದಪುಂಜಗ.....
ಭಾವನೆಗೆ ಒತ್ತಾಸೆಯಾಗದ ವಾಕ್ಯಗ.....
ಅಣಕಿಸಿ ಮರೆಯಾದ ಶಬ್ದಗ.....
ಸ್ಥಾನಕ್ಕಾಗಿ ಉರ್ದಿದ ಅಲ್ಪಪೂರ್ಣ ವಿರಾಮಗ...!

ಕಳಕೊಂಡಳೆ ಪದಸಾಂಗತ್ಯನ....
ಅಂತರಂಗದ ಅಂತರಾಳನ....
ಅರೆಬಾಸೆ ನುಡಿಯ ಗೆಳೆತನನ....
ಸಾಹಿತ್ಯದ ಮೇಲಿನ ಪ್ರೀತಿನ!

ಮನ್ನಿಸಿಬುಡಿ ಪದಪುಂಜಗಳೇ....
ಹಕ್ಕಲೆ ಬಂದ್ ಅಪ್ಪಿಕಣೆ....
ತೊರದ್‌ಹೋಗ್‌ಬಡಿ-ದೂರ
ಕೈ ಹಿಡಿದ್ ನಡೆಸಿ ಮುಂದೆ, ಮುಂದೆ

ಬೇಸಾಯದ ಹಾಡ್ ಪಾಡ್



ಯಶೋಧ ಎಂ. ಬಿ.
ಸ. ಉ. ಹಿ. ಪ್ರಾ. ಶಾಲೆ, ಕೋಲ್ಚಾರು
ಆಲೆಟ್ಟಿ, ಸುಳ್ಯ ದ. ಕ.

ಬೆಳ್ಜರಿಗೆ ಎದ್ದ್ ಚೆಪ್ಪು ಕುಟ್ಟಿಲಿ ಹಲ್ಲುಜ್ಜಿ
ಹೂಡುವ ಎತ್ತ್‌ಗಳಿಗೆ ಮಡ್ಡಿಕೊಟ್ಟ್ ಹೊಟ್ಟೆ ತುಂಬಿಸಿ
ತಣ್ಣನ ಮೊಸರು ತಾಸುಂಡು ಕಾಪಿ ಮುಂಡು ಉಟ್ಟ್‌ಕಂಡ್
ತಲೆಗೊಂದು ಮುಂಡಾಸ್ ಕಟ್ಟಿ, ನೊಗ ನೇಗಿಲ್ ಎತ್ತ್‌ಗೆ ಕಟ್ಟಿ
ಕೈಲೊಂದು ಕೋಲು ಹಿಡ್ದ್ ರಾಗ ಎಳ್ದ್ 'ಹೂಂ' ಕುಟ್ಟಿ
ಮುಡಿಗಟ್ಟಲೆ ಗದ್ದೆ ಹೂಡುವ ಪೊರ್ಲುನ ನೋಡುವ ಯೋಗ ಇನ್ನ್ ಯಾಗಯಾ..? ॥೧॥

ಲ್ಯಾಕಾಗಿ ಹೂಡ್ದೋ ನೇಜಿನ ನೆಟ್ಟೋಯ। ಆಗ ಅವರ
ಓ ಬೇಲೆ, ಕಥೆ ಪಾಡ್ದನ ನಾವ್ ಕೇಳೊಕಿಯಾ
ಹೆಣ್ಣ್ ಗಂಡ್ ಸೇರಿಕಂಡ್ ಕುಸಾಲ್‌ಲೇ ಕೆಲ್ಸಮಾಡಿ
ಪೊರ್ಲುಲಿ ಸಾಲ್ ನಟಿ ಮಾಡ್‌ತಿದ್ದೊಯಾ
ನೇಜಿ ಬೇಗ ಬೇರ್ ಹಿಡ್ದ್ ಉದ್ದ ಉದ್ದ ಚಿಗ್‌ರ್ ಒಡ್ದ್
ಗದ್ದೆಲಿ ಹಳೂನು ಹುಟ್ಟಿಕಣ್ತ್‌ಯಾ...... ॥೨॥

ಹುಟ್ಟಿ ಬಂದ ಹಳೂನ ಹೆಣ್ ಜನ ಕಿತ್ತೋಯಾ
ಕಿತ್ತ ಹಳೂನ ಮೆಟ್ಟಿ ಮೆಟ್ಟಿ ಗದ್ದೆಲೇ ಹುಗ್ದೊಯಾ
ಗದ್ದೆನ ನುಸುಲ್ ಮಾಡಿದೋಯಾ
ಗೊಬ್ಬರ ಹಾಕಿದೊ ನೀರ್‌ನೂ ಕಟ್ಟಿದೊ। ರಕ್ಷಣೆಗೆ
ಮಾಡ್‌ಕೋಲ್‌ಲಿ ಪಾರ ಕುದ್ದೋಯಾ। ಹಕ್ಕಿ ಗಿಳಿ ಓಡ್ಸಿಕೆ
ಒಲಿ ಸೊಪ್ಪುನ ಪೀಪಿ ಊದಿ ಪೆದ್‌ರ್ ಅಂಪಟೆ ಜಾರಿಸಿದೊಯಾ..... ॥೩॥

ಕೈ ಹೊಡೆನೂ ಆತ್ ಕದ್‌ರ್‌ನು ಹೊರಟತ್
ಹಾಲ್ ತುಂಬಿ ಕದ್‌ರ್ ದಾಂಗೀತ್। ಇದ್ ಹೇಂಗಿತ್ತ್......?
ಭೂದೇವಿಗೆ ವಂದನೆ ಮಾಡ್ವಾಂಗ್ಗಿತ್ತ್
ಪಚ್ಚೆ ಪಚ್ಚೆ ತೆನೆಗ ಹಳದಿಯಾಗಿ ಬೆಳ್ದ್ ನಿಂತ್
ಕ್ಯೊಲ್‌ನ ಕೆಲ್ಸ ಸುರು ಆತ್
ಕ್ಯೆಲ್ ಕ್ಯೊದು ಸೂಡಿ ಕಟ್ಟಿ ಸಾಲ್ ಸಾಲ್ ಇಸಿ ಆತ್ ॥೪॥

ಕೈ ಸೂಡಿ ಕಟ್ಟಗಳ ಜಾಲ್‌ಗೆ ಹೊತ್ತಾತ್। ಗಂಡ್ ಜನ
ಜಾಲ್‌ಲೆ ಕೈ ಬೇಜಿ ಒಟ್ಟೀ ಆತ್
ಕುದ್ರಿಕೆ ಬೊತ್ತದ ಬೆಂಚಿನ। ಜಾಲ್‌ಲಿಸಿ ಪಡಿ ಕಟ್ಟಿ
ಸೂಡಿ ಸೂಡಿ ಹೊಡ್ಪ್ ಸೂಡಿ ಕಡೆನ ಪಡಿಗೆ ಕುಟ್ಟಿ
ಕವಿ ಕೃತಿ ಮೀರಿಸುವಂತಹ ಜಾನಪದ ಸರಮಾಲೆ ಪೋಣಿಸಿಕಂಡ್
ಕಲ್ತ್ಪ ಚಾ ಕುಡ್ದು ಬಾಯಿ ತುಂಬ ವೀಳ್ಯ ತಿಂದಾತ್ ॥೫॥

ರಾಶಿ ರಾಶಿ ಭತ್ತನ ತಡ್ಪೆ ಬೀಸಿ ಗಾಳಿಗೆ ಹಾರ್‌ಸಿ
ಬೇರೆ ಆದ ನೊಕ್ಕೆ ಕದಿ ಕರೇಗ್ಹೋತ್
ಕಲ್ಲ್, ಜಳ್ಳ್, ಭತ್ತಂತ್ಹೇಳಿ ಬೇರೆ ಬೇರೆ ರಾಶಿ ಆತ್
ಪೊರ್ಲಾದ ಭತ್ತನ ಬಿಸ್‌ಲ್‌ಲಿ ಒಣ್‌ಗಿಸಿ
ಮನೆ ಒಳಗೆ ಕಡಿಕೆ ಕಟ್ಟಿ ತುಂಬ್‌ಸಿ ಆತ್
ಬಾಯಿ ತುಂಬ ಪೊಲಿ ಪೊಲೀಂತ ಕರ್ದಾತ್ ॥೬॥

ತುಂಬಿ ಬಂದ ಭತ್ತದ ಕಡಿಕೇನ ಭಾಗ್ಯಲಕ್ಷ್ಮಿಗೆ ಆರತಿ ಬೆಳಗಿ
ಇಂಥ ಬೇಸಾಯದ ಪೊರ್ಲು ಅಳಿಸಿ ಹೋಗ್ತಾ ಉಟ್ಟು !
ಜನಗಳ ಮನ್‌ಸ್‌ಲಿ ತುಂಬಾ ಬೇಜಾರುಟ್ಟು
ರೈತನೇ ದೇಶದ ಬೆನ್ನುಮೂಳೆ ಎಂದ್ ತಿಳ್ದ ನಾವುಗಳೆಲ್ಲ
ಮುಂದೆ ಬೇಸಾಯ ಮಡೋನೋಂಥ ಪಣಪೊಟ್ಟು
ಭೂದೇವಿಗೆ ಬಿನ್ನ ಮಾಡಿಮೋನೊ ॥೭॥

ಬಡ್ಡಡ್ಕ ಅಪ್ಪಯ್ಯ ಗೌಡ

ಪೊತ್ತ್ ಕಂತಿ ಕತ್ತಲೆ ಆಕನ
ನಮ್ಮ ಹಿರಿಯರ ನೆನ್ಪು ಬಾಕನ
ಪೂಮಲೆ ಕಾಡ್‌ನ ಕೊಡಿಂದ ಎಲ್ಲೋ........
ಅಪ್ಪಯ್ಯಜ್ಜನ ಗುಂಡ್‌ನ ಸದ್ದ್
ಅಡ್ಡ ಬಲಿಪ ಹಾರಿ ಬೀತೋ?
ಒಂಟಿ ಕಾಟಿನ ಬೇಟೆ ಆತೋ?
ಹಿಡ್ದ ಗುರಿ ತಪ್ಪಿ ಹೋಕಿಲೆ
ಹೊಡ್ದ ಈಡ್ ಸುಮ್ಮನಾಕಿಲೆ
ಓಡುವ ಹುಲಿನ ತಡ್ದ ಅಜ್ಜ
ಹಾರುವ ಹಕ್ಕಿನ ಹೊಡ್ದ ಅಜ್ಜ

ಮಲ್ಗಿದ ಹುಲಿನ ಎದ್ದ್‌ರ್ಸಿ ಹೊಡ್ದವು
ಕುದ್ದ ಹಕ್ಕಿನ ಹಾರ್ಸಿ ಹೊಡ್ದವು
ಕೂಟ ಸೇರ್ದಲ್ಲಿ ಕತೆನ ಆದೋ
ಜಾತಿ ಜನಕ್ಕೆ ಮರ್ಯಾದೆ ತಂದೋ
ಕಣ್ಣ್‌ಗೆ ಈಗಲು ಕಂಡಾಂಗದೆ
ಕೆಬಿಗೆ ಈಗಲೂ ಕೇಳ್ದಂಗಾದೆ.......
ಪೂಮಲೆ ಕಾಡ್‌ನ ಕೊಂಡಿಂದ ಎಲ್ಲೋ......
ಅಪ್ಪಯ್ಯಜ್ಜನ ಗುಂಡ್‌ನ ಸದ್ದ್

ಕೆ. ಸಿ. ಪ್ರಸನ್ನ ಬಡ್ಡಡ್ಕ
(ಆಕರ : ಸಡಗರ)

ಅಂದ್‌ನ ದಿನಗ



ಸಹನಾ ಗಿರೀಶ್
ಸಹಶಿಕ್ಷಕಿ, ವಿದ್ಯಾ ಬೋಧಿನೀ ಪ್ರೌಢಶಾಲೆ, ಬಾಳಿಲ
ಮೊ: 9482622656

ಕುಸಿ ಕುಸಿಯಾಗಿತ್ತ್ ಆ ದಿನ .... ಎಷ್ಟೊಂದು!
ರಜೆ ಸಿಕ್ಕರೆ ಸಾಕ್ ಮಾವನ ಮನೆಗೆ
ಹೋಗುದೇ ಗಮ್ಮತ್ತೊಂದು.
ದೊಡ್ಡಮಾವ, ಶಾಲೆ ಮಾವನ ಕಂಡರೆ
ಹೆದರಿಕೆ ಕೂಡಿದ ಗೌರವ
ಮೂರು ಮನೆಗೆ ಒಂದೇ ಇಜ್ಜಲ್
ಇರುವ ಆ ಕುಟುಂಬಗಳ ಒಡನಾಟ
ತುಂಬಾ ವಿಷಯಗಳಲ್ಲಿ ಅದ್ ಕಲಿಸಿತ್ತ್
ಅನುಭವದ ಪಾಠ.

ಐದು ಅತ್ತೆಯಂದಿರ ಮುದ್ದಿನ ಸೊಸೆ ನಾನೇ
ಎಂದಿಗೂ ಆತ್‌ಲೆ ನಂಗೆ ಒಂದು ಚೂರು ಬೇನೆ
ಹಠಮಾರಿ 'ನಾ' ಅಂತ್ಹೇಳ್ದಕ್ಕೆ ಇಲ್ಲಿಟ್ಟು ಪುರಾವೆ
ಹಸಿ ಅಕ್ಕಿನ ಕಡ್‌ದ್ ಆಗಲೇ ಹಿಟ್ಟು ಮಾಡಿಕೊಟ್ಟೊವು ಅವೆ.

ಮಂಗಳವಾರ 'ಅಂಗರಂಗೆ' ಮೊಸರನ್ನ ಸಮರ್ಪಣೆ
ಸ್ವಲ್ಪ ಹೊತ್ತ್‌ಲಿ ಅದು ನಾವ್‌ಗೇ ಅರ್ಪಣೆ
ಕೊತ್ತಿ, ನಾಯಿ, ಕೋಳಿಗಳ ಬರ್ಜಿ
ಅಡಿಗರ, ಕುಡ್ಪು, ಬೆಸಗೆಗಳ ಮರ್ಜಿ

ಅಪ್ಪನ ಹೆಗಲ ಮೇಲೆ ಕುದ್ದ್ ಶಾಲೆಗೆ ಹೋದ್ದು ನೆನಪುಟ್ಟು
ಲೆಕ್ಕ ತಪ್ಪುಕಾಕನ ಅಪ್ಪ ತಿರುಗಿ ಬಂದದ್ ಉಟ್ಟು.
ಮೇಲೆ-ಕೆಳಗೆ ಮನೆ, ಆಚೆಕರೆ ಅತ್ತೆ ಮನೆ
ರಜೆಗೆಲ್ಲಾ ಭೇಟಿಕೊಡುವ ನಮ್ಮ ಪಾಲಿನ ಅರಮನೆ.

ಚಾರಣದ ದ್ಯೋತಕ ಮನೆಲಿ ಇರುವ ಅಟ್ಟ
ಏಣಿಲಿ ಹತ್ತಿ ನೋಡ್‌ಕನ ಕಾಂಬೊದು ಅಲ್ಲಿ ಕಟ್ಟಕಟ್ಟ
ಭತ್ತದ ಕದಿಕೆ, ಸಿಂಪೆ, ಮಡಿಕೆ, ರಾಗಿಕಲ್ಲ್ ಅಲ್ಲಿಟ್ಟು
ನಾ ಮಲ್ಗಿದ ತೊಟ್ಟಿಲ್ ಹೊಗೆ ಹಿಡ್‌ದ್ ಹೋಗುಟ್ಟು.

ಬೀಜ ಹೆಕ್ಕುದು, ಪೇರಳೆ ಮರ ಹತ್ತುದು ಎಲ್ಲಾ ಮಾಮೂಲಿ
ಅಂದಿಗೆ ಬೇಸಿಗೆ ಶಿಬಿರದ ಮುಖ್ಯ ಖಯಾಲಿ
ಕಲ್ಲ್‌ಕಾಪಲಿ. ನೀರ್‌ದೋಸೆ ಕೋಳಿ ಗೈಪುನ ಮುಂದೆ
ಪಿಜ್ಜಾ, ಬರ್ಗರ್, ಲೇಸ್, ಕುರ್‌ಕುರ್ ಪೂರಾ ಹಿಂದೆ.

ಇಂದ್‌ನ ಮಕ್ಕಳಿಗೆ ಮಾವನ ಮನೆ
ಮಮೂಲು ಆವುಟು
ಏಣಿ, ಕೊತ್ತಿಮರಿ ಎಲ್ಲಾ ಲ್ಯಾಡರ್, ಕಿಟನ್ ಆವುಟು
ಹಾಲ್ ಪ್ಯಾಕೆಟ್‌ಲಿ ಮನೆ ಮನೆಗ ಬಂದದೆ
ಗೈಪುನ ಬಾಳೆ ಅಂಗಡಿಲೇ ಗೊನೆ ಹಾಕಿದೆ.
ಬೆಳಿಗ್ಗೆ ಬಾಗಿಲ್ ಹಾಕಿ, ಹಿಂಬತ್ತ್ ಬಾಗಿಲ್ ತೆಗೆದ್
ಹಾಕ್‌ದು, ಇದು ನಿತ್ಯ ನಡಿತ್ ಉಟ್ಟು.

ಸುಖದುಃಖ ಬೇಯ್‌ತ್ತ್‌ಟ್ಟು ಕುಕ್ಕರ್ ಒಳಗೆ
ನೆಂಟರ್‌ಗೆಲ್ಲಾ ಆಗೊಳು ಮೊಬೈಲ್, ಟಿ.ವಿ.
ಕಂಪ್ಯೂಟರ್‌ಗಳೇ
ಅತ್ತೆ-ಮಾವ ಪದಗ ದಾಟಿಟು ಎಲ್ಲೆ
ವರ್ತಿ ಎಂಬ ಪದ ಗೂಗ್‌ಲ್ಲಿ ಇಲ್ಲೆ

ಮನೆಮನಗಳಲಿ ಬೇರೊಂದು ಭಾಷೆ ಆಳ್ತ ಉಟ್ಟು
ಅರೆಭಾಷೆ ದೀಪ ಹೊತ್ತ್‌ಸಮೊ ನಾವು
ಆ ಬೆಳಕ್‌ಲಿ ಮುಂದೆ ಪೋಯಿ ನಾವು-ನೀವು

ಸಂಸಾರ ಸಾರ

ಹೆಂಡಾನ ಹೀರ್ಕಂಡ್ ದಾರೀಲಿ ಬಿದ್ಕಂಡ್
ಹೊತ್ತಾಗಿ ಮನೆಗೆ ಬರ್‍ಬ್ಯಾಡಾ ॥ ಹೊತ್ತಾಗಿ ॥
ಹೆಂಡ್ರಿಗೆ ಕಾಟ ಕೊಡ್ಬ್ಯಾಡ ॥ ೧ ॥
ನೆರೆಕೆರೆ ಮನೆಬೇಕು ಕರೆಕಾನ ಬರೊವಾಕು
ಕಿರಿಕಿರಿ ಮಾತ್ ಬರೆಹಾಳ್ ॥ ಕಿರಿಕಿರಿ ॥
ಮೊನ್ಸಾಂಗೆ ಮನ್‌ಸೇ ಬೇಕಾದ್ ॥೨ ॥
ಆ ಜಾತಿ ಈ ಜಾತಿ ದೂರುದು ಬೇಡ
ಜಾತಿ ಜಗಳಾ ನಾವುಗ್ಯಾಕೆ ॥ ಜಾತಿ ಜಗಳ ॥
ಇರುವಷ್ಟು ಕಾಲ ಸುಖಪಡೊನೊ.

ಯು.ಸು.ಗೌ
(ಆಕರ : ಸಡಗರ)


ಯಾಕೀ ಕತೆ ಹೀಂಗಾತ್ ?



ಕುತ್ಯಾಳ ನಾಗಪ್ಪ ಗೌಡ
(ಕಿರಣ)

ಬೂಮಿಯ ಮಗಳ ಕಾಡಿಲಿ ನೋಡಿ
ಕುಂಡಚ್ಚಂಗೆ ತಲೆ ಬಿಸಿಯಾಗಿ
ಅತ್ತಾ ಇತ್ತ ಮೇಲೆ ಕೆಳಗೆ
ಸುತ್ತಾಮುತ್ತ ಒಡಾಡ್ತಿತ್
ಮರ್ಟ್‌ಮರ್ಟ್ ಕೇಳ್ವಾಂಗಿತ್ತ್
ಯಾಕೀ ಕತೆ ಹೀಂಗಾತ್ ?
    ಸೇತುವೆ ಕಟ್ಟಿಕನ ಹೊಯಿಗೆಯ ಹೊತ್ತೊಳೆ,
    ನಗ್‌ತಿತ್ತಂದ್ ಕಡಲ ತೆರೆ ;
    ರಾಮದೇವರೇ ಹೊಗಳಿದೊ ಮತ್ತೆ
    ಬೆನ್ನ್ ಲಿ ಬರ್ದೊ ಮೂರ್ ಗೆರೆ ;
    ಅಂತದ್ ಹೋಗಿ ಈ ಗತಿ ಬಾತ್
    ಯಾಕೀ ಕತೆ ಹೀಂಗಾತ್ ?
ರಾಮಸ್ವಾಮಿಗ ಹೂಗಳ ನೋಡಿ
ನಿಂತಲ್ಲೇ ನಿಂತಿರ್ತಿದ್ದೊ
ಸೀತೆಯ ದನಿಯೋ ಕೋಗಿಲೆ ದನಿಯೋ
ತಿಳಿಯದೆ ಸುಮ್ಮನೆ ಒಸಿ ನಗ್ತಿದ್ದೋ ;
ಅಂತದ್ ಹೋಗಿ ಈ ಗತಿ ಬಾತ್ ;
ಯಾಕೀ ಕತೆ ಹೀಂಗಾತ್ ?
    ಸಣ್ಣಂವ ದೊಡ್ಡಂವ ಅಂಗದ ಜಾಂಬವ
    ಕಾಡಿಗೆ ಕಾಡೇ ಸೈನಿಕರಾಗಿ
    ಪುಡಿ ಪುಡಿ ಮಾಡ್ದೋ ಲಂಕೆಗೆ ಹೋಗಿ ;
    ಕದ್ದಂವ ಕಳ್ಳ ಸತ್ತೇ ಹೋತ್ ;
    ರಾವಣ ಸತ್ತರು ಕತೆ ಹಿಂಗಾತ್ !
    ಪರೀಕ್ಷೆಗೊಡ್ಡಿದ ಕೆಂಡದ ರಾಸಿಯ
ಉರಿಯೋ ನಾಲಿಗೆ ಹೂವಾಗಿತ್ತ್ ;
ಸೀತೆಯ ಪಾದಕೆ ತಂಪಾಗಿತ್ತ್ ;
ಹುಟ್ಟಿದ ಸಂಶಯ ಸುಟ್ಟೆ ಹೋತ್ ;
ಆದರು ಯಾಕೀ ಕತೆ ಹೀಂಗಾತ್ ?
ಎಲ್ಲೋ ಯಾರೂ ಏನೋ ಹೇಳಿರೆ
    ಸೀತೆಗೆ ಈ ಗತಿ ಯಾಕೆ ?
    ಮಾಡದ ತಪ್ಪಿಗೆ ಕಾಡಿನ ವಾಸ ;
    ನುಂಗುವ ಕತ್ತಲೆ ; ಚಂದ್ರನೆ ದೀಪ !
    ಕರುಣೆಗು ಬರವೇ ಅಯ್ಯೋ ಪಾಪ !
    ಅರಮನೆ ಬುಟ್ಟ್ ಕಾಡಿಗೆ ಬಾತ್ ;
    ನಂಬುದೆ ಕಷ್ಟ, ಯಾಕ್ಹೀಂಗಾತ್ !

ಕುಡಿ ಮಿಂಚ್



ವಿದ್ವಾನ್ ಟಿ. ಜಿ. ಮುಡೂರು
ಪಂಜ

ಚುಟುಕು ಕವಿ ಸರದಾರ ದಿನಕರು ದೇಸಾಯಿ
ಹಿಂದೆ ಹಿಡಿದಿದ್ದ ಕಡಲ ಬೂತಾಯಿ
ಅವ್ನ ಕೈಲಿತ್ತ್ ಬರೆನಾಲ್ಕ್ ಮೊಳ ಗಾಳ
ಆದರೂ ಅದ್ ಇಳಿತಿತ್ತ್ ಕಡಲಾಳ

'ಮೊದ್ವೆ ಹೆಣ್ಣಿನ ಬುಟ್ನೆ ಬೈನೆ ಹೆಂಡನ ಬುಟ್ನೆ
ಬುಡ್‌ಕಿಲ್ಲೆ ಕನ್ನಡಕೆ ನಾ ಪ್ರಾಣ ಕೊಟ್ನೆ'
ಹೇಳ್ತ್ ಗಡ ರತ್ನನಾ ಗೌಡ ಬುಡ್‌ಕಿಲ್ಲೆ ಅರೆಬಾಸೆ
ಹೆಂಡ ಹೆಣ್ಣ್‌ನ ಜತೆಗೆ ನನ್ನ ಹುರಿ ಮೀಸೆ.

ಹೇಂಗೊಳರಿ ಬಾವ ಹೇಳೂಕು ಸಮಾಚಾರ
ಹೇಂಗುಟ್ಟು ಈಗ ಮಂಜನ ಕಾರುಬಾರ?
ಹೇಂಗೆ ನಡೆದದೆ ಹೇಳಿ ಅಳಿಯನ ಸುದ್ದಿ
ಸರ್ತ ಮಾಡಿಕೆ ಬೊತ್ತು ನಾಯ್ಬಾಲ ಗುದ್ದಿ

ಏ ಗೂಡೆನಯ್ಯೆ ಕೇಳಿನೆ ನಿನ್ನ ಮಾತ್
ಯಾಕೇಳ್ ನೀ ಹೊಯ್ದು ದೋಸೆಗೆ ನೂರ್ ತೂತ್
ಯಾಕೆಂತ ಹೇಳೊಕೊ? ನಾಪೊರ್ಲ್ ಹೆಣ್ಣ್
ಆಚೆಮನೆ ಹೈದ ಹಾಕಿದ ನಿಮ್ಮ ಕಾವಲಿಗೆ ಕಣ್ಣ್

ಆ ಗೂಡೆ ಪಾಕ ಶಾಸ್ತ್ರಲಿ ಪಿ.ಯಚ್.ಡಿ.
ಕೇಳಿದೆ ಹೇಂಗಜ್ಜಿ ಹಸಿ ಸೋಂತೆ ಪಚಿಡಿ
ಬೊಕ್ಕ ಬಾಯಜ್ಜಿ – ನಿನ್ನ ಕಾಲೇಜು ದಂಡ
ಮೊದುವೆ ಆಗಲಿ ಕಲ್ಸಿದೆ ನಿನ್ನ ಗಂಡ

ಬುಡ್ಸಿಕಣೊಕು



ಲೀಲಾ ದಾಮೋದರ ಕುಂದಲ್ಪಾಡಿ
'ಧಾತ್ರಿ'
ವಲಯ ಅರಣ್ಯ ಕಚೇರಿ ಹತ್ತಿರ
ಗಾಂಧಿನಗರ ಸುಳ್ಯ - 574239

ಯಾವ ಕಟ್ಟ್ ನಮ್ಮ ಕಟ್ಟಿ ಹಾಕಿಟು ಹೀಂಗೆ
ಬುಡ್ಸಿಕಂಬಕೆ ನಾವ್ಗೆ ಆಗದಾಂಗೆ
ಕಲ್ಪನೆಲಿ ಮೇಲೇರಿ ಸಾಗಿ ಮೋಡದ ಮೇಲೆ
ಬಾಗಿ ಬೂಮಿನ ನೋಡಿ ಮೈಮರಿಯದಾಂಗೆ
      ಕದ ಹಾಕಿ ಕಾತರಂದ ಕಾದಂಬರಿನ ಕೈಗೆತ್ತಿ
      ಪಾತ್ರಗಳೊಟ್ಟಿಗೆ ಸವಾರಿ ಹೊರ್ಡದಾಂಗೆ
      ಕಾವ್ಯ ಪಂಕ್ತಿನ ಓದಿ ಭಾವದೀಪ್ತಿನ ಹೊಂದಿ
      ರಸಗಂಗೆಲಿ ಕಂತಿ ಎದ್ರದಾಂಗೆ
ಬೊಳಿಬುಡ್ಕನ ಅರ್ಲಿ ಸುತ್ತ ಪೊರ್ಮೊಳ ಸೂಸಿ
ಅರೆಬಿರಿವ ಹೂವುಗಳ ನೋಡದಾಂಗೆ
ಮೆಲ್ಲ ಮಲ್ಲನೆ ಬುಡ್ಸಿ ಮಾಲ್ಲೆ ಮಾಲೆನ ಮಾಡಿ
ಮುಡಿಗಿಸುವ ಪುರ್ಸೊತ್ತು ಇಲ್ಲದಾಂಗೆ
      ಹಿಂಬೊತ್ತು ಕಂತುವ ಸೂರ್ಯನೆದ್ರ್‌ಲಿ ನಿತ್
      ಹೊರ್ಟ ಬಣ್ಣದ ಜಾತ್ರೆ ನೋಡದಾಂಗೆ
      ಕರಿಗುಡಿ ಕತ್ತಲೆಲಿ ತಲೆನೇಚಿ ನೋಡಿ
      ಚುಕ್ಕಿಗಳ ಲೆಕ್ಕ ಮಾಡದಾಂಗೆ
ಬೆಟ್ಟದಾಚೆಂದಲೇ ಹೊನ್ನ ಕಿರಣನ ತೂರಿ
ಮೂಡುವ ಸೂರ್ಯನ ಪೊರ್ಲು ನೋಡದಾಂಗೆ
ಹೆಸ್‌ರ್ ಸೀರೆನ ಉಟ್ಟ್ ಬೂದೇವಿ ಹುರ್ಪುಂದ
ಕಳೆಗಟ್ಟುವ ಕ್ಷಣಕೆ ಸಾಕ್ಷಿ ಆಗದಾರಿಗೆ
      ಬಾಲ್ಯದ ಒಡನಾಡಿಗ ಎಲ್ಲಿ ದೂರಲಿ ಒಳೊನೋ
      ಅದೊರೊ ಎದೆ ಒಳಗೆ ಮುಚ್ಚಿಸಿದ ಸ್ನೇಹ
      ಏಲಿ ನೀರಾಗಿ ಎಲ್ಲರ್ರೂ ಸೇರಿ
      ಕಳ್ದ ದಿನಗಳ ಮತ್ತೆ ಕಟ್ಟದಾಂಗೆ
ಎಲ್ಲಾ ಕಡೆ ಧಾವಂತ ಗೊತ್ತ್ಲೇಲೆ ಏಕಂತ
ಪುರ್ಸೊತ್ತು ಇಲ್ಲೇಲೆ ಯಾರ್ಗೂ ಕೂಡಾ
ಎಲ್ಲೊಪ್ಪ ಗಡಿಬಿಡಿ ಎಲ್ಲೊಂದು ಹಿಡಿಮುಡಿ
ಮತ್ತೆಲ್ಲಿ ಆರೋಗ್ಯ ಶಾಂತಿ ಸಮಾಧಾನ ?
      ಬೊದ್ದೊಂದು ವರ ಅದರ ಬುಡ್ಸಿಕಣೊಕು
      ಅನಗತ್ಯ ಅಂಬೆರ್ಪುನ ಭ್ರಮೆನ ಕಟ್ಟ್‌ಂದ
      ಮತ್ತೆ ಹೊರ್ಲೊಕು ನಾವು ಸಹಜ ಬಾಳ್‌ನ ಲಯಕೆ
      ತಿರ್ಗಿ ಗಳ್ಸೊಕು ನಾವು ಭವದ ಒಟ್ಟಂದ

ಹನಿಗವನ

ಪುಷ್ಪಲತ ಅಶೋಕ ಕಾಡುಪಂಜ
ಎಂ. ಚೆಂಬು ಬಾಲೆಂಬಿ
ಮಡಿಕೇರಿ ತಾಲೂಕು

ಸೈನಿಕ

ಅಮ್ಮನ ಗರ್ಭಂದ
ಹೊರಬಂದ್ ಮಡಿಲ್‌ಲಿ ಆಡಿ
ಎದೆಹಾಲ್ ಕುಡ್ದ್
ತೊಟ್ಟಿಲ್‌ಲಿ ಆಡಿ ಬೆಳ್ದ್
ದೊಡ್ಡವನಾದ ಈ ಪೋರ
ಇಂದ್ ನಮ್ಮ ನಿಮ್ಮೆಲ್ಲರ ದೇಶ ಕಾಯುವ
ವೀರ! ಧೀರ!
ಅಪ್ಪ-ಅಮ್ಮ, ಅಕ್ಕ-ತಂಗಿ
ಅಣ್ಣ-ತಮ್ಮ, ಹೆಣ್ಣ್-ಮಕ್ಕ
ಬಂಧು ಬಳಗದವರೊಟ್ಟಿಗೆ ಇದ್ದವ
ಎಲ್ಲರ ಬುಟ್ಟ್ ಭಾರತಮಾತೆನ ಕಡೆಗೆ ಸಾಗಿದ
ವೀರ! ಶೂರ!
ನೀವುಗೆಲ್ಲವುಕೆ ನಮ್ಮ ನಮಸ್ಕಾರ......

ಬದ್‌ಕ್

ಈ ಬದುಕೇ ಹಿಂಗೆ
ನೀರ್ ಮೇಲೆನ ಗುಳ್ಳೆ ಹಂಗೆ
ತೇಲಿಕಂಡೇ ಹೋದೆ
ಯಾಗ ಬೇಕಾರೂ ಒಡ್ಡದೆ.

ಸ್ನೇಹಿತೆ

ಬೇಜಾರ್ನ ಕಳ್ದ್
ಖುಷಿನ ಕೊಟ್ಟ್
ಯಾಗೋಳು ಜೊತೆಯಾಗಿ
ಇರ್ದು.

ಸೂರ್ಯ

ಸುತ್ತ ಮುತ್ತದ
ಕಪ್ಪು ಕತ್ತಲೆನ ತೊಳ್ದ್
ಭೂಮಿಗೆ ಬೊಳ್ಪು ಕೊಡುವ
ಚೆನ್ನದ ಬಟ್ಟಲ್.

○

ಹನಿ ಕವನ



ಚಂದ್ರಾವತಿ ಬಡ್ಡಡ್ಕ
C/o ಮಾಧವ ಗೌಡ
ಮಡಪ್ಪಾಡಿ ಕಾಂಪೌಂಡು
ದೇವಸ್ಯ, ಸುಳ್ಯ 574239
ಮೊ: 9880315897

ಕಣ್ಣ್

ಲಾಯ್ಕ್ ಇದ್ದೆ
ಯಾರ ಕಣ್ಣ್ ಬೀತೋ
ಮೊದ್ವೆ ಆತ್!


ಅನರ್ಥ

ಅರ್ಥ ಆಗುಟೂಂತ
ಗ್ರೇಸಿದೆ,
ಆದ್ದ್ ಬರೀ
ಅನರ್ಥ !

ಹೋತ್

ದುಡ್ತ್
ಕುಡ್ತ್
ಹೋತ್!

ಅಕಾಡೆಮಿ ರಿಜಿಸ್ಟ್ರಾರ್ ಏನ್ ಹೇಳ್ವೆ ?



ನಾನು ತುಳು ಸಾಹಿತ್ಯ ಮತ್ತು ಸಂಸ್ಕೃತಿ ಅಕಾಡೆಮಿಯ ರಿಜಿಸ್ಟ್ರಾರ್ ಆಗಿ ನೇಮಕವಾಗಿದ್ದರೂ. ಅರೆಭಾಷೆ ಕೊಂಕಣಿ, ಬ್ಯಾರಿ, ಮುಂತಾದ ಅಕಾಡೆಮಿಗಳ ರಿಜಿಸ್ಟ್ರಾರ್ ಆಗಿ ಉಸ್ತುವಾರಿಯನ್ನು ವಹಿಸುವ ಅವಕಾಶ ಬಂದಿದೆ.

ಒಂದು ಮಾತಂತೂ ಸತ್ಯ. ಭಾಷೆ ಮತ್ತು ಸಾಹಿತ್ಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಎಲ್ಲಾ ಅಕಾಡೆಮಿಗಳ ಜವಾಬ್ದಾರಿ ಗುರುತರವಾದುದು. ಸರ್ಕಾರದ ಪ್ರೇರಣೆಯಿಂದ ಎಷ್ಟೋ ಅಳಿವಿನಂಚಿನ ಭಾಷೆ, ಸಂಸ್ಕೃತಿಗಳು ಮತ್ತೆ ಚಿಗುರಿವೆ. ಕೀಳರಿಮೆ ಕಳೆದು ಅವುಗಳ ರಕ್ಷಣೆ ಮತ್ತು ಪೋಷಣೆ ಬಗ್ಗೆ ಗಮನ ಕಾಣಬಹುದು.

ಅರೆಭಾಷೆ ಅಕಾಡೆಮಿಯ ಚಟುವಟಿಕೆಗಳು ಹಿಂದಿನ – ಹಾಗೂ ಈಗಿನ ಅಧ್ಯಕ್ಷರ ಅವಧಿಯಲ್ಲಿ ಶ್ಲಾಘನೀಯವೆನಿಸಿವೆ. ಭಾಷೆಯ ಸತ್ವವನ್ನು ಹೆಚ್ಚಿಸುವ ವಿಶೇಷ ಪ್ರಯತ್ನಗಳು ಅಕಾಡೆಮಿಯ, ಧ್ಯೇಯೊದ್ದೇಶಕ್ಕೆ ಪೂರಕವಾಗಿವೆ. ಈಗಿನ ಅಧ್ಯಕ್ಷರಾದ ಪಿ. ಸಿ. ಜಯರಾಮರ ಮುತುವರ್ಜಿಯಿಂದ ಪ್ರಥಮವಾಗಿ ಸುಳ್ಯದಲ್ಲಿ ಅರೆಭಾಷಾ ಸಾಹಿತ್ಯ ಸಮ್ಮೇಳನದ ಸಂಘಟನೆಯಂತೂ ದಾಖಲೆಯಾಗಿದೆ. ಈ ಮಾತನ್ನು ಸಮರ್ಥಿಸುವಂತೆ ಸಮ್ಮೇಳನದಲ್ಲಿ ನೆನಪಿನ ಸಂಚಿಕೆ, ಗೋಷ್ಠಿಗಳು, ಸಾಧಕರಿಗೆ ಸನ್ಮಾನ ಎಲ್ಲವೂ ಅರ್ಥಪೂರ್ಣವಾಗಿ ಜೋಡಿಸಲ್ಪಟ್ಟಿವೆ.

ಶುಭಾಶಯಗಳೊಂದಿಗೆ,

ಸ್ಥಳ : ಮಂಗಳೂರು
ದಿನಾಂಕ : 28–02–2019

ಬಿ. ಚಂದ್ರಹಾಸರೈ
ರಿಜಿಸ್ಟ್ರಾರ್

ಅರೆಭಾಷೆ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಗೊಂಡ ಸಾಧಕರು



ಪಡ್ಡಂಬೈಲು ವೆಂಕಟ್ರಮಣ ಗೌಡ

ಸುಳ್ಯದ ಇತಿಹಾಸದಲ್ಲಿ ತನ್ನ ಸಾಮಾಜಿಕ ರಾಜಕೀಯ, ಶೈಕ್ಷಣಿಕ ಸಾಧನೆಯಿಂದ ಮಾದರಿಯಾದವರು ಹಿರಿಯ ಮುತ್ಸದ್ದಿ ಪಡ್ಡಂಬೈಲು ವೆಂಕಟ್ರಮಣ ಗೌಡರು. ಸುಳ್ಯವನ್ನು ಕ್ರಿಯಾಶೀಲಗೊಳಿಸುವಲ್ಲಿ ಇವರ ಕೊಡುಗೆ ಗಮನಾರ್ಹ.

ಸುಳ್ಯ ತಾಲೂಕು ಭಾರತ ಸೇವಾ ದಳ, ಕೃಷಿಕ ಸಮಾಜ, ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷರಾಗಿ, ದ. ಕ. ಹಾಗೂ ಕೊಡಗು ಗೌಡ ಸಮಾಜದ ಅಧ್ಯಕ್ಷರಾಗಿ, ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ, ಸುಳ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಇವರು ಸುಳ್ಯ ಕೆವಿಜಿ ಕಾನೂನು ಕಾಲೇಜಿನ ಸ್ಥಾಪಕ ಪ್ರಾಂಶುಪಾಲರು. ಸುಳ್ಯದ ಶಿಲ್ಪಿ ಡಾ। ಕುರುಂಜಿ ವೆಂಕಟ್ರಮಣ ಗೌಡರ ನಿಕಟವರ್ತಿಯಾಗಿ ಆಧುನಿಕ ಸುಳ್ಯದ ನಿರ್ಮಾಣಕ್ಕೆ ತನ್ನದೇ ಆದ ಕೊಡುಗೆ ನೀಡಿದವರು. ಸುಳ್ಯದಲ್ಲಿ ನ್ಯಾಯಾಲಯ, ವಿದ್ಯಾಲಯಗಳ ಸ್ಥಾಪನೆಗೆ ಮುಂಚೂಣಿಯಾಗಿ ನಿಂತು ಕೆಲಸ ಮಾಡಿದ ದಣಿವರಿಯದ ಸಾಧಕ. ಅನೇಕ ಸೇತುವೆಗಳು, ಗ್ರಾಮೀಣ ಸಾರಿಗೆ ಅನುಷ್ಠಾನಕ್ಕೂ ಕೊಡುಗೆ ನೀಡಿದ್ದಾರೆ. ಶ್ರೀ ಚೆನ್ನಕೇಶವ ದೇವಾಲಯದ ಜೀರ್ಣೋದ್ಧಾರ ಸಮಿತಿ ಸದಸ್ಯರಾಗಿ, ಸುಳ್ಯ ತಾಲೂಕಿನ ಭೂನ್ಯಾಯ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿದವರು ಇವರು.


ಜಾಕೆ ಮಾಧವ ಗೌಡ



ಸಹಕಾರ, ರಾಜಕೀಯ, ಸಾಹಿತ್ಯ, ಸಮಾಜ ಸೇವೆ ಹೀಗೇ....... ವಿವಿಧ ಸಂಘಟನಾ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡ ಮಿಂಚಿದ ಬಹುಮುಖಿ ವ್ಯಕ್ತಿತ್ವ ಜಾಕೆ ಮಾಧವ ಗೌಡ ಅವರದು. ಸಾಮಾಜಿಕ ಧುರೀಣರಾಗಿದ್ದ ದಿ. ಜಾಕೆ ಪರಮೇಶ್ವರ ಗೌಡರ ಪುತ್ರರಾದ ಜಾಕೆ ಮಾಧವ ಗೌಡರು ತಂದೆಯ ಹಾದಿಯಲ್ಲೇ ಸಾಮಾಜಿಕ ಸೇವೆಗೆ ಧುಮುಕಿ ವಿವಿಧ ರಂಗದಲ್ಲಿ ಮುಂಚೂಣಿ ನಾಯಕರಾಗಿ ಹೊರಹೊಮ್ಮಿದವರು.

ಸಹಕಾರ ಕ್ಷೇತ್ರದಲ್ಲಿ ನಿಡುಗಾಲ ಸೇವೆ ಸಲ್ಲಿಸಿ, ಸಹಕಾರ ತತ್ವಕ್ಕೆ ಹೊಸ ಅರ್ಥ ಮತ್ತು ವ್ಯಾಖ್ಯಾನವನ್ನು ನೀಡಿದ ಮಾಧವ ಗೌಡರು, ಈ ರಂಗದಲ್ಲಿ ಸಾಧಿಸಿದ್ದು ಬಹಳ. ದ.ಕ. ಜಿಲ್ಲಾಕೇಂದ್ರ ಸಹಕಾರಿ ಬ್ಯಾಂಕಿನ ಉಪಾಧ್ಯಕ್ಷರಾಗಿ, ಸುಳ್ಯ ಎಪಿಎಂಸಿ ಅಧ್ಯಕ್ಷರಾಗಿ, ಸುಳ್ಯ ಭೂಬ್ಯಾಂಕ್ ಅಧ್ಯಕ್ಷರಾಗಿ, ಕಲ್ಮಡ್ಕ ಸೇವಾ ಸಹಕಾರಿ ಸಂಘ ಅಧ್ಯಕ್ಷರಾಗಿ, ಪಂಜಿತ್ತಾಡಿ ಸಹಕಾರಿ ಸಂಘದ ಅಧ್ಯಕ್ಷರಾಗಿ, ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಸಹಕಾರದೊಂದಿಗೆ ಸಾಹಿತ್ಯ ಸಂಘಟನೆಯಲ್ಲೂ ಸೇವೆ ಸಲ್ಲಿಸಿ, ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರಲ್ಲದೆ ಹಲವು ಸಾಹಿತ್ಯ ಸಾಮಾಜಿಕ ಸಂಘಟನಾ ಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಜೆಡಿಎಸ್ ಸುಳ್ಯ ವಿಧಾನಸಭಾ ಕ್ಷೇತ್ರ ಸಮಿತಿ ಅಧ್ಯಕ್ಷರಾಗಿದ್ದು, ಲಯನ್ಸ್ ಪ್ರಾಂತೀಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ ಹಿನ್ನಲೆ ಇವರದು.



ಡಾ। ಯು. ಪಿ. ಶಿವಾನಂದ

'ಗ್ರಾಮೀಣ ಪತ್ರಿಕೋದ್ಯಮದ ಭೀಷ್ಮ'ನೆಂದೇ ಕರೆಯಲ್ಪಡುವ ಡಾ। ಯು.ಪಿ. ಶಿವಾನಂದರು ಸುಳ್ಯ, ಪುತ್ತೂರು, ಬೆಳ್ತಂಗಡಿ ತಾಲೂಕುಗಳಲ್ಲಿ ಸುದ್ದಿ ಬಿಡುಗಡೆ ಪತ್ರಿಕೆಯ ಮೂಲಕ ಮಾಧ್ಯಮ ಕ್ರಾಂತಿ ನಡೆಸಿದವರು. ಬಳಕೆದಾರರ ಜಾಗೃತಿ ಹೋರಾಟ, ಆರೋಗ್ಯ ಜಾಗೃತಿ ಮೂಲಕ ಜನಾಂದೋಲನಕ್ಕೆ ಮುನ್ನುಡಿಯಿಟ್ಟ ಇವರು ಬಳಿಕ ಪತ್ರಿಕೆಯ ಮೂಲಕ ಮಾಹಿತಿ ಮತ್ತು ಮಾಧ್ಯಮ ಕ್ರಾಂತಿ ನಡೆಸಿದವರು.

ಸುಳ್ಯದಲ್ಲಿ ಸುದ್ದಿ ಬಿಡುಗಡೆ ವಾರಪತ್ರಿಕೆ ಸ್ಥಾಪಿಸಿ ಜನಮನದಲ್ಲಿ ಸ್ಥಾಯಿಯಾದ ಇವರು ಬಳಿಕ ಪುತ್ತೂರಿನಲ್ಲಿ ದಿನಪತ್ರಿಕೆಯನ್ನು, ಬೆಳ್ತಂಗಡಿಯಲ್ಲಿ ವಾರಪತ್ರಿಕೆಯನ್ನು ಆರಂಭಿಸಿದರು. ಸುದ್ದಿ ಚಾನೆಲ್, ಸುದ್ದಿ ವೆಬ್ ಸೈಟ್ ಕೂಡಾ ಆರಂಭಿಸಿ, ಮಾಧ್ಯಮದೊಂದಿಗೆ ಮಾಹಿತಿ ಟ್ರಸ್ಟ್, ಜೊತೆಗೆ ಇನ್ನಿತರ ಹಲವು ಯೋಜನೆಗಳಿಗೆ ಚಾಲನೆ ನೀಡಿ ಹೊಸ ದಿಕ್ಕು ತೋರಿದರು. ಬಲತ್ಕಾರದ ಬಂದ್ ವಿರೋಧಿ, ಸ್ವಚ್ಛತಾ ಜಾಗೃತಿ, ಸಾಮಾಜಿಕ ಜಾಲತಾಣಗಳ ಅಪಪ್ರಚಾರದ ವಿರುದ್ಧ ಆಂದೋಲನ ಸೇರಿದಂತೆ ಅನೇಕ ಜನಪರ ಕೆಲಸಗಳ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸಿದವರು. ರಾಜ್ಯ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಸೇರಿಸಿದಂತೆ ಅನೇಕ ಪ್ರಶಸ್ತಿಗಳಿಗೆ ಡಾ। ಯು.ಪಿ. ಶಿವಾನಂದರು ಭಾಜನರಾಗಿದ್ದಾರೆ.



ಧನಂಜಯ ಎ. ಎಸ್.

ಯಕ್ಷಗಾನ ಕ್ಷೇತ್ರದಲ್ಲಿ ಆಸಕ್ತರಿಗೆ ಪರಿಚಿತ ಹೆಸರಾಗಿರುವ ಧನಂಜಯ ಅಮ್ಮೂರು ಪಾಠಶಾಲೆಯಲ್ಲಿ ಕಲಿತಿದ್ದಕ್ಕಿಂತ ಜೀವನ ಪಾಠದಲ್ಲಿ ಕಲಿತಿದ್ದು ಅಧಿಕ. ಎಳವೆಯಲ್ಲಿಯೇ ಯಕ್ಷಗಾನದತ್ತ ಆಕರ್ಷಿತರಾಗಿ ಕಲಾ ಸಾಧನೆ ಮಾಡಿದ ಇವರು ಪೆರಾಜೆ ಶ್ರೀ ಶಾಸ್ತಾವು ಕಲಾ ಸಂಘದ ಸ್ಥಾಪನೆಗೆ ಕಾರಣರಾದವರು.

ನಾಟ್ಯವನ್ನೂ, ಹಾಡುಗಾರಿಕೆಯನ್ನೂ ಕಲಿತು ಪ್ರಬುದ್ಧ ಕಲಾವಿದರಾಗಿ ರೂಪುಗೊಂಡರು. ತನ್ನಲ್ಲಿದ್ದ ಕಲಾ ಪ್ರತಿಭೆಯನ್ನು ಯುವ ವೃಂದಕ್ಕೆ ಮಾತ್ರವಲ್ಲ ಶಾಲಾ ಮಕ್ಕಳಿಗೂ ವಿಸ್ತರಿಸಿ, ಕಲೆಯ ಮೇಲಿನ ಅಭಿಮಾನದಿಂದ ಅಲ್ಲಲ್ಲಿ ಯಕ್ಷಗಾನ ನಾಟ್ಯ ತರಬೇತಿಯನ್ನು ಉಚಿತವಾಗಿ ನಡೆಸುವುದು ಇವರ ಕಲಾ ಸೇವೆಗೆ ದ್ಯೋತಕ. ಯಕ್ಷಗಾನದಲ್ಲಿ ಸ್ತ್ರೀವೇಷ, ಹಾಸ್ಯವೇಷ, ಪುಂಡುವೇಷ, ರಕ್ಕಸ ವೇಷಗಳೆಂಬ ಎಲ್ಲಾ ಪ್ರಕಾರಗಳಲ್ಲೂ 'ಸೈ' ಎನಿಸಿದ ಇವರಿಗೆ ಹಲವು ಪ್ರಸಿದ್ಧ ಮೇಳಗಳು ಪಾತ್ರ ಮಾಡಲು ಆಹ್ವಾನ ಕೊಟ್ಟದ್ದುಂಟು. ಗ್ರಾಮೀಣ ಪ್ರದೇಶದಲ್ಲಿ ಇದ್ದುಕೊಂಡೇ ಯಕ್ಷಗಾನ ಕ್ಷೇತ್ರವನ್ನು ಬೆಳೆಸಿದ ಕೀರ್ತಿ ಧನಂಜಯ ಎ. ಎಸ್. ರವರದು.



ಗಣೇಶ್ ನಾಯರ್ ಸುಬ್ರಹ್ಮಣ್ಯ

ಪುಣ್ಯಕ್ಷೇತ್ರ ಕುಕ್ಕೆ ಶ್ರೀ ಸುಬ್ರಹ್ಮಣ್ಯದಲ್ಲಿ ಶಿಕ್ಷಣ ಕ್ರಾಂತಿ ನಡೆಸುತ್ತಿರುವ ಗಣೇಶ್ ನಾಯರ್ ತನ್ನ ಸಮಾಜ ಮುಖಿ ಶೈಕ್ಷಣಿಕ ದೃಷ್ಟಿಕೋನದ ಮೂಲಕ ಸಾಮಾಜಿಕ ರಂಗದಲ್ಲಿ ಹೊಸತನ್ನು ಕಂಡುಕೊಂಡವರು.

ಸುಬ್ರಹ್ಮಣ್ಯದಲ್ಲಿ, ತಮ್ಮ ತೀರ್ಥರೂಪ ಟಿ. ಎಂ ಕುಮಾರ ನಾಯರ್ ಸ್ಥಾಪಿಸಿದ ಅನುಗ್ರಹ ಎಜ್ಯುಕೇಶನ್ ಟ್ರಸ್ಟನ್ನು ಅವರ ಕಾಲಾನಂತರ ಮುನ್ನಡೆಸುತ್ತಿರುವ ಗಣೇಶ್ ನಾಯರ್ ಸಂಸ್ಥೆಯನ್ನು ಒಂದು ವೃಕ್ಷದಂತೆ ನೋಡಿಕೊಂಡು ಬೆಳೆಸಿದ್ದಾರೆ. ಇವರ ಕುಮಾರಸ್ವಾಮಿ ವಿದ್ಯಾಲಯದಲ್ಲಿ ಪ್ರೀಕೆಜಿಯಿಂದ ಮೊದಲ್ಗೊಂಡು 10ನೇ ತರಗತಿಯವರೆಗೆ , ಸುಬ್ರಹ್ಮಣ್ಯ ಹಾಗೂ ಪರಿಸರದ ಊರುಗಳ ನೂರಾರು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಶಿಕ್ಷಣದೊಂದಿಗೆ ಸಂಸ್ಕಾರ, ಕ್ರೀಡೆ, ವ್ಯಕ್ತಿತ್ವ ವಿಕಸನ, ಸಾಂಸ್ಕೃತಿಕ ಚಟುವಟಿಕೆ ಹೀಗೇ ಎಲ್ಲಾ ಕ್ಷೇತ್ರಗಳಲ್ಲೂ ತೆರೆದುಕೊಂಡು ಈ ಜ್ಞಾನದೇಗುಲ ಸತತ ಶೇ. 100 ಫಲಿತಾಂಶ ಪಡೆಯುವುದರಲ್ಲೂ ದಾಖಲೆ ಸೃಷ್ಟಿಸಿದೆ. ಸಾಮಾಜಿಕ ಕ್ಷೇತ್ರದಲ್ಲೂ ತೊಡಗಿಸಿಕೊಂಡಿರುವ ಗಣೇಶ್ ನಾಯರ್ ಕೊಡುಗೈ ದಾನಿಯಾಗಿ ಜನಜನಿತರಾದವರು.



ಗೋಪಾಲಕೃಷ್ಣ ಕಣ್ಕಲ್

ಮೂಲತಃ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಕಣ್ಕಲ್‌ನವರು ಇವರು. ಸದ್ಯ ಕಡಬ ತಾಲೂಕಿನ ಮುಯಿಲ ಎಂಬಲ್ಲಿ ನೆಲೆಸಿದ್ದಾರೆ. ಸಣ್ಣ ವಯಸ್ಸಿನಲ್ಲೇ ಸೈನ್ಯಕ್ಕೆ ಸೇರಿದ ಗೌಡರು ಪ್ಲಾಟೂನ್ ಟ್ಯಾಂಕ್ ಆಪರೇಟರ್ ಆಗಿ ಏರ್ ಫೋರ್ಸ್ ವಿಭಾಗದಲ್ಲಿ ಕೆಲಸ ನಿರ್ವಹಿಸಿದ್ದ ಅನುಭವಿಗಳು!

1985ರಲ್ಲಿ ಭಾರತದ ಗುಪ್ತಚರ ವಿಭಾಗಕ್ಕೆ ಆಯ್ಕೆಯಾಗಿ ಅಸ್ಸಾಂ, ಉತ್ತರಪ್ರದೇಶ, ರಾಜಸ್ಥಾನ, ಪುಣೆ, ಚೆನ್ನೈ, ಗೋವಾ, ಬೆಂಗಳೂರು ಮೊದಲಾದ ಕಡೆಗಳಲ್ಲಿ ಸೇವೆ ಸಲ್ಲಿಸಿದರು. ಪಾಕಿಸ್ತಾನ ಮತ್ತು ಚೀನಾ

ಗಡಿಪ್ರದೇಶಗಳಲ್ಲಿಯೂ ದುಡಿದವರು. 1992ರಲ್ಲಿ ಸೇವೆ ಯಿಂದ ಸ್ವಯಂ ನಿವೃತ್ತಿ ಪಡೆದು ಕರ್ನಾಟಕ ಆಡಳಿತ ಸೇವೆಯ ಪರೀಕ್ಷೆ ಎದುರಿಸುವುದರ ಜೊತೆಗೆ, ಬೆಂಗಳೂರಿನಲ್ಲಿ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸಿದರು. ಬಳಿಕ ಭಾರತೀಯ ರೈಲ್ವೇ ಇಲಾಖೆಯಲ್ಲಿ ಸಹಾಯಕ ಸ್ಟೇಷನ್ ಮಾಸ್ಟರ್ ಆಗಿ ಸೇವೆಗೆ ಸೇರಿದರು. ನಂತರ ಬೆಂಗಳೂರಿನ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನಲ್ಲಿ ವಿಜಿಲೆನ್ಸ್ ಇನ್ಸ್‌ಪೆಕ್ಟರ್ ಆಗಿ ನೇಮಕಗೊಂಡರು. ನಂತರ ಪೋಲೀಸ್ ಉಪನಿರೀಕ್ಷಕರಾಗಿ ಬೆಂಗಳೂರಿನಲ್ಲಿ ಸೇವೆ ಸಲ್ಲಿಸಿ ಭಡ್ತಿ ಪಡೆದರು. ಇದೀಗ ಭಡ್ತಿ ಪಡೆದು ಅಬಕಾರಿ ಉಪ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ಬಾಲಕೃಷ್ಣ ಗೌಡ ಕುದ್ವ

ವೃತ್ತಿಯಲ್ಲಿ ಶಿಕ್ಷಕರಾಗಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಕುದ್ವ ಬಾಲಕೃಷ್ಣ ಗೌಡರು ಉತ್ತಮ ಶಿಕ್ಷಕರೆಂದು ಹೆಸರಾದವರು. ಅಷ್ಟೇ ಅಲ್ಲ ಹಿರಿಯರ ಕ್ರೀಡಾಕೂಟದಲ್ಲಿ ಸತತವಾಗಿ ಭಾಗವಹಿಸಿ, ಕ್ರೀಡಾ ಸ್ಫೂರ್ತಿಯನ್ನು ಮೆರೆದವರು. ಕೂತ್ಕುಂಜ ಗ್ರಾಮದ ಕುದ್ವದವರಾದ ಬಾಲಕೃಷ್ಣ ಗೌಡರು ವಿವಿಧ ಶಾಲೆಗಳಲ್ಲಿ ಶಿಕ್ಷಕರಾಗಿ, ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಕ್ರೀಡೆ ಇವರ ಆಸಕ್ತಿಯ ಹವ್ಯಾಸವಾಗಿದ್ದು, ಅತ್ಯುತ್ತಮ ಕ್ರೀಡಾಪಟು ಎನಿಸಿದವರು. ನಿವೃತ್ತಿಯಾದ ಬಳಿಕ ಅನೇಕ ಮಾಸ್ಟರ್ಸ್ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದ ಹೆಮ್ಮೆ ಇವರದು. ಪಂಜದ 'ಕೋಟಿಚೆನ್ನಯ' ಕ್ರೀಡಾಂಗಣ ಅಭಿವೃದ್ಧಿಯಲ್ಲೂ ಇವರ ಶ್ರಮವಿದೆ. ಉತ್ತಮ ಕೃಷಿಕರೂ ಆಗಿರುವ ಬಾಲಕೃಷ್ಣ ಗೌಡರು ಪಂಜದ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಊರಿನ ಧಾರ್ಮಿಕ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಆಸಕ್ತಿಯಿಂದ ತೊಡಗಿಸಿಕೊಂಡಿರುವ ಬಾಲಕೃಷ್ಣ ಗೌಡರು ಪಂಜ ಪಂಚಲಿಂಗೇಶ್ವರ ದೇಗುಲದ ಅಭಿವೃದ್ಧಿ ಸಮಿತಿಯಲ್ಲೂ ದುಡಿದಿದ್ದಾರೆ. ಪಂಜದ ಆರಾಧನಾ ಸಮಿತಿ, ಗಣೇಶೋತ್ಸವ ಸಮಿತಿ, ಶಾರದೋತ್ಸವ ಸಮಿತಿಗಳಲ್ಲೂ ಸಕ್ರಿಯರಾಗಿದ್ದಾರೆ.

ಶ್ರೀಮತಿ ದಂಬೆಕೋಡಿ ಸುಶೀಲಾ



ವೃತ್ತಿಯಲ್ಲಿ ಕಾಲೇಜಿನ ಕನ್ನಡ ಪ್ರಾಧ್ಯಾಪಕಿಯಾಗಿ, ಪ್ರವೃತ್ತಿಯಲ್ಲಿ ಸಾಹಿತ್ಯ, ಸಂಘಟನೆ, ಶಿಕ್ಷಣ, ಪುಸ್ತಕ ಪ್ರಕಟಣೆ ಹೀಗೆ ಹತ್ತಾರು ಬಗೆಯಲ್ಲಿ ತೊಡಗಿಸಿಕೊಂಡಿರುವ ಶ್ರೀಮತಿ ಸುಶೀಲಾ, ಇವರ ಹುಟ್ಟೂರು ಕೊಡಗು ಜಿಲ್ಲೆಯ ಭಾಗಮಂಡಲ.

ತನ್ನ 36ನೇ ವಯಸ್ಸಿನಲ್ಲಿ ಶಿಕ್ಷಣ ವೃತ್ತಿ ಆರಂಭಿಸಿದ ಇವರು ಬೋಧನೆಯೊಂದಿಗೆ ಸಾಹಿತ್ಯ ಸಾಧನೆಯಲ್ಲೂ ಸಕ್ರಿಯರಾದವರು. ಪಠ್ಯಪುಸ್ತಕ ಸಮಿತಿ ಸದಸ್ಯರಾಗಿ, ಪರೀಕ್ಷಾ ಸಮಿತಿ ಸದಸ್ಯರಾಗಿ , ಕೊಡಗು ಜಿಲ್ಲಾ ಸಾಹಿತ್ಯ ಪರಿಷತ್ ಕಾರ್ಯದರ್ಶಿಯಾಗಿ , ಮಹಿಳಾ ಬರಹಗಾರರ ಒಕ್ಕೂಟದ ಸದಸ್ಯರಾಗಿ, ಕೊಡಗು ಅರೆಭಾಷೆ ಬರಹಗಾರರ ಸದಸ್ಯರಾಗಿ, ಕ್ರಿಯಾಶೀಲರಾಗಿದ್ದಾರೆ. ಅಲ್ಲದೆ ಕಾಲೇಜಿನ ಎನ್. ಎಸ್. ಎಸ್. ಅಧಿಕಾರಿಯಾಗಿಯೂ, ಮಹಿಳಾ ದೌರ್ಜನ್ಯ ವಿರೋಧ ಘಟಕದ ಸಂಚಾಲಕರಾಗಿಯೂ ಕೆಲಸ ಮಾಡಿದ್ದಾರೆ. ಈಗಾಗಲೇ ದಂಬೆಕೋಡಿ ಸುಶೀಲಾರವರು 5 ಪುಸ್ತಕಗಳನ್ನು ಹೊರತಂದು ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ. ಇವರ ಸಾಹಿತ್ಯ ಸಾಧನೆಯನ್ನು ಗುರುತಿಸಿ, ಹಲವು ಸನ್ಮಾನ ಹಾಗೂ ಪ್ರಶಸ್ತಿಗಳು ಇವರಿಗೆ ಸಂದಿವೆ.



ಗಂಗಯ್ಯ ಗೌಡ ಪೂಂಬಾಡಿ

ಸಹಕಾರಿ ಸಂಘದಲ್ಲಿ ಮಾರಾಟಗಾರರಾಗಿ, ಗುಮಾಸ್ತರಾಗಿ ವೃತ್ತಿ ಪ್ರವೇಶಿಸಿದ ಶ್ರೀ ಗಂಗಯ್ಯ ಗೌಡರು, ಮಡಪ್ಪಾಡಿ ಸೇವಾ ಸಹಕಾರಿ ಸಂಘದ ಕಾರ್ಯನಿರ್ವಹಣಾಧಿಕಾರಿಯಾಗಿ ನಿವೃತ್ತರಾದವರು. ಸೇವೆಯಲ್ಲಿದಷ್ಟು ಕಾಲ ತಮ್ಮ ವಿಶಿಷ್ಟ ವ್ಯಕ್ತಿತ್ವದಿಂದ ಜನಾನುರಾಗಿಯಾದ ಗಂಗಯ್ಯ ಗೌಡರು, ಸದ್ರಿ ಸಹಕಾರಿ ಸಂಘ ಸತತ ಶೇ. 100 ಸಾಲ ವಸೂಲಾತಿ ಮಾಡುವಲ್ಲಿ ಮುಖ್ಯ ಕಾರಣಕರ್ತರಾದವರು.

ಇವರೊಬ್ಬ ಕ್ರಿಯಾಶೀಲ, ಸೃಜನಶೀಲ ವ್ಯಕ್ತಿತ್ವದ ಜನಪರ-ಮನಸ್ಸಿನ ಸಹಕಾರಿ. ಇವರ ಅಧಿಕಾರಾವಧಿಯಲ್ಲಿ ಸಹಕಾರಿಸಂಘದಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳು ಕಾರ್ಯರೂಪಕ್ಕೆ ಬಂದಿವೆ. ಹೊಸ ಕಟ್ಟಡ, ಗೋದಾಮು,

ಕ್ಯಾಂಪ್ಕೊ ಖರೀದಿ ಕೇಂದ್ರ, ವ್ಯಾಪಾರ ಮಳಿಗೆ, ಪಡಿತರ ವಿತರಣೆ, ಭದ್ರತಾ ಕೋಣೆ ಹೀಗೇ ಹಲವು ಸೌಲಭ್ಯಗಳು ಸಾಕಾರಗೊಂಡಿವೆ. ಇವರೊಬ್ಬ ಅತ್ಯುತ್ತಮ ಕೃಷಿಕರೂ ಆಗಿದ್ದು ಇವರ ಕೃಷಿ ಪದ್ಧತಿ ಕೂಡ ಮಾದರಿಯಾಗಿದೆ.

ಊರಿನ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವರುವ ಗಂಗಯ್ಯ ಗೌಡ ಪೂಂಬಾಡಿಯವರು ಓರ್ವ ಜನ ಪ್ರಿಯ ಸಹಕಾರಿ ಅಧಿಕಾರಿಯೆಂದು ಹೆಸರಾದವರು.

ತೇನನ ರಾಜೇಶ್



ತೇನನ ರಾಜೇಶ್ ಮೂಲತಃ ಕೊಡಗು ಜಿಲ್ಲೆಯ ಕಾರ್ಗುಂಡದವರು. ಪುತ್ತೂರಿನ ಸಂತ ಫಿಲೋಮಿನಾ ವಿದ್ಯಾಸಂಸ್ಥೆಯಲ್ಲಿ ಪ್ರೌಢಶಿಕ್ಷಣ, ಪಿ.ಯು. ಶಿಕ್ಷಣ ಹಾಗೂ ಪದವಿ ಶಿಕ್ಷಣವನ್ನು ಪೂರೈಸಿ, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎಸ್ಸಿ (ರಸಾಯನಶಾಸ್ತ್ರ) ಸ್ನಾ. ಪದವಿಯನ್ನು ಗಳಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ಅಲ್ಪಾ ಗ್ರೂಪ್ ಆಫ್ ಕಂಪೆನಿಯಲ್ಲಿ ಆಡಳಿತ ಪಾಲುದಾರರಾಗಿದ್ದಾರೆ. ಸದರಿ ಕಂಪನಿ, ಬೆಂಗಳೂರಿನಲ್ಲಿ ಕೇಂದ್ರ ಕಚೇರಿಯನ್ನು ಹೊಂದಿದ್ದು, ಹೈದರಾಬಾದ್, ಚೆನ್ನೈ ಹಾಗೂ ಮುಂಬಯಿಗಳಲ್ಲಿ ಶಾಖಾ ಕಚೇರಿಗಳನ್ನು ಹೊಂದಿದೆ. ಕಂಪೆನಿಯು ಲ್ಯಾಬೋರೇಟರಿ, ಕೆಮಿಕಲ್ ವಸ್ತುಗಳನ್ನು ಹಾಗೂ ರಾಸಾಯನಿಕ ಬಿಡಿಭಾಗಗಳನ್ನು ಆಮದು ಮಾಡಿಕೊಂಡು ವಿತರಣೆ ಮಾಡುತ್ತಿದೆ. ಪ್ರಸ್ತುತ ಇವರು ಬೆಂಗಳೂರಿನಲ್ಲಿ ಕೊಡಗು ಮತ್ತು ದ.ಕ ಗೌಡ ಸಮಾಜದ ಅಧ್ಯಕ್ಷರಾಗಿದ್ದಾರೆ. ತನ್ನ ಆಡಳಿತ ಅವಧಿಯಲ್ಲಿ ಸಮುದಾಯದ ಜನರಿಗಾಗಿ ಹಾಗೂ ಸಾರ್ವಜನಿಕರಿಗಾಗಿ ಬೆಂಗಳೂರಿನಲ್ಲಿ ಸುಮಾರು 2 ಕೋಟಿ ನಿಧಿ ಸಂಗ್ರಹಿಸಿ ಸಂಘದ ಮುಖಾಂತರ ನೀಡಿದ್ದಾರೆ. ಇವರು ಅರೆಭಾಷೆ ಅಕಾಡೆಮಿಯ ಮಾಜಿ ಸದಸ್ಯರೂ ಹೌದು.

ಸಮ್ಮೇಳನ – ನನ್ನ ನಿರೀಕ್ಷೆ

* ಸಮ್ಮೇಳನವು ನಮ್ಮ ಮಾತೃಭಾಷೆಯ ಬಗ್ಗೆ ಆಳವಾಗಿ ಬೇರು ಬಿಟ್ಟಿರುವ ಮತ್ತು ಅಜ್ಞಾನವನ್ನು ಹೋಗಲಾಡಿಸುವತ್ತ ತನ್ನ ಚಿತ್ತವನ್ನು ಹರಿಸಬೇಕಾಗಿದೆ. ವಾಸ್ತವವಾಗಿ ಬಲಿಷ್ಠ, ನಿಕೃಷ್ಟ ಅನ್ನುವ ವಿಚಾರ ಭಾಷೆಯಲ್ಲಿಲ್ಲ.

– ಸಂಜೀವ ಕುದ್ಪಾಜೆ
ಉಪನ್ಯಾಸಕರು, ಎನ್ನೆಂಸಿ, ಸುಳ್ಯ

* ಅರೆಭಾಷೆ ಸಾಹಿತ್ಯ ಸಮ್ಮೇಳನವು ಭಾಷಾ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ ಹೆಜ್ಜೆ. ಅರೆಭಾಷೆ ಸಾಹಿತ್ಯ ಸಮ್ಮೇಳನವು ನಮ್ಮ ಪ್ರಾದೇಶಿಕ ಭಾಷೆಯ ಸೊಗಸನ್ನು ವಿಸ್ತಾರಗೊಳಿಸುವ ವೇದಿಕೆಯಾಗಬೇಕೆಂಬುದು ನನ್ನ ಆಶಯ. ಭಾಷೆಯ ಹಿಂದಿರುವ ಸಂಸ್ಕೃತಿ, ಆಚರಣೆಯ ಸತ್ವ ಅರಿತು ಅದನ್ನು ಮುಂದಿನ ಪೀಳಿಗೆಗೆ ದಾಟಿಸಲು ಸಮ್ಮೇಳನ ಪ್ರೇರಣೆ ನೀಡಬೇಕು. ಆಗ ಸಮ್ಮೇಳನ ಸಾರ್ಥಕತೆ ಪಡೆಯುತ್ತದೆ.

– ಪುಷ್ಪಾ ದೋಣಿಮನೆ
ಉಪನ್ಯಾಸಕಿ, ಸುಬ್ರಹ್ಮಣ್ಯ

* ಬೇರೆ ಭಾಷೆಗಳಲ್ಲಿ ಆಗುವಂತೆ ಇಂದು ಅರೆಭಾಷೆಯಲ್ಲಿ ತಾಲೂಕು ಮಟ್ಟದ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಸಂತಸದ ವಿಚಾರ ಭಾಷೆ, ಸಂಸ್ಕೃತಿ ಬೆಳೆಯಲು ಇರುವ ಒಂದು ಪ್ರಬಲ ಮಾಧ್ಯಮ.

– ರಮ್ಯ ದಿಲೀಪ್,
ಬಾಬ್ಲು ಬೆಟ್ಟು ಗಾಯಕಿ

* ಅಳಿವಿನಂಚಿನಲ್ಲಿರುವ ಅರೆಭಾಷೆ ಸಾಹಿತ್ಯ ಸಂಸ್ಕೃತಿಗಳಿಗೆ ಇಂತಹ ಸಮ್ಮೇಳನಗಳು ಜೀವ ತುಂಬುವ ಸಂಜೀವಿನಿಯಾಗಬೇಕು. ಇಲ್ಲಿ ಹಿರಿಯ ಹಾಗೂ ಕಿರಿಯ ಅರೆಭಾಷೆ ಸಾಹಿತಿಗಳು ಯಾರಿದ್ದಾರೆ. ಅಂಥವರನ್ನು ಗುರುತಿಸಿ ಅವರಿಗೆ ಪ್ರೋತ್ಸಾಹವನ್ನು ನೀಡುವ ಕಾರ್ಯ ನಡೆಯಬೇಕು..

– ಲಿಖಿತಾ ಗುಡ್ಡೆಮನೆ,
ವಿದ್ಯಾರ್ಥಿನಿ

ಸಮ್ಮೇಳನ ಮುಗ್ದ ಮೇಲೆ



ಶ್ರೀ ವೀರಪ್ಪ ಗೌಡ ಕಣ್ಕಲ್
ನಿವೃತ್ತ ಕೈಗಾರಿಕಾ ವಿಸ್ತರಣಾಧಿಕಾರಿ, ಸುಳ್ಯ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಮತ್ತು ಸ್ವಾಗತ ಸಮಿತಿ ಅರೆಭಾಷೆ ಸಾಹಿತ್ಯ ಸಮ್ಮೇಳನ ಸುಳ್ಯ ಹಾಗೂ ಗೌಡರ ಯುವ ಸೇವಾ ಸಂಘ (ರಿ.) ಸುಳ್ಯ ಇವರ ಕೂಡುಕಟ್ಟ್‌ಲಿ ದಿನಾಂಕ: 02-03-2019ರಂದ್ ಸುರೂನ ಅರೆಭಾಷೆ ಸಾಹಿತ್ಯ ಸಮ್ಮೇಳನ ಬಾರಿ ಪೊರ್ಲುಲಿ ಆವ್ತುಟು. ಈ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುವ ಸೌಭಾಗ್ಯ ನಂಗೆ ಸಿಕ್ಕಿತ್.

ಅರೆಭಾಷಿಕರೇ ಜಾಸ್ತಿ ಇರುವ ಸುಳ್ಯಲಿ ಸುರೂನ ಅರೆಭಾಷೆ ಸಾಹಿತ್ಯ ಸಮ್ಮೇಳನ ಆಕೂಂತ ಕರ್ನಾಟಕ ರಾಜ್ಯ ಅರೆಭಾಷೆ ಸಂಸ್ಕೃತಿ ಮತ್ತ್ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಮಾನ್ಯ ಶ್ರೀ ಪಿ.ಸಿ. ಜಯರಾಮರ ಆಶಯ ಆಗಿತ್ತ್. ಅಕಾಡೆಮಿ ಅಧ್ಯಕ್ಷರ್, ಸದಸ್ಯರ್ ಮತ್ತು ಗೌಡ ಯುವ ಸೇವಾ ಸಂಘದ (ರಿ.) ಸುಳ್ಯ ಮತ್ತು ಅರೆಭಾಷಿಕ ಮುಖ್ಯಸ್ಥರ ಸಭೆನ ದಿನಾಂಕ07-02-2019ರಂದ್ ನಡೆಸಿ ಇದೀ ಕಾರ್ಯಕ್ರಮದ ರೂಪುರೇಷೆನ ಕೊಟ್ಟ್ ಸ್ವಾಗತ ಸಮಿತಿ ರಚನೆ ಮಾಡ್ದೊ. ಇದರ ಒಟ್ಟಿಗೆ ಬೇರೆ ಬೇರೆ ವಿಭಾಗಗಳಿಗೆ ಸಂಬಂಧಪಟ್ಟ ಒಟ್ಟು 18 ಉಪಸಮಿತಿಗಳ ರಚಿಸಿ, ಪ್ರತೀ ಸಮಿತಿಗೂ ಸಂಚಾಲಕರ್ ಮತ್ತ್ ಸದಸ್ಯರ ನೇಮಕ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ಕೊಟ್ಟೊ. ಅರೆಭಾಷೆ ಸಾಹಿತ್ಯ ಸಮ್ಮೇಳನದ ಉದ್ದೇಶ ಎಲ್ಲಾ ಅರೆಭಾಷಿಕರಿಗೂ ತಿಳಿಯೋಕ್. ಅದಕ್ಕಾಗಿ ಎಲ್ಲಾ ಅರೆಭಾಷಿಕರೂ ಈ ಕಾರ್ಯಕ್ರಮಲಿ ಭಾಗವಹಿಸುವಂಗೆ ಆಕು ಎಂಬ ಉದ್ದೇಶಲಿ ಪ್ರತಿ ಗ್ರಾಮ ಮಟ್ಟಲಿ ಗ್ರಾಮ ಸಮಿತಿಗಳ ಸಭೆ ಮಾಡಿ ಪ್ರತಿ ಮನೆಗೂ ಆಮಂತ್ರಣ ಪತ್ರ ಕಳುಹಿಸಿಕೊಡುವ ಮತ್ತು ಅವೆಲ್ಲವೂ ಬರುವ ಹಾಂಗೆ ಕೆಲಸ ಮಾಡಿಕೆ.

ಅರೆಭಾಷೆ ಬಾಷಾ ಸಾಹಿತ್ಯಲಿ ಸ್ಪರ್ಧೆ:

ಅರೆಭಾಷೆ ಸಾಹಿತ್ಯ ಸಮ್ಮೇಳನದ ಲೆಕ್ಕಲಿ ಅರೆಭಾಷಿಕ ಮಕ್ಕಳಿಗೆ ದಿನಾಂಕ 24-02-2019 ಆದಿತ್ಯವಾರದಂದ್ ಕೆ.ವಿ.ಜಿ. ಕಾನೂನು ಕಾಲೇಜಿನ ಸಭಾಭವನಲಿ ಸಾಹಿತ್ಯ ಸ್ಪರ್ಧೆಗಳ ಆಯೋಜಿಸಿದ್ದೊ. 1) 1 ರಿಂದ 4ನೇ ತರಗತಿ ವರೇಗಿನ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ. 2) 5 ರಿಂದ 7ನೇ ತರಗತಿ ವರೇಗಿನ ಮಕ್ಕಳಿಗೆ ಗಾಯನ ಸ್ಪರ್ಧೆ. 3) 8 ರಿಂದ 10ನೇ ತರಗತಿ ವರೇಗಿನ ಮಕ್ಕಳಿಗೆ ಭಾಷಣ ಸ್ಪರ್ಧೆ. ಮತ್ತ್ 4) ಪಿ.ಯು.ಸಿ.ಮಕ್ಕಳಿಗೆ ಚರ್ಚಾ ಸ್ಪರ್ಧೆ ಹೀಂಗೇ 4 ವಿಭಾಗಲಿ ಅರೆಭಾಷಾ ಸಾಹಿತ್ಯದ ಕುರಿತು ಸ್ಪರ್ಧೆಗ ನಡ್ತ್. ಈ ಎಲ್ಲಾ ಜವಾಬ್ದಾರಿನ ಸಮಿತಿಯ ಸಂಚಾಲಕಿಯಾಗಿ ಶ್ರೀಮತಿ ಚಂದ್ರಮತಿಯವು ಬಾರಿ ಪೊರ್ಲುಲಿ ನಡೆಸಿಕೊಟ್ಟೊಳೊ.

ಮೆರವಣಿಗೆ:

ಅರೆಭಾಷೆ ಸಾಹಿತ್ಯ ಸಮ್ಮೇಳನದ ಹೆಸ್ರ್‌ಲಿ ನಡ್ದಿದ ಆಕರ್ಷಕ ಮೆರವಣಿಗೆಗೆ ಸುಳ್ಯದ ಅಮರಶ್ರೀ ಭಾಗ್‌ಲಿ ರಾಜ್ಯ ಒಕ್ಕಲಿಗರ ಸಂಘ(ರಿ.) ಬೆಂಗಳೂರು ಇದರ ನಿರ್ದೇಶಕರ್ ಡಾ। ರೇಣುಕಾ ಪ್ರಸಾದ್ ಕೆ.ವಿ. ಇವರಿಂದ ಉದ್ಘಾಟನೆ. ಸಾಂಪ್ರದಾಯಿಕ ಶೈಲಿಲಿ ಅಲಂಕರಿಸಿದ ವಾಹನಲಿ ಸಮ್ಮೇಳನದ ಅಧ್ಯಕ್ಷರಾದ ಮಾನ್ಯ ಶ್ರೀ ಕೆ. ಆರ್. ಗಂಗಾಧರ, ಅವರೊಟ್ಟಿಗೆ ಅಕಾಡೆಮಿ ಅಧ್ಯಕ್ಷರಾದ ಪಿ.ಸಿ. ಜಯರಾಮರ್ ಮತ್ತ್ ಸ್ವಾಗತ ಸಮಿತಿ ಅಧ್ಯಕ್ಷರಾದ ದಿನೇಶ್ ಮಡಪ್ಪಾಡಿಯವು ಆಸೀನರಾಗಿ. ಅರೆಭಾಷಿಕ ಜೀವನ ಶೈಲಿ ಮತ್ತೆ ಸಂಸ್ಕೃತಿ ಪ್ರತಿಬಿಂಬಿಸುವ ಟ್ಯಾಬ್ಲೋಗಳೊಟ್ಟಿಗೆ ನೂರಾರ್ ಜೀಪು, ಬೈಕ್‌ಗಸಮೇತ. ಈ ಸಾಂಸ್ಕೃತಿಕ ಜಾಥಾ ಮರೆಕೆ ಸಾಧ್ಯ ಇಲ್ಲೆ. ಮೆರವಣಿಗೆನ ಸಂಚಾಲಕರಾಗಿ ಶ್ರೀ ದೊಡ್ಡಣ್ಣ ಬರೆಮೇಲು ಬಾರಿಲ್ಯಾಕ್‌ಲಿ ನಿರ್ವಹಣೆ ಮಾಡಿದ್ದೊ.

ವಸ್ತು ಪ್ರದರ್ಶನ ಮತ್ತು ಪುಸ್ತಕ ಮೇಳ :
ಅರೆಬಾಷೆ ಸಾಹಿತ್ಯ ಸಮ್ಮೇಳನಲಿ ಅವತ್ತ್‌ಟಿರುವ ಪುಸ್ತಕಗಳ ಮಳಿಗೆ ಮತ್ತ್ ಹಿಂದೆ ಅರೆಬಾಷಿಕರು ಬಳಸ್‌ತಿದ್ದ ವಸ್ತುಗಳ ಪ್ರದರ್ಶನ ಏರ್ಪಡಿಸಿದ್ದೊ. ಪುಸ್ತಕ ಮಳಿಗೆನ ಉದ್ಘಾಟನೆನ ಸುಳ್ಯ ತಾಲೂಕು ಪಂಚಾಯತ್ ಅಧ್ಯಕ್ಷರಾದ ಚನಿಯ ಕಲ್ತಡ್ಕ ನೆರವೇರಿಸಿದ್ದ್. ವಸ್ತು ಪ್ರದರ್ಶನನ ಜಿಲ್ಲಾ ಪಂಚಾಯತ್ ಸದಸ್ಯ ಶ್ರೀ ಹರೀಶ ಕಂಜಿಪಿಲಿಯವು ಉಧ್ಘಾಟಿಸಿದ್ದೊ.

ಸಮ್ಮೇಳನದ ಉದ್ಘಾಟನಾ ಸಮಾರಂಭ:
ಕರ್ನಾಟಕ ರಾಜ್ಯ ಅರೆಬಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡಮಿಯಿಂದ ನಡ್ದ ಸುರೂನ ಅರೆಬಾಷೆ ಸಾಹಿತ್ಯ ಸಮ್ಮೇಳನದ ಸಭಾಧ್ಯಕ್ಷತೆ ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕರಾದ ಸನ್ಮಾನ್ಯ ಶ್ರೀ ಕೆ. ಆರ್. ಗಂಗಾಧರನವು ವಹಿಸಿದ್ದೊ. ವಿಶ್ರಾಂತ ಕುಲಪತಿ ಡಾ. ಕೊಳಂಬೆ ಚಿದಾನಂದ ಗೌಡ ದೀಪ ಬೆಳಗಿಸಿ, ಹಿಂಗಾರ ಅರಳಿಸಿ ಸಮ್ಮೇಳನದ ಉದ್ಘಾಟನೆನ ನೆರವೇರ್ಸಿದೊ. ಸಮ್ಮೇಳನ ನೆಂಪಿಗೆ ಹೊರತಂದ 'ಪಸ್‌ಲ್' ಸಂಚಿಕೆನ, ಈ ಸಂದರ್ಭಲಿ ಸಾಂಕೇತಿಕ ಅನಾವರಣ ಆತ್. ಸನ್ಮಾನ್ಯ ಶ್ರೀ ಪಿ.ಸಿ. ಜಯರಾಮ ಅಧ್ಯಕ್ಷರ್, ಕರ್ನಾಟಕ ರಾಜ್ಯ ಅರೆಬಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡಮಿ ಇವು ಆಶಯ ಮಾತ್‌ಗಳನ್ನಾಡಿದೊ. ಸಮಾರಂಭದ ಮುಖ್ಯ ನೆಂಟ್ರ್‌ಗಳಾಗಿ ಕೇಂದ್ರ ಸಚಿವರಾದ ಸನ್ಮಾನ್ಯ ಶ್ರೀ ಡಿ.ವಿ.ಸದಾನಂದ, ಗೌಡ, ಸುಳ್ಯ ಶಾಸಕರಾದ ಶ್ರೀ ಎಸ್. ಅಂಗಾರ, ಶ್ರೀ ನಿತ್ಯಾನಂದ ಮುಂಡೋಡಿ. ಅಧ್ಯಕ್ಷರ್ ಶ್ರೀ ಕುಕ್ಕೇ ಸುಬ್ರಹ್ಮಣ್ಯ ದೇವಸ್ಥಾನ, ಅಕಾಡೆಮಿಯ ಪೂರ್ವಾಧ್ಯಕ್ಷರುಗಳಾದ ಶ್ರೀ ದೇವಿಪ್ರಸಾದ್ ಸಂಪಾಜೆ, ಕೊಲ್ಯದ ಗಿರೀಶ್ ಇವರೆಲ್ಲವೂ ಹಾಜರಿದ್ದೊ. ಸಮ್ಮೇಳನಾಧ್ಯಕ್ಷರ ಮಾತ್‌ಗಳ ಸಭಾಂಗಣಲಿ ಸೇರಿದ್ದ ಭಾರೀ ಜನ ಆಲಿಸಿದೊ.

ಸುರುಲಿ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾದ ದಿನೇಶ ಮಡಪ್ಪಾಡಿಯವು ಎಲ್ಲರ ಸ್ವಾಗತಿಸಿ, ಕೊನೆಗೆ ಅಕಾಡೆಮಿ ರಿಜಿಸ್ಟ್ರಾರ್ ಚಂದ್ರಹಾಸ ರೈಯವು ಧನ್ಯವಾದ ಅರ್ಪಿಸಿದೊ. ಕಾರ್ಯಕ್ರಮದ ನಿರೂಪಣೆನ ಶ್ರೀ ಕೆ.ಟಿ. ವಿಶ್ವನಾಥ ಅಚ್ಚುಕಟ್ಟಾಗಿ ನಿರ್ವಹಿಸಿದೊ.

ಕಾವ್ಯವಾಚನ –ಗಾಯನ – ಕುಂಚ :
ಅರೆಬಾಷೆ ಕವಿಗಳ ಕವನ– ಕಾವ್ಯಗಳ ವಾಚನ, ಗಾಯನದ ಜೊತೆಗೆ ಸ್ಥಳಲಿಯೇ ಚಿತ್ರ ರಚಿಸುವ ಕಾರ್ಯಕ್ರಮ ಜಾರಿ ಹೋರ್ಲಿ ಅವ್ತುಟು. ಇದರ ನಿರ್ವಹಣೆ ಸಾಹಿತಿ ಶ್ರೀಮತಿ ಲೀಲಾವತಿ ದಾಮೋದರ್ ಕುಂದಲ್ಪಾಡಿಯವು.

ಗೋಷ್ಠಿ :
ಸಮ್ಮೇಳನಲಿ ಅರೆಬಾಷೆ ಸಬಲೀಕರಣ'ಬಾಷೆಗೆ ಮಾನ್ಯತೆ' ವಿಚಾರಲಿ, ಸ್ವಾತಂತ್ರ್ಯ ಪೂರ್ವಲಿ–ಅರೆಬಾಷಿಕರ ಸ್ಥಿತಿಗತಿಗ ಬಗ್ಗೆ ಶ್ರೀ ವಿದ್ಯಾಧರ ಬಡ್ಡಡ್ಕ, ವಕೀಲರು ಮತ್ತು ಸಂಶೋಧಕರ್ ವಿಚಾರ ಮಂಡಿಸಿರೆ, "ಸ್ವಾತಂತ್ರ ನಂತರಲಿ ಅರೆಬಾಷನ ಸಂವಿಧಾನದ ೮ನೇ ಪರಿಚ್ಛೇದಕ್ಕೆ ಸೇರ್ಸುವ ವಿಚಾರ ಮತ್ತ್ ಭಾಷಾ ಅಲ್ಪ ಸಂಖ್ಯಾತರ ಮಾನ್ಯತೆ ಬಗ್ಗೆ ಡಾ। ಕರುಣಾಕರ ನಿಡಿಂಜಿ, ಪ್ರಾಧ್ಯಾಪಕರ್ ಮತ್ತ್ ಬರಹಗಾರರ್ ವಿಚಾರಮಂಡನೆ ಮಾಡಿದ್ದೊ. ಸಮನ್ವಯಕಾರರಾಗಿ ಎ. ಕೆ. ಹಿಮಕರ ಸದಸ್ಯರ್, ಕರ್ನಾಟಕ ರಾಜ್ಯ ಅರೆಬಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡಮಿ ಅಚ್ಚ್ ಕಟ್ಟಾಗಿ ನಡೆಸಿಕೊಟ್ಟೊಳೊ.

ಸಾಧಕರಿಗೆ ಸಮ್ಮಾನ :
ಸಮ್ಮೇಳನದ ಪ್ರಯುಕ್ತ ಸಮಾಜದ ಬೇರೆ ಬೇರೆ ಕ್ಷೇತ್ರಲಿ ಸಾಧನೆ ಮಾಡ್ದವರ ಸಮ್ಮಾನಿಸುವ ಕಾರ್ಯಕ್ರಮ ಜಾರಿ ಹೋರ್ಲಿ ನಡ್ಟುಟು. ಸಮಾಜಸೇವೆಲಿ ಶ್ರೀ ಪಡ್ಡಂಬೈಲು ವೆಂಕಟ್ರಮಣ ಗೌಡ್ರ್, ಸಾಹಿತ್ಯ ಕ್ಷೇತ್ರಲಿ ಶ್ರೀಮತಿ ಮಾಚೆಕೋಡಿ ಸುಶೀಲ ಸುಬ್ರಮಣ್ಯ, ಸಹಕಾರಿ ಸೇವೆಲಿ ಶ್ರೀ ಜಾಕೆ ಮಾಧವ ಗೌಡ್ರ್, ಪತ್ರಿಕೋದ್ಯಮ ವಿಭಾಗಲಿ

ಡಾ। ಯು.ಪಿ. ಶಿವಾನಂದರ್, ಆಡಳಿತ ಸೇವಾ ಕ್ಷೇತ್ರಲಿ ಶ್ರೀ ಗೋಪಾಲಕೃಷ್ಣ ಕಣ್ಕಲ್ಲು ಕೆ.ಎ.ಎಸ್, ಉದ್ಯಮ ಕ್ಷೇತ್ರಲಿ ಶ್ರೀ ರಾಜೇಶ ತೇನನ ಭಾಗಮಂಡಲ, ಕೃಷಿ ಕ್ಷೇತ್ರಲಿ ಶ್ರೀ ಗಂಗಯ್ಯ ಗೌಡ್ರ್ ಪೂಂಬಾಡಿ, ಶಿಕ್ಷಣ ಸೇವಾ ಕ್ಷೇತ್ರಲಿ ಶ್ರೀ ಗಣೇಶ ನಾಯರ್ ಸುಬ್ರಹ್ಮಣ್ಯ, ಕ್ರೀಡಾ ಕ್ಷೇತ್ರಲಿ ಶ್ರೀ ಬಾಲಕೃಷ್ಣ ಗೌಡ್ರ್ ಕುದ್ವ ಮತ್ತ್ ಸಾಂಸ್ಕೃತಿಕ ಕ್ಷೇತ್ರಲಿ ಶ್ರೀ ಧನಂಜಯ ಅಮೆಚೂರ್ ಇವರೆಲ್ಲರ ಬಾರೀ ಗೌಜಿಲಿ ಸಮ್ಮಾನಿಸಿಯೊಳೊ. ಶ್ರೀ ಚಂದ್ರಶೇಖರ ಪೇರಾಲ್, ಮುಖ್ಯ ಗುರುಗ, ಸರಕಾರಿ ಪ್ರೌಢಶಾಲೆ ಎಲಿಮಲೆ ಇವು ಅಭಿನಂದನಾ ಭಾಷಣ ಮಾಡ್ದೊ.

ಸಮಾರೋಪ ಸಮಾರಂಭ :

ಸಂಜೆ ನಡ್ದ ಸಮಾರೋಪ ಸಮಾರಂಭದ ಅಧ್ಯಕ್ಷತೆನ ಶ್ರೀ ಪಿ.ಸಿ. ಜಯರಾಮ, ಅಧ್ಯಕ್ಷರ್, ಕರ್ನಾಟಕ ರಾಜ್ಯ ಅರೆಬಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಇವರ್ ವಹಿಸಿದ್ದೊ. ವಿಶ್ರಾಂತ ಪ್ರಾಂಶುಪಾಲರ್ ಮತ್ತ್ ಖ್ಯಾತ ಸಾಹಿತಿ ಪ್ರೊ। ಕೆ.ಇ. ರಾಧಾಕೃಷ್ಣ ಇವು ಸಮಾರೋಪ ಮಾತ್ ಆಡ್ದೊ. ಮುಖ್ಯ ನೆಂಟ್ರ್‌ಗ ಆಗಿ ಮಾಜಿ ವಿಧಾನ ಸಭಾ ಸದಸ್ಯ ಹಾಗೂ ವಿರಾಜಪೇಟೆ ಶಾಸಕರಾದ ಸನ್ಮಾನ್ಯ ಶ್ರೀ ಕೆ. ಜಿ. ಬೋಪಯ್ಯ ಮತ್ತ್ ಸನ್ಮಾನ್ಯ ಡಾ। ಕೆ.ವಿ. ಚಿದಾನಂದ, ಅಧ್ಯಕ್ಷರು ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ ಸುಳ್ಯ ಇವು ಆಗಮಿಸಿದ್ದೊ. ಸಮ್ಮೇಳನಾಧ್ಯಕ್ಷ ಸನ್ಮಾನ್ಯ ಶ್ರೀ ಕೆ. ಆರ್. ಗಂಗಾಧರ ಅವರ ಮುಕ್ತಾಯ ಭಾಷಣದೊಟ್ಟಿಗೆ ಸಮ್ಮೇಳನ ಯಶಸ್ವಿಯಾಗಿ ಮುಕ್ತಾಯ ಕಂಡತ್. ಡಾ। ಎನ್. ಎ. ಜ್ಞಾನೇಶ್ ಸ್ವಾಗತಿಸಿ, ವೀರಪ್ಪ ಗೌಡ ಕಣ್ಕಲ್ ಧನ್ಯವಾದ ಸಲ್ಲಿಸಿದೊ. ಶ್ರೀ ಜಯರಾಮ ದೇರಪ್ಪಜ್ಜನ ಮನೆ ಕಾರ್ಯಕ್ರಮ ನಿರೂಪಣೆ ಮಾಡಿದ್ದೊ.

ಸಾಂಸ್ಕೃತಿಕ ಕಾರ್ಯಕ್ರಮ :

ಸಮ್ಮೇಳನದ ಸಭಾಕಾರ್ಯಕ್ರಮದ ನಂತರ ಹಿಂಜೊತ್ತ್ 7.30ರಿಂದ ಅರೆಭಾಷಾ ಸಾಂಸ್ಕೃತಿಕ ವೈಭವ ನಡ್ತ್. ಕಲಾಬಳಗ ಮಡಿಕೇರಿ ಇವರ ವೀರ ಚರಿತ್ರೆ, ಕೊಲ್ಲಮೊಗ್ರುನ ಗೌಡ ಮತ್ತ್ ಮಹಿಳಾ ಸಮಿತಿಯವರಿಂದ ಸಿದ್ದವೇಷ, ಊರುಬೈಲು ಲೋಕೇಶ್‌ರ ನೇತೃತ್ವಲ್ಲಿ ಹಲವಾರು ಕಲಾವಿದರ್ ಅರೆಭಾಷೆ ಸಾಂಸ್ಕೃತಿಕ ಸತ್ವ ಸೇರ್ದು ಪೊರ್ಲುಪೊರ್ಲುನ ಕಾರ್ಯಕ್ರಮಗಳ ನೀಡ್ದೊಳೊ.

ಸುಳ್ಯಲಿ ನಡ್ದ ಸುರೂನ ಈ ಅರೆಬಾಷೆ ಸಾಹಿತ್ಯ ಸಮ್ಮೇಳನ ಅರೆಬಾಷಿಗರೆಲ್ಲರ ಒಂದು ರೀತಿಲಿ ಖುಶಿಪಡುವ ಹಂಗೆ ಮಾಡಿಟ್ಟು. ಸಮ್ಮೇಳನದ ಯಶಸ್ಸಿಗೆ ಕಾರಣಕರ್ತರಾದ ಅರೆಭಾಷೆ ಅಕಾಡೆಮಿ ಅಧ್ಯಕ್ಷರ್‌ಗೆ, ಎಲ್ಲಾ ನಿರ್ದೇಶಕರ್‌ಗಳಿಗೆ, ಸ್ವಾಗತ ಸಮಿತಿಯ ಅಧ್ಯಕ್ಷರ್ ಮತ್ತ್ ಪದಾಧಿಕಾರಿಗಳಿಗೆ, ಗೌಡಯುವ ಸೇವಾ ಸಂಘದ ಅಧ್ಯಕ್ಷರ್ ಮತ್ತ್ ಎಲ್ಲಾ ನಿರ್ದೇಶಕರ್‌ಗಳಿಗೆ ಅಭಿನಂದನೆ ಸಲ್ಲಿಸಕಾದೆ. ಮುಂದೆ ಪ್ರತೀ ವರ್ಷವೂ ಇಂತಹ ಸಮ್ಮೇಳನ ಆಕು. ಅರೆಭಾಷೆ ಬೆಳೆಯೋಕು, ಅರೆಬಾಷಿಕರ ಸಂಸ್ಕೃತಿ ಬೆಳೆಯೋಕು, ಅರೆಬಾಷಿಕರೂ ಬೆಳೆಯೋಕು. ಈ ಒಂದು ಮಹೋದ್ದೇಶವಿಟ್ಟ್ ನಡ್ದಂತಹಾ ಈ ಅರೆಬಾಷಾ ಸಾಹಿತ್ಯ ಸಮ್ಮೇಳನದ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿಕೆ ಅವಕಾಶ ನೀಡಿ, ಸೂಕ್ತ ಸಲಹೆ, ಮಾರ್ಗದರ್ಶನ ಮತ್ತು ಸಹಕಾರ ನೀಡ್ದ ಪ್ರತಿಯೊಬ್ಬರಿಗೂ ನಾ ಧನ್ಯವಾದ ಹೇಳ್ನೆ.

ಶ್ರೀ ವೀರಪ್ಪ ಗೌಡ ಕಣ್ಕಲ್
ಪ್ರಧಾನ ಕಾರ್ಯದರ್ಶಿ
ಸ್ವಾಗತ ಸಮಿತಿ

ಅಕಾಡೆಮಿ ಪ್ರಕಟಿಸಿದ ಪುಸ್ತಕಗಳ ವಿವರ

ಕ್ರ.ಸಂ	ಲೇಖಕರ ಹೆಸರು	ಪುಸ್ತಕದ ಪ್ರಕಾರ
01	ಶ್ರೀಮತಿ ಎಂ.ಜಿ.ಕಾವೇರಮ್ಮ "ನಿಸರ್ಗ" ಮಾವಾಜಿ ಸುಳ್ಯ, ದಕ್ಷಿಣ ಮೊ ನಂ 9448106685	ಸರ್ಮಾಲೆ ಅರೆಬಾಸೆ ಕವನ ಸಂಕಲನ
02	ಶ್ರೀಮತಿ ಎಂ.ಜಿ.ಕಾವೇರಮ್ಮ "ನಿಸರ್ಗ" ಮಾವಾಜಿ ಸುಳ್ಯ, ದಕ್ಷಿಣ ಮೊ ನಂ 9448106685	ಅಜ್ಜಪ್ಪನ ಕತಾ ಭಂಡಾರಂದ ಹೆರ್ಕಿದ ಕತೆಗ
03	ಶ್ರೀ ಪೂಜಾರೀರ ಜಿ.ಮಾದಪ್ಪ ಅರ್ವತೊಕ್ಲು ಗ್ರಾಮ ಮತ್ತು ಅಂಚೆ ಮಡಿಕೇರಿ ತಾಲ್ಲೂಕು ಕೊಡಗು ಜಿಲ್ಲೆ ಮೊ ನಂ 9483104461	ಕುಂಕುಮ ಅರೆಬಾಸೆ ವಿಚಾರ ಸಾಹಿತ್ಯ
04	ಶ್ರೀ ಕಟ್ರತನ ಕೆ.ಬೆಳ್ಯಪ್ಪ ಬಲಮುರಿ ಗ್ರಾಮ ಮತ್ತು ಅಂಚೆ ಮಡಿಕೇರಿ ತಾಲೂಕು ಕೊಡಗು ಜಿಲ್ಲೆ ಮೊ ನಂ 8197063328 08274-268290	ಬೆಳ್ಳಿಮುಷ್ಟಿ ಜೀವನ ಚರಿತ್ರೆ
05	ಶ್ರೀಮತಿ ಜೈತಡ್ಕ ಜಾನಕಿ ಬೆಳ್ಯಪ್ಪ ರೇಸ್‌ಕೋರ್ಸ್ ರಸ್ತೆ ಎಲ್ಐಸಿ ಹತ್ತಿರ ಮಡಿಕೇರಿ ತಾಲೂಕು ಕೊಡಗು ಜಿಲ್ಲೆ ಮೊ ನಂ 9008571899	ಬೇರ್‌ಲಿ ಚಿಗ್‌ರ್ ಅರೆಬಾಸೆ ಕೃತಿ
06	ಶ್ರೀ ಲೋಕೇಶ್ ಕುಂಚಡ್ಕ ಕುಂಚಡ್ಕ ಮನೆ ಆಲೆಟ್ಟಿ ಗ್ರಾಮ ಸುಳ್ಯ ತಾಲೂಕು, ದ.ಕ	ಬೊಳ್ಪು ಅರೆಬಾಸೆ ಕಥಾಸಂಕಲನ
07	ಶ್ರೀ ವಿದ್ವಾನ್ ಟಿ.ಜಿ ಮುಡೂರು ಪಂಜ ಸುಳ್ಯ 574232 ಮೊ ನಂ 9449324260	ಬೊಳ್ಪಾಕನ ಮುಗ್ತ್ ಅರೆಬಾಸೆ ನಾಟಕ ರೂಪಕ
08	ಶ್ರೀಮತಿ ನಿಡ್ಯಮಲೆ ವೇದಾವತಿ ಅನಂತ ಬಡ್ಡಡ್ಕ ಕೇರಾಫ್ ಎನ್.ಎ.ಜೀತೇಂದ್ರ ಪೆರಾಜೆ ಗ್ರಾಮ ಮತ್ತು ಅಂಚೆ ಮಡಿಕೇರಿ. 08272-234536	ಬೇಟೆನ ಬಿರ್ಸ ಅರೆಬಾಸೆ ಕಥಾಸಂಕಲನ
09	ಶ್ರೀಮತಿ ಕಟ್ರತನ ಲಲಿತಾ ಅಯ್ಯಣ್ಣ ಗೌಳಿಬೀದಿ ಮಡಿಕೇರಿ, ಕೊಡಗು ಮೊ ನಂ 7204675925	ಶ್ರೀಮತಿ ಕಟ್ರತನ ಲಲಿತಾ ಅಯ್ಯಣ್ಣ
10	ಶ್ರೀ ಬಾರಿಯಂಡ ಆರ್.ಜೋಯಪ್ಪ ಮದೆ ಗ್ರಾಮ ಮತ್ತು ಅಂಚೆ ಮಡಿಕೇರಿ ತಾಲೂಕು ಮೊ ನಂ 9481770584	ತೋರಣ ಅರೆಬಾಸೆ ಕವನ ಸಂಕಲನ
11	ಶ್ರೀಮತಿ ಎಂ.ಜಿ.ಕಾವೇರಮ್ಮ "ನಿಸರ್ಗ" ಮಾವಾಜಿ ಸುಳ್ಯ, ದಕ್ಷಿಣ ಮೊ ನಂ 9448106685	ನೆಂಪುಗಳ ರಂಗೋಲಿ ಜೀವನ ಚರಿತ್ರೆ
12	ಶ್ರೀಮತಿ ಉದಯಕುಮಾರಿ ಚೆಂಬು ಎಂ.ಚೆಂಬು ಗ್ರಾಮ ಮಡಿಕೇರಿ ತಾಲೂಕು ಮೊ ನಂ 9632900436	ಹೊಸಬೊದ್ಕ್ ಅರೆಬಾಸೆ ಕಥಾಸಂಕಲನ

13	**ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ** ರೇಸ್‌ಕೋರ್ಸ್ ರಸ್ತೆ ಎಲ್‌ಐಸಿ ಹತ್ತಿರ ಮಡಿಕೇರಿ ತಾಲೂಕು ಕೊಡಗು ಜಿಲ್ಲೆ ಮೊ ನಂ 9008571899	ಬೆಳ್ಳಿ ಚುಕ್ಕೆಗ ಅರೆಬಾಸೆ ನಾಟಕ ಸಂಕಲನ
14	**ಶ್ರೀ ಹೆಚ್.ಬಿ.ಭವಾನಿಶಂಕರ್** #115, 2ನೇ ಹಂತ, 1ನೇ 'ಎ' ಕ್ರಾಸ್ 6ನೇ ಬ್ಲಾಕ್ , ಬಿ.ಇ.ಎಲ್ ಲೇಔಟ್ ವಿದ್ಯಾರಣ್ಯಪುರ, ಬೆಂಗಳೂರು ಮೊ ನಂ 8431066066	ಅನುಭವಧಾರೆ ಅರೆಬಾಸೆ ಕವನ ಸಂಕಲನ
15	**ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ** ಕಾಫಿ-ಕೃಪ ಕಟ್ಟಡ, ರಾಜಾಶೀಟ್ ರಸ್ತೆ ಮಡಿಕೇರಿ 08272-223055	ಸಂಸ್ಕೃತಿ ಸಂಪತ್ತು ಅರೆಬಾಸೆ ಸಂಸ್ಕೃತಿ ಪರಿಚಯ
16	**ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ** ಕಾಫಿ-ಕೃಪ ಕಟ್ಟಡ ರಾಜಾಶೀಟ್ ರಸ್ತೆ ಮಡಿಕೇರಿ 08272-223055	ರುಚಿ ಅರೆಬಾಸೆ ಸಂಪ್ರದಾಯದ ಅಡಿಗೆ
17	**ಶ್ರೀಮತಿ ಎಂ.ಜಿ.ಕಾವೇರಮ್ಮ** "ನಿಸರ್ಗ" ಮಾವಾಜಿ ಸುಳ್ಯ, ದಕ್ಷಿಣ ಮೊ ನಂ 9448106685	ಬೊದ್ಕ್ ಅರೆಭಾಷೆ ಕಾದಂಬರಿ
18	**ಶ್ರೀ ಕೆ.ಆರ್.ತೇಜಕುಮಾರ್** "ಐಸಿರಿ ಫಾರ್ಮ್ಸ್" ಬಡ್ಡಡ್ಕ ಆಲೆಟ್ಟಿ ಗ್ರಾಮ ಮತ್ತು ಅಂಚೆ ಸುಳ್ಯ ತಾಲೂಕು ದ.ಕ	ಕಾಡ್‌ನ ಮಕ್ಕ ಅರೆಭಾಷೆ ಕೃತಿ
19	**ವಿನೋದ್ ಮೂಡಗದ್ದೆ** ಲೇಟ್: ಎಂ.ಸಿ.ನಾಣಯ್ಯ ಕೇರಾಫ್: ವಸಂತ ಟ್ರೇಡರ್ಸ್ ಗೋಣೀಕೊಪ್ಪ 571213 ಮೊ ನಂ 9535615759	ನೆನ್ಪುನ ಜೊಂಪೆ ಅರೆಬಾಸೆ ಕಥೆ
20	**ಡಾ.ಕರುಣಾಕರ ನಿಡಿಂಜಿ** "ನಿಡಿಂಜಿಮನೆ" ಊರುಬೈಲು ಚೆಂಬು ಗ್ರಾಮ ಕೊಡಗು ಮೊ ನಂ 9880866398	ನೆಗೆಬೇಕು ಕೇದಗೆ ಗೊನೆ ಹಾಂಗೆ ಅರೆಭಾಷೆ ಕವನ ಸಂಕಲನ
21	**ಶ್ರೀ ಭವಾನಿ ಶಂಕರ್ ಅಡ್ತಲೆ** ಅಂತೋಡು ಗ್ರಾಮ ಅಡ್ತಲೆ ಸುಳ್ಯ ತಾಲೂಕು ಮೊನಂ	ಅಪ್ಪ ಹೇಳ್ದ ಹತ್ತ್ ಕತೆಗ ಜನಪದ ಕತೆಗ
22	**ಡಾ.ಪುನೀತ್ ರಾಘವೇಂದ್ರ ಕುಂಟುಕಾಡು** ತೊಡಿಕಾನ ಗ್ರಾಮ ಸುಳ್ಯ ಮೊ ನಂ 9901722763	ಮಿಣ್ಪುಳಿ ಅರೆಬಾಷೆ ಕಥಾ ಜೊಂಗೆ
23	**ಶ್ರೀ ಪಿ.ಜಿ.ಅಂಬೆಕಲ್** "ವಿಶ್ವಾಸ್ ಡ್ಯಾಪೋಡಿಲ್ಸ್ ನಂ ಎಸ್-203 ರಾಮಚಂದ್ರಪುರ ಜಾಲಹಳ್ಳಿ ಬೆಂಗಳೂರು	ತಬ್ಲಿ ಮಂಞ ಅರೆಭಾಷೆ ಕತೆ
24	**ಪ್ರೊ.ಕೋಡಿ ಕುಶಾಲಪ್ಪ ಗೌಡ**	ಅರೆಬಾಸೆ ವ್ಯಾಕರಣ
25	**ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ** ಕಾಫಿ-ಕೃಪ ಕಟ್ಟಡ ರಾಜಾಶೀಟ್ ರಸ್ತೆ ಮಡಿಕೇರಿ 08272-223055	ಹಿಂಗಾರ ತ್ರೈ ಮಾಸಿಕ ಸಂಚಿಕೆ ಒಟ್ಟು 13 ಸಂಚಿಕೆ

ಪ್ರಸ್ತುತ ಅಧ್ಯಕ್ಷಾವಧಿಯ ಕಾರ್ಯಕ್ರಮಗ

ಕ್ರ.ಸಂ	ದಿನಾಂಕ	ವಿವರ	ಸ್ಥಳ
01	22.01.2018	ಅರೆಭಾಷೆ-ಭಾಷಾ ಸೌಹಾರ್ದ ಸಂಭ್ರಮ	ಶ್ರೀ ದುರ್ಗಾಪರಮೇಶ್ವರಿ ಕಲಾಮಂದಿರಸುಳ್ಯ
02	02.03.2018	ಕವನ-ಕುಂಚ ಕಾರ್ಯಕ್ರಮ 2018	ಕೊಡಗು ಗೌಡ ವಿದ್ಯಾ ಸಂಘ(ರಿ),ಮಡಿಕೇರಿ
03	24.06.2018	ಸಾಹಿತ್ಯ ಶಿಬಿರ ಹಾಗೂ ಸಂವಾದ	ದೇವರಾಜ ಅರಸು ಭವನ, ಮಡಿಕೇರಿ
04	22.07.2018	ಜಿಲ್ಲಾ ಮಟ್ಟದ ಆಟಿ-ನಾಟಿ ಕೂಡುಕೂಟ	ದೇವಸ್ತೂರು ಗ್ರಾಮ ಮಡಿಕೇರಿ
05	29.07.2018	ಅರೆಭಾಸೆ ಲಿಪಿ ವ್ಯಾಕರಣ ಹಾಗೂ ಭಾಷಾ ಸಬಲೀಕರಣ	ಕೆ.ವಿ.ಜಿ ಕಾನೂನು ಕಾಲೇಜು ಸಭಾಂಗಣ ಸುಳ್ಯ
06	05.08.2018	ಆಟಿ ಹಬ್ಬ -2018	ಒಕ್ಕಲಿಗ ಗೌಡ ಸಮುದಾಯ ಭವನ ಪುತ್ತೂರು
07	12.08.2018	ಅರೆಭಾಷೆ ಸಂಸ್ಕೃತಿಲಿ ಆಟಿ-ಉತ್ಸವ	ಹಾಲೆಮಜಲು ಸುಳ್ಯ
08	08.09.2018	ಅರೆಭಾಷೆ ಯಕ್ಷಗಾನ ತರಬೇತಿ ಶಿಬಿರ	ಬೆಳ್ಳಾರೆ
09	15.12.2018	ಅರೆಭಾಷೆ ಸೌಹಾರ್ದ ದಿನಾಚರಣೆ	ಕೊಡಗು ಗೌಡ ಸಮಾಜ ಮಡಿಕೇರಿ
10	05.01.2019	ಅರೆಬಾಸೆ ವಿಚಾರ ಸಂಕಿರಣ,ಕವಿಗೋಷ್ಠಿ ಸಾಂಸ್ಕೃತಿಕ ಗೌಜಿ	ಶ್ರೀ ಗುರುರಾಘವೇಂದ್ರ ಭಜನಾ ಮಂಡಳಿ ಜಾಲ್ಸೂರು, ಸುಳ್ಯ
12	20.01.2019	ಅರೆಬಾಸೆ ಪ್ರಕಟಿತ ಪುಸ್ತಕಗಳ ಬಿಡುಗಡೆ ಅರೆಬಾಸೆ ಗೌಜಿ ಮತ್ತು ಸಾಂಸ್ಕೃತಿಕ ವೈಭವ	ಮಯೂರ ಕಲಾಮಂದಿರ ಕೊಲ್ಲಮೊಗ್ರ
13	03.02.2019	2018ನೇ ಸಾಲಿನ ಗೌರವಪ್ರಶಸ್ತಿ ಸಮಾರಂಭ	ಒಕ್ಕಲಿಗ ಗೌಡ ಸಮುದಾಯ ಭವನ, ಪುತ್ತೂರು
11	17.02.2019	ಜನಪದ ಆಟ ಕೂಟ	ಸರಕಾರಿ ಪ್ರೌಢ ಶಾಲೆ, ದುಗ್ಗಲಡ್ಕ
14	18.02.2019	ಯುವ ಜನತೆ-ಅರೆಬಾಸೆ ಸಾಹಿತ್ಯ-ವಿಚಾರಗೋಷ್ಠಿ ಕಾರ್ಯಕ್ರಮ	ಕುಕ್ಕೇಶ್ರೀ ಸುಬ್ರಹ್ಮಣ್ಯೇಶ್ವರ ಕಾಲೇಜು ಸಭಾಂಗಣ
15	02.03.2019	ಸುರುನ ಸಾಹಿತ್ಯ ಸಮ್ಮೇಳನ	ಕೊಡಿಯಾಲಬೈಲು
16	03.03.2019	ಅರೆಬಾಸೆ ಸಾಂಸ್ಕೃತಿಕ ಜನಪದ ವೈಭವ	ಶ್ರೀ ವೆಂಕಟೇಶ್ವರ ಸಭಾಭವನ,ಹಾಲೆಮಜಲು
17	04.03.2019	ಅರೆಬಾಸೆ ಸಂಸ್ಕೃತಿಲಿ ಕಿಡ್ಡಾಸ ಹಬ್ಬ	ಗಾಳಿಬೀಡು ಗ್ರಾಮ, ಮಡಿಕೇರಿ
18	21.07.2019	ಅರೆಬಾಸೆ ಸಂಸ್ಕೃತಿ ಜನಪದ ಹಬ್ಬ	ಮುತ್ತಾರುಮುಡಿ ಶಾಲಾ ಆಟದ ಮೈದಾನ ಮುತ್ತಾರುಮುಡಿ, ಮಡಿಕೇರಿ
19	28.07.2019	ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯಲಿ ಆಟಿಗೌಜಿ 2019	ಶ್ರೀ ಪರಿವಾರ ಪಂಚಲಿಂಗೇಶ್ವರ ಸಭಾಭವನ, ಪಂಜ
20	31.7.2019	ವಿದ್ಯಾರ್ಥಿಗಳ ಆಟಿ ಸಂಭ್ರಮ ಅರೆಭಾಷೆ ಸಾಹಿತ್ಯ ಸಂಘ ಉದ್ಘಾಟನೆ ಮತ್ತು ಪುಸ್ತಕ ವಿತರಣೆ	ಸರಕಾರಿ ಪ್ರೌಢಶಾಲೆ ಎಲಿಮಲೆ

ಸಮ್ಮೇಳನದ ಸುದ್ದಿಗ


ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಸ್ವಾಗತ ಸಮಿತಿ, ಅರೆಭಾಷೆ ಸಾಹಿತ್ಯ ಸಮ್ಮೇಳನ, ಸುಳ್ಯ
ಗೌಡರ ಯುವ ಸೇವಾ ಸಂಘ (ರಿ.) ಸುಳ್ಯ
ಅರೆಭಾಷೆ ಸಾಹಿತ್ಯ ಸಮ್ಮೇಳನ-2019
ಸುದ್ದಿ ಬಿಡುಗಡೆ
ಅರೆಭಾಷೆ ಸಾಹಿತ್ಯ ಸಮ್ಮೇಳನದ ಆಮಂತ್ರಣ ಬಿಡುಗಡೆ
ಸಮ್ಮೇಳನದಿಂದ ಅರೆಭಾಷೆಗೆ ಎಕ್ಸ್‌ಪೋಷರ್ : ಕೆ.ಆರ್.ಜಿ.
ಅರೆಭಾಷೆಯನ್ನು ಜಾತಿಯಗಡಿ ಮೀರಿ ಬೆಳೆಸಲು ಪ್ರಯತ್ನ ಅಕಾಡೆಮಿ ಅಧ್ಯಕ್ಷ
ಫೆ 26 ವಿದ್ಯಾರ್ಥಿಗಳಿಗೆ ಸ್ಪರ್ಧೆ
ಕೆ.ಆರ್.ಗಂಗಾಧರ್ ಸಮ್ಮೇಳನಾದ
ಮಾ.2ರಂದು ಸುಳ್ಯದಲ್ಲಿ ಅರೆಭಾಷೆ ಸಾಹಿತ್ಯ ಜಾತ್ರೆ
10 ಮಂದಿಗೆ ಸನ್ಮಾನ.
ಅರೆಭಾಷೆ ಸಾಹಿತ್ಯ ಸಮ್ಮೇಳನ
ಪ್ರಥಮ ಅರೆಭಾಷೆ ಸಾಹಿತ್ಯ ಸಮ್ಮೇಳನಕ್ಕೆ ಶುಭ ಹಾರೈಕೆಗಳು

ಪ್ರತಿ ಮನೆಯಲ್ಲೂ ಮಕ್ಕಳೊಂದಿಗೆ ಅರೆಭಾಷೆಯಲ್ಲೆ ಮಾತನಾಡಿ

ಊರ ಗೌಡರ ನೇತೃತ್ವದಲ್ಲಿ ಮದುವೆ ನಡೆಯಲಿ, ವೈದಿಕರು ಬೇಡ

ಪ್ರಥಮ ಅರೆಭಾಷೆ ಸಮ್ಮೇಳನಾಧ್ಯಕ್ಷತೆಯಿಂದ ಕೆ.ಆರ್.ಗಂಗಾಧರ್ ಕರೆ



ಪ್ರಥಮ ಅರೆಭಾಷೆ ಸಮ್ಮೇಳನಾಧ್ಯಕ್ಷತೆಯಿಂದ ಕೆ.ಆರ್.ಗಂಗಾಧರ್ ಕರೆ

ಆಡಿದರೆ ಮಾತ್ರ ಭಾಷೆ ಉಳಿವು




ಮನುಷ್ಯತ್ವದ ಅರೆಭಾಷೆ ಉಳಿಸೋಣ



ಸುಳ್ಯದಲ್ಲಿ ಪ್ರಪ್ರಥಮ ಅರೆಭಾಷೆ ಸಾಹಿತ್ಯ ಸಮ್ಮೇಳನ

ಆಡುಭಾಷೆಯಾಗಿ ಅರೆಭಾಷೆ ಇನ್ನಷ್ಟು ಬೆಳೆಯಲಿ



ಸುಳ್ಯದಲ್ಲಿ ಪ್ರಪ್ರಥಮ ಅರೆಭಾಷೆ ಸಾಹಿತ್ಯ ಸಮ್ಮೇಳನ

ಅರೆಭಾಷೆಯ ಬಗ್ಗೆ ಕೀಳರಿಮೆ ಬೇಡ: ಕೇಂದ್ರ ಸಚಿವ ಡಿ.ವಿ.ಸದಾನಂದ ಗೌಡ



(ಅಮರ ಸುದಿ)

ಸುಳ್ಯದಲ್ಲಿ ಪ್ರಪ್ರಥಮ ಅರೆಭಾಷೆ ಸಾಹಿತ್ಯ ಸಮ್ಮೇಳನ

(ಅಮರ ಸುದಿ)

ಅರೆಭಾಷೆ ಸಮ್ಮೇಳನ : ಸುದ್ದಿ ವಿಶೇಷಾಂಕ ಪುರವಣಿ ಬಿಡುಗಡೆ





ಅರೆಭಾಷೆ ಸಬಲೀಕರಣ- ಭಾಷೆಗೆ ಮಾನ್ಯತೆ : ವಿಚಾರಗೋಷ್ಠಿ (ವಿಜಯ ಕರ್ನಾಟಕ)

ಅರೆಭಾಷೆ ಉಳಿವು ನಮ್ಮೆಲ್ಲರ ಜವಾಬ್ದಾರಿ

(ಹೊಸ ದಿಗಂತ)

ಮಾತನಾಡಿದರೆ ಮಾತ್ರ ಭಾಷೆ ಉಳಿಯಲು ಸಾಧ್ಯ

(ವಾರ್ತಾ ಭಾರತಿ)

ಸಾಮರಸ್ಯಕ್ಕೆ ಅರೆಭಾಷೆಯ ಕೊಡುಗೆ ಅಪಾರ: ಗಂಗಾಧರ್

ಅರೆಭಾಷೆ ಆಡುಭಾಷೆಯಾಗಲಿ: ಡಿ.ವಿ.

ಸುಳ್ಯದಲ್ಲಿ ಪ್ರಥಮ ಅರೆಭಾಷೆ ಸಾಹಿತ್ಯ ಸಮ್ಮೇಳನ ಉದ್ಘಾಟನೆ




ಅರೆಭಾಷೆ ಆಡುಭಾಷೆಯಾಗಲಿ: ಡಿ.ವಿ.

(ಉದಯವಾಣಿ)

(ಪ್ರಜಾ ವಾಣಿ)

ಅರೆಭಾಷೆ ನಾಶವಾಗದಂತೆ ಎಚ್ಚರವಹಿಸಿ





ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

2012-13 ಸಾಲಿನ ಆಡಳಿತ ಮಂಡಳಿ
(29-05-2012ರಿಂದ 27-06-2013)


ಶ್ರೀ ಎನ್. ಎಸ್. ದೇವಿಪ್ರಸಾದ್
ಪ್ರಥಮ ಅಧ್ಯಕ್ಷರು


ಶ್ರೀ ತಳೂರು ಕಿಶೋರ್ ಕುಮಾರ್
ಸದಸ್ಯರು


ಶ್ರೀಮತಿ [illegible]
ಸದಸ್ಯರು


ಶ್ರೀ ಚೆಂಬುಮನೆ ಚಂದ್ರಶೇಖರ್
ಸದಸ್ಯರು


ಶ್ರೀ ತುಂತಜೆ ವೆಂಕಟೇಶ್ (ಗಣೇಶ್)
ಸದಸ್ಯರು


ಶ್ರೀ ಕೆ. ಶಿವರಾಮ ಗೌಡ
ಸದಸ್ಯರು


ಶ್ರೀ ಪದ್ಮ ಕೋಲ್ಚಾರ್
ಸದಸ್ಯರು


ಶ್ರೀ ಲೋಕಯ್ಯ ಗೌಡ ಕೆ.
ಸದಸ್ಯರು


ಶ್ರೀ ಇಡ್ಯಡ್ಕ ಮೋಹನ ಗೌಡ
ಸದಸ್ಯರು


ಶ್ರೀ ಅಮೆ ಪಾಲಾಕ್ಷ
ಸದಸ್ಯರು


ಶ್ರೀಮತಿ ತೆಕ್ಕಡೆ ಶೋಭಾ ಮೋಹನ್
ಸದಸ್ಯರು


ಶ್ರೀ [illegible]
ಸದಸ್ಯರು

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

2015-16 ಸಾಲಿನ ಆಡಳಿತ ಮಂಡಳಿ
(13-08-2014ರಿಂದ 13-08-2017)



ಶ್ರೀ ಕೊಲ್ಯದ ಗಿರೀಶ್
ಅಧ್ಯಕ್ಷರು



ಡಾ। ಪೂವಪ್ಪ ಕಣಿಯೂರು
ಸದಸ್ಯರು



ಡಾ. ಕೋರನ ಸರಸ್ವತಿ ಪ್ರಕಾಶ್
ಸದಸ್ಯರು



ಶ್ರೀ ಮೋಹನ್ ಸೋನ
ಸದಸ್ಯರು



ಶ್ರೀಮತಿ ಸಂಗೀತಾರವಿರಾಜ್
ಸದಸ್ಯರು



ಶ್ರೀ ಯಶವಂತ ಕುಡೆಕಲ್
ಸದಸ್ಯರು



ಶ್ರೀ ಜೋಜಪ್ಪ ಗೌಡ ಮದುವೆಗದ್ದೆ
ಸದಸ್ಯರು



ಶ್ರೀ ಜಿ. ಪಿ. ವಸಂತ
ಸದಸ್ಯರು



ಶ್ರೀ ಸದಾನಂದ ಮಾವಜಿ
ಸದಸ್ಯರು



ಶ್ರೀ ಮೋಹನ್‌ದಾಸ್ ಮಂದ್ರಿರ
ಸದಸ್ಯರು



ಶ್ರೀ ಕುದೆಕಲ್ ಸಂತೋಷ್
ಸದಸ್ಯರು



ಶ್ರೀ ಪಿ. ಎಸ್. ಕಾರ್ಯಪ್ಪ
ಸದಸ್ಯರು



ಶ್ರೀ ಅಣ್ಣಾಜಿ ಗೌಡ ಪೈಲ
ಸದಸ್ಯರು

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಸೇವೆಸಲ್ಲಿಸಿದ ರಿಜಿಸ್ಟ್ರಾರ್‌ಗಳು



ಶ್ರೀ ವಿನೋದ್ ಚಂದ್ರ
ರಿಜಿಸ್ಟ್ರಾರ್
(05-07-2012 - 27-09-2012)



ಶ್ರೀಮತಿ ಎಸ್. ಕಾಂತಮ್ಮ
ರಿಜಿಸ್ಟ್ರಾರ್
(27-09-2012 - 27-03-2013)



ಶ್ರೀಮತಿ ನಿರ್ಮಲ ಮಠಪತಿ
ರಿಜಿಸ್ಟ್ರಾರ್
(27-03-2013 - 25-07-2014)



ಶ್ರೀಮತಿ ಮಂಗಲಾ ನಾಯಕ್
ರಿಜಿಸ್ಟ್ರಾರ್
(25-07-2014 - 23-07-2015)



ಶ್ರೀ ಉಮರಬ್ಬ
ರಿಜಿಸ್ಟ್ರಾರ್
(23-07-2015 - 01-10-2018)



ಶ್ರೀ ಚಂದ್ರಹಾಸ ರೈ
ರಿಜಿಸ್ಟ್ರಾರ್
(01-10-2018 -)

ಅರ್ಥ ಸದಸ್ಯರು



ಶ್ರೀಮತಿ ಎಚ್. ವಿ. ಇಂದ್ರಮ್ಮ
ಅರ್ಥಸದಸ್ಯರು
(05-07-2012 - 05-09-2013)



ಶ್ರೀ ಎಸ್. ಐ. ಭಾವಿಕಟ್ಟೆ
ಅರ್ಥಸದಸ್ಯರು
(05-09-2013 - 23-01-2016)



ಶ್ರೀ ಕುಳ್ಳಯ್ಯ
ಅರ್ಥಸದಸ್ಯರು
(23-01-2016 - 30-06-2017)



ಶ್ರೀ ರವಿಕುಮಾರ್
ಅರ್ಥಸದಸ್ಯರು
(01-07-2017 - 18-08-2017)



ಶ್ರೀ ಚೆನ್ನಸ್ವಾಮಿ
ಅರ್ಥಸದಸ್ಯರು
(18-08-2017 - 16-05-2018)



ಶ್ರೀಮತಿ [illegible] ಟಿ.
ಅರ್ಥಸದಸ್ಯರು
(17-05-2018 ರಿಂದ)

2013 - 14ನೇ ಸಾಲಿನ ಗೌರವ ಪ್ರಶಸ್ತಿ ಪುರಸ್ಕೃತರ್



ಶ್ರೀ ಬಾರಿಯಂಡ ಜೋಯಪ್ಪ
(ಅರೆಭಾಷೆ ಸಾಹಿತ್ಯ ಕ್ಷೇತ್ರ)



ಶ್ರೀ ಹೊದ್ದೆಟಿ ಭವಾನಿಶಂಕರ್
(ಅರೆಭಾಷೆ ಜಾನಪದ ಕ್ಷೇತ್ರ)

2014 - 15ನೇ ಸಾಲಿನ ಗೌರವ ಪ್ರಶಸ್ತಿ ಪುರಸ್ಕೃತರ್



ಶ್ರೀ ವಿದ್ವಾನ್ ಟಿ. ಜಿ. ಮುಡೂರು
(ಅರೆಭಾಷೆ ಸಾಹಿತ್ಯ ಕ್ಷೇತ್ರ)



ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ
(ಅರೆಭಾಷೆ ಜಾನಪದ ಕ್ಷೇತ್ರ)



ಶ್ರೀಮತಿ ಗೀತಾ ಮೋಂಟಡ್ಕ
(ಕಲಾಕ್ಷೇತ್ರ)

2016 - 17ನೇ ಸಾಲಿನ ಗೌರವ ಪ್ರಶಸ್ತಿ ಪುರಸ್ಕೃತರ್



ಶ್ರೀ ಕೇಪು ಅಜಿಲ
(ಅರೆಭಾಷೆ ಜನಪದ ಮತ್ತು ಸಂಸ್ಕೃತಿ)



ಶ್ರೀ ಪಟ್ಟಡ ಪ್ರಭಾಕರ
(ಅರೆಭಾಷೆ ಸಾಹಿತ್ಯ, ಕಲೆ)



ಶ್ರೀ ಅಮ್ಮಾಜೀರ ಪೊನ್ನಪ್ಪ
(ಅರೆಭಾಷೆ ಸಂಗೀತ)

2017 - 18ನೇ ಸಾಲಿನ ಗೌರವ ಪ್ರಶಸ್ತಿ ಪುರಸ್ಕೃತರ್



ಶ್ರೀಮತಿ ಎಂ. ಬಿ. ಕಾವೇರಮ್ಮ
(ಅರೆಭಾಷೆ ಸಾಹಿತ್ಯ ಕ್ಷೇತ್ರ)



ಶ್ರೀ ಕುಲ್ಲಚನ ಕಾರ್ಯಪ್ಪ
(ಅರೆಭಾಷೆ ಜಾನಪದ ಕ್ಷೇತ್ರ)



ಶ್ರೀ ಪುರುಷೋತ್ತಮ ಬಿಳಿಮಲೆ
(ಅರೆಭಾಷೆ / ಜಾನಪದ ಸಂಶೋಧನೆ)

2018 - 19ನೇ ಸಾಲಿನ ಗೌರವ ಪ್ರಶಸ್ತಿ ಪುರಸ್ಕೃತರ್



ಪ್ರೊ. ಕೋಡಿ ಕುಶಾಲಪ್ಪ ಗೌಡ
(ಅರೆಭಾಷೆ ಸಾಹಿತ್ಯ ಸಂಶೋಧನಾ ಕ್ಷೇತ್ರ)



ಡಾ. ಎನ್. ಸುಕುಮಾರ ಗೌಡ
(ಶಿಕ್ಷಣ ಅಧ್ಯಯನ ಮತ್ತು
ಸಂಶೋಧನೆ ಕ್ಷೇತ್ರ)



ಶ್ರೀಮತಿ ಕಾಳೆಯಂಡ ತಂಗಮ್ಮ ಅಪ್ಪಚ್ಚು
(ಅರೆಭಾಷೆ ಸಂಸ್ಕೃತಿ ಕ್ಷೇತ್ರ)

ನೆಂಪಿನ ಚಿತ್ರಕೂಟ



ಮೆರವಣಿಗೆಗೆ ಸಾಲಂಕಾರದ ಮೈಸೂರ್ನ ಕುದುರೆ

ಅಧ್ಯಕ್ಷರ ಮೆರವಣಿಗೆಂದ ಸುರು





ಸಮ್ಮೇಳನ ಅಧ್ಯಕ್ಷರ
ಮೆರವಣಿಗೆಗೆ ಮೆರ
ಬೈಕ್‌ರ್ಯಾಲಿ

ಧ್ವಜಾರೋಹಣ ನಿರ್ವಹಣೆ ಮಾಡ್ದೊ
ದೊಡ್ಡಣ್ಣ ಬರೆಮೇಲು &
ಶಿವರಾಮ ಕಜೆ





ಸುದ್ದಿಬಿಡುಗಡೆ
ವಿಶೇಷ ಪುರವಣಿ ಬಿಡುಗಡೆ



ಅಧ್ಯಕ್ಷರ್ಗೆ-ಅತಿಥಿಗಳ್ಗೆ ಪೂರ್ಣಕುಂಭ ಸ್ವಾಗತ



ಹಿಂದೆನವರ ಹಳೆ ವಸ್ತುಗಳ ಸಂಗ್ರಹ – ಉದ್ಘಾಟನೆ





ಹಿಂದೆನವರ ಹಳೆ ವಸ್ತುಗ



ದೇವರ ಪ್ರಾರ್ಥನೆಂದ ಸಮ್ಮೇಳ
ಸಭೆ ಸುರಾತ್



ಕಾರ್ಯಾಧ್ಯಕ್ಷ ದಿನೇಶ್ ಮಡಪ್ಪಾಡಿ
ಸ್ವಾಗತಿಸಿದೊ.



ಅಕಾಡೆಮಿ ಅಧ್ಯಕ್ಷರ
ಆಶಯ ಮಾತ್



ದೀಪ ಬೆಳ್ಗಿಸಿ ಚಾಲನೆ



ತೆಂಗ್‌ನ ಕೊಂಬು
ಅರಳ್ಸಿ ಪ್ರೇರಣೆ



'ಪಸ್‌ಲ್' ನೆಂಪಿನ ಸಂಚಿಕೆ
ಸಂಪಾದಕರ ಅನಿಸಿಕೆ



'ಪಸ್‌ಲ್'
ಸಾಂಕೇತಿಕ ಅನಾವರಣ



ಹೊಸ ಪುಸ್ತಕಗಳ ಬುಡ್ಗಡೆ
ಕೃತಿ ಪರಿಚಯ-ನಿರ್ವಹಣೆ



ಪುಸ್ತಕಗಳ ಬುಡ್ಗಡೆ



ಮುಖ್ಯನೆಂಟ್ರಾಗಿ
ಶಾಸಕರ್ ಎಸ್. ಅಂಗಾರ
ಮಾತೊಡ್ದೊ



ಡಾ. ಚಿದಾನಂದ ಕೊಳಂಬೆವು 'ಪಸಲ್'
ಸಂಚಿಕೆ ಬುಡ್ಗಡೆ ಮಾಡಿ ಶುಭಹಾರೈಸಿದೊ



ಶ್ರೀ ನಿತ್ಯಾನಂದ ಮುಂಡೋಡಿಯವು
ಮುಖ್ಯ ನೆಂಟ್ರಾಗಿ ಸಕಾಲಿಕ ಮಾತ್



ಡಾ। ಕೆ. ವಿ. ರೇಣುಕಾಪ್ರಸಾದ್
ನಾಲ್ಕ್ ಒಳ್ಳೆ ಮಾತ್ ಆಡ್ದೊ.



ಸಮ್ಮೇಳನ ಅಧ್ಯಕ್ಷರ ತಳಕಟ್ಟ್‌ನ ಪ್ರಧಾನ ಭಾಷಣ - ಕೆ. ಆರ್. ಗಂಗಾಧರ್



ಕೇಂದ್ರ ಮಂತ್ರಿಗ
ಶ್ರೀ ಸದಾನಂದ ಗೌಡ್ರ್
ಮಾತಾಡಿ ಶುಭಹಾರೈಸಿದೊ



ಅಕಾಡೆಮಿ ರಿಜಿಸ್ಟ್ರಾರ್
ಚಂದ್ರಹಾಸ ರೈಗ ಬೊಳ್ಳಿಗೆ
ಕಾರ್ಯಕ್ರಮಕ್ಕೆ ಧನ್ಯವಾದ ಹೇ



ಕಾವ್ಯ-ಗಾನ-ಕುಂಚ: ಧನ್ಯತೆ
ಶ್ರೀಮತಿ ರೇಣುಕಾ ಜಾಕೆ ಸದಾನಂದ



ವಿಚಾರಗೋಷ್ಠಿ – ಸ್ವಾಗತ – ಪಿ.ಎಸ್. ಗಂಗಾಧ





ಸಮ್ಮೇಳನಲಿ ಪ್ರಬುದ್ಧ ವಿಚಾರ ಮಂಡನೆ



ಸಮಾರೋಪದೆಡೆಗೆ ಸ್ವಾಗತ Dr. ಜ್ಞಾನೇಶ್ ಎನ್. ಎ.



ಪ್ರೊ. ಕೆ. ಇ. ರಾಧಾಕೃಷ್ಣರ್
ಸಮಾರೋಪ ಭಾಷಣ ಮಾಡ್ಲೊ



ಸಾಧನೆ ಮಾಡ್ಲೊವ್ಕೆ
ಸನ್ಮಾನ ಗೌರವ



ಸನ್ಮಾನಿತರಿಗೆ ಅಭಿನಂದನ ಮಾತ್
– ಪೇರಾಲ್



ಸನ್ಮಾನ ಮಾಡ್ಲ
ಡಾ| ಕೆ. ವಿ. ಚಿದಾನಂದ
ಸಂದರ್ಭಕ್ಕೆ
ಸರಿಯಾಗಿ ಮಾತಾಡ್ದೊ



ಕೆ. ಜಿ. ಬೋಪಯ್ಯ ವಿರಾಜಪೇಟೆ
ಶಾಸಕರ್ ಸಮಾರೋಪಲಿ
ಮುಖ್ಯ ನೆಂಟ್ರಾಗಿ ಶುಭ ಕೋರಿದೊ



ಸಮಾರೋಪಕ್ಕೆ ಮನದಾಳದ ಧನ್ಯವಾದ





ಮಕ್ಕಳ ಕುಂಚ ಕೌಶಲ



ಅರೆಭಾಷೆ ಕವಿಗಳ ಹಾಡ್‌ಗೆ ಹಾಡುವವರ ಧ್ವನಿ ಚಿತ್ರಗಾರರ ಕುಂಚ



ಅರೆಭಾಷೆಲಿ ಮಾತ್‌ನ ಮಂಟಪ



ಜಾನಪದ ಕುಣ್ತ -ಸಿದ್ಧವೇಷ





ಕಾರ್ಯಕ್ರಮಗಳ ನಿರ್ವಹಣೆ

ನೆಲ್ಲೂರು ಕೆಮ್ರಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ.)

"ಸಹಕಾರ ಸೌಧ ಎಲಿಮಲೆ"

ನಂ. 13764/97-98, ಅಂಚೆ: ನೆಲ್ಲೂರು ಕೆಮ್ರಾಜೆ - 574 248, ಸುಳ್ಯ ದ. ಕ.

ದೂರವಾಣಿ : 284240, ಮಾರಾಟ ವಿಭಾಗ : 284222

E-mail: nellorkemraje@gmail.com

- ಕಳೆದ 4 ವರ್ಷಗಳಿಂದಲೂ 100% ಸಾಲ ವಸೂಲಾತಿ.
- ಸಂಘದ ಮೂಲಕ ಕೇಂಪ್ಕೋ ಸಹಯೋಗದೊಂದಿಗೆ ಅಡಿಕೆ, ರಬ್ಬರ್, ಕೊಕ್ಕೋ, ಕೃಷಿ ಉತ್ಪನ್ನಗಳ ಮಾರಾಟ ವ್ಯವಸ್ಥೆ.
- ಬಾಡಿಗೆ ರೂಪದಲ್ಲಿ ಕಾಳು ಮೆಣಸು ಬೇರ್ಪಡಿಸುವ ಯಂತ್ರ ನೀಡಿಕೆ,
- ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆ.

ಶ್ರೀ ವಿಷ್ಣು ಭಟ್ ಬಿ.	ಶ್ರೀ ಮಹೇಶ ಗಟ್ಟಿಗಾರು	ಶ್ರೀಯಂ. ನಿತ್ಯಾನಂದ
ಅಧ್ಯಕ್ಷರು	ಉಪಾಧ್ಯಕ್ಷರು	ಮುಖ್ಯಕಾರ್ಯನಿರ್ವಹಣಾಧಿಕಾರಿ

ನಿರ್ದೇಶಕರು : ಶ್ರೀ ಕೆ. ಉಮೇಶ ಪ್ರಭು, ಶ್ರೀ ಹರಿಪ್ರಸಾದ್, ಶ್ರೀ ಬಾಬು ಯಸ್., ಶ್ರೀ ಮಾಧವ ಹರ್ಲಡ್ಕ, ಶ್ರೀ ಸವಿನ್ ಕೆ. ಬಿ., ಶ್ರೀ ಪ್ರಮೋದ ಪೈಲೂರು, ಶ್ರೀಮತಿ ಉಷಾ, ಶ್ರೀಮತಿ ಕವಿತಾ ಶ್ರೀ ಮನೋಜ್ ಕುಮಾರ್ ವಲಯ ಮೇಲ್ವಿಚಾರಕರು. ಗುತ್ತಿಗಾರು ವಲಯ

ಸಿಬ್ಬಂದಿ ವರ್ಗ : ಶ್ರೀ ಯು. ಜಗನ್ನಾಥ ಶೆಟ್ಟಿ, ಶ್ರೀ ಸಂತೋಷ್ ಎನ್., ಶ್ರೀಮತಿ ಲತಾ ಅರುಣ್ ಕುಮಾರ್, ಶ್ರೀ ಸುಭಾಶ್ಚಂದ್ರ ನಾಯಕ್, ಶ್ರೀ ಸಿ. ಚನಿಯಪ್ಪ, ಕೆ. ರಾಮಚಂದ್ರ ಪ್ರಭು ಭಾಗ್ಯಲಕ್ಷ್ಮೀ ಠೇವಣಿ ಸಂಗ್ರಾಹಕರು

ಅರಂತೋಡು - ತೊಡಿಕಾನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ

ಡಿ.ಆರ್.ಜಿ./7158/83-84. ಅರಂತೋಡು, ಸುಳ್ಯ ತಾಲೂಕು, ದ. ಕ. - 574314

Ph: 08257-265274, 287217 Mob: +91 9148751919

E-mail: vsssnatd@gmail.com

ಸ್ಥಾಪನೆ: 1919


- PACSಗಳ ಮಟ್ಟದಲ್ಲಿ ಮೊದಲ ಬಾರಿಗೆ SMS ಸೇವೆ ಪ್ರಾರಂಭ
- ಪಹಣಿ ಪತ್ರಿಕೆ (RTC) ವಿತರಣಾ ಸೇವೆ
- ಸಾಲದ ಪಾಸ್ ಪುಸ್ತಕ ಸೌಲಭ್ಯ
- ಗಣಕೀಕೃತ ಸಾಲದ ಅರ್ಜಿಗಳ ಪ್ರಾರಂಭ
- ಕೃಷಿ ಮತ್ತು ಕೃಷಿಯೇತರ ಸಾಲ ಸೌಲಭ್ಯ
- ಸ್ಪರ್ಧಾತ್ಮಕ ದರದಲ್ಲಿ ಗುಣಮಟ್ಟದ ಗೊಬ್ಬರ ಮತ್ತು ಕ್ರಿಮಿನಾಶಕಗಳ ಮಾರಾಟ. ಕೃಷಿ ಉಪಕರಣಗಳ ಮಾರಾಟ


ಠೇವಣಿಗಳಿಗೆ
ಆಕರ್ಷಕ ಬಡ್ಡಿ ದರಗಳು
ಹಿರಿಯ ನಾಗರಿಕರಿಗೆ,
ಸಂಘ ಸಂಸ್ಥೆಗಳಿಗೆ
0.5% ಅಧಿಕ

ದ. ಕ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಪ್ರಶಸ್ತಿ ಪುರಸ್ಕೃತ ಸಂಸ್ಥೆ

ಸಂತೋಷ್ ಕುತ್ತಮೊಟ್ಟೆ	ದಯಾನಂದ ಕುರುಂಜಿ	ವಾಸುದೇವ ನಾಯಕ್ ಬಿ.
ಅಧ್ಯಕ್ಷರು	ಉಪಾಧ್ಯಕ್ಷರು	ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗ





ಕರ್ನಾಟಕ ಅರೆಭಾಷೆ ಅಕಾಡೆಮಿ ಸದಸ್ಯರ್‌ಗ

(15-12-2017ರಿಂದ)



ಪಿ. ಸಿ. ಜಯರಾಮ
ಅಧ್ಯಕ್ಷರ್



ಚಂದ್ರಹಾಸ ರೈ ಬಿ.
ರಿಜಿಸ್ಟ್ರಾರ್

ಸದಸ್ಯರ್



ಶ್ರೀ ಬಾರಿಯಂಡ ಜೋಯಪ್ಪ



ಶ್ರೀಮತಿ ಕಡ್ಲೇರ ತುಳಸಿಮೋಹನ್



ಶ್ರೀ ಎ. ಕೆ. ಹಿಮಕರ



ಶ್ರೀ ಸುರೇಶ್ ಎಂ. ಹೆಚ್.



ಶ್ರೀ ದಿನೇಶ್ ಹಾಲೆಮಜಲು



ಶ್ರೀ ಕೆ. ಟಿ. ವಿಶ್ವನಾಥ್



ಶ್ರೀ ಚಿದಾನಂದ ಬೈಲಾಡಿ



ಶ್ರೀ ಬೇಕಲ್ ದೇವರಾಜ್



ಶ್ರೀ ಕಾನೆಹಿತ್ಲು ಮೊಣ್ಣಪ್ಪ



ಶ್ರೀ ಕುಂಬುಗೌಡನ ಪ್ರಸನ್ನ



ಶ್ರೀಮತಿ ತಿರುಮಲೇಶ್ವರಿ



ಶ್ರೀ ಮಾಧವ ಗೌಡ



ಶ್ರೀ ಯತೀಶ್ ಕುಮಾರ್ ಗೌಡ



ಶ್ರೀ ಪರಶುರಾಮ ಚಿಲ್ತಡ್ಕ



ಶ್ರೀಮತಿ ಶ್ವೇತಾ ಮಡಪ್ಪಾಡಿ